	15	—	ಸುಶೀಲ ಅಂಡ್ ಕೋ, ಕೊಳ್ಳೇಗಾಲ. ಈ ಸ್ಪರ್ಧೆಯ ನಿಯಮಗಳಿಗೆ ಬದ್ಧನಾಗಿದ್ದೇನೆ. ಹೆಸರು .... ವಿಳಾಸ .... ಪೋಸ್ಟಲ್ ಮನಿ ಆರ್ಡರ್ ನಂಬರು ಸ್ವಹಸ್ತಾಕ್ಷರ ತಾರೀಖು ....1937.

ಉತ್ತರಗಳನ್ನು ಕಳುಹಿಸುವ ಕ್ರಮ :— [illegible]

ನಿಬಂಧನೆಗಳು :— [illegible] 30-11-1937 [illegible]

ಮ್ಯಾನೇಜರ್, ಸುಶೀಲ ಅಂಡ್ ಕೋ, ಕೊಳ್ಳೇಗಾಲ.

ಮುಫತ್ತು | ಇನಾಂ | ಮುಫತ್ತು

ಜೀವನ ನೌಕಾ

ಮನುಷ್ಯರ ಜೀವನ ಯಾತ್ರೆಯನ್ನು ಸುಖಸೌಖ್ಯದಿಂದ ಜರಗಿಸುವುದಕ್ಕೆ ದಾರಿಯನ್ನು ತೋರಿಸುವ ಪುಸ್ತಕವು

ಟಿ. ಖರ್ಚು ಇಲ್ಲಾ : ಕ್ರಯವಿಲ್ಲಾ

ಮದನಮಂಜರಿ ಫಾರ್ಮಸಿ

1104 ಚೈನಾ ಬಜಾರ್, ಮದರಾಸು.

ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ [illegible] ಬೇಕಾಗಿದೆ. ಇಷ್ಟಪಟ್ಟವರು 2 ಆ. ಪೋಸ್ಟೇಜ್ ಸ್ಟಾಂಪಿನೊಡನೆ ಕೂಡಲೆ ಬರೆದುಕೊಳ್ಳಿರಿ.

ಶ್ರೀ ಸಂಜೀವಿನಿ ವರ್ಕ್ಸ್,
ಸೋಪ್ [illegible],
ಕನ್ನಾಂಬಿಕೆ ಅಂಡ್ ಬಸವಲಿಂಗಂ
ಮ್ಯಾಚ್ ವರ್ಕ್ಸ್,
2330 [illegible], ಮೈಸೂರು.

Impressive Figures

Business in Force Exceeds ...	Rs	11,30,52,000
Total Assets Exceed	Rs	3,00,00,000
Claims Paid Exceed...	Rs	1,80,00,000
New Business for 1936 Exceeds...	Rs	1,75,00,000

Branch and Agency Offices throughout India, Burma, Ceylon, British East Africa and the Federated Malay States.

WANTED Influential Agents on good terms.

Apply to: Sub Branch Secretary,
NATIONAL INSURANCE CO., LTD.,
Kempegowda Road, Bangalore City.
For
NATIONAL INSURANCE COMPANY, LTD.
7 COUNCIL HOUSE STREET,
CALCUTTA



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅವಶ್ಯಕವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರಣೆಯಿಂದ ಮಾಡಲ್ಪಡುತ್ತದೆ.

[illegible] ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ಅತ್ಯುತ್ತಮವಾದ
[illegible]
[illegible]



॥ ಸತ್ಯಮೇವ ಜಯತೇ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪುಟ ೨] MYSORE : MONDAY 29—11 37 ಮೈಸೂರು ಸೋಮವಾರ ೨೯—೧೧—೩೭ [ಸಂಚಿಕೆ ೪೧

ಶ್ರೀ ಕೇಳ್ಕರರೂ ಮೈಸೂರೂ

ನವರಾತ್ರಿಯಲ್ಲಿ ಮೈಸೂರಿಗೆ ಶ್ರೀ ಎನ್. ಸಿ. ಕೇಳ್ಕರರು ರಾಜ ಅತಿಥಿಗಳಾಗಿ ಬಂದಿದ್ದರು. ಅವರು ಕೇಸರಿ ಮತ್ತು ಮರಾಠ ಪತ್ರಿಕೆಗಳ ಸಂಪಾದಕರು. ಬಾಲಗಂಗಾಧರ ತಿಲಕರ ಅನುಯಾಯಿ. ಅವರು ದಸರೆಯನ್ನು ನೋಡಿ ಬಹಳ ಸಂತೋಷಪಟ್ಟರು. ಶ್ರೀಮನ್ಮಹಾರಾಜರನ್ನೂ ಸಂದರ್ಶಿಸಿದರು. ಅನೇಕ ವಿಷಯಗಳ ಮೇಲೆ ಚರ್ಚಿಸಿದರು. ಶ್ರೀಮನ್ಮಹಾರಾಜರವರ ವ್ಯಕ್ತಿ ಸರಳತೆಗಳನ್ನು ಬಹಳವಾಗಿ ಕೊಂಡಾಡಿದರು. ಮೈಸೂರು ದೇಶವು ಅನೇಕ ಅಂಶಗಳಲ್ಲಿ ಮುಂದಾಗಿರುವಂತೆ ಪ್ರಜಾ ಸ್ವಾತಂತ್ರ್ಯದಲ್ಲಿಯೂ ಮೇಲ್ಪಂಕ್ತಿಯನ್ನು ಹಾಕಬೇಕೆಂದು ಪ್ರಭುಗಳಿಗೆ ಅರಿಕೆ ಮಾಡಿದರು. ಜವಾಬ್ದಾರಿ ಸರಕಾರಕ್ಕೆ ಪ್ರಜೆಗಳು ಪ್ರಾರ್ಥಿಸುತ್ತಿರುವುದು ನ್ಯಾಯವಾಗಿದೆಯೆಂದೂ ಆ ಕೋರಿಕೆಯನ್ನು ಶೀಘ್ರವಾಗಿ ನೆರವೇರಿಸಬೇಕೆಂದೂ ತಿಳಿಸಿದರು. ಪ್ರಜಾ ಪ್ರತಿನಿಧಿ ಸಭೆಯ ಸಮಾರಂಭದ ವಿಷಯವೂ ಪ್ರಸ್ತಾಪಿಸಿದ್ದರೆಂದು ಹೇಳುವರು. ಅವರ ಸಭಾತ್ಯಾಗ ಮಾಡಿದವರು ಪುನಃ ವಾಪಸು ಬರುವಾಗ ಶ್ರೀಮನ್ಮಹಾರಾಜಾ ಕೀ ಜೈ ಎಂದು ಕೂಗಿಕೊಂಡು ಬಂದರೆಂದು ತಿಳಿಸಲ್ಪಟ್ಟರು ಶ್ರೀಮನ್ಮಹಾರಾಜರು ಅದನ್ನು ಕೇಳಿ ಸಂತೋಷವಾಗಿ ಮುಗುಳ್ನಗೆ ನಕ್ಕರೆಂದು ಶ್ರೀ ಕೇಳ್ಕರರು ತಿಳಿಸಿರುತ್ತಾರೆ. ಆ ಸಂತೋಷದ ಮುಗುಳ್ನಗೆಯು ಪ್ರಜೆಗಳ ಕೋರಿಕೆಯನ್ನು ಶೀಘ್ರದಲ್ಲಿ ಈಡೇರಿಸುವವರಲ್ಲಿ ಪರಿಣಮಿಸಲೆಂದು ನಾವು ಪ್ರಾರ್ಥಿಸುತ್ತೇವೆ.

ಹಿಂದೂಗಳೂ ಕಾಂಗ್ರೆಸ್ಸಿನವರೇ

ನಮ್ಮನ್ನು ಆಕ್ಷೇಪಿಸಿ ಎಂದಿನಂತೆ ಅನೇಕ ಹಿಂದೂಗಳು ಹಿಂದೂ ಮಹಾಸಭಾ ಕಾಂಗ್ರೆಸ್ಸಿನ ಸ್ವಾರ್ಥವೇ [illegible] ಸರ್ಕಾರದ ಮೇಲೆ ಬರುತ್ತಾರೆ. ಇದು ಒಂದು ಸಂತೋಷದ ಸಮಾಚಾರ. ಇದನ್ನು ಕೇಳಿ ನಮ್ಮ ಅಧಿಕಾರಿವರ್ಗದವರೂ ಜನರೂ ಬುದ್ಧಿಯನ್ನು ಕಲಿಯಲಿ. ಕಾಂಗ್ರೆಸ್ಸಿನ ಹೆಸರೆತ್ತಿದರೆ ಗಾಬರಿ ಪಡುವ ಜನರು ನಮ್ಮಲ್ಲಿ ಅನೇಕರಿದ್ದಾರೆ. ಸರ್ಕಾರದವರು ಅಕ್ಷೇಪಿಸುವುದರಿಂದ ಅವರ ಭೀತಿ ಹೆಚ್ಚುತ್ತಿರುವುದು ಸಹಜ. ಹೀಗಿರುವುದರಿಂದ ಕೆಲವರ ದಂಗೆ. ಇನ್ನು ಹಲವು ಬಗೆಯ ಭೀತಿಗಳು. ಹಲವಾರಿಗೆ ಧೈರ್ಯವಿಲ್ಲ. ಆದರೆ ಕಾಂಗ್ರೆಸ್ಸಿನ ವಿಷಯದಲ್ಲಿ ಸರ್ಕಾರದವರು ತಮ್ಮ ನೀತಿಯನ್ನು ಬದಲಾಯಿಸುವವರು ಅನೇಕ ಜನ ಹಿತೈಷಿಗಳು. ಕಾಂಗ್ರೆಸ್ಸು ದೊಡ್ಡ ಸಂಸ್ಥೆಯೆಂದೂ ಅದರ ಕಾರ್ಯಕ್ರಮಗಳಿಗೆ ತಾವು ಸಹಾನುಭೂತಿ ತೋರಿಸಬೇಕೆಂದೂ ಹೇಳುತ್ತಾರೆ. ಈಗ ದಿವಾನರೇ ತಾವು ಕಾಂಗ್ರೆಸ್ಸಿನವರೆಂದು ಹೇಳುತ್ತಾರೆ. ಇನ್ನುಮುಂದೆ ನಮ್ಮ ಸರ್ಕಾರದವರು ಕಾಂಗ್ರೆಸ್ಸಿನಲ್ಲಿ ಇರುವ ಭೀತಿಯನ್ನು ತೆಗೆದು ಹಾಕಬೇಕು. ಕಾಂಗ್ರೆಸ್ಸಿಗೆ ಸೇರಲು [illegible] ಅಧಿಕಾರಿಗಳೂ ಇದನ್ನು ಗಮನಿಸಲಿ.

ಯಾರ ಪ್ರಧಾನವಾದರೇನು?

ಈಚೆಗೆ ಸರ್ಕಾರದವರು ಕೆಲವು ಹಳ್ಳಿಗಳಲ್ಲಿ ಇದ್ದ ಕಾಂಗ್ರೆಸ್ಸನ್ನು ಕಡಿಮೆ ಮಾಡಿದರಷ್ಟೆ. ನಾವು ಕಾಂಗ್ರೆಸ್ಸಿನ ಪ್ರಧಾನವೆಂದು ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ತಿಳಿಸುತ್ತಾರೆ. ಕಾಂಗ್ರೆಸ್ ಚಳುವಳಿಯ ವಿಷಯ ಹೇಳುತ್ತಿರುವುದರಿಂದ ಅದನ್ನು ಹತ್ತಿಕ್ಕಲು ಸರ್ಕಾರದವರು ಹೀಗೆ ಮಾಡುತ್ತಾರೆಂದು ತಿಳಿಸಿದ್ದಾರೆ. ಆದರೆ ಇದು ಕೇವಲ ನಿರಾಧಾರವಾದ ಸುಳ್ಳು ಆಪಾದನೆಯೆಂದು ಸರ್ಕಾರದವರು ಪ್ರಕಟಿಸಿದ್ದಾರೆ. ಅಲ್ಲದೆ ಅನೇಕ ದಿನಗಳಿಂದ ಸರ್ಕಾರದವರು ಮಾಡುತ್ತ ಬಂದಿದ್ದ ಹಾಗೂ ಜನರಿಗೆ ಅನುಕೂಲವಾಗಿ ಈ ನಿಯಮವೂ ಸರ್ಕಾರದಿಂದ ಬಂದುದಾಗಿ ತಿಳಿಸಿದ್ದಾರೆ. ಅಂತೂ ಕಾಂಗ್ರೆಸ್ ಚಳುವಳಿಯ ಪ್ರಭಾವವೂ ಸರ್ಕಾರದ ವಿಷಯವಾಗಲೀ ಒಂದೇ ಸಮಯದಲ್ಲಿ ಸಂಭವಿಸಿ, ಒಬ್ಬರನ್ನೊಬ್ಬರು ಬಿಡದೆ ಅಭಿಮಾನದ ಭಾವವು ಬೆಳೆಯಬೇಕೆಂಬುದು ಎಲ್ಲರ ಆಕಾಂಕ್ಷೆ.

ಜವಾಬ್ದಾರಿಕೆ ಬರುವುದೇ ಇಲ್ಲವೆ?

ಮೈಸೂರು ಸಂಸ್ಥಾನದ ಜವಾಬ್ದಾರಿಕೆಯು ಶೀಘ್ರದಲ್ಲಿ ಬರುವುದು ಹೇಗೆ? ಈ ವಿಷಯವಾಗಿ ಜನರು ಬಹಳ ಆತುರಪಡುತ್ತಿದ್ದಾರೆ. ಜವಾಬ್ದಾರಿಕೆಯು ಸ್ವಲ್ಪವಾದರೂ ಸಿಗದೇ ಇರುವುದರಿಂದ ಜನರು ನಿರುತ್ಸಾಹದಿಂದಿದ್ದಾರೆ. ಕಾಂಗ್ರೆಸ್ಸಿನವರು ಹೋರಾಟ ಮಾಡುವುದಕ್ಕೆ ತಯಾರು ಮಾಡಿಕೊಳ್ಳುತ್ತಿದ್ದಾರೆ. ಇದು ಸಂಸ್ಥಾನದ ಹಿತಕ್ಕೆ ಕೇವಲ ಕಾಂಗ್ರೆಸ್ಸಿನವರ ಸಹಾಯದಿಂದಲೇ ನಮ್ಮ ಸಂಸ್ಥಾನದ ಸ್ವಾತಂತ್ರ್ಯ ಸಿಗಬೇಕಾಗಿದೆ. ಈಗ ಪ್ರಕೃತದಲ್ಲಿ ಇರುವ ಅಧಿಕಾರಿಗಳಿಗಿಂತ ಇತರ ವಿಷಯಗಳ ಕಡೆಗೆ ಹೆಚ್ಚಾಗಿ ಕಾಂಗ್ರೆಸ್ ಜನರ ಮನಸ್ಸು ಹರಿಯುತ್ತಿದೆ. ಅದ್ದರಿಂದ ಈ ಚಳುವಳಿ [illegible].

ಮಾರ್ಗಗಳಲ್ಲಿ ಭಿನ್ನತೆ

ಆದರೆ ಮೈಸೂರಿನಲ್ಲಿ ಕಾಂಗ್ರೆಸ್ಸಿನವರಿಂದ ಜವಾಬ್ದಾರಿಯು ಯಾವ ಮಾರ್ಗದಲ್ಲಿ ಬರುತ್ತದೆಂದು ದಿವಾನರ ಅಭಿಪ್ರಾಯ. ಅವರು ಕಾಂಗ್ರೆಸ್ಸಿನವರಿಂದ ಬೇರೆ ಮಾರ್ಗಗಳನ್ನು ಅನುಸರಿಸುತ್ತಿದ್ದಾರೆಂದು ಅವರು ಹೇಳುವರು. ಅವರ ಮಾರ್ಗವೂ ಸ್ವಲ್ಪ ಬೇರೆ ಇರಬಹುದು. ಅಂತೂ ಈಗ ಬರುವುದು ಮಾರ್ಗಗಳಲ್ಲಿ ವ್ಯತ್ಯಾಸವೇ ಹೊರತು ಧ್ಯೇಯದಲ್ಲಿಲ್ಲ. ಇದರಲ್ಲಿ ಸಂತೋಷವೇ. ಕಾಂಗ್ರೆಸ್ಸಿನಲ್ಲಿ ಹಿಂಸಾ ಮಾರ್ಗ ಇರುವುದಿಲ್ಲವೆಂದು ತಮಗೆ ಗೊತ್ತಿದೆಯೆಂದು ತೋರಿಸಿದ ಮಾರ್ಗವನ್ನು ಅನುಸರಿಸುತ್ತಿರುವವರು ತಾವು ಕಷ್ಟಪಡಬೇಕಾಗಿಲ್ಲ. ಅವರು ಸಾಧಿಸುವ ಮಾರ್ಗ ಕಷ್ಟವಾದರೂ ಬಯಸಿದ ಸಿದ್ಧಿಯು ಇಲ್ಲ.

ದಿವಾನರ ಅಂತರಂಗದ ಮಾತು

ದಿವಾನರು ತಮ್ಮ ಭಾಷಣದಲ್ಲಿ ಬಿಚ್ಚು ಅಂತರಂಗದ ಒಂದು ಅಭಿಪ್ರಾಯವನ್ನು ಹೊರಗೆಡಹಿದ್ದಾರೆ. ಅವನ್ನು ಹಲವು ವರ್ಷಗಳ ಕಾಲ ಈ ಸಂಸ್ಥಾನದ ಸೇವೆಯಲ್ಲಿ ಇದೇ ರೀತಿ ಮಾಡಬೇಕೆಂದು ತಾವು ಅಪೇಕ್ಷಿಸುವುದು. ದಿವಾನರಾಗುವುದು ಏನೂ ಹೊಸದಲ್ಲ. ಆದರೂ ಮಹಾರಾಜರ ಪ್ರೀತಿ ವಿಶ್ವಾಸಗಳೂ ತಮ್ಮ ಮೇಲೆ ಇರಬೇಕು. ಜನರ ಅನುಗ್ರಹವೂ ಅವರು ತಮ್ಮ ಕೆಲಸದಿಂದ ಸಿಕ್ಕುವಂತಾಗಬೇಕೆಂಬುದೇ ತಮ್ಮ ಅಂತರಂಗದ ಪ್ರಾರ್ಥನೆಯೆಂದು ಹೇಳುತ್ತಾರೆ. ಇದು ಅವರ ಮನಸ್ಸಿನ ಅಂತರಾಳದ ಹೊರಬಿದ್ದ ಮಾತು. ಇದು ಎಲ್ಲರ ಮನಸ್ಸನ್ನು ಕರಗಿಸುತ್ತದೆ.

ಪಾಟೀಲರೂ ದಿವಾನರೂ

ಪಾಟೀಲರು ಸಂಸ್ಥಾನದ ಹೊರಟಿರುವ ಕಾಂಗ್ರೆಸ್ಸಿನವರ ಮೇಲೆ ನಮ್ಮ ಸಂಸ್ಥಾನದವರು ಹಾಗೆ ಹೋಗಿ ಇತರ ಸಂಸ್ಥಾನಗಳವರು ಹೋಲಿಸಿ ನೋಡಿದರೆ ಬಹಳ ಹಾಳು ಬಿದ್ದಿದೆ. ಆದರೂ ಇವರಿಗೆ ಯೋಗ್ಯತೆಯೇ ಇಲ್ಲ. ಪಾಟೀಲರು ಕಾಂಗ್ರೆಸ್ ಸದಸ್ಯರಾದ ಮೇಲೆ ಈ ಸ್ಥಿತಿಯನ್ನು ಬದಲಿಸಿದರು. ಅಲ್ಲಿ ಪ್ರಜಾಸಂಘದ ಸಂಸ್ಥೆಯನ್ನು ಅಕ್ರಮವೆಂದು ಪ್ರಕಟಿಸಿದರು. ನಮ್ಮಲ್ಲಿ ದಿವಾನರೇ ಕಾಂಗ್ರೆಸ್ಸಿನವರೆಂದು ಹೇಳಿಕೊಳ್ಳುತ್ತಿದ್ದಾರೆ. ಯಾವ ಸಂಸ್ಥೆಯನ್ನೂ ಅಕ್ರಮ ಸಂಘವೆಂದು ನಿರ್ಣಯಿಸಿಲ್ಲ. ಕೇವಲ ವ್ಯಕ್ತಿಗಳ ಮೇಲೆ ನಿರ್ಬಂಧಗಳು ಬರುತ್ತಿವೆ. ಈ ಸನ್ನಿವೇಶವು ಎಷ್ಟೋ ಮೇಲಾಗಿದೆಯೆಂದು ಅನೇಕರು ಹೇಳುತ್ತಾರೆ. ನಮ್ಮ ಸಂಸ್ಥಾನವು ಇತರ ಸಂಸ್ಥಾನಗಳಿಗಿಂತ ಮುಂದುವರಿದಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಇತರ ಸಂಸ್ಥಾನಗಳನ್ನು ಇದು ಅನುಸರಿಸಬಾರದು. ಇದು ಇನ್ನೂ ಉನ್ನತ ಕೆಲವು ವಿಷಯಗಳ ಕಡೆಗೆ ಪ್ರಯತ್ನ ಮಾಡಬೇಕು. ನಮ್ಮವರಾಗಿ ಇದ್ದು ಪ್ರಜಾ ಪ್ರತಿನಿಧಿಗಳನ್ನು ಮೆಚ್ಚಿಸಬೇಕು. ನಾವು ಹಿಂದೆ ಬಿದ್ದು ಇತರ ಸಂಸ್ಥಾನಗಳ ಸಮಾನರಾಗದಂತೆ ಕಾಂಗ್ರೆಸ್ಸಿನವರ ಸಹಾಯ.

[illegible]

ಸಹವಾಸ

ಲೇಖಕರು. ಹೆಚ್. ಎಸ್. ಬಾಪಣ್ಣ, ಗುಂಡ್ಲುಪೇಟೆ.

[illegible] ಪ್ರದೇಶದಲ್ಲಿ ರಮೇಶಬಾಬು [illegible] ಪ್ರತಿಷ್ಠಿತರು. ರಮೇಶ ಬಾಬುವಿಗೆ [illegible] ನಾರಾಯಣಬಾಬು ಎಂಬೊಬ್ಬ ಮಗನು, [illegible] ಗೃಹದಲ್ಲಿ [illegible].

ನಾರಾಯಣಬಾಬು [illegible] ವಿದ್ಯಾಭ್ಯಾಸವನ್ನು ಪಡೆದು [illegible] ತನ್ನ [illegible].

ಮಗನು [illegible] ರಮೇಶ ಬಾಬುವು [illegible] ಶ್ರೀಮಂತರ ಮನೆಗೆ ಶ್ರೀಮಂತರ ಮಗ [illegible] ಕೇಳ [illegible] ಶ್ರೀಮಂತರ ಮನೆಯ [illegible] ದೇಶ ವಿದೇಶಗಳಿಂದಲೂ ಬಂದಿದ್ದರೂ [illegible] ನಿರಾಕರಿಸಿದನು.

ಮಗನು ಪಟ್ಟಣದಲ್ಲಿ ಸರ್ಕಾರಿ ನೌಕರನಾಗ ಬೇಕೆನ್ನುವುದು [illegible] ತಂದೆಯನ್ನು ಕೇಳಿದಾಗ "ಅಪಾರ ಸ್ವತ್ತುಗಳಿವೆ, ನನಗೆ ನೀನೊಬ್ಬನೇ ಮಗನು. ನಿನ್ನ ಪತ್ನಿಯು [illegible] ಶ್ರೀಮಂತನು, [illegible] ಇರುವಳು" ಇಂತಹ [illegible] ಶ್ರಮಪಡಲು ಕಾರಣವಿಲ್ಲ. ನೌಕರಿಯು ಬೇಡ, ಸುಖವಾಗಿ ನನ್ನ ಕಣ್ಣೆದುರು ಇರು ಎಂದು ಉತ್ತರಕೊಟ್ಟನು ರಮೇಶಬಾಬು.

ನಾರಾಯಣಬಾಬುವು ತಂದೆಯ ಮಾತಿನಂತೆ ನಡೆದನು. ಯಾವ ಭಾಗವಲ್ಲಿಯೂ [illegible] ಸ್ನೇಹಿತರೊಡನೆ ಕಾಲಕಳೆಯುತ್ತಲಿದ್ದನು.

ಸ್ನೇಹಿತರೆಂದಮೇಲೆ ಎಲ್ಲರೂ ಒಂದೇ ಸ್ವಭಾವದವರಾಗಿರುವುದುಂಟೆ. ಇಲ್ಲ! ಎಂದಿಗೂ ಇಲ್ಲ!! ಕೆಲವರು ಸ್ವಭಾವತಃ ಗುಣವಂತರಾಗಿಯೂ, ಕೆಲವರು ಕಪಟಿಗಳಾಗಿಯೂ, ಮತ್ತೆ ಕೆಲವರು ದುರ್ಜನರಾಗಿಯೂ ಇರುವುದು ಸ್ವಭಾವ.

ಲಕ್ಷ್ಮೀಶನು ಬಾಬುವಿನ ಸ್ನೇಹಿತರಲ್ಲೊಬ್ಬನು. ಆತನು ಕಪಟಿಯೂ, ಸ್ವಾರ್ಥಪರನೂ, ದುರಾಚಾರಿಯೂ ಆಗಿದ್ದನು.

ಮೋಸಗಾರನೆಂಬುದಕ್ಕಿಂತ [illegible], [illegible], [illegible] ಆಗಿದ್ದನು.

ಲಕ್ಷ್ಮೀಶನು ಕೆಲವು ಕಾಲದಲ್ಲೇ ಬಾಬುವಿಗೆ ಇಸ್ಪೀಟ್ ಆಡುವುದನ್ನೂ ಸುರಾಪಾನ ಮಾಡುವುದನ್ನೂ ಪರಿಚಯ ಮಾಡಿಕೊಟ್ಟನು.

ಬಾಬುವು ಶ್ರೀಮಂತನಾದುದರಿಂದ ಆವನ ಕಾರ್ಯಕ್ಕೆ ಯಾವ ಕೊರತೆಯೂ ಇಲ್ಲದೆ ನೆರವೇರುತ್ತಲಿದ್ದಿತು.

ರಾತ್ರಿ 8 ಗಂಟೆಯಾಗಿರಬಹುದು. ಅಂತರಿಕ್ಷವು ನಿರ್ಮಲವಾಗಿದೆ. ತಂಪಾದ ಗಾಳಿಯು ಸುಳಿದಾಡುತ್ತಲಿದೆ. ಆಕಾಶದಲ್ಲಿ ಸೋಮನು ನಿಷ್ಕಳಂಕನಾಗಿ ಶೋಭಿಸುತ್ತಲಿದ್ದಾನೆ. ವಾತಾವರಣವು ಶಾಂತರೀತಿಯಲ್ಲಿದ್ದಿತು. ನಾರಾಯಣಬಾಬುವೂ, ಲಕ್ಷ್ಮೀಶನೂ ಉದ್ಯಾನವನದ ಒಂದು ಶಿಲಾಸನದ ಮೇಲೆ ಕುಳಿತಿದ್ದಾರೆ.

ಕಪಟಿಯಾದ ಲಕ್ಷ್ಮೀಶನು ಎರಡು ಸೀಸೆಗಳನ್ನು ಹೊರಗೆ ತೆಗೆದು ಒಂದನ್ನು ಬಾಬುವಿಗೆ ಕೊಟ್ಟು, ಮತ್ತೊಂದನ್ನು ತಾನು ಪಾನಮಾಡಿದನು. ತಾನು ಮತ್ತೇನೂ ಆಗಿರದೆ, ಬಾಬುವಿಗೆ ಕೊಟ್ಟುದು ಬ್ರಾಂದಿರಸವಾಗಿಯೂ, ತಾನು ಪಾನಮಾಡಿದುದು, ಕಿತ್ತಳೇ ಹಣ್ಣಿನ ರಸವಾಗಿಯೂ ಇದ್ದಿತು.

ಕ್ರಮ ಕ್ರಮವಾಗಿ ಬಾಬುವಿಗೆ ಬುದ್ಧಿಯು ವಿಕಲ್ಪವಾಗತೊಡಗಿತು. ತಪ್ಪು ಮಾತನಾಡಲು ತೊಡಗಿದನು. ಕಣ್ಣುಗಳನ್ನು ದೊಡ್ಡದಾಗಿ ಬಿಡುವನು, ಕೈಕಾಲುಗಳನ್ನು ಮನಬಂದಂತೆ ಆಡಿಸುವನು. ಕಪಟಿಯಾದ ಲಕ್ಷ್ಮೀಶನು ಬಾಬು ಆಡಿದ ರಾಗಕ್ಕೆಲ್ಲಾ ತಾನು ಆಡುವನು.

ಲಕ್ಷ್ಮೀಶನು ಏನೋ ಮಾತನಾಡುವವನಂತೆ ಬಾಬುವಿನ ಹಸ್ತಗಳನ್ನು ಹಿಡಿದು ಕೊಂಡು, ಅವನ ಕೈಯಲ್ಲಿ ವಿರಾಜಿಸುತ್ತಲಿದ್ದ ವಜ್ರದುಂಗುರವನ್ನು ಕಳಚಿಕೊಂಡುಬಿಟ್ಟನು.

ಮದ್ಯದ ಅಮಲು ನೆತ್ತಿಗೇರಿರುವ ಬಾಬುವಿಗೆ ಈ ಪ್ರಸಂಗವು ತಿಳಿಯುವುದಾದರೂ ಹೇಗೆ? ಒಂದೆರಡು ಘಳಿಗೆಗಳು ಕಳೆದುವು.

ವಯಸ್ಸು 20-22 ವರ್ಷ ಇರಬಹುದು, ನಭೋಮಂಡಲದಲ್ಲಿ ಪ್ರಕಾಶಿಸುತ್ತಲಿರುವ ಚಂದ್ರನನ್ನು ಹೀಯಾಳಿಸುವಂತ ವದನವಳು, ಕೃಶವಾದ ನಡ, ಉದ್ದವಾದ ತಲೆಗೂದಲು, ಸಮನಾದ ಮೈಕಟ್ಟು, ನೋಡಿದವರ ಮನವು ಚಂಚಲವಾಗುವ ಲಾವಣ್ಯ, ಉಡಿಗೆಗಳು ಲಾವಣ್ಯವನ್ನು ಹೆಚ್ಚಿಸುತ್ತಲೂ, ಆಭರಣಗಳು ಕಾಂತಿಯನ್ನು ಬೀರುತ್ತಲೂ ಇದ್ದ ಓರ್ವ ಲಲನಾಮಣಿಯು ಹಠಾತ್ತನೆ ಉದ್ಯಾನವನದಲ್ಲಿ ಕಾಣಿಸಿಕೊಂಡಳು.

ಮೊದಲೇ ಮದ್ಯದ ಅಮಲಿನಿಂದ ಕೂಡಿದ್ದ ಬಾಬುವಿನ ಕಣ್ಣಿಗೆ ಈಕೆಯು ಗೋಚರಿಸಿದುದೇ ತಡ, ಚಾಪಲ್ಯವು ವೃದ್ಧಿಹೊಂದಿತು, ಮನವು ವಿಕಲ್ಪವಾಯಿತು, ಕುಳಿತಿದ್ದವನು ಹಠಾತ್ತನೆ ಎದ್ದು, ಮುಂದೆ ಬಂದು ಆಕೆಯನ್ನು ಸ್ಪರ್ಶಿಸಲು ಆತುರವುಳ್ಳವನಾಗಿ, ಅವಳ ಕಡೆಗೆ ನಡೆದನು.

ಬಾಬುವು ಆಕೆಯು ನಿಂತಿದ್ದ ಸ್ಥಳವನ್ನು ಸೇರುವುದರೊಳಗಾಗಿ ಆಕೆಯು [illegible].

ಬಾಬುವು ನಿರಾಶನಾಗಿ, ಸಿಟ್ಟಾಗಿ ಕಿರುಚುತ್ತಾ, ಮನಬಂದಂತೆ ಓಡಾಡಲು ಪ್ರಾರಂಭಿಸಿ ಲಕ್ಷ್ಮೀಶನ ಮೇಲೆ ಹಾಯ್ದು ಬಂದನು. ಸುತ್ತ ಓಡಿ ಎಲ್ಲಿಯೋ ಹೊರಟು ಹೋದನು.

ಆಕೆಯು ಯಾರಿರಬಹುದು? ಅವಳು ವೇಶ್ಯೆ, ಲಕ್ಷ್ಮೀಶನ ಜೊತೆಗಾತಿ, ಲಕ್ಷ್ಮೀಶನು ಬಾಬುವಿನಲ್ಲಿ ಹಣ ಸುಲಿಯುವ ಕಾರ್ಯಕ್ಕೆ ಸಹಾಯಕಳು. ಸುಲಿದುಕೊಂಡ ಹಣದಲ್ಲಿ ಇಬ್ಬರಿಗೂ ಭಾಗವೆಂದು ಗೊತ್ತಾಗಿದ್ದಿತು.

ಇತ್ತ, ಪದ್ಮಾದೇವಿಯಾದರೋ ಋತುಮತಿಯಾಗಿದ್ದಾಳೆ. ಅವಳ ಜನಕನು ಬೀಗರಿಗೆ ಕಾಗದವನ್ನು ಬರೆದುದಾಯಿತು. ರಮೇಶಬಾಬುವು ತನ್ನ ಸೊಸೆಯ ಮನೆಯವರಿಂದ ಬಂದ ಕಾಗದವನ್ನು ಮಗನಿಗೆ ಕೊಟ್ಟನು. ಬಾಬುವು ಯಾವ ಮಾತನ್ನೂ ಆಡದೆ ಕಾಗದವನ್ನು ಚೂರುಚೂರಾಗಿ ಹರಿದು ಕೆಳಗೆ ಬಿಸಾಡಿ ಹೊರಟುಹೋದನು. ಪಾಪ! ರಮೇಶಬಾಬುವು ಮಾಡುವುದಾದರೂ ಏನು?

ಲಕ್ಷ್ಮೀಶನ ಕಾರ್ಯಕ್ಕಾತನಿಗೆ ಪ್ರಾರಂಭವಾಯಿತು. 4-5 ತಿಂಗಳು ಕಳೆಯುವುದರೊಳಗಾಗಿ ಬಾಬುವು ತಂದೆಗೆ ತಿಳಿಯದಂತೆ ತನ್ನಿಂದ ಸಾಧ್ಯವಾದಷ್ಟು ದ್ರವ್ಯವನ್ನು ವೇಶ್ಯೆಗೆ ತೆತ್ತಾಯಿತು. ತನ್ನಲ್ಲಿದ್ದುದೆಲ್ಲಾ ತೀರಿದಮೇಲೆ [illegible] ಸಾಲ ಮಾಡಲು ಪ್ರಾರಂಭಿಸಿದ. ಒಂದೆರಡು ತಿಂಗಳಲ್ಲಿಯೇ 10-20 ಸಹಸ್ರ ರೂಪಾಯಿಗಳು ಸಾಲವಾಗಿ ಹೋಯಿತು.

ಸಾಲ ಕೊಟ್ಟವರ ಹಿಂಸೆಯು ಜಾಸ್ತಿಯಾಯಿತು. ಕೆಲವು ಆಸ್ತಿಗಳನ್ನು ಮಾರಿ ಸಾಲದ ಕೊಂಚಭಾಗವನ್ನು ತೀರಿಸಿದ್ದಾಯಿತು.

ಬಾಬುವನ್ನು ಸನ್ಮಾರ್ಗಕ್ಕೆ ತರಲು ಮೋಹನನು ಪಟ್ಟ ಶ್ರಮವೆಲ್ಲಾ ವ್ಯರ್ಥವಾಯಿತು. ಒಂದೆರಡು ವರ್ಷಗಳಲ್ಲೇ ಬಾಬುವು ನಿರ್ಗತಿಕನಾಗಿ, ತಿರುಕನಿಗಿಂತಲೂ ಕಡೆಯವನಾಗಿ ನಿಲ್ಲಲು ನೆಲೆಯಿಲ್ಲದೆ, ಹೊದೆಯಲು ವಸ್ತ್ರಕ್ಕೆ ಗತಿಯಿಲ್ಲದವನಾಗಿ ತಿರುಗುತ್ತಾ ಇದ್ದಾನೆ.

ಉಳಿದಿದ್ದ ಕೊಂಚ ಆಸ್ತಿಯನ್ನು ಸಾಲಾ ಕೊಟ್ಟವರು ವಶಪಡಿಸಿಕೊಂಡರು. ವೇಶ್ಯೆಯು ಕಣ್ಣೆತ್ತಿಯೂ ನೋಡದಾದಳು. ಧನವಿಲ್ಲದ ಮೇಲೆ ಅವನ ಹಂಗಿನಿಂದ ವೇಶ್ಯೆಗೆ ಆಗಬೇಕಾದುದೇನು?

ಬಾಬುವನ್ನು ಎಡಬಿಡದಿದ್ದ ಲಕ್ಷ್ಮೀಶನು, ಇಂದು ಬಾಬುವನ್ನು ದೂರದಲ್ಲಿ ಕಂಡರೇ ಕಣ್ಮರೆಯಾಗುವನು.

ಯಾವಾಗಲೂ ಸ್ನೇಹಿತರಿಂದ ಸುತ್ತಲ್ಪಟ್ಟಿದ್ದವನು ಇಂದು ಏಕಾಂಗಿಯಾಗಿದ್ದಾನೆ.

ಸನ್ಮಿತ್ರನಾದವನು ಕೊಂಚ ತಿಳುವಳಿಕೆ ಕೊಟ್ಟರೆ ತೃಪ್ತನಾಗಿ, ತನ್ನ ಅವಿವೇಕಕ್ಕಾಗಿ ಇನ್ನೇ ಪಶ್ಚಾತ್ತಾಪ ಪಡುವನು, ವ್ಯಸನಪಡುವನು, ಗೋಳಿಡುವನು. ಏನು ಮಾಡಿದರೆ ಇನ್ನೇನು ಫಲ?

ಅಂದು ಶ್ರೀಮಂತನಾಗಿದ್ದ ಬಾಬು ಇಂದು ನಿರ್ಗತಿಕನು, ಅಂದು ನಿರ್ಗತಿಕರಿಗೆ [illegible] ಲಕ್ಷ್ಮೀಶ, ವೇಶ್ಯೆ ಯಾರು [illegible] ಕಪಟಿಗಳ ಸ್ನೇಹದ ಫಲವು ಹೀಗಿರುವುದು.

• • •

ಒಂದು ಸಾಮಾನ್ಯ ಗೃಹದ ಮುಂಭಾಗ ಕೈಸಾಲೆಯಲ್ಲಿ, ಇಬ್ಬರು ಪುರುಷರೂ, ಒಬ್ಬಳು ಸ್ತ್ರೀಯೂ ಚರಕವನ್ನೂ ಹಿಡಿದು ನೂಲುತ್ತಿದ್ದಾರೆ. ಅವರು ಯಾರೆಂದರೆ? ನಾರಾಯಣಬಾಬು, ಅವನ ಮಿತ್ರ ಮೋಹನ ಮತ್ತು ಮೋಹನನ ಅರ್ಧಾಂಗಿ.

ನಿರ್ಗತಿಕನಾದ ನಾರಾಯಣ ಬಾಬುವನ್ನು ಅವನ ಮಿತ್ರನಾದ ಮೋಹನನು ತನ್ನ ಮನೆಯಲ್ಲೇ ಇಟ್ಟುಕೊಂಡು, ಅವನನ್ನು ಆದರಿಸುತ್ತಾ, ನೂಲುವುದನ್ನು ಅಭ್ಯಾಸಮಾಡಿಸಿಕೊಟ್ಟನು. ಅಂತರಿಕ್ಷವೇ ಕಳಚಿ ಬಿದ್ದಂತಾಗುವುದು. [illegible] ಬಾಬುವು ಬಂದೊಡನೆ ಅವಳಲ್ಲಿ [illegible] ಉದ್ಭವಿಸುವುದು. [illegible] ಧನವನ್ನು ಕಳೆದುಕೊಂಡು ನಿರ್ಗತಿಕನಾಗಿದ್ದವನಿಗೆ, ಒಮ್ಮೆಯೇ ಹೇರಳ ದ್ರವ್ಯವು ಲಭಿಸಿದರೆ ಆಗಬಹುದಾದ ಸಂತೋಷಕ್ಕಿಂತಲೂ ಇಮ್ಮಡಿಯಾಗುವುದು. ಇದಲ್ಲವೇ ಭಾರತ ಲಲನಾಮಣಿಯರಿಗೆ ಇರಬೇಕಾದ ಸ್ವಭಾವ.

ಬಾಬುವು ನೂಲುವುದರಲ್ಲಿ ಅಸಮಾನ ಪಾಂಡಿತ್ಯ ಉಳ್ಳವನೆಂದು ಲೋಕಪ್ರಸಿದ್ಧ. ಅವನು ನೂತ ನೂಲಿಗೆ ಒಂದೆರಡು ಸಲ ಬಹುಮಾನಗಳೂ ದೊರೆತಿವೆ. ಮೋಹನನು ಬಾಬುವು ನೂತ ನೂಲನ್ನು [illegible] ವಿಕ್ರಯಮಾಡುವನು. ಬಂದ ದ್ರವ್ಯವನ್ನು ಬಾಬುವಿನ ಜೀವನಕ್ಕಾಗಿಯಾಗಲಿ ಅಥವಾ ತನ್ನ ಸ್ವಂತಕ್ಕಾಗಲಿ ವ್ಯಯಮಾಡುತ್ತಿರಲಿಲ್ಲ. ಶೇಖರಿಸುತ್ತಲಿದ್ದನು.

ಅಂದಿನ ವಿಶೇಷವನ್ನು ಹೇಳತೀರದು. [illegible] ನೂಲುವ ಪ್ರಾಂತ್ಯದ ಮ್ಯಾನೇಜರ್ ನಾರಾಯಣ ಬಾಬುವು ಮಲಗಿದ್ದವನು ಒಮ್ಮೆಯೇ ಎದ್ದು ಮುಂದಿದ್ದ ಭಾವಚಿತ್ರವನ್ನು ಪುಷ್ಪಗಳಿಂದ ಅಲಂಕರಿಸಿದ್ದಾನೆ. ಸುಗಂಧ ದ್ರವ್ಯವು ಹೇರಳವಾಗಿ ಸುವಾಸನೆಯನ್ನು ಬೀರುತ್ತಲಿದೆ. ವಿದ್ಯುತ್ ದೀಪಗಳು ಭಾವ ಚಿತ್ರವನ್ನು ಪ್ರಕಾಶಮಾನವಾಗಿ ಮಾಡುತ್ತಲಿವೆ. ಬಾಬುವು ಮುಂಭಾಗದಲ್ಲಿ ಕುಳಿತು ಏನೇನೋ ಮಾತನಾಡಲು ಪ್ರಾರಂಭಿಸಿದನು. ಅವನ ಪತ್ನಿಯು ಭ್ರಾಂತಳಾಗಿ ಕೇಳುತ್ತಾ ಕುಳಿತಿದ್ದಾಳೆ. ಭಾವಚಿತ್ರವು ಮೋಹನನದಾಗಿದ್ದಿತು.

…………ಆಲಿಂಗಿಸಿಕೊಂಡು ಈ ಪರಿಸ್ಥಿತಿಗೆ ಕಾರಣವೇನು? ಎಂದಳು.

ಸಹವಾಸ ಎಂದನು.—

ಸಹವಾಸದಿಂದ ಉಂಟಾಗುವ ಕಷ್ಟನಷ್ಟಗಳನ್ನು ನೋಡಿದಿರಾ, ನಾವೂ ಸಹ ಲಕ್ಷ್ಮೀಶನಂತಹವರ ಸಹವಾಸವನ್ನು ದೂರೀಕರಿಸುವುದು ಉತ್ತಮವಲ್ಲವೇ.

ವಿ ವಿ ಧ ವ ರ್ತ ಮಾ ನ

ಹಾಸನ ಸಭೆ

ಮೈಸೂರು ನ್ಯಾಯವಿಧಾಯಕ ಸಭೆ ... ಜನವರಿ ಮಾಹೆ 21 ನೇ ತಾರೀಖು ... ಆರಂಭವಾಗುವುದೆಂದು ತಿಳಿದುಬಂದಿದೆ.

ರಾಜಕೀಯ ಖೈದಿಗಳ ವರ್ಗಾವರ್ಗ

ರಾಜಕೀಯ ಖೈದಿಗಳಾದ ಶ್ರೀ ಟಿ. ... ಲಿಂಗಯ್ಯನವರನ್ನು ... ಜೈಲಿಗೂ, ಶ್ರೀ ಕೆ. ಟಿ. ಭಾಷ್ಯಂ ಅವರನ್ನು ... ಜೈಲಿಗೂ, ಶ್ರೀ ... [illegible] ... ತಗಡೂರು ರಾಮಚಂದ್ರ ... ರನ್ನು ಶಿವಮೊಗ್ಗ ಜೈಲಿಗೂ ವರ್ಗಾ... [illegible]

... ರನ್ನು ನೋಡಲು ಅವಕಾಶವಿಲ್ಲ

ಈ ಮಾಹೆ ... ನೇ ತಾರೀಖು ಬೆಳಿಗ್ಗೆ ... ಬೆಂಗಳೂರಿನಿಂದ ... ಶ್ರೀ ... ರವರನ್ನು ನೋಡಲು ಹಾಸನದ ... ಆ ಸಮಯದಲ್ಲಿ ಅವರಿಗೆ ... ಅವಕಾಶವು ಸಿಕ್ಕಲಿಲ್ಲವೆಂದು ಗೊತ್ತಾಗಿದೆ.

ಸೆಂಟ್ರಲ್ ಕಾಲೇಜ್ ಡೇ

ಬೆಂಗಳೂರು ಸೆಂಟ್ರಲ್ ಕಾಲೇಜಿನ ... ಮುಂದಿನ ತಿಂಗಳು ... ನೇ ತಾರೀಖು ನಡೆಯಲಿರುವುದು. ಸಮಾರಂಭಕ್ಕೆ ... ಶ್ರೀ ... [illegible] ... ಅಧ್ಯಕ್ಷರಾಗಿ ... [illegible]

ಹುಮಾಯೂನ್ ಮಿರ್ಜಾರವರು

ದಿವಾನ್ ಸರ್ ಮಿರ್ಜಾ ಇಸ್ಮಾಯಿಲರ ... ಅಸಿಸ್ಟೆಂಟ್ ... ಹುಮಾಯೂನ್ ಮಿರ್ಜಾರವರು ... ದಿವಾನರಾಗಲಿರುವರೆಂದು ಗೊತ್ತಾಗಿದೆ.

ಬೆಂಗಳೂರು ಹುಚ್ಚರ ಆಸ್ಪತ್ರೆ

ಬೆಂಗಳೂರು ನಗರದಲ್ಲಿದ್ದ ಹುಚ್ಚರ ಆಸ್ಪತ್ರೆಯನ್ನು ಬೆಂಗಳೂರು-ಹೊಸೂರು ... ಯಲ್ಲಿ ಕಟ್ಟಿರುವ ಹೊಸ ಕಟ್ಟಡಕ್ಕೆ ... ಸಿರುತ್ತಾರೆ. ಈ ಆಸ್ಪತ್ರೆಯಲ್ಲಿ ... ಮಂದಿ ಗಂಡಸರಿಗೂ ... ಮಂದಿ ಹೆಂಗಸರಿಗೂ ... ಮಾಡಲವಕಾಶವಿದೆ. ಇಲ್ಲಿ ಹುಚ್ಚರಿಗೆ ... ಶಿಕ್ಷಣ ಕೊಡಲು ... [illegible] ... ದ್ದಾರೆ.

ವರ್ತಕರ ಪ್ರತಿಭಟನೆ

ಮೈಸೂರಿನ ಸುಮಾರು ... ಮಂದಿ, ... ಮುಸಲ್ಮಾನ ಮತ್ತು ... ರಕರು ಈ ಮಾಹೆ ... ನೇ ತಾರೀಖು ... ಕೊಟ್ಟ ... [illegible] ... ತಮ್ಮ ಅಸಮಾಧಾನವನ್ನು ವ್ಯಕ್ತಪಡಿ ... ಜೈಲಿನಲ್ಲಿ ... ಸರ್ಕಾರದಲ್ಲಿ ... [illegible] ... ರೀತಿ ... ತಪ್ಪೆಂದು ತಿಳಿಸಿರುತ್ತಾರೆ.

ಮೈಸೂರು ಸತ್ಯಾಗ್ರಹಿಗಳು ಮಹಾತ್ಮರು

ಮೈಸೂರು ಕಾಂಗ್ರೆಸ್ ... ಅಧ್ಯಕ್ಷರು ಮಹಾತ್ಮ ಗಾಂಧಿಯವರಿಗೆ ... ಮೈಸೂರು ... [illegible] ... ಪತ್ರ ಬರೆದಿದ್ದರು. ಅದಕ್ಕೆ ಮಹಾತ್ಮರ ... [illegible] ... ಹುಮ್ಮುಖವಾಗಿ ... ವಿಶ್ರಾಂತಿ ... ಮತ್ತು ಇನ್ನೂ ... ಪತ್ರಗಳನ್ನು ... ಮುಂದಿಟ್ಟಿಲ್ಲವೆಂದೂ ಉತ್ತರವಿತ್ತಿದ್ದಾರೆ.

... ಸ್ವಾತಂತ್ರ್ಯಕ್ಕೆ ಪ್ರತಿಬಂಧಕ

... ಕಾಂಗ್ರೆಸ್ ... ಕಾಂಗ್ರೆಸ್ಸಿನ ... ಈ ಮಾಹೆ 22 ನೇ ... ಪ್ರಯಾಣ ... [illegible] ... ಶ್ರೀ ... [illegible] ... 30 ನೇ ... [illegible] ... ಸಭೆಯು ... [illegible]

ಸಾಹಿತ್ಯ ಸಮ್ಮೇಳನ

ಕರ್ನಾಟಕ ಸಾಹಿತ್ಯ ಪರಿಷತ್ತಿನವರು ... ಸಮ್ಮೇಳನವನ್ನು ... ಯಲ್ಲಿ ನಡೆಸುವುದಾಗಿ ... [illegible] ... ಅದರೆ ಈಗ ... [illegible] ... ಶ್ರೀ ... ಕರ್ನಾಟಕ ... ಸಮ್ಮೇಳನವು ... ಯಲ್ಲಿ ನಡೆಯಲು ... ಅಭ್ಯಂತರವೂ ಇಲ್ಲ ... ಪ್ರಕಟಣೆಯನ್ನು ... ದ್ದಾರೆ.

ಹೆಂಡದ ಬದಲು ಟೀ

... ಪಾನ ನಿಷೇಧದ ... ಒಂದು ... ಮಾಹೆ 31 ನೇ ತಾರೀಖಿಗೆ ಒಂದು ತಿಂಗಳು ... [illegible] ... ಈ ಒಂದು ತಿಂಗಳಲ್ಲಿ 85000 ... ಟೀ ... [illegible] ... ಮತ್ತು 31,597 ... ಟೀ ಪ್ಯಾಕೆಟ್ಟುಗಳನ್ನು ... [illegible]

ಕರ್ನಾಟಕದಲ್ಲಿ ಒಟ್ಟು ೧,೦೧೨೨೨ ಕಾಂಗ್ರೆಸ್ ಸದಸ್ಯರು

ಧಾರವಾಡ ಜಿಲ್ಲೆ	[illegible]
ಬೆಳಗಾವಿ ಜಿಲ್ಲೆ	[illegible]
ಕಾರವಾರ ಜಿಲ್ಲೆ	[illegible]
ಮಂಗಳೂರು (ದ. ಕ.)	[illegible]
ಬಿಜಾಪುರ ಜಿಲ್ಲೆ	[illegible]
ಬಳ್ಳಾರಿ ಜಿಲ್ಲೆ	[illegible]
ಕೊಡಗು ಜಿಲ್ಲೆ	[illegible]
ಮೈಸೂರು ಸಂಸ್ಥಾನ ಒಟ್ಟು	[illegible]
ಚಿತ್ರದುರ್ಗ ಜಿಲ್ಲೆ	[illegible]
ಬೆಂಗಳೂರು	[illegible]
ಮೈಸೂರು	[illegible]
ಶಿವಮೊಗ್ಗ	[illegible]
ಬೆಂಗಳೂರು ದಂಡು	[illegible]
ಕಡೂರು ಜಿಲ್ಲೆ	[illegible]
ಹಾಸನ	[illegible]
ಹುಮನಾಬಾದ್	[illegible]
ಕೊಲಾರ	[illegible]

ಹುಟ್ಟುವಾಗ ಸತ್ತಿತ್ತು— ಈಗ ಬದುಕಿದೆ



ಸತ್ತು ಬದುಕಿದ ಕಂದ : ನೂತನ ಮಾತೆಯ ಆನಂದ

ಅಮೇರಿಕದ ... ಆಸ್ಪತ್ರೆಯಲ್ಲಿನ ಒಂದು ವಿಚಿತ್ರ ದೃಶ್ಯ— ... ಮತ್ತು ... 17 ದಿನದ ಶಿಶು— ಹುಟ್ಟಿದಾಗ ಸತ್ತಿತ್ತು. ... [illegible] ... ಪ್ರಯೋಗಿಸಿದರು. ಮಗುವಿಗೆ ಪ್ರಾಣ ಬಂತು. ಅದರ ತೂಕ ... [illegible]

ಸುಭಾಷರು ಇಂಗ್ಲೆಂಡಿಗೆ ಬರಬಹುದು

ಇಂಗ್ಲೆಂಡಿನ ... ಸಭೆಯಲ್ಲಿ ... ಸುಭಾಷ್ ಚಂದ್ರ ಬೋಸರವರು ಇಂಗ್ಲೆಂಡಿಗೆ ಬರುವ ಪ್ರಶ್ನೆಯನ್ನು ಎತ್ತಿದರು. ... ಸುಭಾಷರು ಇಂಗ್ಲೆಂಡಿಗೆ ಬರಲು ... ಇಲ್ಲವೆಂದು ಉತ್ತರ ಕೊಟ್ಟರು.

ಬುದ್ಧಿ ಚಾಂಚಲ್ಯ

ಇದೇ ಮಾಹೆ 12 ನೆ ... ಜಿಲ್ಲೆ ... ಪೌರಸಭೆಯ ... ಕಾಂಗ್ರೆಸ್ ... [illegible] ... ನಂತರ ಆ ... 14 ಜನರು ಪೌರಸಭೆಯ ... ಪ್ರೆಸಿಡೆಂಟರಿಗೆ ... [illegible] ... ಪ್ರರುಪಿಸಿದೆ.

ರಾಜಕೀಯ ಬಂದಿಗಳ ಸಮ್ಮೇಳನ

ಈಗ ... ರಾಜಬಂದಿಗಳ ಸಮ್ಮೇಳನವು ಡಿಸೆಂಬರ್ ... ತಾರೀಖಿನಲ್ಲಿ ನಡೆಯುವುದಾಗಿ ತಿಳಿದು ಬಂದಿದೆ.

— ಬಾ ಲ ಸು ಧಾ —

ಮಕ್ಕಳ ಜ್ವರದ ... ಗುಣ ... [illegible] ... ಈ ಔಷಧವು ... ಮಕ್ಕಳ ... ಬಾ ಲ ಸ ಂ ಜೀ ವಿ ನಿ ... ಉಪಯೋಗಿಸಿ.

ಬಾ ಲ ಸು ಧಾ ಬೆಲೆ 1 ರೂ ಬಾ ಲ ಸಂ ಜೀ ವಿ ನಿ 4 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ... ದೊರೆಯುವುದು.

ಸದ್ವೈದ್ಯಶಾಲಾ, ನಂಜನಗೂಡು.

ಸಾಧ್ವಿ

೨೯—೧೧—೩೭ ನೇ ಸೋಮವಾರ

ಜಗದೀಶ ಚಂದ್ರ ಬೋಸ್

ಜಗದ್ವಿಖ್ಯಾತ ಭಾರತೀಯ ಭೌತಿಕ ಶಾಸ್ತ್ರ ಪಂಡಿತರಾದ ಜಗದೀಶ ಚಂದ್ರ ಬೋಸರವರು ತಮ್ಮ ೭೯ ನೇ ವಯಸ್ಸಿನಲ್ಲಿ ಕಳೆದ ವಾರ ಹೃದಯಸ್ತಂಭನದಿಂದ ನಿಧನರಾದರು. ಈ ವಿಷಯವು ಇಡೀ ಪ್ರಪಂಚವನ್ನೇ ಶೋಕಸಾಗರದಲ್ಲಿ ಮುಳುಗಿಸಿದೆ. ಜಗದೀಶ ಚಂದ್ರರು ಆಧುನಿಕ ಭೌತಿಕ ವಿಜ್ಞಾನ ಸಂಶೋಧಕರಿಗೆ ತಿಲಕಪ್ರಾಯರಾಗಿದ್ದರು. ಇವರ ಅದ್ಭುತವಾದ ಪ್ರಯೋಗಗಳೂ, ಅಮೂಲ್ಯವಾದ ಶೋಧನೆಗಳೂ, ಪಾಶ್ಚಾತ್ಯ ವೈಜ್ಞಾನಿಕರನ್ನು ಬೆರಗುಮಾಡಿವೆ. ಭಾರತೀಯರು ಹಿಂದೂ ಉಳಿಯದ ಅನಾಗರಿಕರೆಂದು ವಿದೇಶೀಯರು ಪ್ರಚಾರ ಮಾಡುತ್ತಿದ್ದ ಕಾಲದಲ್ಲಿ ಬೋಸರು ತಮ್ಮ ಮೇಧಾ ಶಕ್ತಿಯಿಂದಲೂ ಸ್ವಾರ್ಥತ್ಯಾಗದಿಂದಲೂ ಮಾತೃಭೂಮಿಗೆ ಶಾಶ್ವತವಾದ ಯಶಸ್ಸನ್ನೂ, ಗೌರವವನ್ನೂ ತಂದರು. ಸಮಸ್ತ ಪ್ರಪಂಚದ ಗಮನವನ್ನೂ ನಮ್ಮ ದೇಶದ ಕಡೆಗೆ ಸೆಳೆದರು.

ಇವರು ಮಾಡಿದ ಅಮೂಲ್ಯವಾದ ಸಂಶೋಧನೆ ಯಾವುದೆಂದರೆ, ಸಮಸ್ತ ಅಣುರೇಣು ತೃಣಕಾಷ್ಠಗಳಲ್ಲಿಯೂ ಚೈತನ್ಯವು ಅಡಗಿರುತ್ತದೆ ಎಂಬುದೇ. ತಾವೇ ಹೊಸದಾಗಿ ಕಂಡುಹಿಡಿದ ಒಂದು ಯಂತ್ರದ ಮೂಲಕ ಸಸ್ಯವರ್ಗದ ಮೇಲೆ ಅವರು ನಡೆಸಿದ ಪ್ರಯೋಗಗಳಿಂದ ಈ ತತ್ವವನ್ನು ಜಗತ್ತಿಗೆ ನಿರೂಪಿಸಿಕೊಟ್ಟರು. ಮನುಷ್ಯ ಶರೀರದಲ್ಲಿ ನರಗಳೂ, ರಕ್ತಸಂಚಲನೆಯೂ ಭಾವೋದ್ರೇಕಗಳೂ ಇರುವಂತೆಯೇ ಸಸ್ಯವರ್ಗಗಳಲ್ಲಿಯೂ ಇರುತ್ತವೆಂಬುದನ್ನು ತಮ್ಮ ಯಂತ್ರದ ಮೂಲಕ ತೋರಿಸಿಕೊಟ್ಟಿರುವರು. ಹಾಗೆಯೇ ಲೋಹಗಳಲ್ಲಿಯೂ ಜೀವವು ಇರುವುದೆಂಬುದನ್ನು ಪ್ರಯೋಗದಿಂದ ತೋರಿಸಿಕೊಟ್ಟಿರುವರು.

ಉಪನಿಷತ್ತುಗಳಲ್ಲಿ ಹೇಳಿರುವ "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ವಾಕ್ಯವೇ ಇವರ ಶೋಧನೆಗಳ ಮೂಲಾಧಾರ. ಸಹಸ್ರಾರು ವರ್ಷಗಳ ಹಿಂದೆ ಗಂಗಾ ತೀರದಲ್ಲಿ ನಮ್ಮ ಪೂರ್ವಜರಿಗೆ ಅನುಗ್ರಹಿಸಲ್ಪಟ್ಟ ಈ ದಿವ್ಯ ಜ್ಞಾನದ ಅನುಭವವನ್ನು ತಾವು ತಮ್ಮ ಪ್ರಯತ್ನಗಳಿಂದ ಜಗತ್ತಿಗೆ ವಿಜ್ಞಾನ ರೀತಿಯಲ್ಲಿ ಬೀರುವುದಾಗಿ ಅವರು ಸಾರಿದ್ದಾರೆ. ಇದರಿಂದ ಅವರಿಗೆ ನಮ್ಮ ದೇಶದಲ್ಲಿಯೂ ಆರ್ಯ ಮಹರ್ಷಿಗಳಲ್ಲಿಯೂ ಇರುವ ಅಚ್ಚಳಿಯ ಭಕ್ತಿ ವಿಶ್ವಾಸಗಳು ವೇದ್ಯವಾಗುವುವು. ಮತ್ತು ನಮ್ಮ ಪುರಾತನ ಮಹರ್ಷಿಗಳ ವಿಷಯವಾಗಿ ಅವರು ಒಮ್ಮೆ ಹೇಳಿದ್ದೇನೆಂದರೆ "ಪ್ರತಿಕ್ಷಣದಲ್ಲಿಯೂ ವ್ಯತ್ಯಾಸಹೊಂದುತ್ತಿರುವ ಈ ಮಾಯಾಪ್ರಪಂಚಕ್ಕೆಲ್ಲಾ ಆಧಾರಸ್ತಂಭನಾದವನು ಒಬ್ಬನೇ ಪರಬ್ರಹ್ಮ. ಆತನ ಸ್ವರೂಪವೆಂಬ ದಿವ್ಯಜ್ಞಾನವು ನಮ್ಮ ಪೂರ್ವಜರಿಗೆ ಮಾತ್ರ ತಿಳಿದಿತ್ತು. ಆ ದಿವ್ಯ ಸಂದೇಶದ ಒಂದು ಅಂಶವನ್ನು ನಾನು ನನ್ನ ಪ್ರಯೋಗಶಾಲೆಯಲ್ಲಿ ಯಥಾವತ್ತಾಗಿ ಪ್ರಪಂಚಕ್ಕೆ ಸಾರುತ್ತಿರುವೆನು."

ಇಂತಹ ಉಜ್ವಲ ದೇಶಾಭಿಮಾನಿಗಳೂ, ವೇದಾಂತಿಗಳೂ ಆಕಸ್ಮಿಕವಾಗಿ ಸ್ವರ್ಗಸ್ಥರಾದುದು ನಮ್ಮ ದೇಶದ ದುರ್ದೈವವೇ ಸರಿ. ಜಗದೀಶ ಚಂದ್ರರು ತಮ್ಮ ಸ್ವಾರ್ಜಿತ ಐಶ್ವರ್ಯವಾದ ಹದಿನೇಳು ಲಕ್ಷ ರೂಪಾಯಿಗಳನ್ನು ವಿದ್ಯಾ ಪ್ರಚಾರಕ್ಕಾಗಿ ಧಾರೆಯೆರೆದಿರುವರೆಂಬ ವಿಷಯವು ಅತ್ಯಂತ ಸ್ತೋತ್ರಾರ್ಹವಾಗಿದೆ.

ಅವರ ಜೀವನದ ಅನ್ವೇಷಣಾದ ಆದರ್ಶವೂ ಅವರ ಜ್ಞಾನಾರ್ಜನೆಯ ಪವಿತ್ರ ಸಾಧನೆಯೂ ನಮ್ಮೆಲ್ಲರಿಗೂ ಮೇಲ್ಪಂಕ್ತಿಯಾಗಿರಲೆಂದೂ ಇಂತಹ ಮಹರ್ಷಿಯರುಗಳು ನಮ್ಮ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಜನಿಸಿ ದೇಶಮಾತೆಯ ಕೀರ್ತಿಯನ್ನು ದಿಗಂತಗಳಿಗೂ ವಿಸ್ತರಿಸಲೆಂದೂ ದಿವಂಗತರ ಆತ್ಮಕ್ಕೆ ಶಾಂತಿಯುಂಟಾಗಲೆಂದೂ ಭಕ್ತಿಭಾವದಿಂದ ಪ್ರಾರ್ಥಿಸುತ್ತೇವೆ.

ಕಿರಣ

ಕಿರಣ ಎಂಬ ಮಾಸಪತ್ರಿಕೆಯ ಮೊದಲನೆಯ ಸಂಚಿಕೆಯು ನಮ್ಮ ಕೈಸೇರಿದೆ. ಇದು ದಾವಣಗೆರೆಯಲ್ಲಿ ಪ್ರಚುರವಾಗುವ ಮಾಸಪತ್ರಿಕೆ. ಇದು ಶ್ರೀ ಕಾಶಿ ಪ್ರಾಣೇಶಾಚಾರ್ಯರ ಸಂಪಾದಕತ್ವದಲ್ಲಿ ಹೊರಡುತ್ತಿದೆ. ಇದರಲ್ಲಿ ಅನೇಕ ಕಥೆಗಳೂ, ಮತ್ತು ಉಪಯುಕ್ತವಾದ ವಿಷಯಗಳೂ ಸುಲಭವಾದ ಶೈಲಿಯಲ್ಲಿ ಬರೆಯಲ್ಪಟ್ಟಿವೆ. ಇದು ನಮ್ಮ ಇಡೀ ಕರ್ನಾಟಕದಲ್ಲೆಲ್ಲಾ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿ ಬಾಳಲೆಂದು ನಾವು ಹಾರೈಸುತ್ತೇವೆ. ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ.

'ನಾನೇ ನಿಜವಾದ ಕಾಂಗ್ರೆಸ್ಸಿನವನು'

ದಿವಾನರ ಭಾವಪೂರಿತ ಭಾಷಣ

ಕಳೆದ ಗುರುವಾರ ಮೈಸೂರು ನಗರದ ವರ್ತಕರು ದಿವಾನ್ ಸರ್ ಮಿರ್ಜಾ ಇಸ್ಮಾಯಿಲರವರನ್ನು ಬರಮಾಡಿಕೊಂಡು ಬಹಳ ವೈಭವದಿಂದ ಸತ್ಕರಿಸಿದರು. ಆಗ ಒಪ್ಪಿಸಲ್ಪಟ್ಟ ಬಿನ್ನವತ್ತಳೆಗೆ ಉತ್ತರವಾಗಿ ದಿವಾನರು ಹೇಳಿದ ಅಂಶಗಳಲ್ಲಿ ಕೆಲವು ಭಾಗಗಳನ್ನು ಇಲ್ಲಿ ಕೊಟ್ಟಿದೆ:—

ನನ್ನ ಅಂತರಂಗವನ್ನೇ ತೆರೆದು ನಿಮ್ಮೊಡನೆ ಮಾತನಾಡುವುದಾದರೆ, ನಾನು ತಿಳಿಸಬೇಕಾದ ಅಂಶವೇನೆಂದರೆ ಕೆಲವು ವರ್ಷಗಳ ಕಾಲ ಹೀಗೆಯೇ ಸಂಸ್ಥಾನದ ಸೇವೆಯಲ್ಲಿರಬೇಕೆಂದು ನಾನು ಬಯಸುವುದಾದರೆ ನಾನು ಅತ್ಯಾಸೆಯುಳ್ಳವನೆಂದು ನನ್ನಲ್ಲಿ ನನಗೇ ತೋರುತ್ತದೆ. ಈ ದಿನ ನೀವುಗಳು ಔದಾರ್ಯಭಾವದಿಂದ ನಡೆಯಿಸಿರುವ ಈ ಸತ್ಕಾರ ಕೂಟದ ರೂಪದಲ್ಲಿ ನನ್ನಲ್ಲಿ ಪ್ರೀತಿ ವಿಶ್ವಾಸಗಳನ್ನು ತೋರಿಸಿದ್ದೀರಿ. ನನ್ನ ದೇಶಬಾಂಧವರಿಗೆ ನನ್ನಲ್ಲಿರುವ ಈ ಬಗೆಯ ಪ್ರೀತಿವಿಶ್ವಾಸಗಳು ಕಡಮೆಯಾಗುವ ಸೂಚನೆಗಳು ಪ್ರಾರಂಭವಾಗುವುದಕ್ಕೆ ಮೊದಲೇ ನಾನು ನನ್ನ ಹುದ್ದೆಯಿಂದ ವಿಶ್ರಾಂತಿಯೊಂದುವ ಅವಕಾಶವು ನನಗೆ ಒದಗಲೆಂಬುದೊಂದೇ ನನ್ನ ಪ್ರಾರ್ಥನೆ.

ವಿವೇಕದಿಂದ ಕೂಡಿ ಪ್ರಗತಿ ಮಾರ್ಗವನ್ನವಲಂಬಿಸಿರತಕ್ಕವರೆಂದು ಖ್ಯಾತಿಯನ್ನು ಗಳಿಸಿದ್ದ ಮೈಸೂರು ಸರ್ಕಾರದವರು ತಟಕ್ಕನೆ "ದಬ್ಬಾಳಿಕೆ"ಯ ಕಾರ್ಯನೀತಿಯನ್ನನುಸರಿಸಿ ಕಾಂಗ್ರೆಸ್ ಮಹಾಸಭೆಯ ವಿಷಯದಲ್ಲಿ ವಿರೋಧವನ್ನು ತೋರಿಸುತ್ತಿರುವುದೇಕೆಂದು ತಮಗೆಲ್ಲರಿಗೂ ಆಶ್ಚರ್ಯವುಂಟಾಗಿರುವುದು. ನನಗೂ ಒಂದು ವಿಧದಲ್ಲಿ ಆಶ್ಚರ್ಯವುಂಟಾಗಿದೆ. ಸರ್ಕಾರದವರು "ದಬ್ಬಾಳಿಕೆ" ಕಾರ್ಯನೀತಿಯನ್ನನುಸರಿಸಿದ್ದಾರೆಂದು ನಮ್ಮ ಸಂಸ್ಥಾನದವರೇ ಕೆಲವರು ಆಕ್ಷೇಪಿಸುತ್ತಿರುವುದು ಸರಿಯಷ್ಟೆ. ಸರ್ಕಾರದವರು ಆ ರೀತಿ ಮಾಡುತ್ತಿದ್ದಾರೆಂದು ಅವರು ನಿಜವಾಗಿಯೂ ನಂಬಿದ್ದಾರೆಯೇ—ಎಂಬುದೇ ನನ್ನ ಆಶ್ಚರ್ಯ. ಸರ್ಕಾರದವರು ಕೈಕೊಂಡ ಕಾರ್ಯಕ್ರಮವು ಅನಿವಾರ್ಯವಾಗಿ ಪರಿಣಮಿಸುವುದಕ್ಕೆ ಕಾರಣರಾಗಿದ್ದೂ, ಅದರ ಜವಾಬ್ದಾರಿಯನ್ನು ಅವರು ಸರ್ಕಾರದವರ ಮೇಲೆ ಹೊರಿಸುವುದು ನ್ಯಾಯವೆ? ಸಂಸ್ಥಾನದ ಕಾನೂನನ್ನು ಉಲ್ಲಂಘಿಸಿದವರ ಮೇಲೆ ಆ ಕಾನೂನಿಗನುಸಾರವಾಗಿ ಕ್ರಮ ಜರುಗಿಸಿದರೆ ಅದು ದಬ್ಬಾಳಿಕೆಯೆ? ಸರ್ಕಾರದವರಲ್ಲಿ ಜನರಿಗಿರುವ ಭಕ್ತಿ ವಿಶ್ವಾಸಗಳನ್ನು ತಪ್ಪಿಸುವುದೊಂದನ್ನೇ ತಮ್ಮ ಗುರಿಯಾಗಿಟ್ಟುಕೊಂಡು, ಪ್ರಜೆಗಳ ಮನಸ್ಸನ್ನು ಕೆಡಿಸಲು ಪ್ರಯತ್ನಿಸಿ, ಕಾರ್ಯರೂಪಕ್ಕೆ ಬರುವುದು ಸಾಧ್ಯವಿಲ್ಲದ ಪ್ರಯೋಜನಗಳನ್ನೆಲ್ಲ ತಾವು ದೊರಕಿಸಿಕೊಡುವುದಾಗಿ ಪ್ರಜೆಗಳಿಗೆ ಹೇಳಿ ಭ್ರಮೆಯನ್ನುಂಟುಮಾಡುತ್ತಿರುವವರ ವಿಷಯದಲ್ಲಿ ನಿರ್ಬಂಧವನ್ನು ಕಲ್ಪಿಸಿದರೆ, ಅದು ದಬ್ಬಾಳಿಕೆಯೆ? ಖಾಸ ಕಾಂಗ್ರೆಸ್ಸಿನವರೆಂದು ಹೇಳಿಕೊಂಡ ಮಾತ್ರದಿಂದಲೇ ಕಾನೂನು ತಮಗೆ ಅನ್ವಯಿಸದ ವಿನಾಯಿತಿಯು ದೊರೆಯಬೇಕೆಂದೂ ಅವರು ಭಾವಿಸಿರುವಂತೆ ತೋರುತ್ತಿದೆ. ಆದ್ದರಿಂದಲೇ ಈಗಿನ ವ್ಯವಸ್ಥೆಯನ್ನು ಉಳಿಸಬೇಕೆಂದಿರುವ ತಮ್ಮ ಪ್ರಯತ್ನಕ್ಕೆ ಬರುವ ಕಷ್ಟ ನಷ್ಟಗಳೆಲ್ಲ, ತಾವು ಕಾಂಗ್ರೆಸ್ಸಿನವರೆಂದು ಹೇಳಿಕೊಂಡ ಮಾತ್ರದಿಂದಲೇ ತಪ್ಪಿಹೋಗುವುವೆಂದು ಅವರು ಭಾವಿಸಿಕೊಂಡಂತೆ ತೋರುತ್ತದೆ. ಕಾಂಗ್ರೆಸ್ಸಿನವರೆಂಬ ಘನವಾದ ಹೆಸರಿಗೆ ಅವರು ಖಂಡಿತವಾಗಿಯೂ ಅರ್ಹರಲ್ಲ. ನಿಜವಾದ ಕಾಂಗ್ರೆಸ್ ನಾಯಕರ ವಿವೇಕವನ್ನೂ, ತಾಳ್ಮೆಯನ್ನೂ, ಪ್ರಾಮಾಣಿಕತೆಯನ್ನೂ, ಮೈಸೂರು ಸಂಸ್ಥಾನದಲ್ಲಿ "ಕಾಂಗ್ರೆಸ್ ನಾಯಕರು" ಎಂದು ಕರೆದುಕೊಳ್ಳುತ್ತಿರುವವರೆಲ್ಲ ಪರಿಶೀಲಿಸಿ ನೋಡಿದರೆ ಮೇಲು. ಅದರಿಂದ ಅವರಿಗೆ ಎಷ್ಟೋ ಲಾಭವುಂಟು.

ಅವರು ನಿಜವಾಗಿಯೂ ಕಾಂಗ್ರೆಸ್ಸಿನವರಾಗಿದ್ದ ಪಕ್ಷಕ್ಕೆ, ತಮ್ಮ ಉದ್ದೇಶಸಾಧನೆಗೆ ಅವರು ಬೇರೆ ವಿಧಾನಗಳನ್ನೇ ಅನುಸರಿಸುತ್ತಿದ್ದರು. ಆ ವಿಧಾನಗಳು ಯಾವುವೇ ಆಗಿರಲಿ, ಅವರು ಬೇರೆ ಮಾರ್ಗಗಳನ್ನೇ ಅನುಸರಿಸುತ್ತಿದ್ದರೇ ಹೊರತು, ಈಗಿನಂತೆ ಕಾಂಗ್ರೆಸ್ಸಿನವರಿಗೆ ಅನುಚಿತರೀತಿಯಲ್ಲಿ ವರ್ತಿಸಿ ಅವರ ಸ್ವದೇಶವನ್ನೇ ಅನ್ಯಾಯವಾಗಿ ದೂರುತ್ತಿರಲಿಲ್ಲ. ನನ್ನನ್ನು ಆಕ್ಷೇಪಿಸುವವರಲ್ಲಿ ಅನೇಕರಿಗಿಂತಲೂ ನಾನೇ ನಿಜವಾದ ಕಾಂಗ್ರೆಸ್ಸಿನವನಾಗಿದ್ದೇನೆ. ಕಾಂಗ್ರೆಸ್ಸಿನ ಕಾರ್ಯಕ್ರಮದ ಮುಖ್ಯ ಜೀವಾಳದಂತಿರುವುವುಗಳೇ, ದೇಶೋನ್ನತಿ ಸಾಧಕಗಳಾದ ಖಾದಿಪ್ರೋತ್ಸಾಹ, ಗ್ರಾಮಾಭಿವೃದ್ಧಿ ಪ್ರಯತ್ನಗಳು ಮುಂತಾದ ಕಾರ್ಯಗಳು. ಈ ಕಾರ್ಯಗಳಲ್ಲಿ ನನ್ನಿಂದ ಸಾಧ್ಯವಿರುವಷ್ಟನ್ನೂ ನೆರವೇರಿಸಿದ್ದೇನೆ. ಮೈಸೂರು ಸಂಸ್ಥಾನದಲ್ಲಿರುವವರಲ್ಲಿ ಕಾಂಗ್ರೆಸ್ಸಿನವರಿಗಿಂತಲೂ ಹೆಚ್ಚಾಗಿ ನಾನು ಈ ಕಾರ್ಯಗಳನ್ನು ನೆರವೇರಿಸಿರುವೆನೆಂದು ನಾನು ನಂಬಿದ್ದೇನೆ.

ಯಾವ ಸರ್ಕಾರವೇ ಆಗಲಿ—ಎಷ್ಟು ಒಳ್ಳೆಯ ಉದ್ದೇಶದಿಂದ ಕೂಡಿರುವ ಸರ್ಕಾರದವರೇ ಆಗಲಿ—ಎಲ್ಲರ ಆಸೆಗಳನ್ನೂ ನೆರವೇರಿಸುವುದು ಸಾಧ್ಯವಿಲ್ಲ. ಆ ಆಸೆಗಳು ಯುಕ್ತವಾದವುಗಳೇ ಆಗಿರಬಹುದು ಆದರೂ ಅವುಗಳನ್ನೆಲ್ಲ ನೆರವೇರಿಸುವುದು ಯಾವ ಸರ್ಕಾರದವರಿಗೂ ಸಾಧ್ಯವಿಲ್ಲ. ಅಥವಾ ಅರ್ಜಿ ಹಾಕಿಕೊಂಡವರೆಲ್ಲರಿಗೂ ಸಾಧ್ಯವಿಲ್ಲ. ಕೈತುಂಬ ಸಂಬಳವು ಬರುವ ದೊಡ್ಡ ದೊಡ್ಡ ಹುದ್ದೆಗಳನ್ನು ಕೊಡುವುದೂ ಯಾವ ಸರ್ಕಾರದವರಿಗೂ ಸಾಧ್ಯವಿಲ್ಲ. ಕೇಳಿಕೊಂಡವರ ಅಭೀಷ್ಟಗಳನ್ನೆಲ್ಲ ಸಲ್ಲಿಸುವಷ್ಟು ಶಕ್ತರಾಗಿರುವಷ್ಟು ಸಾಮರ್ಥ್ಯವು ತಮಗಿದೆಯೆಂದು ಮೈಸೂರು ಸರ್ಕಾರವೇನೂ ತಿಳಿದುಕೊಂಡಿಲ್ಲ.

ವೃದ್ಧ ಪಿತಾಮಹರ ಸ್ಮಾರಕೋತ್ಸವ.

ಈ ಸ್ಮಾರಕ ದಿನೋತ್ಸವವನ್ನು ಸ್ವರ್ಗೀಯ ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯ ಬಾಲಬೋಧಿನಿ ಪ್ರೈಮರಿ [illegible] ಸ್ಕೂಲ್ ಉಪಾಧ್ಯಾಯ ಉಪಾಧ್ಯಾಯಿನಿಯರುಗಳು ತಾ|| [illegible] ನೇ [illegible]ವಾರ ಸಾಯಂಕಾಲ ಮೈಸೂರು ಡಿಸ್ಟ್ರಿಕ್ಟ್ ಎಜ್ಯುಕೇಷನಲ್ ಆಫೀಸರವರ [illegible] ಮಿಸೆಸ್ ಸಿ. ವಿ. ನರಸಿಂ[illegible] ಅಧ್ಯಕ್ಷತೆಯಲ್ಲಿ ನಡೆಸಿದರು. [illegible]ಭದಲ್ಲಿ ಬಾಲಕರಿಂದ ದೇವ[illegible] ಪ್ರಾರ್ಥನೆಯಾಯಿತು. ಅನಂತರ [illegible] ಜನೋಪಕಾರ [illegible] ಮಾಡಿದ ಕೆಲಸಗಳು, ಭರತಖಂ[illegible] ಅವರ ಹೆಸರು ಹರಡಿರುವುದು [illegible] ವಿಷಯಗಳನ್ನು ಕುರಿತು [illegible] ಸ್ಕೂಲಿನ ಹೆಡ್ಮಿಸ್ಟ್ರೆಸ್ಸರವರು ಬಹು [illegible]ವಾದ ಭಾಷಣ ಮಾಡಿದರು. ಆ [illegible] ಸ್ಕೂಲ್ ಬಾಲಕಿಯರ ನರ್ತನ [illegible]. ಅನಂತರ ಶ್ರೀಮತಿ [illegible]ನವರಿಂದ ಇಂಪಾದ ಭಾರತ [illegible]ವಾಯಿತು. ಇದಾದ ಮೇಲೆ ಶ್ರೀಮತಿ [illegible]ನವರಿಂದ ಹಾರ್ಮೋನಿಯಂ [illegible] ಸಂಗೀತವೂ ನಡೆದು ಬಹು ಸ್ವಾರಸ್ಯವಾಗಿ ನಡೆಯಿತು. ಅನೇಕ ಮಾನ್ಯ ಮ[illegible]ಯರು ಈ ಮಹೋತ್ಸವದಲ್ಲಿ ಭಾಗಿಗಳಾಗಿದ್ದರು. ಸ್ಕೂಲಿಗೆ ರಜವನ್ನೂ ಸಹ ಕೊಡಲಾಗಿತ್ತು. ಅಧ್ಯಕ್ಷರ ಭಾಷಣವಾದ ನಂತರ ಗಂಧ ಪುಷ್ಪ ತಾಂಬೂಲ ವಿನಿಯೋಗವಾಯಿತು. ಅನಂತರ ಶ್ರೀಮನ್ಮಹಾರಾಜರವರ ಶ್ರೇಯಸ್ಸ್ಪ್ರಾರ್ಥನೆಯಾಗಿ ಸಭೆಯು ಮುಕ್ತಾಯವಾಯಿತು.

ವಾಗ್ವರ್ಧಿನಿ ಸಭಾ.

ಇತ್ತೀಚೆಗೆ ಕೆಲವು [illegible] ಕರ್ಣಾಟಕ ಸಂಘದ ಹಲವು [illegible] ಸದಸ್ಯರುಗಳು ಮಲ್ಲಿಗೆ [illegible] ವಾಗ್ವರ್ಧಿನೀ ಸಭೆಯನ್ನು ಸ್ಥಾಪಿಸಿರುವರು. ಈ ಸಭೆಯ ಪ್ರಧಾನ ಧ್ಯೇಯವೆಂದರೆ:— [illegible] ಯಾವುದಾದರೊಂದು ಭಾಷೆಯಲ್ಲಿ ಉಪಯುಕ್ತವಾದ ವಿಷಯಗಳನ್ನು ಚರ್ಚಿಸಿ, ಭಾಷಾಭಿವೃದ್ಧಿ, ವಾಗ್ಮಿತ್ವ, ಸಭೆಗಳಲ್ಲಿ ಮಾತನಾಡಲು ಧೈರ್ಯವನ್ನು ಕಲ್ಪಿಸಿಕೊಡಲು ಸಹಕಾರಿಯಾಗಿದೆ. ಈಗಾಗಲೇ ೫-೬ ಕಾರ್ಯಕ್ರಮಗಳು ನಡೆದಿವೆ. [illegible] ಸಭೆಗೆ ಒಂದು [illegible] ಕಾರೀ ಸಮಿತಿಯನ್ನು ನಿರ್ಮಿಸಿದೆ. ಇದಕ್ಕೆ ಶ್ರೀ [illegible], ಆರ್. [illegible] ವೆಂಕಟರಮಣಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಆರ್. ಎಸ್. ಲಕ್ಷ್ಮೀಕಾಂತಯ್ಯನವರು ಪ್ರಧಾನ ಕಾರ್ಯದರ್ಶಿಗಳಾಗಿಯೂ, ಮತ್ತು ಬಿ. ಟಿ. [illegible]ಸ್ವಾಮಿ[illegible]ರವರು ಸಹಾಯಕ ಕಾರ್ಯದರ್ಶಿಗಳಾಗಿ [illegible] ೮ ಜನ ಸದಸ್ಯರುಗಳೂ ಚುನಾಯಿತರಾಗಿರುವರು.

ನಂಜನಗೂಡು

ಮುನಿಸಿಪಾಲಿಟಿ— [illegible] ಪ್ರೆಸಿಡೆಂಟರಿಗೆ [illegible] ತ್ರಲಿದೆ [illegible] ಸೋ[illegible]ತ್ತಿದ್ದಾರೆ.

[illegible] ನಗರದಿಂದ [illegible] ಕರಣದ [illegible].

ಜನ ಪರೀಕ್ಷೆ— [illegible] ಕ್ಕಾಗಿ [illegible].

ಹಬ್ಬ — [illegible] ತಗಡೂರಿನಲ್ಲಿ [illegible] ದೇವಸ್ಥಾನದಲ್ಲಿ ಬಹು[illegible] ಮಾಡಿ[illegible] ಕೊಂಡರು.

ಧರ್ಮಕಾರ್ಯ — [illegible] ನಾಮಕ [illegible] ಪ್ರಭೃತಿ[illegible] ಶ್ರೀ [illegible] ಸ್ವಾಮಿಯ ದೇವಾಲಯ, ಮತ್ತು ಛತ್ರದ ಜೀರ್ಣೋದ್ಧಾರಕ್ಕೆ [illegible] ಸ್ತುತ್ಯ.

ಕಾಂಗ್ರೆಸ್ ಪ್ರಚಾರ —[illegible] ಯುವಕರುಗಳೂ, ಇತರರೂ ಹಳ್ಳಿಗಳ ಮೇಲೆ ಹೊರಟು ಕಾಂಗ್ರೆಸ್ [illegible] ಮಾಡುತ್ತಿದ್ದಾರೆ. [illegible] ದಾಸಪ್ಪನವರ [illegible] ಕಳೆದ [illegible] ಭಾಷಣ ಮಾಡಿದರು.

ಜನಾಬಂದಿ —[illegible] ಜನಾಬಂದಿಯು [illegible] ಅಮಲ್ದಾರರು [illegible] ಅನುಕೂಲವಾಯಿತು. ಹುಜೂರು ಜಮಾಬಂದಿಗೆ [illegible] ಹೇಳಿರಬೇಕೆ ಬರುವರಂತೆ.

ಕರ್ನಾಟಕ ಸಂಘ-ಮಹಾಮಾತೃಶ್ರೀ ಲಕ್ಷ್ಮಮ್ಮಣ್ಣಿಯವರ ಹೆಸರಿನಲ್ಲಿ ಒಂದು ಸಾರ್ವಜನಿಕ ಭಾಷಣ ಮಂದಿರವನ್ನು ಕಟ್ಟುವವರಾಗಿರುತ್ತಾರೆ. [illegible] ಉದಾರತ್ವದಿಂದ ನೆರವೇರಬೇಕಾಗಿದೆ.

ಗೀತಾ ಉಪನ್ಯಾಸಗಳು—[illegible] ಶ್ರೀ [illegible] ಉಪನ್ಯಾಸಗಳು ನೆರವೇರಿದವು. ಈ [illegible] ಸ್ವಾಮಿಗಳು [illegible] ಧನ್ವಂತರಿ [illegible] ಕ್ಕೆ [illegible] ವೈಭವದಿಂದ [illegible] ದ್ದಾರೆ.

ಬಿತ್ತಿ.

ಹೊಟ್ಟೆನಿಂದ ವಿದ್ಯುಚ್ಛಕ್ತಿ

[illegible] ಹೊಟ್ಟೆನಿಂದ ವಿದ್ಯುಚ್ಛಕ್ತಿಯನ್ನು ತಯಾರಿಸಬಹುದೆಂದು [illegible] ಶೋಧನೆ ನಡೆಸಿರುವ[illegible] ಕೆಂದು ತಿಳಿದುಬಂದಿದೆ.

ಆರ್ಯಸಮಾಜ.

ಮೈಸೂರು, ನವರಾತ್ರಿ [illegible] [illegible] ಆರ್ಯ ಸಮಾಜದವರು [illegible] ಮೈಸೂರು [illegible].

ಈ [illegible] ಶ್ರೀ [illegible] ಶ್ರೀ [illegible] ಶ್ರೀ ಟಿ. ಕೆ. [illegible] ಮಾಡಿದರು.

ಅಖಿಲಕರ್ನಾಟಕ ಆಯುರ್ವೇದ ಸಮ್ಮೇಳನ

ಮೈಸೂರು [illegible] ನಡೆಯಲಿರುವ ಆಯುರ್ವೇದ ಸಮ್ಮೇಳನಕ್ಕೆ ಈ ಪ್ರಾಂತದ ಆಯುರ್ವೇದ ಮತ್ತು [illegible] ಬರಬೇಕೆಂದು ಒಂದು ಪ್ರಕಟನೆಯನ್ನು ಹೊರಡಿಸಿದ್ದಾರೆ.

ಸ್ವರಾಜಪಲ್ಲಿ ದೇವಸ್ಥಾನ

ಬೆಂಗಳೂರು [illegible] ಮೈಸೂರು [illegible] ಒಂದೂ [illegible] ಕಟ್ಟಿಸಿದ [illegible] ಬೆಂಗಳೂರು ಮ್ಯುನಿಸಿಪಲ್ [illegible] ಬೆಂಗಳೂರು [illegible] ಅಧಿಕಾರಿಗ[illegible].

ಸಮಾರಂಭ

ಈ ಮಾಸ ೧೧ ನೇ [illegible] ಬೆಂಗಳೂರು [illegible] ಶ್ರೀ [illegible] ಸ್ವಾಮಿಯವರ [illegible] ಶ್ರೀ [illegible] ಮಾಡಿದರು.

ಪಾನ ನಿರೋಧ

ಮದ್ರಾಸ್ ಸರ್ಕಾರದವರು ಸೇಲಂನ ಪಾನ ನಿರೋಧದ ವಿಚಾರವಾಗಿ ಒಂದು ಪ್ರಕಟನೆಯನ್ನು ಹೊರಡಿಸುತ್ತಾ, ಈ ನಿರೋಧದ ಕಾರ್ಯವನ್ನು [illegible] ಜನರ ಮನಸ್ಸನ್ನು ಕುದಿರಿಸ ಮುರಿಸ್ಯಾಸದಿಂದ ಮಾಡಬೇಕೆಂದೂ, ಪ್ರತಿಯೊಂದು ಹಳ್ಳಿಯಲ್ಲಿಯೂ ಈ ನಿರೋಧದ ಕಾರ್ಯವನ್ನು [illegible] ಜರುಗಿಸಬೇಕೆಂದೂ ತಿಳಿಸುತ್ತಾರೆ.

ಅಮೃತಾಂಜನ

ಶೀಘ್ರವಾಗಿ ಗುಣಪಡಿಸುತ್ತದೆ.

ಪ್ರಪಂಚ ಪರಿಚಯ.

[illegible]

[illegible]

[illegible]

ಯುದ್ಧರಾಷ್ಟ್ರಗಳು [illegible]

ಜರ್ಮನಿ—ವಸಾಹತುಗಳನ್ನು ಬಲವಾಗಿ ಕೇಳುತ್ತಿದೆ. ಈಗಾಗಲೇ ಮತ್ತೊಮ್ಮೆ ಪ್ರಪಂಚದ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗುತ್ತಲಿದೆ.

ಇಟಲಿ—ತನ್ನ ದೊರೆಯನ್ನು ಅಬ್ಸೀನಿಯದ ಚಕ್ರವರ್ತಿಯೆಂದು [illegible] ಸಾರುವುದಕ್ಕೆ ಸಿದ್ಧಪಡಿಸುತ್ತಿದೆ.

[illegible]

[illegible]

ಶುದ್ಧಿ ಸಂಸ್ಕಾರ

[illegible]

[illegible]

ಹಿಂದೂಸ್ಥಾನಕ್ಕೆ ಅಚ್ಚುಮೆಚ್ಚಿಗೆಯಾದ ಸ್ನಾನದ ಸಾಬೂನು



ಸುವಾಸನೆಯು: [illegible]

ನಿಮಗೆ ಏಕಾಗದು?

ಮೈಸೂರು ಗಂಧದ ಸಾಬೂನು

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಗೌರ್ನಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು.

Hurry Up! No Date Extension" Watch For No. 2!!!

Last Posting Date 10 12 37 : Result on 18-12-37

WIN Rs. 2000

FIRST PRIZE	SECOND PRIZE (one mistake)	THIRD PRIZE (two mistakes)
Rs. 1000	Rs 400	Rs. 200

SPECIAL PRIZES

Rs 50 for intelligence, whether right or wrong.
Rs 75, 50 and 25 for senders of largest entries.
Rs. 100 for the first two correct solutions received.
Rs. 100 for the first five correct solutions received by **league members** of 'My Magazine' 'Illustrated Weekly of India' etc.

ENTRANCE FEE

Re 0—4—0 per entry ; Re 1—0—0 for every **five** entries ;

Those sending entries to the value of Rs. 3—0—0 and failing in their attempt, will receive 10 free entries which will be useful to Competition No. 2. (English).

1	G — D	Supreme being
2	— I S H	This is most common in this world
3	A — E D	...... in bed ....
4	A L O — —	Lovers like to go —
5	H — T	Most common on beach-side
6	— — — E	Number (Not beginning with 'F')
7	I —	Pronoun
8	— — — K I N G	This glass reflects your image
9	B A L —	Bundle
10	— — — E	Number (Not beginning with 'N')

Rules—Reference Chambers XX Century Dictionary. No hidden words should be used. Entries can be submitted on plain paper. Stamps, M. O's. or Postal orders can be sent but M. O. receipt must be attached to entries. Failing all correct, it will be awarded to next best. Reasonable correspondence attended to on receipt of postage. Results will be sent to those enclosing 2 half anna stamps. The manager and his staff are not eligible to enter into this competition. Manager's decision is final in all matters concerning this competition. Address all your entries and fees to:—

The Manager, **Lakshmi Competitions,**
KOLLEGAL, S.(INDIA)

ತಾಂಬೂಲ ಸೇವನೆ

ಲೇಖಕರು:—ಶ್ರೀ॥ ಎ. ಪಿ. ರಾವ್, ಮಂಡ್ಯ.

(ಕಳೆದ ವಾರದ ಶೇಷ.)

ತಾಂಬೂಲವನ್ನು ಸೇವಿಸುವ ವಿಧಾನ

ಯಾವಾಗಲೂ ವೀಳೆಯದೆಲೆಯನ್ನು ಮೊದಲು ಸೇವಿಸಿ ನಂತರ ಅಡಿಕೆ ಆದಿ ಸುಗಂಧ ದ್ರವ್ಯಗಳನ್ನು ಸೇವಿಸುವುದು ಆರೋಗ್ಯಕರ. ಹಾಗಿಲ್ಲದೆ, ಅಡಿಕೆಯನ್ನು ಮುಂಚೆ ಸೇವಿಸಿದರೆ, ಬುದ್ಧಿ ಶಕ್ತಿಯು ಮಾಂದ್ಯವಾಗುವ ಸಂಭವವೂ ಇದೆ. ನ[illegible] ಮೊದಲು ಅಡಿಕೆಯನ್ನು ಸೇವಿಸಿ ನಂತರ ವೀಳೆಯದೆಲೆಯನ್ನು ಸೇವಿಸುವ ರೀತಿಯೂ ಉಂಟು. ಇದು ಬಹಳ ಅನಿಷ್ಟಕರವಾದದ್ದು. ಮನಸ್ಸಿನ ಮೇಲೆ [illegible]ವ ಪರಿಣಾಮವೂ ಆಗದೆ ಬಹಳ ದಿನಗಳಿಂದ ಇದೇ ಅಭ್ಯಾಸಕ್ಕೆ ಪಳಗಿ ಹೋಗಿದ್ದರೆ ಇದು ಅಷ್ಟು ಹಾನಿಕಾರಿಯಾಗಿ ಪರಿಣಮಿಸುವುದಿಲ್ಲ. ಆದ್ದರಿಂದ [illegible]ಪಗಳನ್ನು ತಯಾರು ಮಾಡಿ ಸೇವಿಸುವುದು ಸರ್ವ ಶ್ರೇಷ್ಠವಾದುದು.

ತಾಂಬೂಲವನ್ನು ಅಗಿಯುವಾಗ ಮೊದಲು ಮೊದಲು ಉತ್ಪತ್ತಿಯಾದ ರಸವನ್ನು ಎರಡು ಬಾರಿ ಉಗುಳಿಬಿಡಬೇಕು. ಬಾಯೊಳಗೆ ಇರಬಹುದಾದ ಅಂಟುರೋಗದ ಕ್ರಿಮಿಕೀಟಗಳು, ರಸದೊಂದಿಗೆ ಹೊಟ್ಟೆಗೆ ಸೇರದೆ ಹೊರಗೆ ಹೋಗುವುವು. ನಂತರ ಉತ್ಪತ್ತಿಯಾದ ರಸವನ್ನು ಸೇವಿಸುವುದು ಆರೋಗ್ಯಕರ.

ತಾಂಬೂಲವನ್ನು ಸೇವಿಸುವ ಸಮಯ

ಆಯುರ್ವೇದ ಶಾಸ್ತ್ರರೀತಿಯಾಗಿ ಮೂರು ವೇಳೆ ತಾಂಬೂಲ ಸೇವಿಸುವುದು ಬಹಳ ಉತ್ತಮ:—

೧ **ಬೆಳಗ್ಗೆ**:—ಹಾಸಿಗೆಯಿಂದೆದ್ದೊಡನೆ ತಾಂಬೂಲವನ್ನು ಸೇವಿಸುವುದು ಮತ್ತು ಉತ್ಪತ್ತಿಯಾದ ರಸವನ್ನೆಲ್ಲಾ ಉಗುಳಿಬಿಡಬೇಕು. ಇದರಿಂದ ಬಾಯಿಯಲ್ಲಿರುವ ಅಂಟು ರೋಗದ ಕ್ರಿಮಿಕೀಟಗಳು ಹೊರಬೀಳುವುವು.

೨ **ಊಟದನಂತರ**:—ಆಹಾರ ತೆಗೆದುಕೊಂಡ ನಂತರ ಸೇವಿಸುವುದರಿಂದ ಹಲ್ಲು ನಾಲಿಗೆ ಗಂಟಲುಗಳಲ್ಲಿ ಉಳಿದಿರುವ ಆಹಾರವನ್ನು ಶುದ್ಧಿಮಾಡಿ ಜಠರದಲ್ಲಿಯೂ ಮತ್ತು ಕರುಳಿನಲ್ಲಿಯೂ, ಆಹಾರ ಜೀರ್ಣಕ್ಕೆ ಸಹಕಾರಿಯಾಗುತ್ತದೆ.

೩ **ಸ್ತ್ರೀಸಂಗಮಕ್ಕೆ ಮೊದಲು ಮತ್ತು ನಂತರ**:—ಈ ಕಾಲದಲ್ಲಿ ಸೇವಿಸುವುದರಿಂದ ಒಂದು ಹೊಸ ಸುಖವನ್ನೂ ಉಲ್ಲಾಸವನ್ನೂ, ಕೊಡುತ್ತದೆ. ಮತ್ತು ಬಾಯಿನ ಮೂಲಕ ಒಬ್ಬರಿಂದೊಬ್ಬರಿಗೆ ಹರಬಹುದಾದ ಅಂಟುರೋಗವನ್ನು ಬಾರದಂತೆ ನೋಡಿಕೊಳ್ಳುತ್ತದೆ.

೪ **ಸಭಾ ಮಂಟಪಗಳಲ್ಲಿಯೂ, ಮತ್ತು ರಾಜ ದರ್ಬಾರುಗಳಲ್ಲಿಯೂ, ಪ್ರವೇಶಿಸುವಾಗ.**

ಮನುಷ್ಯನ ಬಾಯಿಯಲ್ಲಿ ಸಾಮಾನ್ಯವಾಗಿ ಒಂದು ಕೆಟ್ಟ ವಾಸನೆಯು ಉತ್ಪತ್ತಿಯಾಗುತ್ತಲೇ ಇರುತ್ತದೆ. ಇದು ಮನುಷ್ಯನ ನಿರ್ಬಲತೆಯನ್ನು ತೋರಿಸುವುದಲ್ಲದೆ, ಅಕ್ಕಪಕ್ಕದಲ್ಲಿರುವವರಿಗೂ ಬಹಳ ಹೇಯವೆಂದು ತೋರುತ್ತದೆ. ಸ್ವಂತ ಮತ್ತು ಪರಿಸ್ಥಿತಿಗಳ ನಿವಾರಣೆಗೋಸ್ಕರ, ತಾಂಬೂಲವನ್ನು ಸೇವಿಸುವುದು ಉತ್ತಮ. ಇದರಿಂದ ಬಹಳ ಅನುಕೂಲವಾಗುವುದು.

ಪ್ರಕೃತಿಯ ಪ್ರತಿಯೊಂದು ಒಳ್ಳೆಯ ಪದಾರ್ಥಗಳಲ್ಲಿಯೂ, ಅನೇಕ ರೂಪದಲ್ಲಿ ಒಂದೊಂದು ಕೆಟ್ಟ ಗುಣಗಳು ಹೇಗೆ ಇದ್ದೇ ಇರುವುದೋ ಹಾಗೆ ತಾಂಬೂಲದಲ್ಲಿಯೂ, ಒಂದೆರಡು ಕೆಟ್ಟ ಗುಣ ಇರುವುದು ಆಶ್ಚರ್ಯವೇನಿಲ್ಲ. ಕಣ್ಣು ಮತ್ತು ಹೃದಯ ರೋಗ, ಕ್ಷಯ ಮತ್ತು ವಾಯು ರೋಗದಿಂದ ನರಳುವವರೂ ಮಾದಕ ದ್ರವ್ಯಸೇವನೆ ಮಾಡುವವರೂ, ತಾಂಬೂಲ ಸೇವನೆಯನ್ನು ತ್ಯಜಿಸಬೇಕು. ಹಸಿದ ಹೊಟ್ಟೆಯಲ್ಲಿ ಯಾವಾಗಲೂ ತಾಂಬೂಲ ಸೇವನೆಯನ್ನು ಮಾಡಬಾರದು. ಹೆಚ್ಚು ಹೆಚ್ಚಾಗಿ ತಾಂಬೂಲವನ್ನು ಸೇವಿಸುವುದರಿಂದ ಹಾನಿಯಾಗದಿರಬಹುದು. ಆದರೆ ಇದರಿಂದ ಹೆಚ್ಚು ಹೆಚ್ಚು ಲಾಭವುಂಟಾಗುತ್ತದೆಂದು ಭಾವಿಸುವುದು ತಪ್ಪು ತಿಳುವಳಿಕೆ.

ಹೊಗೆಯ ಸೊಪ್ಪನ್ನು ತಾಂಬೂಲ ಸಾಮಗ್ರಿಗಳಲ್ಲೊಂದೆಂದು ಪರಿಗ್ರಹಿಸಲು ಸಾಧ್ಯವಿಲ್ಲ. ಇದು ಶರೀರಕ್ಕೆ ವ್ಯಾಧಿಯಾಗಿ ಪರಿಣಮಿಸಿ ಬಹಳ ಹಾನಿಯನ್ನುಂಟು ಮಾಡುತ್ತೆ. ಮೊದಲು ಮನುಷ್ಯನು ಸೇವಿಸಿದ ಹೊಗೆಯ ಸೊಪ್ಪು ಕೊನೆಗೆ ಅವನನ್ನು ಭಕ್ಷಿಸುವುದಾಗಿ ಪರಿಣಮಿಸುವುದು.

ತಾಂಬೂಲವನ್ನು ಯಾವಾಗಲೂ ನಿರಾಕರಿಸಬಾರದು. ತಾಂಬೂಲವನ್ನು ಸೇವಿಸುವುದು, ಥಳಕು, ತಮಾಷೆಗಳಿಗಲ್ಲ. ಸ್ವಂತ ಮತ್ತು ಸಮಾಜದ ಆರೋಗ್ಯದ ದೃಷ್ಟಿಯಿಂದ, ಮನುಷ್ಯನಿಗೆ ಇದೊಂದು ಅತ್ಯಾವಶ್ಯಕವಾದ ವಸ್ತು. ನಿಯಮಾನುಸಾರವಾಗಿ ತಾಂಬೂಲವನ್ನು ಸೇವಿಸುವುದು ಎಷ್ಟು ಆದರಣೀಯ ಮತ್ತು ಹಿತಕರವೋ, ಅಷ್ಟೇ ಅತ್ಯಾವಶ್ಯಕವಾಗಿಯೂ ಇರುವುದು. ಈ ಕಾರಣಗಳಿಂದಲೇ ತಾಂಬೂಲ ಸೇವನೆಯು, ನಮ್ಮ ಭಾರತದಲ್ಲಿ, ಪವಿತ್ರ ಕಾರ್ಯಗಳಲ್ಲಿಯೂ, ಹಬ್ಬ, ಸಂತೋಷ ಸಮಾರಂಭಗಳಲ್ಲಿಯೂ, ಒಂದು ಅಗ್ರಸ್ಥಾನವನ್ನು ಹೊಂದಿದೆ.

ಭಗವಂತನಿಂದಲೇ, ಸ್ವೀಕೃತವಾದ ತಾಂಬೂಲ ಸೇವನೆಯು, ಅನಿವಾರ್ಯವೂ ಮತ್ತು ಅತ್ಯಾವಶ್ಯಕವೂ ಎಂಬುದರಲ್ಲಿ ಸಂದೇಹವೇನು?

ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್ ಪ್ರಚಾರ

(ನಮ್ಮ ಬಾತ್ಮೀದಾರರಿಂದ)

ಇದೇ ನವೆಂಬರ್ ತಾರೀಖು 21 ಭಾನುವಾರದ ದಿವಸ ಗುಂಡ್ಲುಪೇಟೆ ಓ.ಟಿ. ಸ್ಕೂಲ್ ಹಿಂಭಾಗದ ಫುಟ್ ಬಾಲ್ ಗ್ರೌಂಡಿನಲ್ಲಿ ಸಾಯಂಕಾಲ ಸುಮಾರು ೬ ಗಂಟೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಹಿಂದೆ ಈ ಊರಿನಲ್ಲಿ ಯಾವಾಗಲೂ ಇಂಥಾ ಸಭೆಯೇ ಆಗಲಿ ಭಾಷಣವೇ ಆಗಲಿ ಆಗದಿದ್ದುದರಿಂದ ಸಭೆಗೆ ಹೆಚ್ಚು ಜನರು ಸೇರಲು ಅವಕಾಶವಾಗದೆ ಸುಮಾರು 500 600 ಜನಗಳು ಸೇರಿದ್ದರು.

ಈ ಸಭೆಯಲ್ಲಿ ಶ್ರೀ ಗಳಾದ [illegible] ಚಂದ್ರಗುರುರವರ, [illegible] ಸುಬ್ರಹ್ಮಣ್ಯರವರು, ರಂಗನಾಥಯ್ಯನವರು, ಎಂ. ಎನ್. ಜೋಯಿಸರು, [illegible] ದಾಸಪ್ಪನವರು, ವೆಂಕಟೇಶ ಅಯ್ಯರ್ ರವರುಗಳು, ಭಾಷಣವನ್ನು ಮಾಡಿದರು. ಮುಖ್ಯವಾಗಿ ಭಾಷಣದಲ್ಲಿ ಕಾಂಗ್ರೆಸ್ ಎಂದರೆ ಏನು ಕಾಂಗ್ರೆಸ್ ಗುರಿ ಏನು ಎಂಬುದನ್ನೂ ನಮ್ಮ ಪ್ರಿಯವಾದ ಮಹಾರಾಜರವರ ಪೋಷಣೆಯಲ್ಲಿ ಜವಾಬ್ದಾರಿ ಸರ್ಕಾರವು ಆಗಬೇಕು. ರೈತರ ಕಂದಾಯದ ಹೊರೆಯನ್ನು ಕಮ್ಮಿ ಮಾಡಬೇಕೆಂಬುದಾಗಿ ತಿಳಿಸಿದರು. ಮುಖ್ಯವಾಗಿ ಗುಂಡ್ಲುಪೇಟೆ ಜನಗಳು ಖಾದಿಬಟ್ಟೆಯನ್ನು ವಿಶೇಷವಾಗಿ ಉಪಯೋಗಿಸುತ್ತಿಲ್ಲ. ಎಲ್ಲರೂ ಖಾದಿ ಬಟ್ಟೆಯನ್ನೇ ಉಪಯೋಗಿಸಿ ಖಾದಿಗೆ ಪ್ರೋತ್ಸಾಹ ಕೊಡಬೇಕು. ಕತೆಯನ್ನು ಪ್ರತಿಯೊಬ್ಬರೂ [illegible] ಹಾಕಬೇಕು. ಇಲ್ಲಿನ [illegible] ಸಭೆ ನಡೆಸುವುದಕ್ಕೆ ಏನೊಂದು ಅಡ್ಡಿಯನ್ನೂ ಉಂಟುಮಾಡದೆ ಇದ್ದುದು ಬಹಳ ಸಂತೋಷಕರವಾಗಿದೆ.

ಕೊನೆಗೆ ಸಭೆಯು [illegible] ಇರತಕ್ಕ ಐದು ಮಂದಿ ದೇಶಬಾಂಧವರಿಗೆ ವಂದನೆಗಳನ್ನು ಅರ್ಪಿಸಿ ಸರಕಾರದ ದಬ್ಬಾಳಿಕೆಯನ್ನು ಖಂಡಿಸಿ ಮೈಸೂರಿನಲ್ಲಿ ಶ್ರೀಮನ್ ಮಹಾರಾಜರವರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಬೇಕು ಎಂಬುದಾಗಿ ನಿರ್ಣಯವಾಗಿ ಸಭೆಯು ಮುಕ್ತಾಯವಾಯಿತು.

ಗುಂಡ್ಲುಪೇಟೆಯಲ್ಲಿ ಖಾದಿ ಧರಿಸಲು ಯಾವ ಸಹಾಯವೂ ಇಲ್ಲ. [illegible] ಕೂಡ [illegible] ಶುದ್ಧ ಖಾದಿ ಮಾರುವ ಅಂಗಡಿಯಲ್ಲಿಯೂ ಇಲ್ಲ. ಮುಖ್ಯವಾಗಿ ಗುಂಡ್ಲುಪೇಟೆಯಲ್ಲಿ ದೊಡ್ಡ ದೊಡ್ಡ ಬಂಡವಾಳಗಾರರು ಇದ್ದುಕೊಂಡು ತಮ್ಮ ಜವಳಿಯ ಅಂಗಡಿಗಳಲ್ಲಿ ಖಾದಿ ಬಟ್ಟೆಗಳಿಗೆ [illegible] ಭಾಗವನ್ನು [illegible] ಈ ಮಹೋಪಕಾರವನ್ನು ಮಾಡಬೇಕೆಂದು ಬಹಳ ವಿನಯದಿಂದ ಬೇಡುತ್ತೇನೆ.

ವಿನೋದಲಹರಿ

ಶೀನ—ಸುಬ್ಬು ನಿನ್ನ ಹೆಂಡತಿ ವಿಧವೆಯಾದರೆ ನಿನಗೆ [illegible] ಯಾರೋ?

ಸುಬ್ಬು—[illegible]

ಪ್ರೊಫೆಸರ್ (ವಿದ್ಯಾರ್ಥಿ [illegible]) [illegible] ಕಣ್ಣನ್ನು [illegible] ನೋಡಿ.

[illegible] 'ಮನೆ [illegible]' ಅಂತ [illegible].

[illegible]—[illegible] ಗಂಡ [illegible]?

[illegible] ([illegible]) [illegible]

ತಂದೆ ([illegible]) [illegible] ಮಗನನ್ನು ಕರೆದು [illegible] ಮಾಡುತ್ತದೆ [illegible]?

ಮಗ—[illegible] ಕಲಿತಿಲ್ಲ.

° ° °

[illegible]—[illegible] ಎಂದು ಕೂಗಿದನು.

ಒಂಗಾರಿ—([illegible] ಕೂಗಿ) ಹೇಗಯ್ಯಾ?

[illegible]—[illegible]

[illegible]—[illegible] ಒಂದು [illegible] ಹಾಗಿದ್ದರ [illegible].

° ° °

ಮೇಷ್ಟ್ರು—[illegible] ಮಾಡಿದ್ದೀಯೇನೋ?

ಹರಿ—[illegible] ಮಾಡಬೇಕೇನ್ ಸಾರ್. ನಾನು ಬೆಳಿಗ್ಗೆ ಆರು ಗಂಟೆಗೆ [illegible] ಸಾರ್.

ಮೇಷ್ಟ್ರು—([illegible]) ಇನ್ನೂ [illegible] ಮಾಡಿ [illegible] ಮಾಡಲಿಲ್ಲವಲ್ಲಾ?

[illegible]—[illegible] ಇಂಕ್ [illegible] ಹೋಯ್ತಂತೆ ಸಾರ್.

° ° °

ಉಪಾಧ್ಯಾಯ—[illegible] ಎಂದು ಹೆಸರು ಬರಲು ಕಾರಣವೇನು?

ಶಿಷ್ಯ—ಅವನು [illegible] "[illegible]" [illegible].

° ° °

ಉಪಾಧ್ಯಾಯ—[illegible] 'ನವರ ಚಕ್ರವರ್ತಿ' ಎಂದು ಹೆಸರು ಬರಲು ಕಾರಣವೇನು? ಸುಬ್ಬಣ್ಣ!

[illegible]—[illegible] ಸಾರ್!

[illegible]—[illegible]! [illegible] [illegible]!

ಚಿತ್ರಶಾಲಾ ಸ್ಪರ್ಧೆ ನಂ. ೩೬

ಬಹುಮಾನ ಪಡೆದವರು.

[illegible]

[illegible]

ಎರಡು ತಪ್ಪಿನ ಉತ್ತರಗಳನ್ನು ಕಳು ಹಿಸಿದ್ದ 31 ಜನರಿಗೆ ಇತರ ಬಹುಮಾನ ವಲ್ಲಿ ತಲಾ 1—8—0ರಂತೆ ಕಳುಹಿ ಸುತ್ತೇವೆ. ಶ್ರೀ ಲಕ್ಷ್ಮಮ್ಮ ಜಿ. ವಿ. ನಾರಾ ಯಣ ಶೆಟ್ಟರು. ಶ್ರೀ ಸೀತಮ್ಮ ಎಂ. ಸುಬ್ಬಣ್ಣ ಸಿ. ನಾರಾಣಪ್ಪ ಎಸ್. ಎಸ್ ರಾಮಯ್ಯ ಮೈಸೂರು. ಕೆ. ಟಿ. ದೊರೆಸ್ವಾಮಿ ನಂಜನಗೂಡು. ಎಸ್. ಓಂಕಾರಮೂರ್ತಿ ರಾವ್. ಶ್ರೀನಿವಾಸ ಮೂರ್ತಿಗಳು ದಾವಣಗೆರೆ. ಕೆ. ಎಸ್. ನಂಜುಂಡಗೌಡ ಗೊರೂರು. ಹೆಚ್. ಕೃಷ್ಣಾಚಾರ್ ಓ. ಎಸ್. ಹಳ್ಳಿ. ಬಿ. ಎಸ್. ನರಸಿಂಹಮೂರ್ತಿ ಸೊರಬ ಟೌನ್. ಸಿ. ಸುಬ್ರಹ್ಮಣ್ಯ ದೊಡ್ಡ ಬಳ್ಳಾಪುರ. ಎ ಎಂ. ತಿರುಮಲೆ ಮೈಸೂರು. ಕೆ. ರಾಮಣ್ಣ ಜಿ. ಎಂ. ಸೀತಮ್ಮ ಚಿಕ್ಕಮಗಳೂರು ಟಿ. ಬಾಲ ಕೃಷ್ಣ. ಹೆಚ್. ಸುಬ್ಬಯ್ಯ ಹೊಳಲ್ಕೆರೆ. ಬಿ. ರಂಗಣ್ಣ ಸಕಲೇಶಪುರ. ಸಿ. ನಂಜುಂ ಡಯ್ಯ ಎಸ್. ಬಾಲಕೃಷ್ಣ ಸಿ. ವೆಂಕಟ ರಾವ್ ಎಸ್. ಕಮಲ ಎಸ್. ಸುಂದರಮ್ಮ ಎಸ್. [illegible] ಎಸ್. ಸರೋಜ ಎಸ್. ಟಿ. ಪದ್ಮನಾಭರಾಯ ಎಸ್. ಸಿದ್ದ ಪ್ಪ ಎಸ್. ಲಕ್ಷ್ಮಮ್ಮ ಎನ್. ಕುಪ್ಪಯ್ಯ ಸಿದ್ದಲಿಂಗಸ್ವಾಮಿ ಎಸ್ ವೆಂಕಟಸುಬ್ಬ ಯ್ಯ ಎಸ್. ಚಿಕ್ಕಣ್ಣ (ಕಾರೇಹಳ್ಳಿ) ಎ. ಚನ್ನಕೇಶವಯ್ಯ ಬೆಂಗಳೂರು

ಮೂರು ತಪ್ಪಿನ ಉತ್ತರಗಳನ್ನು ಕಳು ಹಿಸಿದ್ದ 16 ಜನರಿಗೆ ತಲಾ 1—0—0 ರಂತೆ ಕಳುಹಿಸುತ್ತೇವೆ. ಎ. ಎಸ್. ರಾಮಕೃಷ್ಣಶಾಸ್ತ್ರಿ ಕೆ. ಬಿ. ರಘುನಾಥರಾವ್ ಎಸ್. ಟಿ. ಪೈ. ನರಸೋಜಿ. ಟಿ. ಎಸ್. ಮಾಧವ ವಿ. ನಾಗೇಶರಾವ್ ಜಿ. ಪಿ. ರಂಗ ಸ್ವಾಮಿ ಟಿ. ವಿ. ಶ್ರೀನಿವಾಸರಾವ್ ಎಸ್. ಆರ್. ದೊಡ್ಡಗಿರಿಯಪ್ಪ ಸಿ. ಎಸ್. ವೆಂ ಕಟಲಕ್ಷ್ಮಮ್ಮ ವಿ. ಆರ್. ಸೀತಾರಾಮಯ್ಯ ಪಿ. ರಘುಪತಯ್ಯ ಜಿ. ನರಸಿಂಹಶಾಸ್ತ್ರಿ ಹೆಚ್. ಸಿ. ರಾಜಗೋಪಾಲ ಶೆಟ್ಟಿ ಎಸ್. ಆರ್. ರುಕ್ಮಿಣಿಬಾಯಿ ಬಿ. ವಿ. ಆರ್. ಅತ್ರಿ ಶ್ರೀ ಅಮ್ಮಣ್ಣಮ್ಮ ಟಿ. ಚೂಡಾ ನಾಥ್ ಎಂ. ಯದುಗಿರಿಯಮ್ಮ ಎಂ. ಕೆ. ಲಕ್ಷ್ಮೀಬಾಯಿ ಕದಂ. ವಿ. ನಿರ್ಮ ಲಾಂಬ ಜವರಪ್ಪ ಎನ್. ಬಿ. ಸುಬ್ಬಮ್ಮ ಸಿ. ಬಸ್ಸಮ್ಮ ಎಸ್. ಶಿವಸ್ವಾಮಿ ಮೈಸೂ ರು. ಸಿ. ಸುಬ್ಬಯ್ಯ ಶ್ರೀರಂಗಪಟ್ಟಣ. ಟಿ. ವಿರೂಪಾಕ್ಷಯ್ಯ ತೇಜಪ್ಪ ಹೊಸಗೋಟೆ. ಎನ್. ರಂಗರಪ್ಪ ವಿ. ರಾಮಪದ್ಮನಾಭಯ್ಯ ಡಿ. ಹೆಚ್. ಪ್ರೊಫೆಸರ್ ಕೆ. ವಿ. ನಾರಾಯ ಣರಾವ್ ಜಿ. ಆರ್. ಅಣ್ಣಾಸ್ವಾಮಿರಾವ್ ಸಿ. ವಿ. ನಾಥ್ ಎಸ್. ನಾಗರಾಜ ಎಸ್. ಪದ್ಮ ಸಿ. ಅನ್ನಪೂರ್ಣಮ್ಮ ಎಸ್ ರಕುಂ ತಳಾ ಸಿ. ಎಸ್. ಸ್ವಾಮಿ ಶ್ರೀ ರಾಜಮ್ಮ ಬಿ. ಮುನಿಯಪ್ಪ ಆರ್. ಕೃಷ್ಣಪ್ಪ ಬೆಂಗಳೂರು. ಎಂ. ಲಿಂಗರಡ್ಡಿ ಜನಾರ್ದನ ಗೋಪಾಲಸ್ವಾಮಿ ಜಯಮ್ಮ ವಾಸುದೇವ ಚಿತ್ರ ದುರ್ಗ. ಕೆ. ಎಸ್. ನಾಗೇಶ್ವರಶಾಸ್ತ್ರಿ ಭದ್ರಾವತಿ. ಎನ್. ವೆಂಕಟೇಶಯ್ಯ ಎತ್ತಿನ ಹೊಳೆ. ಕೆ. ರಾಮಲಿಂಗಯ್ಯ ದೊಡ್ಡ ಟಿ. ಎ. ಸುಬ್ಬಶೆಟ್ಟಿ ತನಹೂರು. ಲಿಂಗಶೆಟ್ಟಿ ರಾಮರಾವ್ ತೀರ್ಥಹಳ್ಳಿ. ಬಿ ವೆಂಕಟಲಿಂ ಗಯ್ಯ ಬಾಬಾ ಕೃಷ್ಣ ದೊಡ್ಡಬಳ್ಳಾಪುರ. ಎನ್. ಆರ್. ಶ್ರೀನಿವಾಸರಾವ್ ಹಾಸನ. ಜಿ. ಕೃಷ್ಣಯ್ಯ ಕೊಳ್ಳೇಗಾಲ. ಎಸ್. ಸಿ. ಜಯಮ್ಮ ಟಿ. ನರಸೀಪುರ. ಎಸ್. ಶ್ರೀನಿ ವಾಸಶಾಸ್ತ್ರಿಗಳು ಕೆ. ಎಸ್. ಜಯಮ್ಮ ಗೋಪಾಲ ಚಿಕ್ಕನಹಳ್ಳಿ. ಕೆ. ತಿರುಮಲಗಿರಿ ಶಾಸ್ತ್ರಿ ಲಕ್ಷ್ಮಣ ಎಂ. ವೆಂಕಟೇಶ ರಾವ್ ಸಾಗರ. ಸುಬ್ಬನರಸಮ್ಮ ಕೊರಟ ಗೆರೆ. ಬಿ. ಎಸ್. ವಿಜಯಲಕ್ಷ್ಮಿ ಬಿ. ಎಸ್. ಗುರುರಾಜ ಬಿ. ಎಸ್. ರಂಗಮೂರ್ತಿ ತ್ಯಾಮ ಗೊಂಡ್ಲು. ಆರ್. ಎಸ್. ನಂಜುಂಡ ಶೆಟ್ಟಿ ಬಸವ ಶಿವಗಂಗೆ. ಎಸ್. ವೆಂಕಟರಾವ್ ಶಿವಮೊಗ್ಗ. ಕೆ. ಶ್ರೀನಿವಾ ಸಯ್ಯ ತಿಪಟೂರು. ಕೆ. ಸುಬ್ರಹ್ಮಣ್ಯಯ್ಯ ರ್. ಹೊಸಹಳ್ಳಿ. ಆರ್. ಎಸ್. ರಾಮಕೃಷ್ಣಯ್ಯ ಹಿರಿಯೂರು. ಟಿ. ಎನ್. ಗುಂಡಪ್ಪ ಕೊಪ್ಪ. ಕೆ. ನಾಗಪ್ಪಶಾಸ್ತ್ರಿ ಕಡ ಕಟ್ಟೆ. ಎಂ.ಸಿ. ತಿಮ್ಮಪ್ಪ ಗುಂಡ್ಲುಪೇಟೆ. ಕೆ. ಮ. ದೊರೆಸ್ವಾಮಿ ಮಧುಗಿರಿ. ಶ್ರೀ ಬಿ. ರಾಜಮ್ಮ ಚನ್ನಪಟ್ಟಣ. ಸಿ. ಚನ್ನ ರಾಜ್ ಪಿ. ನಾಗರಾಜಶೆಟ್ಟಿ ಪುತ್ತೂರು

Hurry Up! No Date Extension!! Watch For No. 2 !!!

Very easy to do! Just try and see!!

Last Posting Date 10-12-37 : Result on 18-12-37

LAKSHMI COMPETITION OFFERS YOU

Rs. 1000 for solving a simple and easy sum!

(Three different answers to this sum have been deposited with the Madras Bank.)

Rs. 400 for sending all the 3 solutions correctly

Rs. 300 „ 2 „

Rs. 200 „ 1 „

Special prizes

Rs. 25 for female competitor for sending one solution correctly

Rs. 25 for sending largest entries

Re 1 Bonus to the first 50 competitors who send in 5 paid entries (whether right or wrong)



How to win:—Fill up the blank columns taking figures 0, 1, 2, 3, 4, 5, 6, , 8, 9, 10, so that each of the rows, taken horizontally, and vertically, total up to 15, without repeating the used figures

Entrance Fee:— Re 0—4—0 per entry. Rs. 1—0—0 per every 5 entries. Those sending 15 entries, and if failed in their attempt, they will receive 10 free entries which will be useful to Competition No 2.

Rules:—Entries can be submitted on plain paper. Family men and friends can send all the coupons in one cover. Stamps, M O's, or postal orders can be sent. But M. O. receipt must be attached to entries. Result will be sent to those enclosing 2 half anna stamps. Manager's decision is final in all matters Address all your entries and fees to:—

The Manager, Lakshmi Competitions,
KOLLEGAL, (S. India.)

ಕಾಂಗ್ರೆಸ್ ಪ್ರಚಾರ.

ಸಂಸ್ಥಾನದಲ್ಲೆಲ್ಲಾ ಕಾಂಗ್ರೆಸ್ ಪ್ರಚಾ ರಕಾರ್ಯವು ಬಿರುಸಿನಿಂದ ನಡೆಯುತ್ತಿದೆ. ಶ್ರೀ ಗೌಡರ ಎಚ್. ಸಿ. ದಾಸಪ್ಪನವರೂ ಟಿ. ಎಸ್. ರಾಜಗೋಪಾಲ್‌ರವರೂ ಎಡ ತೊರೆ ತಾಲ್ಲೂಕಿನಲ್ಲಿ ಭಾಷಣಗಳನ್ನು ಮಾಡಿದರು. ನಾಗಮಂಗಲದ ತಾಲ್ಲೂ ಕಿನಲ್ಲಿ ನಡೆದ ಗಿಡದ ಜಾತ್ರೆಯಲ್ಲಿ ಸೇರಿದ್ದ ನೇಮೂರು ಹತ್ತುಸಾವಿರ ಜನರಿಗೆ ಶ್ರೀ ಗೌಡ ಟಿ. ಮರಿಯಪ್ಪನವರೂ ಎಂ. ಶಂಕರಯ್ಯನವರೂ ಎಂ. ಎನ್. ಜೋಯಿ ಸರೂ ಕಾಂಗ್ರೆಸ್ಸಿನ ಸಂದೇಶವನ್ನು ತಿಳಿಸಿದರು. ರಾಜಧಾನಿಯ ಸುಬ್ಬರಾ ಯನ ಕೆರೆಯಲ್ಲಿ ಕಳೆದ ಗುರುವಾರ ಬಹಿ ರಂಗಸಭೆ ನಡೆಯಿತು.

ಎಲ್ಲರಿಗಿಂತಲೂ ಹೆಚ್ಚಿನ ಉತ್ತರಗಳ ನ್ನು ಕಳುಹಿಸಿದ್ದ (100) ಮ॥ ರಾ ರಾ ಎ. ಸುಬ್ಬರಾವ್ ಮಲ್ಲೇಶ್ವರಂ ಹೌಸ್, ಪ್ಯಾಲೇಸ್ ರೋಡು ಬೆಂಗಳೂರು ಇವರಿಗೆ ಸ್ಪೆಷಲ್ ಬಹುಮಾನದ ಬಾಬ್ತು 30 ರೂ. ಗಳನ್ನು ಕಳುಹಿಸುತ್ತೇವೆ.

ಮ್ಯಾ. ಟಿ.

ಸ್ವಾತಂತ್ರ್ಯ—ದಾಸ್ಯ

ಲೇಖಕರು:— ಎಂ. ಆರ್. ಶೇಷಾದ್ರಿ.

[illegible] ಮತ್ತು ಅಹಿಂಸೆ ಎಂಬು ಸ್ವಾತಂತ್ರ್ಯ ಭಾರತೀಯರ ಗಾಯತ್ರಿ [illegible] ಆದರೆ ಈಗ ಕೆಲವರು [illegible] ಸಂಸರ್ಗದಿಂದ ಭಾರತದಲ್ಲಿ ಕೆಲವರೂ ಗುಲಾಮಗಿರಿಯು ಉ [illegible] ಗುಲಾಮಗಿರಿಯನ್ನು ಒಂದು [illegible] ಎಂದು ಭಾವಿಸಿಕೊಂಡು ತಮ್ಮ [illegible] ಸ್ವಾತಂತ್ರ್ಯ ಮತ್ತು [illegible] ಮಾರಿಕೊಳ್ಳುತ್ತಿದ್ದಾರೆ. [illegible] ಸ್ವಾತಂತ್ರ್ಯವೇ ನರಕ [illegible] ಮಹಾತ್ಮರಿಗೆ [illegible] ಬಾಲಗಂಗಾಧರ ತಿಲ [illegible] ಪಂಡಿತ ಜವಾ [illegible] ನೆಹರು ಮೊದಲಾದವರು [illegible] ಸ್ವರ್ಗ [illegible] ನರಕ [illegible] ಅವರು ತ [illegible] ಧನಗಳನ್ನು ಅರ್ಪಿಸು [illegible] ಮಾಡಿದ [illegible] ವಿಚಾರವೇ.

[illegible] ಸ್ವಾತಂ [illegible] ಸಾಧನೆಗೆ ಹೊಸ ತರನಾದ ರೂಪ [illegible] ಮಹಾತ್ಮಾ ಗಾಂಧಿಯ [illegible] ಇವರ ಧ್ಯೇಯವು ಇಡೀ ಪ್ರಪಂಚದ ಪ್ರತಿಯೊಂದು ಜನಾಂಗದಿಂದಲೂ [illegible] ಅವರಿಗೆ "ವಿಶ್ವಶಾಂತಿಯ ಮಹಾವೀರನೆಂದು" ಹೇಳಿ ಪಾಶ್ಚಾತ್ಯರು ನೋಬೆಲ್ ಬಹುಮಾನವನ್ನು ಪಡೆಯಲು ಅರ್ಹರೆಂದು ಸೂಚಿಸಿದ್ದರು. ಹೀಗಿರುವಲ್ಲಿ ನಮ್ಮ ದೇಶಬಾಂಧವರ. ಮಾತ್ರ ಅವರ ಅನುಯಾಯಿಗಳಾಗುವುದರಿಂದ ಆಗುವ ನಷ್ಟವೇನು?

ಈಗಿನ ಹಲವು ಭಾರತೀಯ ಸರಕಾರೀ [illegible] ಮಹಾತ್ಮಾ ಗಾಂಧಿಯವ [illegible] ಆಗದು. ಹೀಗೆ ಅವರ [illegible] ಉಂಟಾಗುವುದಕ್ಕೆ ಅ [illegible] ಜನ್ಮದ ಪಾಪದ ಫಲವೋ [illegible] ತಾವು ಅನುಭವಿಸುತ್ತಿರುವ ಗು [illegible] ಅಧಿಕಾರ [illegible] ಮಾತೃಭೂಮಿಯ ಸೇವಕರೆಂದು [illegible] ಬಾಳಬೇಕಲ್ಲಾ ಎಂಬ [illegible] ತಿಳಿಯಾಗುತ್ತಿ. [illegible] ವ್ಯಕ್ತಿಗಳು ತಮಗೆ ಸಿಕ್ಕಿ [illegible] ಅಧಿಕಾರ ಬಲದಿಂದ ದೇಶ [illegible] ತೊಂದರೆಗೀಡು ಮಾಡು [illegible].

ಒಂದು ಜನಾಂಗದ ಪ್ರಜಾಮತಕ್ಕೆ [illegible] ಜಗಲಿ [illegible] ನಡೆಯುವುದಾದರೆ ಅಂಥಾ ಸ [illegible] ಎಷ್ಟೇ [illegible] ಮುಂದುವರಿಯಲು ಸಾಧ್ಯವಿ [illegible] ಒಂದು ಪಕ್ಷ ಅವರು ಹಾಗೆ ಪ್ರತಿನಿತ್ಯ ಭಾವನೆಯನ್ನು [illegible] ದೇಶಕ್ಕೆ [illegible] ಕೊಟ್ಟಿಲ್ಲವಾಗು [illegible] ಅವರು [illegible] ಭಾರತವನ್ನು ಮುಟ್ಟಿ ಹೇಳಿಯುತ್ತಿ [illegible] ಪ್ರತಿಯೊಂದು [illegible] ಭಾರ [illegible] ದೇಶ [illegible] ಮಾಡುವ [illegible] ಎಂದು [illegible] ಸಂಸ್ಥಾನ [illegible] ಮಾತ್ರ [illegible] ಸಾಮಾನ್ಯ [illegible] ಆತ [illegible] ತಮ್ಮ ಸೌಕರ್ಯದಿಂದ [illegible] ಅನೇಕ ಜನ ಉದ್ಯೋಗಿಗಳಿಗೆ ರಾಷ್ಟ್ರ ಸೇವೆಯನ್ನು ಮಾಡಲು [illegible] ದಾರಿದ್ರ್ಯ ಅವಕಾಶ ಕೊಡುತ್ತಿಲ್ಲ.

ಈಗ ಪ್ರಪಂಚ [illegible] ಸಂಪೂರ್ಣವಾಗಿ ಬದಲಾಯಿಸಿವಾತ್ತೆ. ಆದ್ದರಿಂದ ಈಗ ನಮಗೆ ಬೇಕಾದ್ದು ಪ್ರಜಾಭಿಪ್ರಾಯ ವನ್ನು ಗೌರವಿಸಿಕೊಡತಕ್ಕ ಸರ್ಕಾರ. ಸರಕಾರವೂ ಮತ್ತು ಪ್ರಜೆಗಳೂ ಒಟ್ಟಿಗೆ ಸೇರಿ ಬಹುಮತದಿಂದ ಅಂಗೀಕೃತವಾದ ನಿರ್ಣಯಗಳನ್ನು ಒಂದು ಸಂಸ್ಥೆಯವರು ಆಚರಣೆಗೆ ತರುವುದಾದರೆ ಅಂಥಾ ಆಳ್ವಿಕೆ ಯಲ್ಲಿ ಉಭಯ ಪಕ್ಷದವರಿಗೂ ಹೆಚ್ಚಿನ ಸೌಕರ್ಯಗಳುಂಟಾಗುವುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ.

ದೇಶದ ಸ್ವಾತಂತ್ರ್ಯ ಸಂಪಾದನೆಗೆ ದೇಶಾಭಿಮಾನಿಗಳು ಅತ್ಯವಶ್ಯಕ. ಇಂಥಾ ಪವಿತ್ರ ಸಾಧನೆ ಎಲ್ಲಾ ಸಂಗಡದವರೂ ಏಕೋದ್ದೇಶದಿಂದ ಪ್ರಯತ್ನಿಸುವುದು ಸಾಧುವಾದದ್ದು. ಹೀಗೆ ಮಾಡುವುದರಿಂದ ರಾಷ್ಟ್ರಸ್ವಾತಂತ್ರ್ಯವು ಲಭಿಸಿ, ಗುಲಾಮಗಿರಿಯು ಅನುಮಾನಗ್ರವಾಗಿ [illegible] ತ್ತದೆ.

ಕಾಂಗ್ರೆಸ್ ಭವನ

ಬೆಂಗಳೂರಿನಲ್ಲಿ ಕಾಂಗ್ರೆಸ್ ಭವನ ವೊಂದನ್ನು ಕಟ್ಟಬೇಕೆಂಬ ಆಲೋಚನೆಯು ಬಹಳ ದಿನಗಳಿಂದ ಇದೆ. ಈಗ ಅದರ ಅಗತ್ಯ ಬಹಳವಾಗಿ ಕಂಡುಬಂದಿದೆ. ಇದಕ್ಕಾಗಿ ಅಲ್ಲಿನ ಕಾಂಗ್ರೆಸ್ ಮುಖಂಡರು ಮಹಾಜನರಲ್ಲಿ ಒಂದು ಮನವಿಯನ್ನು ಮಾಡಿದ್ದಾರೆ. ಈ ಭವನಕ್ಕೆ ಸುಮಾರು 25,000 ರೂಪಾಯಿ ಅಂದಾಜಾಗಿದೆ. ಮೈಸೂರು ಸಂಸ್ಥಾನದ ಕಾಂಗ್ರೆಸ್ ಭಕ್ತರು ಈ ಕಟ್ಟಡದ ನಿಧಿಗೆ ಉದಾರವಾಗಿ ಸಹಾಯ ಮಾಡಬೇಕೆಂದು ಕೋರಲಾಗಿದೆ.

ನಿಮಗೆ ಗೊತ್ತೆ

ಜರ್ಮನಿಯ ಸರ್ಕಾರದವರು ತಮ್ಮ [illegible] ರ್ಯ ನಗರದ ವಿಮಾನಕಟ್ಟೆಯಲ್ಲಿ [illegible] ಉಪಯೋಗಿಸಿ ಅದರಿಂದ [illegible] ಮತ್ತು [illegible] ಮಾಡಲು ಏರ್ಪಾಡು ಮಾಡುತ್ತಿದ್ದಾರೆ.

* * *

ಅಂಗಿಯ ಗುಂಡಿಯ ಆಕಾರದಲ್ಲಿ ಒಂದು ವಿದ್ಯುಚ್ಛಕ್ತಿಯ [illegible] (ಮೈಕ್ರೊಫೋನ್) ಎಂದು ಕಂಡು ಹಿಡಿಯಲ್ಪಟ್ಟಿದೆ. ಇದು ಚಿನ್ನದಿಂದ ಮಾಡಲ್ಪಟ್ಟಿದೆ. [illegible] ಒಂದು [illegible] ಕಟ್ಟಲ್ಪಟ್ಟಿದೆ. [illegible] ಅದರಿಂದ [illegible] ಬೇಕಿಕೊಳ್ಳಬಹುದು.

* * *

[illegible] ದೇಶದ [illegible] ರ ಭಾವಚಿತ್ರಗಳನ್ನು [illegible] ಗಳಿಸಿದರೆ [illegible] ಮಾಡಿದ್ದಾರೆ. [illegible] ನಮ್ಮ ದೇಶದಲ್ಲಿ ಈ ಅಭ್ಯಾಸವು ಎಂದು ಹೊರಡುವುದೋ?

* * *

ಜಪಾನಿನ ಒಬ್ಬ ಮುದುಕಿಯು ಸತ್ತು ಹೋದಂತೆ ನಟಿಸಿದಳು. ಮಾರನೆಯ ದಿನ ಅವಳಿಗೆ ಅಂತ್ಯ ಸಂಸ್ಕಾರಗಳನ್ನು ಮಾಡುತ್ತಿರುವಾಗ ಎದ್ದು ತಾನು ಸತ್ತಿಲ್ಲ ವೆಂದು ಹೇಳಿದಳು. ತಾನು ನಿಜವಾಗಿ ಸತ್ತ ಮೇಲೆ ಅಂತ್ಯಕ್ರಿಯೆಗಳನ್ನು ಹೇಗೆ ನಡೆಸುತ್ತಾರೆಂಬುದನ್ನು ತಿಳಿಯಲು ಹಾಗೆ ಮಾಡಿದೆನೆಂದು ಹೇಳಿದಳು.

* * *

ಭೂಮಿಯ ಮೇಲೆ 140 ಪೌಂಡು ತೂಕವಿರುವ ಮನುಷ್ಯನು ಸೂರ್ಯನಲ್ಲಿ ಒಂದೂವರೆ ಟನ್ನು ತೂಕವಾಗುವನಂತೆ. ಇದಕ್ಕೆ ಸೂರ್ಯನ ಆಕರ್ಷಣ ಶಕ್ತಿಯೇ ಕಾರಣ. ಭಾರವು ಆಕರ್ಷಣ ಶಕ್ತಿಗೆ ತಕ್ಕಂತೆ ಬದಲಾಯಿಸುವುದು.

ಚಳಿ ಭಾನುವಾರ.

ಪಾಶ್ಚಾತ್ಯ ದೇಶದಲ್ಲಿ ಒಂದು ಚಳಿ ಭಾನುವಾರದ ದಿನ ಜನಗಳು ಎಷ್ಟರಮಟ್ಟಿಗೆ [illegible] ಮತ್ತು ಎಷ್ಟು ಚಟು [illegible] ಇರುವೆಂಬುದನ್ನು [illegible] ಪ್ರತಿದಿನವೂ ಏಳು ವುದಕ್ಕಿಂತ ಒಂದು ಗಂಟೆ ನಿಧಾನವಾಗಿ [illegible] ಜನರು ಏಳುತ್ತಾರೆ. ಅವರಲ್ಲಿ ಶೇಕಡ 50 ಜನರು ಮಧ್ಯಾಹ್ನದ ವರೆಗೆ ಮನೆ ಬಿಟ್ಟು ಆಚೆ ಹೋಗುವುದಿಲ್ಲ. ಶೇ 70 ಜನರು ಪತ್ರಿಕೆಗಳನ್ನು ಓದು ತ್ತಾರೆ. ಶೇ 50 ಜನ ರೇಡಿಯೋ ಕೇಳು [illegible] ಶೇ 15 ಜನರು ಚರ್ಚಿಗೆ ಹೋಗುತ್ತಾರೆ. ಶೇ 92 ಜನರು ಮಧ್ಯಾಹ್ನದ [illegible] ಬಹಳ ವಿಜೃಂಭಣೆಯಿಂದ [illegible] ಕೆಲವರು ಮಾತ್ರ ಆಟಕ್ಕೆ ಹೋಗುತ್ತಾರೆ. [illegible] ನಾಲು ಜನ [illegible] ಹೊದೆಯು [illegible] ಹತ್ತು ಜನರು ಆ ದಿನದ [illegible].

ಮದ್ಯಪಾನ ನಿರೋಧ

ಡೆಲ್ಲಿ ಕೆಲಸಗಾರರೂ, ಟ್ರಾಂ, ಮೋಟಾರು ಮತ್ತು ಬಸ್ಸುಗಳ ಡ್ರೈವರುಗಳೂ ಮದ್ಯಪಾನ ಮಾಡಿ, ಪ್ರಯಾಣಿಕರಿಗೆ ವಿಶೇಷ ತೊಂದರೆಯನ್ನುಂಟುಮಾಡುತ್ತಿರುವರು. ಇದನ್ನು ತಪ್ಪಿಸಲು ಸ್ವಾಂದಿನೇವಿಯದಲ್ಲಿ ಹೊಸದೊಂದು ನಿರ್ಬಂಧವು ಏರ್ಪಡಾಗಿದೆ. ಮೇಲ್ಕಂಡ ಕೆಲಸಗಾರರು ತಮ್ಮ ಕೆಲಸಗಳ ಮೇಲೆ ಬರುವುದಕ್ಕೆ ಮುಂಚೆ ಆರು ಗಂಟೆಗಳೊಳಗೆ ಮದ್ಯಪಾನವನ್ನು ಮಾಡಕೂಡದು. ಇದರಿಂದ ಪ್ರಯಾಣಿಕರಿಗೆ ಮೊದಲಿನಂತೆ ತೊಂದರೆಗಳಾಗುತ್ತಿಲ್ಲ. ಈ ಏರ್ಪಾಡನ್ನು ನಮ್ಮ ದೇಶದಲ್ಲಿಯೂ ಜಾರಿಗೆ ತರುವುದು ಉತ್ತಮವಲ್ಲವೆ?

ಪೇಪ್ರಿನ್ (Regd.)

ಜಿಲ್ಲೆ ಡಾಕ್ಟರ್; ಸ್ವದೇಶಿ ವಸ್ತು.

ಇದರ ಸೇವನದಿಂದ ಕಜ್ಜಿ ಹುಣ್ಣು, ಸ್ರಾವ, ತುರಿ, ನಾರುಹುಣ್ಣು, ಮೂಲವ್ಯಾಧಿ, ಹೊಟ್ಟೆಯ ಹುಣ್ಣು, ಮೊಡವೆ (Pimples) ಸುಟ್ಟ ಹುಣ್ಣು, ಕತ್ತಿಯ ಹುಣ್ಣು, ತೊಡೆವಾಳೆ, ಗಜಕರ್ಣ ವಾಸಿಯಾಗುವವು. ಇದು ಸುರಿಯುತ್ತಿರುವ ರಕ್ತವನ್ನು ನಿಲ್ಲಿಸಿ, ರೋಗವನ್ನು ನಿವಾರಿಸುವ ದು. ಇದಲ್ಲದೆ ಇಂದ್ರಜಾಲದೋಪಾದಿಯಲ್ಲಿ ಹೇಳಿದ ವಿಷವನ್ನು ಬಹಿರ್ಗತಪಡಿಸುವುದು. ಇನ್ನುಳಿದ ಒಂದು ಬಾಟ್ಲು ಇದ್ದಲ್ಲಿ ಒಬ್ಬ ವೈದ್ಯನೇ ಇದ್ದಂತಾಗುವುದು.

ಕ್ರಯ [illegible]

1/1 ಔನ್ಸು ಬಾಟ್ಲಿ 1 ಕ್ಕೆ 0 1 0

1/2 ಔನ್ಸಿಗೆ 0—8—0

ದಿ ಬಿಸ್ವರ್ ಮಾನ್ಯುಫೆಕ್ಚರಿಂಗ್ ಕಂಪನಿ, ಬೆಂಗಳೂರು ಸಿಟಿ.

ಏಜಂಟರು:—ಶ್ರೀನಿವಾಸ ಸ್ಟೋರ್ಸ್, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

"ವೀರಶೈವ ಧರ್ಮತತ್ವ"

ಶ್ರೀ॥ ಸಾವಟಿ ಸಿದ್ಧರಾಮಪ್ಪನವರ ಭಾಷಣ

ಸಂಗ್ರಾಹಕರು:—ಎಸ್. ಶಂಕರಪ್ಪ, ಮಹಾರಾಜರವರ ಕಾಲೇಜು, ಮೈಸೂರು.

ಈ ಮಾಹೆ ೩ ನೇ ಶುಕ್ರವಾರ ಶಿವ ಮೊಗ್ಗ ಜಿಲ್ಲಾ ನ್ಯಾಮತಿಯ ಶ್ರೀ ಕಲ್ಲು ಮಠದಲ್ಲಿ, ವೀರಶೈವ ಯುವಜನಸಂಘದ ವರು ಹುಬ್ಬಳ್ಳಿ ಸುಪ್ರಸಿದ್ಧ ವಕೀಲರಾದ ಶ್ರೀಮಾನ್ ಸಾವಟಿ ಸಿದ್ಧರಾಮಪ್ಪನವರ ಮತ್ತು ಶ್ರೀಮಾನ್ ಪಿಳ್ಳೆ ಅಂಗಡಿ ವಕೀಲ ರು ಇವರುಗಳ ಭಾಷಣಗಳನ್ನು ಏರ್ಪಡಿ ಸ್ದರು. ವೀರಶೈವ ಸಮಾಜದ ಸುಪ್ರ ಸಿದ್ಧ ವ್ಯಕ್ತಿಗಳ ಭಾಷಣಗಳನ್ನು ಕೇಳಲು ಸ್ಥಳೀಯ ಮತ್ತು ಸುತ್ತಮುತ್ತಣ ಅನೇಕ ಗ್ರಾಮಗಳ ಮಹಾಜನರು ಸೇರಿದ್ದರು. ಸಭೆಯ ಗೌರವಕಾರ್ಯದರ್ಶಿಯವರು ಸಭಿಕರಿಗೆ ಶ್ರೀಮಾನ್ ಸಾವಟಿಯವರ ಪರಿ ಚಯವನ್ನು ಮಾಡುತ್ತಾ ಶ್ರೀಯುತರು ಸಮಾಜಕ್ಕೆ ಚಿರಪರಿಚಿತರೆಂದೂ, ವೀರ ಶೈವ ಧರ್ಮಶಾಸ್ತ್ರ ಪಾರಂಗತರೂ, ಸದಾ ಚಾರಸಿರತರೂ ಆಗಿದ್ದು, ವೀರಶೈವ ಧರ್ಮ ಶಾಸ್ತ್ರದ ಅನೇಕ ಗ್ರಂಥ ಸ್ಪರ್ಧೆಗಳನ್ನು ಭಾಷಣಗಳ ಮೂಲಕವೂ ಮತ್ತು ಬರವ ಣಿಗೆಯ ಮೂಲಕವೂ ಬಗೆದು ಪರಿಹರಿಸಿ ರುವರೆಂದೂ, ಸಮಾಜದಲ್ಲಿಯ ಅನೇಕ ಬಿಕ್ಕಟ್ಟಿನ ಪ್ರಕರಣಗಳಲ್ಲಿ ಮುಂದಾಳುಗ ಳಾಗಿ ನಿಂತೂ, ವಕೀಲಿಯನ್ನೂ ನಡೆಸಿ ಯೂ, ಸಮಾಜ ಸೇವೆಯನ್ನು ಮಾಡಿದ ವ ರೆಂದೂ, ಹೇಳಿ "ವೀರಶೈವ ಧರ್ಮತತ್ವ" ಎಂಬ ವಿಷಯದ ಮೇಲೆ ಉಪನ್ಯಾಸ ಮಾ ಡಲು ಶ್ರೀಮಾನ್ ಸಾವಟಿಯವರನ್ನು ಪ್ರಾ ರ್ಥನೆ ಮಾಡಿದರು. ಸಂಘದ ಗೌರವ ಅಧ್ಯಕ್ಷರಾದ ಶ್ರೀಮಾನ್ ಪಂಡಿತ ಎಂ. ಬಿ. ಶಾಂತವೀರಪ್ಪನವರು ಅಗ್ರಾಸನವನ್ನು ವಹಿಸಿದ್ದರು.

ಶ್ರೀಮಾನ್ ಸಾವಟಿಯವರು ಮಾತನಾ ಡುತ್ತಾ, ಬೇರೆ ಬೇರೆ ಜನಾಂಗದವರು ಐಹಿಕದ ಪ್ರಗತಿಯಲ್ಲಿ ಧರ್ಮದ ಸಿದ್ಧಾಂ ತಗಳನ್ನು ಪಾಲನೆ ಮಾಡುತ್ತಾ ಬರುತ್ತಾ ಪರಿಸಿದ್ದರೆಂದೂ, ಧರ್ಮಕ್ಕೂ, ಐಹಿಕ ಯಕ್ಕೂ ಅವಿನಾಭಾವಸಂಬಂಧವಿದೆ ಎಂದೂ, ಅವರಂತೆಯೇ, ಮುಂದುವರಿಯಬೇಕೆಂದು ಆಶಿಸುವ ಪ್ರತಿಯೊಬ್ಬ ಹಿಂದೂ ದೇಶದ ನಿವಾಸಿಯೂ, ಆಯಾ ಮತಧರ್ಮದ ಸ್ವರೂಪವನ್ನು ತಿಳಿದು ನಡೆದರೆ ಜನಾಂಗ ಗಳ ಭಿನ್ನಾಭಿಪ್ರಾಯಗಳು ಹೋಗಿ, ಪರ ಸ್ಪರ ಸೌಹಾರ್ದತೆ, ಸಮಾನತೆ ಮತ್ತು ಸಹೋದರಭಾವಗಳು ಉತ್ಪನ್ನ ವಾಗಿ ಸುಖ, ಶಾಂತಿಗಳು ನೆಲಸುತ್ತವೆ ಎಂದು ಸೂಚಿಸಿದರು.

ಶ್ರೀಯುತರ ಭಾಷಣದ ಸಾರಾಂಶವ ನ್ನೀ ಸಂಗ್ರಹಿಸಿ ಇಲ್ಲಿ ಕೊಟ್ಟಿದೆ:—

ಧರ್ಮದ ಸ್ವರೂಪ

ಮನುಷ್ಯನ ಸ್ವಭಾವವೇ ಧರ್ಮದ ಸ್ವರೂಪ. "ಜೀವನ ಅರ್ಥೋ ಧರ್ಮ" ಎನ್ನುವಂತೆ, ಯಾವುದರಿಂದ ಮನುಷ್ಯನು ಪರಿಪೂರ್ಣತೆಯನ್ನು ಹೊಂದುತ್ತಾನೆಯೋ ಅದೇ ಧರ್ಮ. ಈ ಸಾಧನವನ್ನು ಧರ್ಮದ ಸಿದ್ಧಾಂತವನ್ನು ಪ್ರತಿ ಮತವೂ ಪಾಲಿಸಿ ಕೊಳ್ಳುತ್ತಾ ಬಂದಿವೆ. ಆದರೆ ಕಾಲಕ್ಕೆ ತಕ್ಕಂತೆ, ಧರ್ಮದ ಸ್ವರೂಪವನ್ನು ಜನಗಳ ಮನಸ್ಸಿನ ಮೇಲೆ ನಿಲ್ಲಿಸು ವಾಗ ವ್ಯಕ್ತಿ ಪ್ರೋತ್ಸಾಹಿಸುವ ವ್ಯಕ್ತಿಗಳು ಅಥವಾ ಗುರುಗಳ ಜ್ಞಾನದ ಬೋಧನೆಯಿಂದ ಧರ್ಮ ನಿಂತಿವೆ. ಧರ್ಮವು ಮಲಿನವಾಗಿತ್ತಾ, ಸಡಿ ಲಿಸುತ್ತವೆ. ಆಗಾಗ್ಗೆ ಧರ್ಮ ಸಂಸ್ಥಾಪನೆ ಮಾಡುವ ವಿಭೂತಿಗಳ ಅವತಾರವು ಆವ ಶ್ಯಕವಾಗುತ್ತದೆ.

ಶ್ರೀ ಮಹಾನುಭಾವ ಬಸವಣ್ಣನವರು "ನುಡಿದಂತೆ, ನಡೆದರೆ ಇದೇ ಜನ್ಮ ಕಡೆ" ಎಂದು ಬೋಧಿಸಿ ಇದೇ ಮುಕ್ತಿದಾಯಕ ಧರ್ಮವು ಇದೆ. ಇದ್ದಿರಬಹುದೇ? ಅವರ ಬಳಿಕ ಧರ್ಮವನ್ನು ಇಲ್ಲಿ ಯವರೆಗೂ ಒಯ್ದರು, ತಮಿಳರು, ಕ ನ್ನಡಿಗರೂ, ವೀರಶೈವ ಕವಿಗಳು, ಶಿವಶರಣರು, ಪಂಡಿತರು ಧರ್ಮವು ಯಾವುದು, ಎಂಬುದೇ, ಈಗಿನ ನವೀನ ಗುರುವರ್ಗದವರು ಚರಸಿಕೆಯಿಂದ, ಅನಂ ತ ತೇಜೋಮಯನಾದ ಸೂರ್ಯನ ಪ್ರ ಕಾಶಕ್ಕೆ ಮೋಡಗಳು, ಅಡ್ಡಬಂದು ಕ್ಷಣ ಕಾಲ ಮರೆಮಾಡುವಂತೆ, ಆಗಿಯದಾಗಿದೆ. ಅಷ್ಟು ಅಲ್ಲದೆ! ಧರ್ಮದ ನಿಜಸ್ವ ರೂಪವು, ಆಗಾಗ್ಗೆ ಇಂಥ ಆಘಾತಗಳಿಂ ದಲೇ ಹೊರಬಿದ್ದು, ಮುಚ್ಚಲ್ಪಡುವಂತಾ ಗಿದೆ. ಹೀಗೆ ಧರ್ಮದ ಮೂಲ ಸ್ವ ರೂಪಕ್ಕೆ ಸಂಚಕಾರ ಬಂದಿರುವಾಗ, ಒಂ ದು ಸಮಾಜದಲ್ಲಿ ಇರುವ ವ್ಯಕ್ತಿಗಳಲ್ಲಿ, ನಾನೆಷ್ಟು ಸ್ಥಿರತೆಯಿಂದ, ಎನ್ನುವ ಒಣ ಗೊಂದಲಗಳಿಗೆ ಗಮನವೇಕೆ?

ಲಿಂಗಾಯತ ಶಬ್ದದ ಉತ್ಪತ್ತಿ

"ಲಿಂಗಾಯತ" ಶಬ್ದವು ಒಂದು ಅಸ ಭ್ಯವೆನ್ನಲ್ಪಟ್ಟಿದೆ. ಅದನ್ನು ಬಾಗಾಯಿ ತ, ಬಣಾಯಿತ, ಪಂಚಾಯಿತ, ಮುಂತಾದ ಶಬ್ದಗಳ ಉತ್ಪತ್ತಿಯಂತೆ ಎಂದು ಹೇಳಿ ಆ ಶಬ್ದವು ಯಾವುದೋ ಪಾರಿಭಾಷಿಕ ವೆಂದು, ಕೆಲವರು ಹೇಳಿದ್ದಾರೆ. ಸಂಸ್ಕೃ ತವಲ್ಲದ್ದು ಯಾವುದೇ ಇರಲಿ ಅದು ಗೌಣ ವೆಂದೂ, ಮ್ಲೇಚ್ಛವೆಂದೂ, ಮೋಕ್ಷವನ್ನು ಕೊಡಲಿಕ್ಕೆ ಸಹಾಯಕಾರಿಯಲ್ಲವೆಂದೂ ಸಂಸ್ಕೃತ ಜ್ಞಾನವಿಲ್ಲದ ಜನಗಳಲ್ಲಿ ಭಾವ ನಾದಿಗಳನ್ನು ಮಾಡುತ್ತಾ, ಸಂಸ್ಕೃತ ಭಾಷೆಯ ವಿಷಯದಲ್ಲಿ ಗೌರವವನ್ನು ಹೆ ಚ್ಚಿಸಿ, ಕನ್ನಡ ಭಾಷೆಯ ವಿಷಯದಲ್ಲಿ ತಿರ ಸ್ಕಾರ ಬುದ್ಧಿಯನ್ನು ಹುಟ್ಟಿಸಿ, ಯಾವ ಭಾಷೆಯು ಅತ್ಯುತ್ತಮ ಜ್ಞಾನವೂ, ಮತ್ತು ಅನು ಭವವೂ ಇದ್ದರೇ ಇರುವವರ ಹೆಸರಿನಲ್ಲಿ ಪುಸ್ತಕಗಳನ್ನೂ, ಹಸ್ತಪತ್ರಿಕೆಗಳನ್ನೂ, ಹಾಳೇ ಬರೆದು, ಪ್ರಸಿದ್ಧಮಾಡಿ, ಸನಾತ ನೀವೆ ಮಾಡುತ್ತಿರುವ ವೀರಶೈವರಿಗೆ ಯೋಗ್ಯವೆನಿಸುತ್ತದೆಯೋ? ಇವರ ವಾದ ದಂತೆ ಸಂಸ್ಕೃತ ಭಾಷೆಯಿಂದಲೇ ಮೋಕ್ಷ ವೇ? ತಮಿಳು, ಆಂಧ್ರ, ತೆಲುಗು ಮೊದ ಲಾದ ನಮ್ಮ ಪಂಚಮಹಾ ದ್ರಾವಿಡ ಭಾ ಷೆಗಳಲ್ಲಿ ಕವಿತೆಗಳನ್ನು ಬರೆದು, ಆಯಾ ಸಮಾಜದಲ್ಲಿ ಹುಟ್ಟಿ, ಜಗದ್ವಿಖ್ಯಾತರಾದ ಮಹಾ ವಿಭೂತಿಗಳಿಗೆ ಮೋಕ್ಷ ಸಿಗಲಿಲ್ಲ ವೇ? ಹೀಗಿರುವಲ್ಲಿ "ಲಿಂಗಾಯತ" ಶಬ್ದ ವು ಯಾವ ಭಾಷೆಯದಾಗಿರಲಿ, ಅದರ ನಿಜಸ್ವರೂಪವನ್ನು ತಿಳಿದು, ಪಾರಮಾರ್ಥಿ ಕ್ಯವನ್ನು ಪಡೆದುಕೊಳ್ಳುವುದೇ ಪ್ರತಿಯೊ ಬ್ಬ ಲಿಂಗಾಂಗಿಯ ಕರ್ತವ್ಯವಾಗಿದೆ.

ಶ್ರೀಮಾನ್ ಸಾವಟಿಯವರು "ಲಿಂಗಾ ಯತ" ಶಬ್ದವು ಸಂಸ್ಕೃತವೆಂದೇ ಇಟ್ಟು ಕೊಂಡು, ಅದರ ರೂಪ ನಿಷ್ಪತ್ತಿಯನ್ನು ಮಾಡಿ ತೋರಿಸಿದರು.

ಲಿಂಗ ಅಂದರೆ, ಈಶ್ವರ ಶಕ್ತಿಸ್ವರೂಪ ವಾದ ಲಿಂಗದ ಜ್ಞಾನವನ್ನು, ಆಯತಿ ಹೊಂದಿದವನು ಸಮಾನೇರತನಾದವನು, ಅಥವಾ ತಿಳಿದು ಕೊಂಡಿರುವವನು, ಎಂದರ್ಥ. (ಆಯತಿ ಶಬ್ದವು ಆಯತ್ ಧಾತುವಿಂದ) ಲಿಂಗದಲ್ಲಿ, ತನ್ನ ಶರೀರ (ಅಂಗ) ಸಂಬಂಧವಾದ ಕ್ರಿಯೆಗಳನ್ನು ಅಡಗಿಸಿ, ಲಿಂಗ (ಶಿವ) ಜ್ಞಾನವನ್ನು ತ ನ್ನ (ಅಂಗ) ಲ್ಲಿ ಸೇರಿಸಿ, ಒಂದಾಗುವಿಕೆ ಯೇ (ಸಮರಸ) ಲಿಂಗಾಂಗ ಸಾಮರಸ್ಯ ಲಿಂಗಾಯತ ಧರ್ಮ. ಇದು ಸತಿಪತಿಗಳ ಅನ್ಯೋನ್ಯ ಧರ್ಮದಂತೆ ಇಬ್ಬರೂ ಪರಸ್ಪರ ಅನುರಕ್ತರಾಗಿ ನಡೆವರೆ ದಾಂಪತ್ಯ ಸೌ ಖ್ಯ. ಲಿಂಗವೇ ಪತಿ. ಅಂಗವೇ (ದೇಹ ವೇ) ಸತಿ. ಒಂದೇ ರಥದ ಎರಡು ಭಾಗ. (ಅರ್ಧನಾರೀಶ್ವರನ ಚಿತ್ರವನ್ನು ನೋಡಿ) ಹೀಗೆ ಎರಡುರೂಪಗಳು, ದೃಷ್ಟಿಗೆ ಗೋಚರವಾದರೂ, ಆಚರಣೆಯಲ್ಲಿ ನಡವ ಳಿಕೆಯಲ್ಲಿ ಎರಡೂ ಒಂದೇ ರೂಪವನ್ನು ತಾಳುತ್ತವೆ. ಅಂದರೆ ನಿಜಾನಂದ ಆನಂದ ಮತ್ತು ಈ ಜೀವನದಿಂದ ಬಿಡುಗಡೆ (ಮೋಕ್ಷ)

ಶಿವನ ಶಕ್ತಿಗೂ, ಜೀವನ ಶಕ್ತಿಗೂ ಮೇಳಗೂಡಿಸಿ ಬೋಧಿಸುವುದೇ ಲಿಂಗಾ ಯತ ಧರ್ಮ ತತ್ವ. ಮತ್ತು ಯಾವಾತ ನು ಬಾಹ್ಯ ವಸ್ತುಗಳು ಮತ್ತು ಪ್ರಾಣಿಗ ಳು, ಇಷ್ಟಗಳ, ವಿಷಯದಲ್ಲಿ ಸಂಕುಚಿತ ಭೇದ ಭಾವನೆಯನ್ನು ಅಳಿದು, ಸಮಾನ ಬುದ್ಧಿಯನ್ನು ಧಾರಣ ಮಾಡುವವನೋ ಅವನೇ ಲಿಂಗಾಯತ ಅಂದರೆ ಬಾಹ್ಯಲಿಂ ಗ ಧಾರಣೆ ಏಕೆ ಎನ್ನಬಹುದು. ಅದರ ಈ ಮನುಷ್ಯನು ಜ್ಞಾನವನ್ನು ಪಡೆಯಬೇ ಕಾದರೆ, ಲಿಂಗ ಧಾರಣೆ ಅವಶ್ಯಕ. ಲಿಂಗ ಸಹಿತವಾದ ಆಚರಣೆಗಳು ಅವಶ್ಯಕ. ಇವುಗಳ ಮಹತ್ವವನ್ನರಿತು, ಕ್ರಮವಾಗಿ ಆಚರಿಸುವುದೇ ಲಿಂಗಾಯತ ಧರ್ಮದ ಆದರ್ಶ.

ಲಿಂಗಾಯತ ಧರ್ಮವು ಬೇರೆ ಮತಗ ಳಿಂದ ಭಿನ್ನವಿದ್ದು ತನ್ನ ವೈಶಿಷ್ಟ್ಯವನ್ನು ತೋರಿಸುತ್ತದೆ. ಬ್ರಾಹ್ಮಣ ಧರ್ಮದಲ್ಲಿ ಬ್ರಹ್ಮರೂಪಕವಾದ ಶಬ್ದಗಳನ್ನಿಟ್ಟು ಧ ರ್ಮ ಬೋಧಿತವಾಗಿದೆ. ಬ್ರಹ್ಮ ಎಂದರೆ ವೃದ್ಧಿಯನ್ನು ಹೊಂದುವುದು. ಆತ್ಮ ಎಂದರೆ ಸುಖದುಃಖಗಳ ಪರವಶನಾಗಿರು ವಿಕೆ. ಇತ್ಯಾದಿ ಪ್ರಕೃತಿ ಪುರುಷ ವಾಚಕ ಗಳಾದ ಶಬ್ದಗಳನ್ನು ತೆಗೆದುಕೊಂಡು, ಈ ಧರ್ಮವನ್ನು ಬೋಧಿಸಿಲ್ಲ. "ಅಜರಾ ಮರವತ್ ಪ್ರಾಜ್ಞ: ವಿದ್ಯಾಮರ್ಥಂಚ ಚಿಂತಯೇತ್" ಎಂಬಂತೆ, ಎಂದಿಗೂ ನಾ ಶವಾಗದೇ ಇರುವ ಪರಿಪೂರ್ಣತೆಯನ್ನು ಕೊಡುವ ಶಿವಜ್ಞಾನವನ್ನು ಪಡೆ ಎಂದು ಲಿಂಗಾಯತ ಧರ್ಮದಲ್ಲಿ ಬೋಧಿಸಿದ್ದಾರೆ. ಲಿಂಗ ಮತ್ತು ಆಯತ ಈ ಶಬ್ದಗಳು ಯಾವ ಸುಖದುಃಖಗಳಿಗೂ ಸಿಲ್ಕದೇ ಇ ದ್ದು, ಅಮರವಾಗಿರುವ ಶಿವಜ್ಞಾನ ಸಂಬಂ ಧವಾದ ಧರ್ಮವನ್ನು ಬೋಧಿಸುತ್ತವೆ. ಈ ಕಾರಣದಿಂದ, ಇದು ಸಂಪೂರ್ಣವಾದ ಆಧ್ಯಾತ್ಮಿಕವಾಗಿರುತ್ತದೆ. ಜಾತಿಬೋಧಿತ ವಾದ, ಪ್ರಕೃತಿ ಪುರುಷವಾಗಿನ್ನು, ಮಾ ಯೆಗೆ ಸಿಲ್ಕುವ ಧರ್ಮವಲ್ಲ. ಅತಿಮರ್ ಶಕ್ತಿವಿಶಿಷ್ಟವ್ಯಕ್ತ ಶಿವ ನಿಂತಿರುತ್ತದೆ.

[ಸಶೇಷ]

ಹಿಂದೀ ಶಿಕ್ಷಕ ವಿದ್ಯಾಲಯ ಧಾರವಾಡ

ಕಾಂಗ್ರೆಸ್ ಮಂತ್ರಿಮಂಡಲಗಳು ಸ್ಥಾ ಪಿತವಾದ ಬಳಿಕ ಹಿಂದೀ ಪ್ರಚಾರ ಕ್ಕೆ ವಿಶೇಷ ಮಹತ್ವವು ದೊರೆತಿದೆ. ಮುಂ ದಿನ ವರ್ಷದಿಂದ ಮುಲ್ಕಿ, ಎ.ವ್ಹಿ ಮತ್ತು ಹಾಯಸ್ಕೂಲುಗಳ ಪಾಠ್ಯಕ್ರಮದಲ್ಲಿ ಹಿಂ ದೀ ಭಾಷೆಯು ಅನಿವಾರ್ಯ ವಿಷಯವಾ ಗಿದೆ. ಆ ಪ್ರಯುಕ್ತ, ಹಿಂದೀ ಶಿಕ್ಷಕರನ್ನು ತಯಾರಿಸುವ ಉದ್ದೇಶದಿಂದಲೇ ಕ. ಪ್ರಾ. ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಶೀಘ್ರವೇ ಧಾರವಾಡದಲ್ಲಿ ಒಂದು ವಿದ್ಯಾಲಯವು ತೆರೆಯಲ್ಪಡು ವದು.

ವಿದ್ಯಾಲಯಕ್ಕೆ ಸೇರಬೇಕೆಂಬುವರು ಕನಿಷ್ಠಪಕ್ಷ ಮುಲ್ಕಿ ಪರೀಕ್ಷೆ ಪಾಸಾಗಿರಬೇ ಕು. ಶಾಲಾ ಶಿಕ್ಷಕರು ಮ್ಯಾಟ್ರಿಕ್ ಉತ್ತೀ ರ್ಣರಾಗಿರುವವರ ಮತ್ತು ಹಿಂದೀಭಾಷೆ ಯ ಪ್ರಾಥಮಿಕ ಪರಿಚಯವುಳ್ಳವರ ಅರ್ಜಿ ಗಳಿಗೆ ಪ್ರಾಮುಖ್ಯತೆ ಕೊಡಲಾಗುವುದು. ಊಟವಸತಿಗಳಿಗೆ ತಿಂಗಳಿಗೆ ೮—೧೦ ವೆಚ್ಚವಾಗಬಹುದು. ಮತ್ತು ಶಿಕ್ಷಣ ಶುಲ್ಕ ಮಾಸಿಕ ೩—೦—೦ ಬೇರೆ ಕೊಡಬೇ ಕಾಗುವುದು.

ಡಿಸೆಂಬರ್ ತಿಂಗಳ ಮೊದಲನೇ ವಾರ ದಲ್ಲಿ ವಿದ್ಯಾಲಯವು ತೆರೆಯಲ್ಪಡುವುದು. ಮುಂಬಯಿ ಸರಕಾರದ ಪ್ರಧಾನ ಮತ್ತು ಶಿಕ್ಷಣ ಮಂತ್ರಿಗಳಾದ ನಾ॥ ಬಾಳಾಸಾ ಹೇಬ ಖೇರ್ ಅವರು ಪ್ರಾರಂಭೋತ್ಸ ವನ್ನು ನೆರವೇರಿಸಲು ದಯಪಿಟ್ಟು ಸಮ್ಮ ತಿಸಿರುತ್ತಾರೆ. ವಿದ್ಯಾಲಯಕ್ಕೆ ಸೇರತಕ್ಕವ ರು ತಮ್ಮ ಅರ್ಜಿಗಳನ್ನು ತಾರೀಖು ೨೦—೧೧—೩೭ ರ ಒಳಗೆ, ಮಂತ್ರಿ-ವಿ ದ್ಯಾಲಯಸಮಿತಿ "ಕಾಂಗ್ರೆಸ್ ಹೌಸ್" ಧಾರವಾಡ ಇವರಿಗೆ ಕಳುಹಿಸತಕ್ಕದ್ದು.



ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತದೆ. ಅದಕ್ಕೆ ಸರಿ ಹೊಂದುವ ಉತ್ತರಕ್ಕೆ ... ಸ್ಪರ್ಧೆಗೆ ಮೊದಲ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ... ಉತ್ತರ ... ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಷಯದಲ್ಲಿ ಸ್ಪರ್ಧೆಯ ... ಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ ಎರಡಕ್ಕಿಂತ ಕಡಿಮೆ ... ಉತ್ತರಗಳನ್ನು ಕಳು... ರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟಲ್ ... ಮೂಲಕ ರವಾನಿಸಬಹುದು ಉತ್ತರಗಳನ್ನು ಬರೆಯತಕ್ಕವರು ನವಂಬರ್ ... ಮತ್ತು ... ನೇ ಸಾಧ್ವಿ ... ಇಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರದಲ್ಲಿರುವಂತೆ ಚೆನ್ನಾಗಿ (ಶಾಯಿಯಲ್ಲಿ) ಬರೆದು ಕಳುಹಿಸಬೇಕು ... ಉತ್ತರಗಳನ್ನು ... 1937 ನೇ ... ತಾರೀಖು ಕೊನೆಯದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು ... ನೇ ... ಸಾಧ್ವಿ ... ಪ್ರಕಟಿಸಲಾಗುತ್ತದೆ.

ಚಿತ್ರಶಾಲಾ ಸ್ಪರ್ಧೆ ನಂ. ೩೮



ಪೋಸ್ಟು ಮೂಲಕ ಕಳುಹಿಸು ವವರು ೧೭ ನೇ ತಾರೀಖು ಕೂಡಾ ಕಳುಹಿಸಬಹುದು

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರಗಳನ್ನು ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನ ೩೦ ರೂಪಾಯಿ

ಚಿತ್ರಶಾಲಾ ಸ್ಪರ್ಧೆ ನಂ. ೩೮



ಹೆಸರು...

ವಿಳಾಸ...

ಕೂಪನ್ ನಂ............. ಪೋಸ್ಟಲ್ ಆರ್ಡರ್ ನಂಬರು.........

ಹೆಸರು...

ವಿಳಾಸ...

ಕೂಪನ್ ನಂ.................ಪೋಸ್ಟಲ್ ಆರ್ಡರ್ ನಂಬರು......

ಎಡದಿಂದ ಬಲಕ್ಕೆ

1. ಬ್ರಹ್ಮ. 3. ಕೇವಲ ಸ್ವಲ್ಪ ಜನರಲ್ಲಿ ಮಾತ್ರ ಇದು ಹೆಚ್ಚಾಗಿ ಕಾಣಬರು 4. ಮನ್ಮಥ. 7. ನಿಜವಾದ ಇವರು ಬಡತನಕ್ಕೆ ಅಂಜರು. 8. ಚಕ್ರವರ್ತಿ. ... 11. ಪಂಚಲೋಹಗಳಲ್ಲೊಂದು. 13. ಈತನ ಮನಸ್ಸು ಸಾಧಾರಣ ... ವಿರುವುದಿಲ್ಲ. 14. ಸ್ವಂತದ ವ್ಯಾಪಾರಿಗಳಲ್ಲೊಬ್ಬ. 21. ... 22. ಉತ್ತಮ........ನನ್ನು ಎಲ್ಲರೂ ಹೊಗಳುತ್ತಾರೆ. 23. ... 24. ಉತ್ತಮವಾದ; ನಾರಿ; 25. ಶ್ರೀರಾಮನ ಮಕ್ಕಳು. 26. ... 29. ಬೆಟ್ಟಗಳಿಗಿಂತಲೂ ಅತಿ ದೊಡ್ಡದಾದ್ದು. 30. ನಗಮಣಿ. 33. ... ದ ಜೀವನವು ವ್ಯರ್ಥ 36. ಮುದ್ದು. 37. ದಾವಣಗೆರೆ ತನ್ನ. 38. ... ವನು. 39. (ಚಿತ್ರದಲ್ಲಿ 29 ಎಂದು ಇದ್ದರೆ. ವಾಚಕರು ಅದನ್ನು ... ತಿದ್ದಿಕೊಳ್ಳಬೇಕು) ಆಧುನಿಕ ವೇದಗಳು ಉಪಯೋಗಿಸುವ ಒಂದು ಇಂಗ್ಲೀಷ್ ಪದ; ಕನ್ನಡದಲ್ಲೂ ಹಾಗೇ ಬಳಕೆಯಲ್ಲಿದೆ.)40. ಸೂರ್ಯನ ಮಗ.

ಮೇಲಿನಿಂದ ಕೆಳಕ್ಕೆ

1. ಇಂತಹ ಹೆಂಗಸಿನ ದಕ್ಷತೆಯಿಂದಲೇ ಒಂದು ಸಂಸಾರವು ... 2. ಮುಂದೆ ಹೋಗು. 5. ಕಷ್ಟದಿಂದಲ್ಲದೆ ಇತರ ಕೆಲವು ಗಿಡ್ಡ ... ಇವನ್ನು ನಡೆಸುತ್ತಾರೆ. 6. ... 10 ... 12. ...... ಮಂದಿರಗಳಲ್ಲದಿದ್ದರೆ ... ಇಲ್ಲ. 15. ಬೆಟ್ಟ ... 16. ... ತನ್ನ ... ಹೆಚ್ಚು ... 17. ... ಶ್ರೀಕೃಷ್ಣ ... 18. ... ಬಗೆಯ ವ್ಯಾಧಿಗಳನ್ನು ... 19. ... 20. ... 27. ಒಂದು ... 28. ... ಒಂದು ... 31 ... 32 ... 34 ಸ್ಪರ್ಧೆಗಳಲ್ಲಿ ಭಾಗ ... ತು ಅಗತ್ಯವಾಗಿ ... 35 ... ಕ್ಕಿದೆ.

ವಿಳಾಸ:— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಲ್ಯಾಂಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಸೂ.—ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಸೆಂಟ್ರಲ್ ಸ್ಟೇಷನರಿ ಮಾರ್ಟ್—... ಕೆ. ಮೂ. ... ಸ್ಟೇಷನರಿ ಮಾರ್ಟ್, ಬೆಂಗಳೂರಿನ ವ್ಯಾಪಾರಿಗಳು, ನಂ. 48 ... ಮಾರ್ಕೆಟ್, ಸೇತುರಾಂ ... ಇವರಿಗೂ ಒಪ್ಪಿಸಬಹುದು ...

Asiatic Government Security Life Assurance Co., Ltd.

HEAD OFFICE:—ASIATIC BUILDINGS, BANGALORE CITY.

THIS IS PURELY A NATIONAL CONCERN

[illegible]



ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಪಾಲಿಸಿ ಷರತ್ತುಗಳುಳ್ಳ ಸ್ವದೇಶೀ ವಿಮಾ ಸಂಸ್ಥೆ.

ವಿವರಗಳಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಹೆಚ್. ವೆಂಕಟರಾಮಯ್ಯ,
ಏಜೆನ್ಸಿ ಸೂಪರಿಂಟೆಂಡೆಂಟ್,
ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ.
ಅಥವಾ
ರಾ॥ ಪಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ.
ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

[illegible] ಪಂಡಿತ ಅಂಬ್ ಸನ್, [illegible]

[illegible] ಕಸ್ತೂರಿ ಮಾತ್ರೆಗಳು



[illegible]

ಬಿಲ್ಲೆ, ನಗಡಿ, [illegible]

[illegible]

[illegible] 1—5—0.

[illegible] ಪಂಡಿತ ಅಂಬ್ ಸನ್ [illegible]

ಗ್ಯಾರಂಟಿಯಾದ ಸಿದ್ಧೌಷಧಗಳು.

ಬಾಲ ವಿರೇಚನಿ ಚೂರ್ಣ—[illegible] ಉಂಟಾಗುವ [illegible] ಒಂದು ತೊಲಾ ದಪ್ಪಿ ಒಂದಕ್ಕೆ 0—8—0

ಬಾಲ ವಾತಸ್ಥಂಭ—[illegible] ಕ್ರಯ ೬೦ ಮಾತ್ರೆಯುಳ್ಳ ಸೀಸೆ 0—1—0.

ತಾಪಜ್ವರಾಂಕುಶ—100 ಮಾತ್ರೆಯುಳ್ಳ ಸೀಸೆ 0—8—0 [illegible]

ಕ್ಷಯ ಸಂಜೀವಿನಿ—ದೀರ್ಘಜ್ವರ, ಕೆಮ್ಮು, [illegible] ಗ್ಯಾರಂಟಿಯಾದ ಔಷಧಿ.

10 ಮಾತ್ರೆಯುಳ್ಳ ಸೀಸೆ 1ಕ್ಕೆ ರೂ. 1—0—0.

ವಾಸನೆ ಕುಠಾರ—[illegible] 10 ಮಾತ್ರೆಯುಳ್ಳ ಸೀಸೆ 1ಕ್ಕೆ ರೂ 0—4—0.

ಪ್ರಸವಿಸಿದವರಿಗೆ—10 ದಿನಗಳವರೆಗೂ ಕೊಡತಕ್ಕ ಮಾತ್ರೆಗಳು [illegible] ಅನಂತರ 3 ತಿಂಗ[illegible] ಕ್ರಯ ರೂ. 9.

[illegible] ಉಂಟಾಗತಕ್ಕ [illegible] ಅದಕ್ಕೆ ಸರಿಯಾದ ಔಷಧ [illegible]

ತಪ್ಪಸ್ಥಳ— ಗುಂಡ್ಲುಪಂಡಿತರು [illegible] ಮಕ್ಕಳು,

ಜಿ. ಶ್ರೀನಿವಾಸ ದೇಶಿಕಾಚಾರ್,

307, ಕಲುವಟ್ಟಿ ಬೀದಿ, ಮೈಸೂರು.

[illegible] Printed & Published by Agaram Rangiah, B.A., at Sri Rama Press, D. Subbiah Road, Mysore.

Registered No. M. 3534.



॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು. ಅಗರಂ ರಂಗಯ್ಯ,

SADHVI: A LEADING NATIONALIST WEEKLY OF MYSORE.
FOUNDED IN MEMORY OF Mr. M. VENKATAKRISHNAYYA, THE GRAND OLD MAN OF MYSORE.

ಪುಟ ೧] MYSORE : MONDAY 14 12—36 ಮೈಸೂರು : ಸೋಮವಾರ ೧೪—೧೨—೩೬ [ಸಂಚಿಕೆ ೪೨

ಲಿವರ್ ಕ್ಯೂರ್

(ಪಿತ್ತಕೋಶದ ರಕ್ಷಣೆ)

ಪಿತ್ತಕೋಶ, ಮತ್ತು ಯಕೃತ್ತುಗಳ ರೋಗ (ಗೆಡ್ಡೆ) ಗಳಿಂದ, ಮಕ್ಕಳನ್ನು ಕಾಪಾಡುವುದು.

ಲಿ ವ ರ್ ಕ್ಯೂ ರ್

ಲಿ ವ ರ್ ಕ್ಯೂ ರ್

ವಿಳಾಸ:—ಜಮ್ಮಿ ವೆಂಕಟರಮಣಯ್ಯ,
ಲಿವರ್ ಮತ್ತು ಸ್ಪ್ಲೀನ್ ಸ್ಪೆಶಲಿಸ್ಟ್, ಮೈಲಾಪುರ, ಮದ್ರಾಸು.

ಸುಪ್ರಸಿದ್ಧ ಸುದರ್ಶನ ಭೇದಿ ಎಣ್ಣೆ

ಇದು 15-20 ವರ್ಷಗಳಿಂದ ಅನೇಕ ಸ್ಥಳಗಳಲ್ಲಿ ಪ್ರಸಿದ್ಧವಾಗಿರುವ ಭೇದಿ ಎಣ್ಣೆ. ಬರೀ ಜಾಹೀರಾತುಗಳಿಂದ ಇದು ಹಬ್ಬಲಿಲ್ಲ. ಇದನ್ನು ಉಪಯೋಗಿಸಿ ಗುಣ ಹೊಂದಿದವರ ಕಡೆಯಿಂದಲೇ ತನ್ನ ಕೀರ್ತಿಯನ್ನು ಬೆಳಸಿದೆ. ಈ ಔಷಧಿ ಸೇವನೆಯಿಂದ ಭೇದಿ ಮಾಡಿಸುವುದು ಮಾತ್ರವೆಂದು ಭಾವಿಸ ಕೂಡದು. ಮಕ್ಕಳ ಎಳವು ಹೊಟ್ಟೆ ... ಹೊಟ್ಟೆ ನೋವು, ವಾಯುವಿನಿಂದ ನರಗಳೆಲ್ಲಾ ಹಿಡಿದಿರುವುದು ಜಂತು ಹುಳು, ಕೆಂಬು ಹುಳು, ಮೂತ್ರದಲ್ಲಿ ಬಿಳುಪು ಹೋಗುವುದು ಇನ್ನೂ ಅನೇಕ ವ್ಯಾಧಿಗಳನ್ನು ಗುಣಪಡಿಸುವುದರಲ್ಲಿ ಅದ್ವಿತೀಯವಾದುದು. ಹಾಲು ಕುಡಿಯುತ್ತಿರುವಾಗಲೂ, ಜ್ವರ ಸುಟ್ಟಿರುವಾಗಲೂ, ಬೆಳಗ್ಗೆ, ಮಧ್ಯಾಹ್ನ ಅಥವ ರಾತ್ರಿ ಯಾವಾಗ ಬೇಕಾದರೂ ಉಪಯೋಗಿಸಬಹುದು. 2 ಅಥವ 3 ತಿಂಗಳ ಮಕ್ಕಳಿಗೆ ಆದಿಯಾಗಿ ಎಲ್ಲರೂ ಧಾರಾಳವಾಗಿ ಉಪಯೋಗಿಸಬಹುದು. ಪ್ರತಿಯೊಂದು ಕುಟುಂಬದಲ್ಲಿಯೂ ಒಂದು ಸೀಸೆ ಔಷಧವನ್ನಿಟ್ಟರೆ ಬಹಳ ಪ್ರಯೋಜನವಾಗುವುದರಲ್ಲಿ ಸಂದೇಹವಿಲ್ಲ.

ಕ್ರಯ ½ ಔನ್ಸ್ ಜೆಲೆ 0—6—0.
1 ಔನ್ಸ್ ಜೆಲೆ 0—8—0.

ಇಂಡಿಯನ್ ಟಾನಿಕ್

ಗರ್ಭಕೋಶದ ಉಷ್ಣಾಂಶವನ್ನು ಹೋಗಲಾಡಿಸುವುದಲ್ಲದೆ ಮೂತ್ರದ ಉರಿ, ಮೂತ್ರ ಕಟ್ಟು, ಜಲಬಾಧೆಯಾಗುವಾಗ, ಮೊದಲು ಅಥವ ಕೊನೆಯಲ್ಲಿ ಧಾತು ಹೋಗುವದು, ಹೆಂಗಸರ ಶ್ವೇತ ಪ್ರದರ, ಮುಟ್ಟಿನ ಕಾಲದಲ್ಲಿ ವಿಶೇಷ ರಕ್ತಸ್ರಾವವಾಗುವದು, ಹೊಟ್ಟೆ ನೋವು ಮೊದಲಾದ ಗರ್ಭಕೋಶ, ಸಂಬಂಧವಾದ ರೋಗಗಳನ್ನು ನಿವಾರಣ ಮಾಡುವುದಲ್ಲದೆ ದಿನೇ ದಿನೇ ರಕ್ತ ವೃದ್ಧಿಯನ್ನುಂಟುಮಾಡುತ್ತದೆ.

ಬಾಟ್ಲು 1 ಕ್ಕೆ ರೂ. 1—0—0.

ಮಲಬದ್ಧ ನಿವಾರಿಣಿ

ಮಲಬದ್ಧತೆಯಿಂದ ತೊಂದರೆಪಡುವವರಿಗೂ, ಮಲದಲ್ಲಿ ರಕ್ತ ಹೋಗುವುದೂ, ಸರಿಯಾಗಿ ಕಾಲಕಾಲಕ್ಕೆ ಮಲವಿಸರ್ಜನೆಯಾಗಲು ತೊಂದರೆಯುಂಟಾಗಿರುವವರಿಗೂ ಸರಿಯಾಗಿ ಕಾಲಪ್ರವರ್ತನವನ್ನು ಮಾಡಿಸುವುದಲ್ಲದೆ ಶರೀರದ ಉಷ್ಣಾಂಶವನ್ನು ಕಡಿಮೆ ಮಾಡಿ ವಾಯುವಿನಿಂದ ಉಂಟಾಗಿರುವ ಕೈಕಾಲು ಹಿಡಿತ, ಸಂಧಿನೋವು ಮೊದಲಾದ್ದನ್ನು ಗುಣಪಡಿಸುವುದರಲ್ಲಿ ಅದ್ವಿತೀಯವಾದದ್ದು.

ಡಬ್ಬಿ 1 ಕ್ಕೆ 1—8—0.

ಈ ವೈದ್ಯಶಾಲೆಯಲ್ಲಿ ಮೇಲ್ಕಂಡ ಔಷಧಿಗಳಲ್ಲದೆ ಇನ್ನೂ ಇತರ ಖಾಯಿಲೆಗಳಿಗೂ ಔಷಧವನ್ನು ಪಡೆದು ಗುಣಹೊಂದಬಹುದು. ಈ ವೈದ್ಯಶಾಲೆಯಲ್ಲಿ ಬೆಳಗ್ಗೆ 8 ಘಂಟೆಯಿಂದ 11 ಘಂಟೆಯವರಿಗೆ ಬಡವರಿಗೆ ಉಚಿತವಾಗಿ ಚಿಕಿತ್ಸೆ ಮಾಡಲಾಗುವುದು.

ಪಂಡಿತ್ ಕೆ. ವಿ. ವೆಂಕಟರಾಮಯ್ಯ,
ಶ್ರೀನಿವಾಸ ಆಯುರ್ವೇದ ಶಾಲಾ,
ಕಾಗಲವಾಡಿ, ಚಾಮರಾಜನಗರ ತಾಲ್ಲೂಕು.

Last day of Entry	Fee for each Entry	Result on
19—12—36	**2 Annas**	**21—12—36**

ಅಕ್ಷರ ಬಂಧ ಸ್ಪರ್ಧೆ ನಂ. ೨.

ಬಹುಮಾನ ಹದಿನೈದು ರೂಪಾಯಿ.

ಮೊದಲನೇ ಬಹುಮಾನ ಆರು ರೂ. — — ಇತರ ಬಹುಮಾನಗಳು ಒಂಭತ್ತು ರೂ.

ಪ್ರತಿಯೊಬ್ಬ ಉಮೇದುವಾರರಿಗೂ ಒಂದೊಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವುದು.

ಪ್ರವೇಶ ಧನ ಎರಡಾಣೆ ಮಾತ್ರ — ಕಡೆಯ ತಾ|| ೧೯—೧೨—೩೬.

ಕೆಳಗೆ ಕೊಟ್ಟಿರುವ ಎಂಟು ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ಸೇರಿಸಬೇಕು.

ಪದಗಳು.	:	ಬರಬೇಕಾದ ಅರ್ಥ.
ಗಜಾನನ	=	ಈಶ್ವರನ ಪುತ್ರರಲ್ಲಿ ಒಬ್ಬ.
ಚಿತ್ರ — —	=	ಈಗ ನಡೆಯುತ್ತಿರುವ ಸ್ಪರ್ಧೆಗಳಲ್ಲಿ ಒಂದು.
— — ಜನಕೆ	=	ನಿಷ್ಟ
— — ಹರಿ	=	ಈಶ್ವರ.
— — ರಾಜನಗರ	=	ಮೈಸೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳಲ್ಲಿ ಒಂದು.
— — ಊರು	=	ದಕ್ಷಿಣ ಇಂಡಿಯಾದಲ್ಲಿ ಪ್ರಸಿದ್ಧ ಪಟ್ಟಣಗಳಲ್ಲಿ ಒಂದು
— — ವ	=	ಸಂವತ್ಸರಗಳಲ್ಲಿ ಒಂದು
— — ಣಿ	=	ನಕ್ಷತ್ರಗಳಲ್ಲಿ ಒಂದು.

ಹೆಸರು ....

ವಿಳಾಸ ....

ನಿಯಮಗಳು.

1. ಈ ಸ್ಪರ್ಧೆಯ ಉತ್ತರವು "ಸಾಧ್ವಿ" ಪತ್ರಿಕಾ ಸಂಪಾದಕರ ಬಳಿ ಮೊಹರುಮಾಡಿ ಇಡಲ್ಪಟ್ಟಿದೆ. 2. ಅದಕ್ಕೆ ಪ್ರತಿ ಅಕ್ಷರವೂ ಸರಿ ಹೋಲುವಂತೆ ಉತ್ತರಕ್ಕೆ ಮೊದಲನೇ ಬಹುಮಾನವೂ ಒಂದು ತಪ್ಪು ಇರುವುದಕ್ಕೆ ಎರಡನೇ ಬಹುಮಾನವೂ ಕೊಡಲ್ಪಡುತ್ತದೆ. 3. ಎರಡಕ್ಕಿಂತ ಕಮ್ಮಿ ಉತ್ತರವನ್ನು ಅಂಗೀಕರಿಸುವುದಿಲ್ಲ. 4. ಪ್ರವೇಶಧನ ಒಂದು ಉತ್ತರಕ್ಕೆ ಎರಡಾಣೆ. 5. ಪ್ರವೇಶಧನವನ್ನು ಅಂಚೆಯ ಸ್ಟಾಂಪು ಮೂಲಕವಾಗಿಯಾಗಲೀ ಮನಿಯಾರ್ಡರು ಮೂಲಕವಾಗಿಯಾಗಲೀ ಕಳುಹಿಸಬಹುದು. 6. ಕನಿಷ್ಟಪಕ್ಷ ಎರಡು ಉತ್ತರಗಳನ್ನು "ಸಾಧ್ವಿ" ಪತ್ರಿಕೆಯ ಕೂಪನ್ನಿನಲ್ಲೇ ಕಳುಹಿಸಬೇಕು. ಬಾಕಿ ಉತ್ತರಗಳನ್ನು ಬೇರೆ ಕಾಗದದಲ್ಲಿ ಕಳುಹಿಸಬಹುದು. 7. ಒಂದು ರೂಪಾಯಿಗೆ ಹತ್ತು ಉತ್ತರಗಳನ್ನು ಕಳುಹಿಸಬಹುದು. 8. ಬಹುಮಾನಗಳಿಗೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚು ಬಂದಲ್ಲಿ ಬಹುಮಾನವನ್ನು ಹಂಚಲಾಗುವುದು. 9. ಇದರಲ್ಲಿ ಭಾಗವಹಿಸಲಿಷ್ಟವುಳ್ಳವರು ಈ ತಿಂಗಳು 19 ನೇ ತಾ|| ಯೊಳಗೆ ಉತ್ತರಗಳನ್ನು ಕಳುಹಿಸಬೇಕು. 10. ಮೈಸೂರಿನಲ್ಲಿ ಭಾಗವಹಿಸುವವರು "ಸಾಧ್ವಿ" ಪತ್ರಿಕೆಯ ಆಫೀಸಿನಲ್ಲಿ ಕೊಡಬಹುದು. 11. ಈ "ಸ್ಪರ್ಧೆ"ಯ ವಿಚಾರವಾಗಿ ಯಾವ ವ್ಯವಹಾರಗಳಿಗೂ ಅವಕಾಶವಿಲ್ಲ. ಮ್ಯಾನೇಜರವರ ತೀರ್ಮಾನವೇ ಕಡೆಯದು. ಅದಕ್ಕೆ ಎಲ್ಲರೂ ಬದ್ಧರು.

ವಿಳಾಸ:— ಮ್ಯಾನೇಜರ್, "ಅಕ್ಷರ ಬಂಧ ಸ್ಪರ್ಧೆ"
ಸ್ಪೆಷಲ್ ಸ್ಟೋರ್ಸ್ ರಸ್ತೆ, ಮಂಡ್ಯ.

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಆಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE : MONDAY 14—12—36 ಮೈಸೂರು : ಸೋಮವಾರ ೧೪—೧೨—೩೬ [ಸಂಚಿಕೆ ೪೨

ರಾಮಭೋಗರ ಆತ್ಮಹತ್ಯೆ

ಕಲಕತ್ತಾ, ಕಲಕತ್ತೆಗೆ ಸಮೀಪ ಇದ್ದ ಗ್ರಾಮದ ರಾಮಭೋಗ ಪುರುಷ ... ಕಳೆದ ತಾ|| ೫೧೦ ರಾತ್ರಿ ... ಮನೆಯಲ್ಲಿ ... ಒಂದು ... ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿದುಬರುತ್ತದೆ. ... ಸರಕಾರಿ ಹಣವನ್ನು ... ದುರುಪಯೋಗಪಡಿಸಿರುವುದಾಗಿ ಆಪಾದನೆಯು ಬರಬಹುದೆಂಬ ಭೀತಿಯು ಅವರಿಗೆ ... ಉಂಟಾಯಿತೆಂಬುದಾಗಿಯೂ, ಅವರು ... ಮೊದಲು ಹಣವನ್ನು ... ತಾವು ಯಾವ ಹಣವನ್ನೂ ದುರುಪಯೋಗಪಡಿಸಿಕೊಂಡಿಲ್ಲವೆಂದೂ ... ಅಧಿಕಾರಿಗಳಿಗೆ ... ಬರೆದಿರುವುದಾಗಿಯೂ ತಿಳಿದುಬರುತ್ತದೆ. ಸರಕಾರದವರು ... ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿರುವರೆಂದು ಗೊತ್ತಾಗಿದೆ.

ವಯಸ್ಸಿಗೆ ಗೌರವ

... ಮಗುವಿಗೆ ... ರ್ ... ಚಿತ್ರ ... 15 ವರುಷ ... 92 ಮಾತ್ರ, ... ವಯಸ್ಸು ... ಪ್ರಮುಖ ... ಯನ್ನು ... ಆರೋಗ್ಯದಿಂದಿರುವಳು. ಮತ್ತು ... 19 ವರ್ಷಗಳ ಕಾಲ ... ಬದುಕಲೆಂದು ಇಷ್ಟಪಡುತ್ತಾಳೆ.

೧೮೦ ವರ್ಷದ ಗೀಡ

ಬ್ರಿಟಿಷ್ ... ಎಂಬಲ್ಲಿ ... ಒಂದು ... ಇದೆ. ಅದಕ್ಕೆ 180 ವರ್ಷ ವಯಸ್ಸು. ... ಎಂ... ಅದಕ್ಕೆ ಪ್ರತ್ಯೇಕವಾದ ... ಕೊಡಲ್ಪಟ್ಟಿವೆ. ... ಸಿಗರೇಟ್ ... ಇಟ್ಟ ...

ಪಂಡಿತ ಜವಾಹರಲಾಲರೇ ಅಧ್ಯಕ್ಷರಾದರು.

ಫೈಜ್‌ಪುರದಲ್ಲಿ ನಡೆಯುವ ರಾಷ್ಟ್ರೀಯ ಮಹಾಸಭೆಯ ಅಧಿವೇಶನಕ್ಕೆ ಪಂಡಿತ ಜವಾಹರಲಾಲರೇ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಹಿಂದೆ ಲಾಹೋರಿನಲ್ಲಿ ನಡೆದ ಕಾಂಗ್ರೆಸ್ ಸಭೆಗೆ ಇವರು ಅಧ್ಯಕ್ಷರಾಗಿದ್ದರು. ಕಳೆದ ವರ್ಷ ಲಕ್ನೋ ಅಧಿವೇಶನಕ್ಕೂ ಇವರೇ ಅಧ್ಯಕ್ಷರಾಗಿದ್ದರು ಈಗ ಪುನಃ ಇವರು ಅಧ್ಯಕ್ಷರಾಗಿರುವುದರಿಂದ ರಾಷ್ಟ್ರವು ಇವರಲ್ಲಿ ಇಟ್ಟಿರುವ ವಿಶ್ವಾಸವು ವ್ಯಕ್ತವಾಗುತ್ತದೆ.

ಮೂಷಕ ಸಂತಾನ

ಇಲಿಯು ಒಂದುಬಾರಿಗೆ ಎಷ್ಟು ಮರಿಗಳನ್ನು ಹಾಕುತ್ತದೆ. ಈ ವಿಷಯವಾಗಿ, ಅನೇಕ ಪ್ರಯೋಗಗಳು ನಡೆದಿವೆ ಇದುವರೆಗೆ ಒಂದು ಇಲಿಯು 17 ಮರಿಗಳನ್ನು ಹಾಕಿತ್ತು, ಈಗ ಮತ್ತೊಂದು ಇಲಿಯು ಅದನ್ನು ಮೀರಿಸಿದೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ಒಂದು ಇಲಿಯು ಈಗ 18 ಮರಿಗಳನ್ನು ಹಾಕಿದೆ.

ಜರ್ಮನಿಗೆ ಮತ್ತೆ ಕೈಸರರ ಪ್ರವೇಶವೆ?

ಜರ್ಮನಿ ದೇಶಕ್ಕೆ ... ಕಾಲದಲ್ಲಿ, ... ಕೈಸರರು ಪುನಃ ಪ್ರವೇಶಿಸುವ ಸಂಭವವಿದೆ. ... ಇದಕ್ಕೆ ಸಮ್ಮತಿಸಿರುವರೆಂದು ಗೊತ್ತಾಗಿದೆ. ಕೈಸರರು ಈಗ ಬಹಳ ವೃದ್ಧರಾಗಿದ್ದಾರೆ. ಅವರ ಪತ್ನಿಯವರು ... ಜರ್ಮನಿಗೆ ಹೋಗಿ ಕಾರ್ಯಭಾಗ ನಡೆಸಿದರು. ಕೈಸರರು ತಮ್ಮ ಮೊಮ್ಮಗನಾದ ಫ್ರೆಡರಿಕ್ ಎಂಬುವನಿಗೆ ರಾಜ್ಯವನ್ನು ಕೊಟ್ಟರೆ ಆಗಬಹುದೆಂದು ಸಮ್ಮತಿಸಿರುವರು.

ಜರ್ಮನಿಯಲ್ಲಿ ೧೩೬ ವರ್ಷದ ಮುದುಕ

136 ವರ್ಷದ ಒಬ್ಬ ಮುದುಕನು ಮೊನ್ನೆ ... ಜರ್ಮನಿಯಲ್ಲಿ ಮೃತನಾದನು. ಅವನು, ... ದೀರ್ಘಾಯುಸ್ಸಿಗೆ ... ಕಾರಣವೆಂದು ... ದ್ದನು

ಬ್ರಿಟಿಷ್ ಸಿಂಹಾಸನ

ಎಡ್ವರ್ಡ್ ಪ್ರಭುಗಳು ರಾಜ್ಯತ್ಯಾಗ ಮಾಡಿದರು. ಡ್ಯೂಕ್ ಆಫ್ ಯಾರ್ಕರು ... ವನ್ನು ಸ್ವೀಕರಿಸಿರುವರು.

ಅವರ ... ಡ್ಯೂಕ್ ಆಫ್ ಯಾರ್ಕರು ಆರನೇ ಜಾರ್ಜರೆಂಬ ... ಕಳೆದ ... ಪಟ್ಟಕ್ಕೇರಿದರು.

ಇವರಿಗೆ ರಾಜ್ಯಾಭಿಷೇಕವು ... ಲ್ಲಿ ... ಕಾರ್ಯಕ್ರಮಗಳೆಲ್ಲಾ ಮೊದಲೇ ಮಾಡಿದ್ದಂತೆ ... ಪತ್ರಿಕೆಗಳು ತಮ್ಮ ... ಕೊಡಬೇಕು ... ಭರತಖಂಡಕ್ಕೆ ... ದರ್ಬಾರ್ ನಡೆಸುವರು.

೨೦ ವರ್ಷಗಳಿಂದ ಹಾಸಿಗೆ ಇಲ್ಲ

ಇಂಗ್ಲೆಂಡಿನ ಆಲ್ಬರ್ಟ್ ಎಂಬುವನು 20 ವರ್ಷಗಳಿಂದ ಹಾಸಿಗೆಯಲ್ಲಿ ಮಲಗಿಲ್ಲ. ... ಕೆಲಸವು ... ರಾತ್ರಿ ... ಹಾಸಿಗೆ ... ಆದೇ ... ಇಟ್ಟ ... ಕಳೆಯುತ್ತಾನೆ.

ಎಂ. ಎ. ಪಾಸಾದ ಪೋಲೀಸ್ ಕಾನ್‌ಸ್ಟೇಬಲ್.

ನಿರುದ್ಯೋಗ ಸಮಸ್ಯೆಯು ದಿನೇ ದಿನೇ ... ಕಲ್ಪ ... ಕೆಲಸವನ್ನು ... 11 ... ಪೋಲೀಸ್ ಕಾನ್‌ಸ್ಟೇಬಲ್ ಕೆಲಸಕ್ಕೆ ... ನಿರುದ್ಯೋಗ ಸಮಸ್ಯೆಯನ್ನು ... ಕಣ್ಣು ... ?

ಹರಿಜನರಿಗೆ ದೇವಾಲಯ ಪ್ರವೇಶ.

ತಿರುವಾಂಕೂರು ಸಂಸ್ಥಾನದಂತೆ ... ನಲ್ಲಿಯೂ ... ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ... ರಾಮಚಂದ್ರರಾಯರು ... ಮನ್ಮಹಾರಾಜರವರಿಗೆ ಒಂದು ವಿಜ್ಞಾಪನಾ ಪತ್ರಿಕೆಯನ್ನು ಕಳುಹಿಸಿರುವರು. ಅದರಲ್ಲಿ ಈಗ ... ತಿಳಿಸಿರುವರು. ಅಲ್ಲದೆ ಶ್ರೀಮನ್ಮಹಾರಾಜರವರು ಹರಿಜನರ ... ಗೆ ಅನೇಕ ಸೌಕರ್ಯಗಳನ್ನು ಒದಗಿಸಿಕೊಟ್ಟಿರುವರು, ಹರಿಜನರೂ ಸವರ್ಣ ಹಿಂದುಗಳೂ ಅನೇಕ ಸಂದರ್ಭಗಳಲ್ಲಿ ಸಹೋದರರಂತೆ ಬೆರೆತು ಕೆಲಸಮಾಡುತ್ತಿರುವರು. ಎಲ್ಲಕ್ಕಿಂತಲೂ ಹೆಚ್ಚಾಗಿ ಶ್ರೀಮನ್ಮಹಾರಾಜರವರು ಕಳೆದ ನವರಾತ್ರಿ ದರ್ಬಾರಿನಲ್ಲಿ ಹರಿಜನರಿಗೂ ಆಹ್ವಾನವಿತ್ತು ಆದರವನ್ನು ಸಲ್ಲಿಸಿದರು.

ಆದ್ದರಿಂದ ಹರಿಜನರಿಗೆ ದೇವಾಲಯ ಪ್ರವೇಶದ ಹಕ್ಕನ್ನು ಕೊಡಿಸಿಕೊಡಬೇಕೆಂದು ರಾಯರು ಪ್ರಾರ್ಥಿಸಿರುತ್ತಾರೆ.

ಇದೇ ವಿಷಯದಲ್ಲಿ ಹಲವು ಸದಸ್ಯರು ... ಸಭೆಯಲ್ಲಿ ... ತರುವರಾಗಿದ್ದಾರೆ.

ಸ್ತ್ರೀಯರನ್ನು ಹಿಂಸಿಸುವ ಸ್ತ್ರೀಯರು

"ಈಗ ನಡೆಯುತ್ತಿರುವ ಅನೇಕ ... ಕಳ್ಳತನ, ಮೋಸ, ... ಗಂಡಸರಂತೆಯೇ ಹೆಂಗಸರೂ ಮಾಡುತ್ತಾರೆ. ಸ್ತ್ರೀಯರ ಕೃತ್ಯಗಳನ್ನು ... ಸ್ತ್ರೀ ಪೋಲೀಸಿನವರನ್ನೇ ನೇಮಿಸಬೇಕು"—ಎಂದು ... ಸ್ತ್ರೀ ಪೋಲೀಸಿನವರು ... ನಡೆಸುವ ... ಮುಖ್ಯವಾಗಿ ಹೆಂಗಸರಿಗೆ ... ಹೆಚ್ಚಾಗಿ ... ತಿಳಿಸಿದೆ.

ಈ ವಾರದ ಕಥೆ.

ಭೈರನ ಜೌಡಿ.

ಲೇಖಕರು – ಮಿ॥ ಬಿ. ಎಸ್. ಶೇಷಾದ್ರಿ, ಬಿ.ಎ. ಮೈಸೂರು.

ಅಮಾವಾಸ್ಯೆ. ಮಧ್ಯ ರಾತ್ರಿ. ಊರಿನ ಆ ಮಾರಿಗುಡಿ ಕೋಣೆಯಲ್ಲಿ ಅತ್ಯಂತ ನಿಶ್ಶಬ್ದ. ಮೂಲೆಮೂಲೆಗಳ ಅಂಧಕಾರವು ದಟ್ಟ. ತೂಗಿಸಿದ ಮಡಿಕೆಗಳ ನೆರಳು ಕೆಸ್ತ್ರ ತ್ತಲನ್ನು ಹೆಚ್ಚಿಸಿವೆ. ಕೋಣೆಯ ಮಧ್ಯದ ಎತ್ತರವಾದ ಕಟ್ಟೆಯ ಮೇಲಿರುವ ಒಂದು ಸಣ್ಣ ಲಾಂದ್ರದ ಬೆಳಕು. ಆ ಬೆಳಕಿನ ಬೆಳಕಿನಲ್ಲಿ ಮಾರಿಯ ಕೆಂಪು ಮತ್ತು ಭೀಕರವಾದ ಹರಳಯ್ಯ ಕುಳಿತಿದ್ದಾರೆ. ಕೆಂಪು ವಸ್ತ್ರದಲ್ಲಿ ಅಗ್ರಗಣ್ಯ. ತನ್ನ ಹೊಕ್ಕಳಿನಲ್ಲಿ ಕರಿ ಹೊಂತದ ಮುಂಡಾಸನ್ನು ಬಿಗಿದುಕೊಂಡಿದ್ದಾನೆ. ಮುಂದೆ ಒಂದು ತಂಬಾಳೆಯಲ್ಲಿ ತೆಂಗಿನಕಾಯಿ, ಗಾತ್ರ, ಕೆಂಪು ಅನ್ನ. ಅದರಲ್ಲಿ ಕೆಲವು ಊದಗಡ್ಡಿ ಸಿಕ್ಕಿಸಿವೆ. ಅನ್ನದ ಮೇಲೆ ಒಂದು ಹಣತೆ. ಎರಡು ಎಳನೀರು, ಒಂದು ಚಿಪ್ಪು ಬಾಳೇ ಹಣ್ಣು ತಟ್ಟೆಯಂಚಿನಲ್ಲಿವೆ. ಕೆಂಚನು ಎರಡು ಅಂಗುಲದ ಮೊಳೆಯನ್ನು ಅತ್ತಿ ಮರಕ್ಕೆ ಹೊಡೆದು ಮಂದ ಸುತ್ತಲೂ ಒಂದು ಹಳದಿ ದಾರ ಕಟ್ಟಿದ. ಸ್ವಲ್ಪ ಕುಂಕುಮ ಮೊಳೆಗೆ ಹಚ್ಚಿದ. ಹರಳಯ್ಯನ ಹಣೆಗೂ ಇಟ್ಟ. ಆಮೇಲೆ ಮಚ್ಚಿನಿಂದ ಹೋತದ ಕತ್ತನ್ನು ಕುಯಿದಿಸಿ, ರಕ್ತಮಯವಾದ ರುಂಡವನ್ನು ಮೊಳೆಗೆ ಸಿಗಿಸಿ, "ಹರಳಯ್ಯ, ನಿನ್ನ ಪೈರಿ ಆಯಸ್ಸು ಮುಗಿಯಿತು. ಇನ್ನು ನೀನು ಹಾಲು ಕುಡಿದು ಮಲಗು ಹೋಗು" ಎಂದ ಕೆಂಚ.

* * *

ವಾಲ್ಮೆ, ಭೀತಾಳಪುರದಲ್ಲಿ ಒಂದು ಹೆಣವಿದ್ದಿದೆ. ಯಾವ ಕಾರಣವೂ ಇಲ್ಲದೆ ಹಿಂದಿನ ರಾತ್ರಿ ಸುಮಾರು 12-30 ಕ್ಕೆ ಸಲ್ಲಿ ಪಟೇಲ್ ಲಿಂಗಣ್ಣನು ಸತ್ತುಹೋಗಿದ್ದಾನೆ. ನೆಂಟರಿಷ್ಟರಲ್ಲಿ ಪಿಸಪಿಸ ಮಾತು. ಲಿಂಗಣ್ಣನ ಹಠಾತ್ ಮರಣವು ಆಶ್ಚರ್ಯ, ಸಂದೇಹಗಳಿಗೆ ಆಸ್ಪದವಾಯಿತು. ಕೆಲವು ದಿನಗಳ ಹಿಂದೆ ಲಿಂಗಣ್ಣ, ಹರಳಯ್ಯನವರಿಗೆ ಬೇಲಿ ವಿಷಯವಾಗಿ ಮೊದಲಾದ ಜಗಳವನ್ನೂ, ಅಂದಿನಿಂದ ಅವರಿಬ್ಬರಲ್ಲಿ ಮಾತು ಕತೆ, ಊಟ ಉಪಚಾರಗಳು ನಿಂತದ್ದೂ, ಇವೆಲ್ಲಾ ಊರಿನವರಿಗೆ ಗೊತ್ತಿತ್ತು. ಇದರಮೇಲೆ ಅಮಾವಾಸ್ಯೆ ರಾತ್ರಿ ಹರಳಯ್ಯನು ಊರಿನಲ್ಲಿರಲಿಲ್ಲ. ಅಲ್ಲಿಂದಲ್ಲಿಗೆ ಸಮಾಚಾರ ತಿಳಿದು, ಮಾರಿಗುಡಿಗೆ ಹೋದ ವಿಷಯವೂ ಹೊರಬಿತ್ತು. ನೆಂಟರೆಲ್ಲಾ ಒಂದೇ ಕಂಠದಿಂದ ಮಾರಿಯು ಕೆಂಚನ ಜೌಡಿಯು ಕೈವಾಡವೆಂದು ನಿರ್ಧರಿಸಿದರು. ಶವ ಸಂಸ್ಕಾರವಾದ ಮೇಲೆ ಲಿಂಗಣ್ಣನ ಮಗ ಕಾಳಯ್ಯನಿಗೆ ಈ ವಿಷಯ ತಿಳಿಸಿ, ಹರಳಯ್ಯನಿಗೆ ಸರಿಯಾದ್ದು ಮಾಡಬೇಕೆಂದರು.

ಆ ದಿನ ರಾತ್ರಿ ಕಾಳಯ್ಯನು ಊರು ಬಾಗಿಲ ಮಾರಮ್ಮನ ಗುಡಿ ಹೊಕ್ಕ. ಭೀತಾಳಪುರದ ಮಾರಮ್ಮ ಬಹು ಸತ್ಯವೇನಂತೆ. ಒಕ್ಕೆ ಅಪ್ಪಣೆಯಿಲ್ಲದೆ ಆ ಊರಿನವರು ಯಾವ ಕೆಲಸವನ್ನೂ ಮಾಡರು. ಕಾಳಯ್ಯನು ಮುಂದಿನ ಕಾರ್ಯಕ್ರಮವನ್ನು ತಿಳಿಯಲು ಅಮ್ಮನ ಗುಡಿಗೆ ಬಂದಿದ್ದ. ಒಂದು ಕೋಳಿ ಆಹುತಿ ಕೊಟ್ಟ. ಮಾರಮ್ಮನ ಎಡಬಲದಲ್ಲಿ ಎರಡು ಕಣಗಿಲೆ ಹೂ ಸಿಗಿಸಿ "ತಾಯಿ, ಹರಳಯ್ಯನಿಗೆ ಪಾಠ ಮಾಡಿಸು ಎಂದರೆ ಎಡಗಡೆ ಹೂ ಕೊಡು. ಬೇಡವೆಂದರೆ ಬಲಗಡೆ ಹೂ ಕೊಡು" ಎಂದು ಕಣ್ಮುಚ್ಚಿ ಸ್ವಲ್ಪ ಹೊತ್ತು ಧ್ಯಾನಮಾಡಿ ಕಣ್ಣುತೆರೆದ. ಅಮ್ಮನ ಎಡಗಡೆ ಹೂ ಬಿದ್ದಿತ್ತು. ಕಾಳಯ್ಯನು ಒಂದುಮೂಲೆ ನೋಡದೆ ಭೈರಣ್ಣನ ಮನೆಕಡೆಗೆ ಓಡಿದ.

* * *

ಭೈರನ ಗುಡಿಸಲು.

ಎಲೆಲೆ ಜೌಡಿ, ಭೈರನ ಜೌಡಿ,
ಕಾಳಯ್ಯನಿತ್ತವನ ಓಡಿ,
ಮಾರಮ್ಮನ ಪೂಜೆಯ ಮಾಡಿ,
ಹರಳಯ್ಯನ ಬಿಸಿರಕ್ತ ಕುಡಿ,
ತಣಿ, ಕುಣಿ, ಭೈರನ ಜೌಡಿ

ಭೈರನ ಹಾಡು ಮುಗಿಯುವ ಹೊತ್ತಿಗೆ ಕಾಳಯ್ಯನು ಗುಡಿಸಲಿನೊಳಕ್ಕೆ ಬಂದಾಗ ದೀಪಿಲು ಎಂಟು ಅಡಿ ಚೌಕದಿರಬಹುದು. ಕೆಮ್ಮಣ್ಣು ಸಾರಿಸಿದ ನೆಲ. ಗೋಡೆಯ ಮೇಲೆಲ್ಲಾ ಕೆಂಪು ಪಟ್ಟೆಗಳು. ಒಂದು ಮೂಲೆಯಲ್ಲಿ ರಂಗನಲ್ಲಿ ಚೌಕದ ಮಧ್ಯೆ ಒಂದು ಬೊಂಬೆ. ಅದರ ಕೊರಳಲ್ಲಿ ಕಣಗಿಲೆ ಹೂ ಸರ. ಅಲ್ಲಲ್ಲಿ ನಾಗದಾಳದ ಹೂ ಬಿದ್ದಿವೆ. ಕಾಳಯ್ಯನು ಒಳಕ್ಕೆ ಬರಲು ಭೈರನು ಹಾಡನ್ನು ನಿಲ್ಲಿಸಿ ಕಾಳಯ್ಯನ ಕಡೆಗೆ ಒಂದು ಸಲ ತಲೆ ಕುಲ್ಕಿಸಲು ಹೇಳಿದ.

"ಕಾಳಯ್ಯ, ನಿಮ್ಮಪ್ಪನ ಸಮಾಚಾರ ಕೇಳ್ದೆ."

"ಭೈರಣ್ಣ, ಹರಳಯ್ಯನ್ನ ತಗೋಬೇಕು. ಊರುಬಾಗಿಲ ಮಾರಮ್ಮ ಅಪ್ಪಣೆ ಕೊಟ್ಟಿದಳೆ"

"ಹಾಗಾದರೆ ಸರಿ. ಮುಂದಿನ ಅಮಾವಾಸ್ಯೆ ಕೆಲಸ ನಡೆಸ್ತೀನಿ. ಆ ಹೊತ್ತು ಇಪ್ಪತ್ತೈದು ಸೇರು ಅಕ್ಕಿ ಅನ್ನ, ಎರಡು ಕರಿಹೋತ ಬೇಕು. ಒಂದೆ ಚಲ್ಲರೆ ಎಲ್ಲಾ ನಿನಗೇ ಗೊತ್ತಿದೆ. ಯೋಚನೆ ಮಾಡಬೇಡ, ಹೋಗು"

* * *

ಮುಂದಿನ ಅಮಾವಾಸ್ಯೆ ರಾತ್ರಿ. ಭೀತಾಳಪುರಕ್ಕೆ ಒಂದು ಮೈಲಿ ದೂರದಲ್ಲಿ ಮುರಿದ ಕೋಟೆ. ಕೋಟೆಯ ಮಧ್ಯೆ ಗಿಡ ಬಳ್ಳಿಗಳಿಂದ ಮುಚ್ಚಿ ಹೋದ ಭೀತಾಳ ದೇಗುಲ. ಒಳಗಡೆ ಕರಾಳಸ್ವರೂಪದ ಭೇತಾಳ ಮೂರ್ತಿ. ಬಲಗೈಯಲ್ಲಿ ಹರಿತ ಕತ್ತಿ, ಕೊರಳಲ್ಲಿ ರುಂಡಮಾಲೆ, ಲೋಹದನ್ನು ನುಂಗುವಂತೆ ಬಾಯ್ತೆರೆದ ನೀಳವಾದ ನಾಲಗೆ. ಈ ವಿಗ್ರಹದ ಮುಂದೆ ರಕ್ತ ವಸ್ತ್ರವನ್ನುಟ್ಟ ಭೈರ. ಪಕ್ಕದಲ್ಲಿ ಕಾಳಯ್ಯ. ಎಡಗಡೆ ಗುಡ್ಡದಂತೆ ಅನ್ನದ ರಾಶಿ. ರಾಶಿಯ ತಲೆಯಲ್ಲಿ ಒಂದು ಬೊಂಬೆ ಭೈರನ ಜೌಡಿ. ಜೌಡಿಯ ಮುಖದಲ್ಲಿ ರುದ್ರನಾಟ್ಯದ ಸೊಬಗು. ಅಂಗಾಂಗಗಳಲ್ಲಿ ನೃತ್ಯಕ್ಕೆ ಸಿದ್ಧವಾಗಿರುವಂತಿರುವ ಇರುವು. ಬಿಸಿನೆತ್ತರ ಹೀರುವ ಹಬ್ಬದ ಸಜ್ಜು ಇದೇನೋ?

ಇವೆಲ್ಲಾ ಒಂದು ಸಣ್ಣ ಹಣತೆ ಬೆಳಕಿನಲ್ಲಿ ಮುಸುಕುಮುಸುಕಾಗಿ ಕಾಣುತಿತ್ತು. ಆಗಾಗ್ಗೆ ಗಾಳಿಯು ಕಲ್ಲು ಸಂದಿಯಿಂದ ನುಗ್ಗಿ ದೀಪದ ನಾಲಗೆಯನ್ನು ನೀಳವಾಗಿ ಮಾಡಿ ಭೀತಾಳನ ವಿಕಾರ ಮುಖದಲ್ಲಿ ವ್ಯಂಗ್ಯ ನಗೆಯೊಂದು ಸುಳಿದಂತೆ ಭಾಸವಾಗುತಿತ್ತು. ಜೌಡಿಯು ನೃತ್ಯದಿಂದ ತಣಿಯುತೇನೋ?

* * *

"ಭೈರಣ್ಣ, ಇನ್ನೂ ಏಕೆ ತಡ?"

"ಕಾಳಯ್ಯ, ಮಾರಿಗುಡಿ ಕೋಣೆಯಲ್ಲಿ ಕೆಂಚ, ಹರಳಯ್ಯನಿಗೆ ತಡೆಕಟ್ಟುತ್ತಿದ್ದಾನೆ. ಅದಕ್ಕೇ ನಮ್ಮ ಕಾರ್ಯ ಇನ್ನೂ ಫಲಿಸಿಲ್ಲ. ಇನ್ನರ್ಧ ಘಂಟೆಯಲ್ಲಿ ನನ್ನ ಜೌಡಿಗೆ ಕಾಳಿ ಶಕ್ತಿ ಕೊಡುತ್ತೀನಿ. ಆಮೇಲೆ ನೋಡುತ್ತಿಯಂತೆ!........ ಆದರೆ, ನೋಡು ಆಕೆಯನ್ನು ಶಾಂತ ಮಾಡೋದೆ ಕಷ್ಟ. ರಾಂ ತನಾದೊಡನೆ ಅನ್ನದ ರಾಶಿ ಕೆಂಪಾಗುತ್ತೆ........ ಹರ್ದಾಗಿಲ್ಲ. ನೋಡೋಣ."

ಭೈರನು ಕಣ್ಮುಚ್ಚಿ ಕುಳಿತ. ಅರ್ಧಘಂಟೆ ಸಾಯಿತು, ಮುಕ್ಕಾಲು ತಾಸಾಯಿತು, ಒಂದು ತಾಸೂ ಆಯಿತು. ಬಾಗಿಲಲ್ಲಿ ಕಟ್ಟಿದ್ದ ಆಡು ಅರಚುತ್ತಾ ರಕ್ತ ಕಾರಿ ನೆಲದಲ್ಲಿ ಬಿತ್ತು. ಭೈರನು ಕಣ್ತೆರೆದು "ಕಾಳಯ್ಯ, ಹರಳಯ್ಯನ ಆಟ ಮುಗಿಯಿತು" ಎಂದ. ಮರುಕ್ಷಣದಲ್ಲಿಯೇ ಅನ್ನದ ರಾಶಿ ಕೆಂಪಾಗದಿರುವುದನ್ನು ಕಂಡು "ಅಯ್ಯೋ! ದೇವಿ ಶಾಂತವಾಗಿಲ್ಲ. ನೆತ್ತರದ ದಾಹ ಮುಗಿದಿಲ್ಲ. ಕಾಳಯ್ಯ, ಬೇಗ ಇನ್ನೊಂದಾಡನ್ನು ಕಟ್ಟು" ಎಂದು ಕೂಗಿದನು. ಇನ್ನೊಂದು ಆ ದಾ ಆಹುತಿಯಾಯಿತು—ಅನ್ನದ ರಾಶಿ ಕೆಂಪಾಗಲಿಲ್ಲ. ಭೈರನು ಗಾಬರಿಯಾಗಿ ಅರಚಿದ "ಕಾಳಯ್ಯ! ಕಾಳಯ್ಯ! ಇತ್ತ ಬಾ! ನನ್ನ ಜೌಡಿ ನಿನ್ನ ತಗೊಂಬಿಡುತಾಳೆ! ಬೇಗ......" ಕಾಳಯ್ಯನು ಹೆಜ್ಜೆಯಿಡುವಷ್ಟರಲ್ಲಿ ರಕ್ತ ಕಾರಿ ನೆಲಕ್ಕೆ ಉರುಳಿದನು. ಭೈರನು ಆವೇಶದಿಂದ ಚೀರಿದನು "ಅಯ್ಯೋ! ಜೌಡಿ! ನೆತ್ತರ ಕುಡಿತ ಸಾಲದೆ? ಸಾಕು; ರಕ್ತ ಕೋಡಿ; ನಿಲ್ಲಿಸು! ಶಾಂತಳಾಗು! ಸಾಕು! ಸಾಕು! ನಿನ್ನ ಪೂಜೆ." ಕುಸಿದು ಬಿದ್ದ ದೇಗುಲದ ಚಾವಣಿ ಯೊಂದೆ ಪ್ರತ್ಯುತ್ತರ ಕೊಟ್ಟಿತು.

* * *

ಭೈರನು ಎಚ್ಚರಗೊಂಡಾಗ ಬೆಳಗ್ಗೆ ಸುಮಾರು ಆರು ಘಂಟೆ. ಸೂರ್ಯನ ಮೊದಲಿನ ಕಿರಣಗಳು ಕಲ್ಲಿನ ಮೇಲ್ಛಾವಣಿಯ ಸಂದಿಯಲ್ಲಿ ಹದ್ದು ಒಂದು ಕೆಂಪಾದ ಅನ್ನದ ರಾಶಿಯ ಮೇಲಿನ ಬೊಂಬೆಯ ಮುಖದಮೇಲೆ ಬಿದ್ದಿತ್ತು. ಭೈರನು ತನ್ನ ಕಡೆ ಬೀರಿದ ಜೌಡಿಯ ದಿಟ್ಟಿಯ ವ್ಯಂಗ್ಯ ನಗೆಯ ತಾಂಡವಾಟವನ್ನು ಕಂಡ. "ಭೈರ, ನನ್ನ ಪೂಜೆ ಸಾಕೇ?" ಎಂದು ಪ್ರಶ್ನೆ ಮಾಡುವಂತಿತ್ತು. ಆ ಪ್ರಶ್ನೆಗೆ ಉತ್ತರವೇ ಇಲ್ಲ. "

ಸಾಧ್ವಿಯ ಆಜೀವಚಂದಾದಾರರಾಗಿ

ಶ್ರೀ ಸಹಸ್ರ ಚಂದ್ರದರ್ಶನ ಶಾಂತಿ

ವೈಣಿಕ ಪ್ರವೀಣ ಸುಬ್ಬಣ್ಣನವರಿಗೆ

ಆಸ್ಥಾನ ವಿದ್ವನ್ಮಣಿಗಳಾದ ವೈಣಿಕಪ್ರವೀಣ ಭಕ್ಷಿ ಸುಬ್ಬಣ್ಣ ಇವರು ವಂಶಪಾರಂಪರ್ಯವಾಗಿ ಬಂದ ಆಸ್ಥಾನ ಸಂಗೀತ ಭಕ್ಷಿ ಕೆಲಸವನ್ನು ನಿರ್ವಹಿಸಿ ವೈಣಿಕ ಪ್ರವೀಣರಾಗಿ ಆಳಿದ ಮಹಾಸ್ವಾಮಿಯವರಾದ ಶ್ರೀ ಚಾಮರಾಜ ಒಡೆಯರವರ ಕಾಲದಿಂದಲೂ ಈವರೆವಿಗೂ ಅಗಾಧ ಶ್ರೀಮಂತರಾಗಿ ಪ್ರಖ್ಯಾತಿ ಪಡೆದಿರುವುದು ಲೋಕಪ್ರಸಿದ್ಧವಾದ ವಿಚಾರವಾಗಿದೆ.

ಇದೇ ಧಾತ್ರನಾಮಸಂವತ್ಸರದ ಮಾರ್ಗಶಿರ ಶುದ್ಧ ಬಿದಿಗೆ ಮಂಗಳವಾರ (ತಾ॥ 15-12-36) ರಲ್ಲೂ ಶ್ರೀ ಸುಬ್ಬಣ್ಣನವರಿಗೆ 78 ವರ್ಷ ತುಂಬಿದು 79 ನೇ ವರ್ಷದ ವರ್ಧಂತಿ ಉತ್ಸವವು ನೆರವೇರುವುದಲ್ಲದೆ ಅವರ ನಡೆಯಬೇಕಾದ ಸಹಸ್ರ ಚಂದ್ರದರ್ಶನವೆಂಬ 80 ನೇ ವರ್ಷದ ಶಾಂತಿಯು ನೆರವೇರುವುದಾಗಿದೆ.

ಇಷ್ಟು ಕಾಲ ಮೂರ್ಧಾಭಿಷಿಕ್ತರಾಗಿ ನಿಷ್ಠೆ ಹೀಗೆ ಶಾಂತಿಗಳನ್ನು ಮಾಡಿಕೊಂಡ ಸಂಗೀತ ವಿದ್ವಾಂಸರಲ್ಲಿ ಇವರೇ ಮೊದಲನೆಯವರೆಂದರೆ ಅತಿಶಯೋಕ್ತಿಯಾಗಲಾರದು.

ಈ ಸಂದರ್ಭದಲ್ಲಿ ಮೈಸೂರು ಸಂಸ್ಥಾನದ ಸಮಸ್ತ ಸಂಗೀತ ವಿದ್ವಾಂಸರೂ ವಿದ್ಯಾರ್ಥಿಗಳೂ, ಕಲಾಭಿಮಾನಿಗಳೂ ಪರಿ ತಾ॥ 15 ನೇ ಮಂಗಳವಾರ ದಿವಸ ಏಕಕಂಠದಿಂದ ಶ್ರೀ ಸುಬ್ಬಣ್ಣನವರು ಇನ್ನೂ ಶತಮಾನೋತ್ಸವವನ್ನು ನೆರವೇರಿಸಿಕೊಂಡು ಸುಖವಾಗಿರಬೇಂದು ಶ್ರೀಕೃಷ್ಣ ಪರಮಾತ್ಮನನ್ನು ಪ್ರಾರ್ಥಿಸಬೇಕೆಂದು ವಿನಯದಿಂದ ಸೂಚಿಸುತ್ತೇನೆ.

ಎಸ್. ಕೃಷ್ಣಯ್ಯಂಗಾರ್, ಗಾಯಕ.

ಬೊಂಬಾಯಿನ ಗಲಭೆ

ಬೊಂಬಾಯಿನಲ್ಲಿ ಮಾರುತಿ ದೇವಸ್ಥಾನವನ್ನು ಕಟ್ಟುವ ಸಂಬಂಧದಲ್ಲಿ ಉಂಟಾದ ಹಿಂದೂ ಮುಸ್ಲಿಂ ಗಲಭೆಯು ಈಗ ಶಾಂತವಾಗುತ್ತಿದೆ. ಇದುವರೆಗೆ ನೂರಾರು ಜನರು ಪೆಟ್ಟಾಗಿ ಮಾಡಲ್ಪಟ್ಟು ಅನೇಕರಿಗೆ ಘಟಿಕೆಟ್ಟುಗಳೂ ಬಿದ್ದವು. ಆದರೆ ಅಲ್ಲಲ್ಲಿ ಗಲಭೆಗಳು ಆಗುತ್ತಲೇ ಇದ್ದರೂ ಕಡೆಗೆ ಎಲ್ಲವೂ ಶಾಂತವಾಗಿ ದೇವಸ್ಥಾನದ ಕಟ್ಟಡವು ನಿರಾತಂಕವಾಗಿ ಕಟ್ಟಲ್ಪಡುತ್ತಿದೆ.

ಶ್ರೀ|| ಆರ್. ನರಸಿಂಹಾಚಾರ್ಯರು

ಸ್ಮಾರಕ ಕಂದಾವಳಿ.

ರಾಮಾನುಜ ಪುರಜನಿತಂ ।
ಶ್ರೀಮಾನಾವಳಿ ಕಿರೀಟಪಂಕ್ತಿರ್ನಿನತಂ ॥
ರಾಮಾನುಜ ಮತನುನತಂ ।
ಸ್ವಾಮಿಯನುಳಿದ ಸುರಲೋಕಗಮನ
ವಿಲಸಿತಂ ॥೧॥

ಗರ್ವ್ವತು ಕಾರ್ತಿಕಶುಕ್ಲೈಯ ।
ತರುಣದಿನಾಸ್ತ ಮಯೋಳಯನನ
ನಾಸದೆವಾ ।
ಗಳದು ಪಾಲಿಸಿದೊಡನಂ ।
ಒಲಿಸಿದರದಿನಕರೋದ ಕೊಡಕೆಂಬುದಿ
ಯುಮಾ ॥೨॥

ಬಾರ್ದಿ ಸಿರಿಬಂ ಗುಣ ಗಂ ।
ಆಮಾರ್ಥಕಟಿದಿ ಸಿಳಯು ತಳಮುಳ ಗೊಳ
ಸಿನ ಸ್ಥಲ ॥

ಆವಮಾಂತದು ಧೀರಾವಳಿ ।
ಆಮಿಸಿ ಯಾಲಿಸಿ ಕೊಡಂಕೆಯು ಸೊಡ
ನೊಡನೆ ಪಾ ॥೩॥

ಉಗಿನ ಕನ್ನಡ ಕವಿಗಳ ।
ನೀಗುಡಿಯಂ ಹೃದಯಕೀವ ಶಬ್ದದ
ಬರಿಸಂ ॥

ಆಗಸವಾಸಿಗಳನುವಿಂ ।
ನಾಗಸ್ಯಸಿಂಹಾರ್ಯ ಸಿಂಕಲಿಯ ಕಾಮಿ
ಸಿದರ್ ॥೪॥

ಕವಿವತವಮತಶಿಯಪ್ಪೊಲ್ದರ್ ।
ಕವಿಗಳನು ನಯದಿ ನುಸಿರ್ದ ಕೃತಿಗಳ
ನೋದರ್ ॥
ಕವಿಪೂಲೆ, ತರುವದರ್ಗಂಬಾಯ್ ।
ಕವಿವರದ ಕುಮರಿಯನ ಕುಣಿ ಕುಣಿ
ದಾಡುವರಯ್ ॥೫॥

ವರಗತ ಬಾನನ ಶೋಧನ ।
ನನಶೋಧ್ಯೋಗಾಧಿಯೋಧನಾಗಿಯು
ಯುಕಿದಂ ॥
ವರವೀರಲಾಧೀರಾವಳಿ ।
ಮಿರುತಚ್ಚಪಡುನೆಸಕವಂಸೆರೆ ನಸ
ರಿಸಿದಂ ॥೬॥

ಮೋಡಿಗಲಾರ್ನರ ಕವಿಯೊಳಿ ।
ಬಾಣರ ಕರ್ನಾಟಕವಿವರ ಚರಿತೆಯನೆ
ನಗ್ಗಂ ॥೭॥

ನೀಡೋರಿದಂ ದಾನನದವ ।
ನಾಣಿಯ ಗೀತೆಯನಸೇಕಕೃತಿಯಂ
ಮತಿಯಿಂ ॥೮॥

ಭರತ ಮಹಿಪನಿಂ ಪಡೆದಂ ।
ಕರಮುಸಿನ ಮಹಾಮಹೋಪಾಧ್ಯಾಯ
ವ್ಯಾಧ್ಯಾಯ ॥

ಸ್ಥಿರದ್ವಿರುದಸೀಪ್ರಾಕ್ತನ ।
ಪರಮಪಮರ್ಶಕ ನಿಚಕ್ಷಣ ಪೆಸರಂ
ಮುದಿರ ॥೯॥

ಕವಿಗಾಣದೆವೊಳಕಿಸನುವು ।
ಕವಿಸುಕೃತ ಕಲೆಯುಕಾಂತ ಪೇಗುಂ
ಜೈಗುಂ ॥
ಕಾಸುಮಸಾಮಯನ ನಗಿಯಂ ।
ಕವಿ ನಿನಿಂಕಿ ಪೇವನಸುಧಿಯೊಳಿಕ
ನೇತಕ್ಕಂ ॥

ಜಿ. ರಘುಪತ್ಯಾಚಾರ್ಯ.

ಶ್ರೀ|| ಆರ್. ನರಸಿಂಹಾಚಾರ್ಯರು.

ಪ್ರಾಕ್ತನ ವಿಮರ್ಶ ವಿಚಕ್ಷಣ ಮಹಾಮಹೋಪಾಧ್ಯಾಯ, ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯರು ತಾ|| 6—12—36ಭಾನುವಾರ ಇಹಲೋಕವನ್ನು ತ್ಯಾಗ ಮಾಡಿ ಪರಲೋಕವನ್ನೈದಿದರು. ದಿವಂಗತರಿಗೆ 71 ವರ್ಷಗಳು ಮಾತ್ರ ಆಗಿತ್ತು. ಇವರಿಗೆ ಧರ್ಮ ಪತ್ನಿಯಾದ ಪೂಜ್ಯ ಶ್ರೀಮತಿ ಯದುಗಿರಿ ಅಮ್ಮಾಳ್ ರವರೂ, ೨ ಜನ ಹೆಣ್ಣು ಮಕ್ಕಳೂ ಇದ್ದಾರೆ.

ಆಚಾರ್ಯರು, ಪ್ರಚಂಡ, ವಿದ್ವಾಂಸರು, ಮಹಾ ದೈವ ಭಕ್ತರು. ಪೂರ್ವಾಚಾರರಲ್ಲಿ ಅತ್ಯಂತ ಆಸಕ್ತಿ: ಉದಾರ ಮನಸ್ಸು, ಕನ್ನಡ, ತಮಿಳು, ಸಂಸ್ಕೃತ ಈ ಮೂರು ಭಾಷೆಗಳಲ್ಲಿ ಅದ್ವಿತೀಯರಾಗಿದ್ದರು. ಇವರ ಪಾಂಡಿತ್ಯಶಕ್ತಿ ವಿಸ್ಮಯಕರ ಮಾಡುವಂತಹುದು.

ಇವರ ಪಾಂಡಿತ್ಯವು ಹೇಗೆ ಅಗಾಧವಾಗಿತ್ತೋ ಹಾಗೆಯೇ ಸೌಜನ್ಯವೂ ನಾನಾ ವಿಧಗಳಲ್ಲಿ, ಜನರಂಜಕವಾಗಿತ್ತು. ಎಲ್ಲರ ಪ್ಲಿಯೂ ಮರ್ಯಾದೆ, ಎಲ್ಲಾ ಸಂದರ್ಭಗಳಲ್ಲಿಯೂ ಸಹಾನುಭೂತಿ, ರಸಿಕತೆ, ಅಭಾಸ್ಯ, ಗಾನ, ವಿನೋದ ಇತ್ಯಾದಿ ಸದ್ಗುಣಗಳು ಆದರ್ಶಪ್ರಾಯವಾಗಿದ್ದವು ಆದರು ಸಾಹಿತ್ಯ ಪರಿಷತ್ತಿಗೆ ಆಧಾರ ಸ್ತಂಭದಂತಿದ್ದರು. ಇವರ ಮರಣದಿಂದ ನಮ್ಮ ಮಾತೃ ದೇಶಕ್ಕೆ ಅಪಾರ ನಷ್ಟ ಉಂಟಾಗಿದೆ. ಈ ಮಹನೀಯರು ಕನ್ನಡದಲ್ಲಾಗಿ ಪ್ರಮುಪಟ್ಟಿದ್ದು ಪರ್ವಾನಾತೀತವಾಗಿರುತ್ತದೆ. ಇವರು ಮಹಾಮಹೋಪಾಧ್ಯಾಯ ಎಂಬ ಬಿರುದನ್ನು ದಿವಂಗತ, ಚಕ್ರವರ್ತಿಗಳಿಂದಲೂ, ಪ್ರಾಕ್ತನ ವಿಮರ್ಶ ವಿಚಕ್ಷಣ ಎಂಬ ಪ್ರಶಸ್ತಿಯನ್ನು ನಮ್ಮ ಪ್ರಭುಗಳಿಂದಲೂ ಪಡೆದಿದ್ದರು.

ಆಕಾಶವಾಣಿ ಕಾರ್ಯಕ್ರಮ.

ಸೋಮವಾರ:—8 ರಿಂದ 9—15 ಆರ್ಕೆಸ್ಟ್ರಾ ಸಂಗೀತ, ರಾಜಕೀಯ ಉಪನ್ಯಾಸ, "ಸ್ವಾತಂತ್ರ್ಯ ಮತ್ತು ಕಾಯಿದೆ" ಮಂಗಳವಾರ:—6-30 ರಿಂದ 8. ಕರ್ನಾಟಕವಾದ್ಯ ಸಂಗೀತ. "ಸಹಕಾರ" ಇದರ ಕಾ ಭಾಷಣ, ಮಿ|| ಬಿ. ಆರ್. ಸುಬ್ಬರಾಯರಿಂದ, ಬುಧವಾರ:—8 ರಿಂದ 9—15 ಕರ್ನಾಟಕ ಗಾನ, ಸಂಸ್ಕೃತ ಸಾಹಿತ್ಯ ಪಠನ, ಶ್ರೀ|| ಸಿ. ಆರ್ ನರಸಿಂಹಶಾಸ್ತ್ರಿಗಳಿಂದ. ಗುರುವಾರ:—6—30 ರಿಂದ 8. ಕನ್ನಡನಾಟಕ, "ವಿಕ್ರಮ ವಿಜಯ" ಕೃಷ್ಣರಾಜಸಾಗರದ ಸ್ಟಾರ್ ನಾಟಕ ಮಂಡಲಿಯವರಿಂದ, ಶುಕ್ರವಾರ:—8 ರಿಂದ 9-30 ಹಿಂದೂಸ್ಥಾನಿ ಸಂಗೀತ, ಮಿ|| ಪಿ. ಪಹಬಾದ್ ಮತ್ತು ಮಂಡಲಿ; ಶನಿವಾರ:— 6-30 ರಿಂದ 8. ಶ್ರೀ|| ವಿ. ಸುಬ್ರಹ್ಮಣ್ಯ ಶಾಸ್ತ್ರಿಗಳಿಂದ ಬಾಣರ ಪಠನ.

ಓಟಿನ ಮಹತ್ವ

1. 'ಓಟು' ಮಾಡುವುದು ಸ್ವಾತಂತ್ರ್ಯದ ಹಕ್ಕಾಗಿದೆ. 2. 'ಓಟು' ಮಾಡುವುದು, ನಾಗರಿಕತ್ವದ ತತ್ವ. 3. 'ಓಟಿ'ಗೆ ಸಾಲದ ಹೊರೆಯಿಲ್ಲ. 4. 'ಓಟಿ'ಗೆ ದೊಡ್ಡವರ ದಾಕ್ಷಿಣ್ಯವಿಲ್ಲ. ಚಿಕ್ಕವರೆಂಬ ಚಿಂತೆಯಿಲ್ಲ. 5. 'ಓಟಿ'ಗೆ ಐಶ್ವರ್ಯವೇ ಯೋಗ್ಯತೆ ಅಲ್ಲ. ಬಡತನವು ಬಾಧಕವಲ್ಲ; ದಾರಿದ್ರ್ಯದ ಭಯವಿಲ್ಲ. 6. 'ಓಟಿ'ಗೆ ಐಕ್ಯ, ಸಾತ್ವಿಕತೆ, ನಿರ್ಭಯ, ನಿರ್ದಾಕ್ಷಿಣ್ಯ, ಧೈರ್ಯ, ನಿಸ್ವಾರ್ಥತೆ, ದೀನದಯಾಪರತೆ, ಕರ್ತವ್ಯತತ್ಪರತೆ, ನೀತಿಯಿಂದ ನಿರ್ಮಲವಾದ ಮನಸ್ಸಿನಿಂದ ಕೊಡಬೇಕಾದುದೇ ಧ್ಯೇಯ. ಇದೇ ಯೋಗ್ಯತೆ.

ಇದಲ್ಲದೆ 'ಓಟು' ಮಾಡುವವರು ಸ್ವಾತಂತ್ರ್ಯಪ್ರಿಯರು, ದೇಶಸೇವಾಧುರಂಧರರು, ಪರೋಪಕಾರಿಗಳು, ನಿರ್ವಂಚಕರು, ಸತ್ಯಮತಸ್ಥರು, ಸಮಾಜಾಭಿಮಾನಿಗಳು ಸೈನಿಕರು. ಮೇಲ್ಕಂಡ ತತ್ವಗಳನ್ನು ತಿಳಿದು ಅನುಸರಿಸಬೇಕು. ಮಾನ್ಯರಾದ ತಾವು "ಯಾರಿಗೂ ಸೋತು ಹೋಗದ ಹಾಗೆ" 'ಓಟು' ಮಾಡಿ ಸ್ವಂತಿಕೆಯ ಗೌರವವನ್ನು ಉಳಿಸಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ.

'ಓಟು' ಮಾಡುವ ಮಹನೀಯರೆ! ವ್ಯಕ್ತಿ ಸ್ವಾತಂತ್ರ್ಯದ ಕೈಬೀಸುಗೆಯು ತಮ್ಮ ಕರದಲ್ಲಿದೆ. ಯೋಚಿಸಬೇಕಿದೆ. ಮರೆಯಬಾರದು. ತಮ್ಮ ನಿರ್ದಾಕ್ಷಿಣ್ಯದ ಗುರಿಯು ನೇರವಾಗಿರಲಿ. ಆಡಂಬರದ ಆಕರ್ಷಣೆಗಳಿಗೆ ಬಲಿಯಾಗಿ 'ಓಟಿ'ನ ಗೌರವಕ್ಕೆ ಕಳಂಕವನ್ನುಂಟು ಮಾಡಬೇಡಿರಿ.

ಸ್ಥಾನಕ್ಕೆ ಯೋಗ್ಯರಾರು ಎಂಬುದನ್ನು ಅರಿತು ತಮ್ಮ ಘನವಾದ 'ಓಟಿ'ನ ಬೆಲೆಯನ್ನುಳಿಸಿಕೊಂಡು, 'ಓಟು' ಮಾಡುವ ನಿಮ್ಮಿಂದ ಕಾರ್ಯಗಳನ್ನು ಆಗಮಾಡಿಕೊಳ್ಳುವುದು ಈ ಮೂಲಕ ತಮ್ಮ ಮೇಲೆ ಬಿದ್ದ ಭಾರವಾಗಿದೆಯೆಂದು ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಹೃದಯದಿಂದ ತಿಳಿಸುತ್ತೇನೆ.

ಎಂ. ಬಿ. ಲಿಂಗೇಗೌಡ, ಮಂಡ್ಯ

ಸಾಮುದ್ರಿಕಾ ಶಾಸ್ತ್ರ ಪಂಡಿತರು

ಮಿ|| ರಾ|| ಸ್ವಾಮಿಯವರು ಬಂದಿರುವರು ಪತ್ರ ಸಾಮುದ್ರಿಕವನ್ನು ಬಹು ಕರಾರು ವಾಕ್ಕ ಹೇಳುವರು. ನಿಮಗೆ ಸಂಭವಿಸುವ ಹೊಸಾದ ಆಪಾಯಗಳನ್ನೂ ಕೆಲಂ ಪರಿಗಳನ್ನೂ ತಿಳಿಸುವರು.

ಸುಸಮಯವನ್ನು ಕಳೆದುಕೊಳ್ಳಬೇಡಿ

ಜೀವಮಾನದ ಭವಿಷ್ಯದ ಸಾರಾಂಶವನ್ನು ಹೇಳುವುದಕ್ಕೆ .... 3 ರೂ.

ಜೀವಮಾನದ ಸಂಪೂರ್ಣ ಭವಿಷ್ಯವನ್ನು ಹೇಳುವುದಕ್ಕೆ .... 6 ರೂ.

ವಿಳಾಸ:—ರಂಗಸ್ವಾಮಿ,
ಮೆಜೆಸ್ಟಿಕ್ ಥಿಯೇಟರ್ ಹತ್ತಿರ,
ಬೆಂಗಳೂರು ಸಿಟಿ.

ಮೈಸೂರಿನ ಮಾದರಿ

ಕನ್ನಂಬಾಡಿ ಕಟ್ಟೆಯನ್ನು ನೋಡಲು ಬಂದಿದ್ದ ಸರಕ್ಷೊಬ್ಬರು 'ಹಿತವಾದ' ಪತ್ರಿಕೆಯಲ್ಲಿ ಹೀಗೆ ಬರೆಯುತ್ತಾರೆ:—ಬ್ರಿಟಿಷ್ ಇಂಡಿಯಾದಲ್ಲಿ ಆಗಿದ್ದರೆ ಪಾಶ್ಚಾತ್ಯ ಇಂಜನಿಯರುಗಳನ್ನು ನೇಮಿಸಿಕೊಂಡು, ಅವರ ಸಂಬಳಗಳನ್ನು ವಿಪರೀತವಾಗಿ ಹೆಚ್ಚಿಸಲಾಗುತ್ತಿತ್ತು. ಆದರೆ ಮೈಸೂರಿನಲ್ಲಿ ಹಾಗಲ್ಲ ಸ್ವದೇಶ ಇಂಜಿನಿಯರುಗಳನ್ನೇ ಅಲ್ಲಿ ನೇಮಿಸಿಕೊಂಡಿರುವರು, ಅಣೆಕಟ್ಟುಗಳಲ್ಲೆಲ್ಲಾ ಇದೂ ಒಂದು ಪ್ರಾಮುಖ್ಯವಾದ ಅಣೆಕಟ್ಟು. ಇಂಜಿನಿಯರಿಂಗ್ ಬಾಬಿನಲ್ಲಿ ಮೈಸೂರಿನವರು ಇತರ ಎಲ್ಲಾ ಭಾಗಗಳವರಿಗಿಂತಲೂ, ಪರಿಣತರಾಗಿರುತ್ತಾರೆಂದು, ಧಾರಾಳವಾಗಿ ಹೇಳಬಹುದು. ಬ್ರಿಟಿಷ್ ಇಂಡಿಯದವರು ಇವರಿಂದ ಪಾಠವನ್ನು ಕಲಿಯಬೇಕು.

ಮೈಸೂರು ಸಂಸ್ಥಾನಕ್ಕೆ ಪಾರ್ಲಿಮೆಂಟರಿ ಬೋರ್ಡ

ಮೈಸೂರು ದೇಶದ ನ್ಯಾಯವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿಸಭೆಗಳಿಗೆ ಉಮೇದುವಾರರನ್ನು ನಿಲ್ಲಿಸಿ ಚುನಾವಣೆ ನಡೆಸುವ ವಿಚಾರವನ್ನು ಕೈಗೊಳ್ಳಲು ಒಂದು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಕೆಲವು ಜನ ಪ್ರಮುಖ ಕಾಂಗ್ರೆಸ್ ಕೆಲಸಗಾರರು ಸದಸ್ಯರಾಗಿರುವರು. ಮುಂದಿನ ಚುನಾವಣೆಗಳಿಗೆ ಈಗಿನಿಂದ ಸಿದ್ಧತೆಯನ್ನು ಮಾಡುತ್ತಿರುವರು.

ಸಿದ್ಧವಾಗಿದೆ!

ಪಂಡಿತ ಜವಹರಲಾಲರ ಆತ್ಮಕಥೆ.

ಕನ್ನಡ ಭಾಷಾಂತರ: ನವಜೀವನ ಕನ್ನಡ ಸಂಚಿಕೆಯಿಂದ

ಎರಡನೆಯ ಸಂಪುಟ ಸಿದ್ಧವಾಗಿದೆ.

ಡಿಸೆಂಬರ್ ತಿಂಗಳ ಕೊನೆಗೆ ಗ್ರಂಥವು ಪೂರೈಸಲಾಗುವುದು.

ಬೆಲೆಯು ಹಾರ್ದ ಪ್ರತ್ಯೇಕ.

ಆರ್ಟ್ಪೇಪರಿನ ಪ್ರತಿ ರೂ. ೧—೦—೦
ಪಾರ್ಚ್‌ಮೆಂಟಿನ ಪ್ರತಿ „ ೨—೦—೦
ಸಾಧಾರಣ ಪ್ರತಿ „ ೧—೦—೦

ಡಿಸೆಂಬರ್ ತಿಂಗಳೊಳಗಾಗಿ ಚಂದಾ ಕಳುಹಿಸುವವರಿಗೆ ಬೆಲೆಯಲ್ಲಿ ರಿಯಾಯತಿ ಮಾಡುತ್ತೇವೆ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್ ಕೊಡಲಾಗುವುದು.

ಪ್ರಕಾಶಕರು:—
ಸಿ. ಅಶ್ವತ್ಥನಾರಾಯಣರಾವ್, ಬಿ.ಎ.,
ಸಂಪಾದಕರು:—
"ನವಜೀವನ" ಮತ್ತು "ಮಕ್ಕಳ ಪುಸ್ತಕ"
ಬಸವನಗುಡಿ, ಬೆಂಗಳೂರು ಸಿಟಿ.

ಸಾಧ್ವಿ

೧೧—೧೨—೩೬ ನೇ ಸೋಮವಾರ

ಎಡ್ವರ್ಡರವರ ರಾಜ್ಯತ್ಯಾಗ.

ಎಡ್ವರ್ಡ್ ಪ್ರಭುಗಳು ರಾಜ್ಯತ್ಯಾಗ ಮಾಡಿದರು. ಅವರ ತಮ್ಮಂದಿರಾದ ಡ್ಯೂಕ್ ಆಫ್ ಯಾರ್ಕರು ಚಕ್ರವರ್ತಿಗಳಾಗುವರು. ಈ ಪ್ರಸಂಗವು ಬ್ರಿಟಿಷ್ ಇತಿಹಾಸದಲ್ಲಿ ಅದ್ವಿತೀಯವಾದುದು.

ಬ್ರಿಟಿಷ್ ಚಕ್ರಾಧಿಪತ್ಯವು ಇಂದಿನ ಪ್ರಪಂಚದಲ್ಲಿ ಅತ್ಯಂತ ದೊಡ್ಡದು. ಅದರಲ್ಲಿ "ಸೂರ್ಯನು ಮುಳುಗುವುದೇ ಇಲ್ಲ." ಬ್ರಿಟಿಷ್ ದೇಶವು ಸಿಂಗಪುರದಿಂದ ... ಸಮುದ್ರ, ಭೂಮಿ ಆಕಾಶಗಳನ್ನು ಆಳುತ್ತಿರುವುದೂ ಬ್ರಿಟಿಷರು ... ಈ ಚಕ್ರಾಧಿಪತ್ಯವೆಂದರೆ ... ಸಿಂಹಾಸನ ... ಇವುಗಳ ... ಕಳಚಿ ಬಂದರೂ ...

ಇಂತಹ ಅದ್ಭುತ ಸಾಮ್ರಾಜ್ಯದ ಅಧಿಪತಿಗಳಾಗಿದ್ದವರು ಭೂಲೋಕದಲ್ಲಿ ದೇವೇಂದ್ರನ ಸುಖಭೋಗಗಳನ್ನು ಅನುಭವಿಸಲು ಸಮರ್ಥರಾಗಿದ್ದರು. ಅವರ ಗೌರವ, ವೈಭವ, ಪ್ರತಾಪಗಳಿಗೆ ಮಿತಿಯೇ ಇಲ್ಲ. ನೂರಾರು ಜನ ಸಾಮಂತ ರಾಜರೂ, ಸಹಸ್ರಾರು ... ಕೋಟ್ಯಂತರ ಧನಸಂಗ್ರಹವೂ ... ಅವರ ಅಧೀನದಲ್ಲಿರುವುವು.

ಅವರೂ ಕಿರೀಟವನ್ನು ಧರಿಸುವ ತಲೆಗೆ ... ಇನ್ನಿಷ್ಟು ಇರುವುದೆ? ಒಂದು ಕಾಲದಲ್ಲಿ ... ಒಂದು ಕಾಲದಲ್ಲಿ ... ಸಾಮ್ರಾಜ್ಯದಾಹ ... ಮಹಾ ಮಹಾ ಚಕ್ರಾಧಿಪತಿಗಳೂ ಘೋರ ಯುದ್ಧಗಳಿಗೆ ಸಿದ್ಧರಾಗುತ್ತಿದ್ದರು. ತಮ್ಮ ರಾಜ್ಯವನ್ನು ... ಇನ್ನವರಿಗೆ ಗುರಿಯಾದುವು.

ಪ್ರಕೃತದಲ್ಲಿ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಇಂತಹ ಪರಿಸ್ಥಿತಿ ಒದಗಿದೆ. ಒಂದು ಕಡೆ ಸಾಮ್ರಾಜ್ಯದ ಗೌರವದ ಪ್ರಶ್ನೆ. ಶಾಸನದ ... ಇಂಗ್ಲೆಂಡಿನ ರಾಜ ... ಅಂತಸ್ತಿನ ಪ್ರಶ್ನೆ. ಇನ್ನೊಂದು ಕಡೆ ಚಕ್ರವರ್ತಿ ಸ್ಥಾನವನ್ನು ... ವೈಯಕ್ತಿಕ ಸ್ವಾತಂತ್ರ್ಯದ ಪ್ರಶ್ನೆ. ಅತನ ... ಸರಕಾರವು ಒಪ್ಪದಿದ್ದಾಗ್ಯೂ ... ಇವುಗಳ ... ಹನ್ನೊಂದು ತಿಂಗಳ ಅಂತರದಲ್ಲಿಯೇ ಬ್ರಿಟಿಷ್ ಸಿಂಹಾಸನಕ್ಕೆ ಇಬ್ಬರು ಚಕ್ರವರ್ತಿಗಳು ... ಪ್ರಸಂಗ ಒದಗಿದೆ. ... ದ ಪಂಚಮ ಜಾರ್ಜರು ಸ್ವರ್ಗಸ್ಥರಾದ ಹನ್ನೊಂದು ತಿಂಗಳೊಳಗೆ ... ಎಡ್ವರ್ಡ್ ಪ್ರಭುಗಳು ರಾಜ್ಯವನ್ನು ... ಕರಿಸಿ ಅದನ್ನು ತ್ಯಾಗಮಾಡುವ ಪ್ರಸಂಗವೂ ಒದಗುವುದೆಂದು ... ಈ ... ಕೀರ್ತಿಯ ... ದ ಸಂಪ್ರದಾಯ ... ಈ ತೀರ್ಮಾನವು ... ಕೋಲಾಹಲಕಾರಿಯಾಗಿದೆ.

ಈ ವಿಷಯದಲ್ಲಿ ನಾವು ಎರಡನ್ನು ಆಲೋಚಿಸಬೇಕೋ ... ಎಡ್ವರ್ಡರವರು ತಮ್ಮ ... ದ ... ಯನ್ನು ... ತ್ಯಾಗಮಾಡಲು ನಿರ್ಧರಿಸಿದರು. ಅವರಿಗೆ ಅನೇಕ ಕಡೆಗಳಿಂದ ... ಚಕ್ರವರ್ತಿಗಳಾಗಿ ... ತಂತಿಗಳು ಬರುತ್ತಿದ್ದವು. ... ಮಾಡಿ ತಮ್ಮ ಪದವಿಯನ್ನು ... ಪ್ರಾರ್ಥನೆಗಳು ಹೋಗುತ್ತಿದ್ದವು. ಆದರೆ ತಮ್ಮ ವ್ಯಕ್ತಿ ಸ್ವಾತಂತ್ರ್ಯಕ್ಕೆ ... ಅವರು ... ತೋರುತ್ತದೆ. ಸಾಮಾನ್ಯ ಪ್ರಜೆಗಳಿಗೂ ತಮ್ಮ ತಮ್ಮ ಗಂಡ ಹೆಂಡಿರನ್ನು ಆರಿಸಿಕೊಳ್ಳುವ ಹಕ್ಕು ಇರುವಾಗ ಚಕ್ರಾಧಿಪತ್ಯದ ಒಡೆಯರಾದ ತನಗೆ ಇಲ್ಲದಿರುವುದಕ್ಕಾಗಿ ಅವರು ಆ ಚಕ್ರಾಧಿಪತ್ಯವನ್ನೇ ... ರಾಜ್ಯವನ್ನು ಬಿಟ್ಟರು. ಇದು ದೊಡ್ಡ ತ್ಯಾಗ. ತಾವು ಪ್ರೀತಿಸಿದ ಒಬ್ಬ ಸ್ತ್ರೀಗಾಗಿ ... ಚಕ್ರಾಧಿಪತ್ಯವನ್ನೇ ... ಕಷ್ಟ ... ಗಳನ್ನು ... ಅವರ ವ್ಯಕ್ತಿ ಸ್ವಾತಂತ್ರ್ಯ ಭಾವನೆಯು ಶ್ಲಾಘನೀಯವಾದುದು.

ಇನ್ನೊಮ್ಮೆ ಅವರು ... ಬಡವನಂತೆ ಅವರು ಇರುವರು. ರಾಜ್ಯತ್ಯಾಗಮಾಡುವುದರಲ್ಲಿ ಅವರು ಸ್ವಲ್ಪವೂ ಹಿಂದೆ ಮುಂದು ನೋಡಲಿಲ್ಲ. ... ಆತಂಕಗಳನ್ನು ಒಡ್ಡಲಿಲ್ಲ. ತಮ್ಮ ತಮ್ಮನಿಗೆ ರಾಜ್ಯಾಭಿಷೇಕ ಮಾಡಲು ಮನಃಪೂರ್ವಕವಾಗಿ ಸಮ್ಮತಿಸಿದರು. ಅವರ ತ್ಯಾಗವು ಅಪೂರ್ವವಾದುದು. ... ಇದರಿಂದ ಅವರು ... ಟ್ಟಿರುವ ಅಗಾಧ ಪ್ರೇಮವು ವ್ಯಕ್ತವಾಗುವುದು. ಭೂಸಾಮ್ರಾಜ್ಯವನ್ನು ತೊರೆದು ಪ್ರೇಮ ಸಾಮ್ರಾಜ್ಯವನ್ನು ಅವರು ಗಳಿಸಿರುವರು.

ಅತ್ತಲಾಗಿ ಬ್ರಿಟಿಷ್ ರಾಜ್ಯ ಸೂತ್ರಧಾರಿಗಳ ಪರಿಸ್ಥಿತಿಯೂ ಶೋಚನೀಯವಾಗಿತ್ತು. ಎರಡು ಸಾರಿ ವಿವಾಹ ವಿಚ್ಛೇದನಮಾಡಿಕೊಂಡ ಒಬ್ಬ ಪರದೇಶದ ಸ್ತ್ರೀಯು ತಮಗೆ ರಾಣಿಯಾಗುವುದು ಅವರಿಗೆ ಸಮ್ಮತವಿಲ್ಲ. ಬ್ರಿಟಿಷ್ ಚರಿತ್ರೆಯಲ್ಲಿ ಇದು ಎಂದೂ ನಡೆದಿಲ್ಲ. ಅಲ್ಲದೆ ಅಮೇರಿಕಾದೇಶದ ಪತ್ರಿಕೆಗಳು ತಮ್ಮನ್ನು ... ತ್ತಿವೆ. ಇವುಗಳನ್ನೆಲ್ಲಾ ಸಹಿಸಿಕೊಂಡು ಬ್ರಿಟಿಷ್ ಸಿಂಹಾಸನದ ಗೌರವವನ್ನು ಕಾಪಾಡುವದೆಂತು? ಅಲ್ಲದೆ ತಮಗೆ ಯಾರು ಚಕ್ರವರ್ತಿನಿಯಾಗಬೇಕೆಂಬುದನ್ನು ಚುನಾಯಿಸುವ ಹಕ್ಕು ಅವರಿಗಿದೆ. ಆದ್ದರಿಂದ ಅವರು ಈ ವಿವಾಹಕ್ಕೆ ಅನುಮತಿ ಯನ್ನು ... ಎಡ್ವರ್ಡರು ರಾಜ್ಯತ್ಯಾಗಮಾಡಲು ಅವಕಾಶಕೊಟ್ಟರು. ಇನ್ನುಮೇಲೆ ಡ್ಯೂಕ್ ಆಫ್ ಯಾರ್ಕರು ಚಕ್ರವರ್ತಿಗಳಾಗಿ ರಾಜ್ಯಭಾರಮಾಡುವರು.

ನಮಗೆ ಯಾರು ಚಕ್ರವರ್ತಿಗಳಾದರೂ ಒಂದೇ. ಆದರೆ ತ್ರ್ಯಮವು ಧರ್ಮ ಬದ್ಧವಾಗಿರಬೇಕೆಂದೇ ನಮ್ಮ ಹಾರೈಕೆ.

ಹಾರವನ್ನು ಕಂಡುಹಿಡಿಯುವ ಬಗೆ ಹೇಗೆ.

ಸಾವಿರದ ಒಂಭೈನೂರ ಮೂವತ್ತೇಳನೆಯ ಇಸವಿಯ ಯಾವುದಾದರೂ ತಿಂಗಳ ಒಂದು ತಾರೀಖಿಗೆ ವಾರವು ಬೇಕಾದರೆ, ಕ್ಯಾಲೆಂಡರ್ ಅಥವಾ ಪಂಚಾಂಗದ ಸಹಾಯವಿಲ್ಲದೆ ಬಾಯಿಯಲ್ಲಿಯೇ ಗೊತ್ತು ಮಾಡಿಕೊಳ್ಳಬಹುದು. ಅದು ಹೇಗೆಂದರೆ:—

ಜನವರಿ 5 ಫೆಬ್ರುವರಿ 1 ಮಾರ್ಚಿ 1 ಏಪ್ರಿಲ್ 4 ಮೇ 6 ಜೂನ್ 2 ಜುಲೈ 4 ಆಗಸ್ಟ್ 0 ಸೆಪ್ಟಂಬರ್ 3 ಅಕ್ಟೋಬರ್ 5 ನವಂಬರ್ 1 ಡಿಸೆಂಬರ್ 3.

ತಿಂಗಳ ಮುಂದಿರುವ ಸಂಖ್ಯೆಯನ್ನು ನಮಗೆ ಬೇಕಾದ ತಿಂಗಳ ತಾರೀಖಿಗೆ ಸೇರಿಸಬೇಕು. ಅನಂತರ ಅದನ್ನು 7 ರಿಂದ ಭಾಗಿಸಬೇಕು. ಶೇಷವು 1 ಉಳಿದರೆ ಭಾನುವಾರವೆಂದೂ, 2 ಉಳಿದರೆ ಸೋಮವಾರವೆಂದೂ, 3 ಉಳಿದರೆ ಮಂಗಳವಾರವೆಂದೂ, 4 ಉಳಿದರೆ ಬುಧವಾರವೆಂದೂ, 5 ಉಳಿದರೆ ಗುರುವಾರವೆಂದೂ, 6 ಉಳಿದರೆ ಶುಕ್ರವಾರವೆಂದೂ, ಸೊನ್ನೆ ಉಳಿದರೆ ಶನಿವಾರವೆಂತಲೂ ತಿಳಿಯಬೇಕು.

ಉದಾ :—

ಜನವರಿ 25ನೇ ತಾರೀಖು ಯಾವ ವಾರ —

ತಾರೀಖು—25 ತಿಂಗಳ ಮುಂದಿನ ಸಂಖ್ಯೆ 5, 25+5=30. 7 ರಿಂದ ಭಾಗಿಸಿದರೆ ಶೇಷ 2 ಆದುದರಿಂದ ಅವತ್ತು ಸೋಮವಾರ.

ಕರ್ನಾಟಕ ಸಂಘ

ರುದ್ರಪಟ್ಟಣ.

(ಒಬ್ಬ ಬಾತ್ಮೀದಾರರಿಂದ)

ಮೇಲ್ಕಂಡ ಸಂಘದ ಆಶ್ರಯದಲ್ಲಿ ತಾ॥ 3-12-36 ನೇ ಗುರುವಾರ ಸಂಜೆ 7 ಗಂಟೆಗೆ ಸರಿಯಾಗಿ ಸಂಘದ ವಾಚನಾಲಯದಲ್ಲಿ ವೇ॥ ಬ್ರ॥ ಮುತ್ತಿಗೋಡು ನರಸಿಂಹ ಶಾಸ್ತ್ರಿಗಳು ಕೀರ್ತಿಶೇಷರಾದ ಪ್ರಯುಕ್ತ ಸಂಘಕ್ಕೆ ಉಂಟಾಗಿರುವ ಅಗಾಧವನ್ನು ವ್ಯಕ್ತಗೊಳಿಸುವುದಕ್ಕೋಸ್ಕರ ಶೋಕಸಭೆಯು ನಡೆಯಿತು. ಕೀರ್ತಿಶೇಷ ಶ್ರೀಯುತ ಶಾಸ್ತ್ರಿಗಳವರ ಗುಣಕೀರ್ತನಾನಂತರ ಸಂಘದ ಕಾರ್ಯದರ್ಶಿಗಳಿಂದ ಕೆಳಗಿನ ಅನುತಾಪ ಸೂಚಕದ ಠರಾವು ಮಾಡಲ್ಪಟ್ಟಿತು.

"ಮೇಲ್ಕಂಡ ಸಂಘದ ಪ್ರಧಾನಪೋಷಕರೂ, ಆಶ್ರಯದಾತರೂ ಈ ಪ್ರಾಂತ್ಯದಲ್ಲಿ ಸುಪ್ರಸಿದ್ಧರೂ ಸಂಸ್ಕೃತ ಸಾಹಿತ್ಯದಲ್ಲಿ ಉದ್ದಾಮ ಪಂಡಿತರೂ ಅದ್ಭುತ ಕವಿತ್ವ ರಚನಾಶಕ್ತಿಯುಳ್ಳವರೂ ಅನೇಕ ಅಥಿತಿಗಳಿಗೆ ಆಶ್ರಯದಾತರೂ ಇಪ್ಪತ್ತು ವರ್ಷಗಳು ನಿರಂತರ ಪ್ರಜಾಸೇವಕರೂ ಆದ ವೇ॥ ಬ್ರ॥ ಮುತ್ತಿಗೋಡು ನರಸಿಂಹಶಾಸ್ತ್ರಿಗಳು ಅವರ ಅರವತ್ತಂಟನೇ ವಯಸ್ಸಿನಲ್ಲಿ ತಾ॥ 1-12-36 ನೇ ಮಂಗಳವಾರ ರಾತ್ರಿ 2 ಗಂಟೆಯಲ್ಲಿ ನಮ್ಮ ದೌರ್ಭಾಗ್ಯದಿಂದ ಸ್ವರ್ಗಸ್ಥರಾದುದನ್ನು ಕೇಳಿ ಸಭೆಯು ಅತ್ಯಂತ ವಿಷಾದಿಸಿ ತನ್ನ ಹೃತ್ಪೂರ್ವಕ ಅನುತಾಪವನ್ನು ಸೂಚಿಸುತ್ತದೆ.

ಆಯುರ್ವೇದ ಸಮ್ಮೇಳನಗಳು.

ಹಲವು ಬಗೆಯ ಉತ್ಸವಾದಿಗಳು ಹಂಪೆಯಲ್ಲಿ ವಿಜಯನಗರ ಸ್ಮಾರಕೋತ್ಸವ ಸಂದರ್ಭದಲ್ಲಿ ಇದೇ ಮಾಹೆ 25 ನೇ ತಾ॥ ನಿಂದ ನಡೆಯುತ್ತವೆ. ಪ್ರಥಮತಃ ಅಖಿಲ ಕರ್ನಾಟಕ ಸಮ್ಮೇಳನದ ವಿಶೇಷಾಧಿವೇಶನವು ಡಾ॥ ಎಚ್. ನರಸಿಂಹಶಾಸ್ತ್ರಿ ಇವರ ಅಧ್ಯಕ್ಷತೆಯಲ್ಲಿ ಸೇರುವದು. ಅನಂತರ ಅಖಿಲ ಭಾರತ ಆನುವಂಶಿಕ ವೈದ್ಯರ ನಾಲ್ಕನೇ ಸಮ್ಮೇಳನವು ಕಲ್ಕತ್ತೆಯ ಕುಮಾರ ಮುಖರ್ಜಿ ಬಿ. ಎ. ಇವರಿಂದ ನೆರವೇರಿಸಲ್ಪಡುವದು. ಕೊನೆಯದಾಗಿ ದಕ್ಷಿಣ ಭಾರತೀಯರ ತ್ರಿದೋಷ ವಿಚಾರ ಸಮ್ಮೇಳನವು ಕಲ್ಕತ್ತೆಯ ಕವಿರಾಜ ಧೀರೇಂದ್ರ ನಾಥರಾಯ್ ಎಂ. ಎಸ್. ಸಿ. ಇವರ ಅಧ್ಯಕ್ಷತೆಯಲ್ಲಿ ನೆರವೇರುವದು. ಆಯುರ್ವೇದ ವಿಚಾರ ವಿಮರ್ಶೆಗಾಗಿ ವಿಜಯನಗರದಿಂದ ನಮ್ಮ ದೇಶಕ್ಕೆ ಬ್ರಿಟಿಷ್ ಮೆಡಿಕಲ್ ಅಸೋಸಿಯೇಷನ್ನಿನ ಕಾರ್ಯದರ್ಶಿಗಳು ದಯಮಾಡಿಸುವದರಿಂದ, ಆ ಕಾಲದಲ್ಲಿ ಆಯುರ್ವೇದೀಯ ಪುನರುಜ್ಜೀವನಾಭಿಮಾನಿಗಳೆಲ್ಲರೂ ಅತ್ಯವಶ್ಯಕವಾಗಿ ಬಂದು ಕಾರ್ಯ ಕಲಾಪಗಳನ್ನು ಯಶಸ್ವಿಗೊಳಿಸಬೇಕಾಗಿ ಸ್ವಾಗತಾಧ್ಯಕ್ಷರು ಪ್ರಾರ್ಥಿಸಿರುವರು.

ಎಡ್ವರ್ಡ್ ಚಕ್ರವರ್ತಿಯವರ ರಾಜ್ಯತ್ಯಾಗಕ್ಕೆ ಕಾರಣಗಳು

ಮಿಸೆಸ್ ಸಿಂಪ್ಸನ್ನಳ ಹಿಂದಿನ ವೃತ್ತಾಂತ.

ಮಿಸೆಸ್ ಸಿಂಪ್ಸನ್ನಳು, ವ್ಯಾಲಿಸ್ ವಾರ್ಫೀಲ್ಡ್ ಎಂಬ ನಾಮಧೇಯದಿಂದ ಇದ್ದರೆಂದೂ, ಇವರು ಸತ್ಕುಟುಂಬಸ್ಥರೆಂದೂ, ಹೇಳಲ್ಪಟ್ಟಿದೆ. ಇವರಿಗೆ 38 ವರ್ಷ ವಯಸ್ಸು, ಅಮೆರಿಕಾ ದೇಶದವರು. 1916 ನೇ ವರ್ಷದಲ್ಲಿ ಸ್ಪೆನ್ಸರ್ ಎಂಬ ನೌಕಾದಳದ ಅಧಿಕಾರಿಯೊಡನೆ ವಿವಾಹವು ಬೆಳೆಯಿತು. ಅವರೊಡನೆ ಆಕೆಯು, ಆರು ವರ್ಷಗಳ ಕಾಲ ಸಂತೋಷದಿಂದ ಕಾಲ ಕಳೆದರು. ಹೀಗೆ ಇರುವಾಗ ಒಂದು ಸಮಯದಲ್ಲಿ ಈ ದಂಪತಿಗಳಿಗೆ ಮನಸ್ತಾಪ ಹುಟ್ಟಿ ಆಕೆಯು ಸ್ಪೆನ್ಸರನ್ನು ಬಿಟ್ಟು ಸಿಂಪ್ಸನ್‌ರವರನ್ನು ವಿವಾಹ ಮಾಡಿಕೊಂಡಳು.

ಸಿಂಪ್ಸನ್ನರು ಅಮೇರಿಕಾದ ಒಬ್ಬ ವರ್ತಕರು. ಅಮೆರಿಕಾ ಪಡೆಗಳ ಲೆಫ್ಟಿನೆಂಟರೂ ಆಗಿದ್ದರು. ಇವರೊಡನೆ 2 ವರ್ಷಗಳ ಕಾಲ ದಾಂಪತ್ಯ ಸುಖಭೋಗಗಳು ನಡೆದವು. ಹೀಗಿರುವ ಸಂದರ್ಭದಲ್ಲಿ ಹಿಂದೆ ಯುವರಾಜರಾಗಿದ್ದ ಈಗಿನ ಚಕ್ರವರ್ತಿಗಳಿಗೆ ಒಂದು ಔತಣ ಸಂದರ್ಭದಲ್ಲಿ ಈ ದಂಪತಿಗಳ ಪರಿಚಯವಾಯಿತು. ನಾಗರೀಕ ವರ್ಷದಿಂದಲೂ ಸ್ಟೇಟ್ ಬೇಲ್ ಅರಮನೆಯಲ್ಲಿ ನಡೆದ ಪ್ರತಿಸಮಾರಂಭಕ್ಕೂ ಸಿಂಪ್ಸನ್ ದಂಪತಿಗಳಿಗೆ ಮೊದಲಿಂದ ವಿಶೇಷ ನಿಮಂತ್ರಣವಾಗುತ್ತಿತ್ತು. ಕಳೆದ 4-5 ತಿಂಗಳುಗಳಿಂದ ಎಡ್ವರ್ಡ್ ಪ್ರಭುಗಳು ಮಿಸೆಸ್ ಸಿಂಪ್ಸನ್ನಳನ್ನು ವಿವಾಹವಾಗುವರೆಂದೂ, ಅದಕ್ಕೆ ಅಡ್ಡಲಾಗಿ ಅನೇಕಾನೇಕ ಪ್ರತಿಬಂಧಕಗಳು ಪ್ರಾಪ್ತಿಯಾಗಿರುವುವೆಂದೂ ಪತ್ರಿಕೆಗಳು ಪ್ರಕಟಿಸಲಾರಂಭಿಸಿದವು.

ಅಮೇರಿಕಾದ ಅನೇಕ ವೃತ್ತಪತ್ರಿಕೆಗಳು ಹಾಸ್ಯಾಸ್ಪದವಾಗಿ ಟೀಕಿಸಿದವು. ಸಿಂಪ್ಸನ್ನಳು, ಚಕ್ರವರ್ತಿಯವರೊಡನೆ, ಮನವರಿಕೆಯುವಂತೆ ಕುಣಿಯುತ್ತಾಳೆಂತಲೂ, ಹಬ್ಬ ಹರಿ ದಿನಗಳಲ್ಲಿ ಬೇಕುಬೇಕಾದ ಕಡೆಗೆ ಹೋಗಿಬರುತ್ತಲೂ, ಸಾರ್ವಭೌಮರು, ಸಂತೋಷಪಟ್ಟು ಆಕೆಗೆ ತರತರದ ಬಹುಮಾನಗಳನ್ನು ಧರಿಸ ಕೊಡುತ್ತಿದ್ದಾರೆಂದೂ, ಮೊದಲಾದ ವಿಷಯಗಳು ಪ್ರಕಟವಾಗುತ್ತಿದ್ದುವು.

ಚಕ್ರವರ್ತಿಯವರು, ಆಡ್ರಿಯಾಟಿಕ್ ಸಮುದ್ರ ವಿಹಾರಕ್ಕಾಗಿ ಹೋಗಿದ್ದ ಕಾಲದಲ್ಲಿ, ಮಿಸೆಸ್ ಸಿಂಪ್ಸನ್ನಳು ಅವರನ್ನು ಹಿಂಬಾಲಿಸಿದ್ದಳೆಂದೂ ಚಕ್ರವರ್ತಿಗಳು, ಸಿಂಪ್ಸನ್ನಳ ಚರಣಗಳ ಬಳಿ ಪ್ರೇಮ ಯಾಚನೆ ಮಾಡಿರುವ ದೃಶ್ಯವು (ಚಿತ್ರ) ಅಮೆರಿಕ ಪತ್ರಿಕೆಯಲ್ಲಿ ತೋರಿಸಲ್ಪಟ್ಟಿದೆ. ಮಿಸೆಸ್ ಸಿಂಪ್ಸನ್‌ಳು ತನ್ನ ಗಂಡನಿಗೆ ವಿರುದ್ಧವಾಗಿ ಇಪ್ಸ್‌ವಿಚ್ ಕೋರ್ಟಿನಲ್ಲಿ ಡೈವೋರ್ಸ್ ದಾವೆ ಮಾಡಿದಳು. ಇಪ್ಸವಿಚ್ ಗೆ ಸಮೀಪದಲ್ಲಿರುವ ಫೆಲಿಕ್ಸ್‌ಟೌ ಗ್ರಾಮದ ಬಳಿ ವಿಹಾರವಾಗಿದ್ದಳು. ಚಕ್ರವರ್ತಿಗಳು ಆಕೆಗೆ ಅನುಕೂಲವಾಗುವಂತೆ, ತರತರದ ಪಾತ್ರೆಗಳನ್ನೂ ಬಟ್ಟೆ ಬರೆಗಳನ್ನೂ, ಅವಳ ಜೊತೆಗೆ ಅರಮನೆಯ ಒಬ್ಬ ದಾಸಿಯನ್ನೂ ಸಹ ಕೊಟ್ಟಿದ್ದರು. ಒಂದು ದಿನ ಸಾಮ್ರಾಟರು ಇದ್ದಕ್ಕಿದ್ದ ಹಾಗೆ, ತಮ್ಮ ಅಂಗರಕ್ಷಕರಿಗೂ ಸಹ ತಿಳಿಸದೆ ಈ ಸಿಂಪ್ಸನ್ನಳ ವಿಹಾರಮಂದಿರಕ್ಕೆ ಹೋಗಿ ಇರುತ್ತಿದ್ದರೆಂದೂ ಗೊತ್ತಾಗಿದೆ. ಈಕೆಯು ತನ್ನ ಹಿಂದಿನ ಪತಿಗಳ ಮೇಲೆ ವ್ಯಭಿಚಾರದ ಆರೋಪಣೆಮಾಡಿದ್ದಳು. ಮತ್ತು ತನ್ನ ಪತಿಗಳು ಬೇರೆ ಹೆಂಗಸರನ್ನು ಸಹ ಮಾಡಿಕೊಂಡಿದ್ದಾರೆಂದು ತಿಳಿಸಿರುವಳು.

ನ್ಯಾಯಮೂರ್ತಿಗಳು ಈಕೆಯ ಅಹವಾಲನ್ನು ಕೇವಲ 19 ನಿಮಿಷಗಳಲ್ಲಿ ವಿಚಾರಣೆ ನಡೆಸಿ ತೀರ್ಪನ್ನು ಕೊಟ್ಟಿರುವರು. 6 ತಿಂಗಳ ವರೆಗೆ ಈಕೆಯು ಆಕ್ಷೇಪಣೆಯಿಲ್ಲದಂತೆ ಜೀವಿಸಬೇಕೆಂದೂ, ತಾ॥ 27—4—1937 ರಿಂದ ಮುಂದೆ ಹೊಸ ಮದುವೆ ಮಾಡಿಕೊಳ್ಳಬಹುದೆಂದೂ ಹಕ್ಕನ್ನು ನೀಡಿರುತ್ತಾರೆ.

ಹೀಗೆ ತೀರ್ಮಾನವಿತ್ತ ಸ್ವಲ್ಪದಲ್ಲೇ ವ್ಯಾಲಿಸ್‌ರವರು ರಾಯಭಾರಿಗಳೊಡನೆ ಬಕಿಂಗ್‌ಹ್ಯಾಂ ಅರಮನೆಗೆ ಹೋಗಿದ್ದರೆಂದೂ ಚಕ್ರವರ್ತಿಗಳು ಇವರ ಆಗಮನವನ್ನೇ ನಿರೀಕ್ಷಿಸುತ್ತಿದ್ದು ಒಂದು ದೊಡ್ಡ ಔತಣವನ್ನು ಕೊಟ್ಟು ಸತ್ಕರಿಸಿದರೆಂದೂ ತಿಳಿದುಬಂದಿದೆ.

ಕ್ಯಾಂಟರ್ಬರಿ ಮತ್ತು ಯಾರ್ಕ್ ಬಿಷಪ್‌ಗಳ ಮುಖ್ಯ ಪಾದ್ರಿಗಳು. ಸಿಂಪ್ಸನ್ನಳಿಗೆ ಬಹಿಷ್ಕಾರ ಹಾಕಿರುವರಂತೆ, ಆಕೆಯನ್ನು ಪ್ರೀತಿಸುವವರಿಗೆ ಪಾದ್ರಿಗಳು ವಿವಾಹಮಾಡಲು ಒಪ್ಪುವುದಿಲ್ಲ.

ಇವೇ ಈ ಮಹಾತ್ಯಾಗದ ಸಂಕ್ಷಿಪ್ತ ಚರಿತ್ರೆ.

ಬೆಂಗಳೂರು ಪೌರಸಭಾ ಚುನಾವಣೆ.

ಬೆಂಗಳೂರು ಪೌರಸಭೆಗೆ ಈ ಕೆಳಗೆ ಕಂಡ ಮಹನೀಯರುಗಳು ಸದಸ್ಯರಾಗಿ ಚುನಾಯಿಸಲ್ಪಟ್ಟಿರುವರು:—

ಮ॥ ಗಳಾದ ಜಿ. ಆರ್. ವೆಂಕಟಸ್ವಾಮಿ, ಎನ್. ಬಾಲಕೃಷ್ಣಯ್ಯ, ಡಬ್ಲ್ಯು. ಹೆಚ್. ಹನುಮಂತಪ್ಪ, ಬೇಲೂರು ಶ್ರೀನಿವಾಸಯ್ಯಂಗಾರ್ಯರು, ಕೆ. ಟಿ. ಭಾಷ್ಯಂ, ಡಿ. ರಾಮೇಶ್ವರಸಾ, ರಾಮಲಾಲ್ ತಿವಾರಿ, ಎಸ್. ಎನ್. ಎಂ. ರಾಜಣ್ಣ, ಕೆ. ಎಂ. ನಾಗಣ್ಣ, ಪಿ. ಎಸ್. ರಂಕರಪ್ಪ ಶೆಟ್ಟಿ, ಬಿ. ಕೆ. ಪುರುಷೋತ್ತಮ ನಾಯ್ಡು, ಡಿ. ವೆಂಕಟರಾಮಯ್ಯ, ಬಿ. ಎಲ್. ಭೈರಣ್ಣ, ಎಂ. ಮುನಿಸ್ವಾಮಿ, ಸಿ. ಎನ್. ನರಸಿಂಗರಾವ್, ಕೆ. ರಾಮಾನುಜಯ್ಯಂಗಾರ್, ಕೆ. ಸುಬ್ಬಯ್ಯ, ಸಿ. ಎಂ ನರಸಾಚಾರ್, ಸಿ. ಸುಬ್ಬರಾಮಶೆಟ್ಟಿ, ಪಿ. ಎಂ. ರಾಮರಾವ್ ಎಂ. ಕೃಷ್ಣಸ್ವಾಮಿ ಪಿಳ್ಳೆ, ಎಸ್. ಕೆ. ವೆಂಕಟರಂಗಯ್ಯಂಗಾರ್, ಎ. ಆರ್. ನರಸಿಂಹಯ್ಯಂಗಾರ್.

ಮೈಸೂರು ಓಟರು ಮಹಾ ಜನರಲ್ಲಿ ವಿಜ್ಞಾಪನೆ.

ಮಹನೀಯರೆ,

ತಾ॥ 18—12—36 ರಲ್ಲಿ ನಡೆಯಲಿರುವ ಮ್ಯುನಿಸಿಪಲ್ ಚುನಾವಣೆಯಲ್ಲಿ ಚಿಕ್ಕಪೇಟೆ ವಾರ್ಡಿನ ದೃಷ್ಟಿಯಿಂದ ನಾವು ನಿಮ್ಮನ್ನು ನೋಡಬೇಕಾದ [illegible] ಯಾರು ಧಿಟವಾಗಿ ಕಷ್ಟದಲ್ಲೂ ಅಂತಹವರಿಗೆ ನಿಮ್ಮ ಅಮೂಲ್ಯವಾದ ಓಟನ್ನು ಕೊಡಬೇಕಾಗಿದೆ. ನಾವು ನೋಡಬೇಕಾದುದು ಕೌನ್ಸಿಲರುಗಳಿಂದ ನಮಗೆ ಒದಗಬಹುದಾದ ಸೇವೆ ಮತ್ತು ಎಲೆಕ್ಷನ್ ಸಮಯದಲ್ಲಿ ಅವರಿಗಿರುವ ಹುರುಪು ಮುಂದೆಯೂ ಇವರಲ್ಲಿ ಉಳಿಯುವುದೆ ಎಂಬುದು ಮಾತ್ರ. ಪ್ರೀತಿಯಿಂದ ಪಕ್ಷಪಾತವಿಲ್ಲದೆ, ಜಾತಿ, ಮತ ದ್ವೇಷವನ್ನು ಬಿಟ್ಟು ಪ್ರಜಾಸೇವೆ ಮಾಡತಕ್ಕವರು ನಮಗೀಗ ಬೇಕಾಗಿದೆ. ಅವರಲ್ಲಿ ಯೌವನದ ಉತ್ಸಾಹವಿರಬೇಕು. ಇದರಲ್ಲಿ ನಾನು ಪ್ರಜಾಸೇವೆಮಾಡಿ ನನ್ನ [illegible] ನಡೆಯಬೇಕೆಂಬ ಮಹತ್ವಾಕಾಂಕ್ಷೆಯಿರಬೇಕು. ಇಂತಹವರಿಗೆ ಮಾತ್ರವೇ ನಮ್ಮ ಪ್ರತಿನಿಧಿತ್ವ ಕಟ್ಟಬೇಕು. ಈಗ ಓಟಿನ ಬೇಟೆಯಲ್ಲಿ ಗುಡುಗಾಡಿ, ನಂತರ ಅಜ್ಞಾತವಾಗುವವರು ನಮ್ಮ ಪ್ರತಿನಿಧಿಗಳಾಗುವುದು ಬೇಡ. ಆದುದರಿಂದ ಮಹಾಜನರ ಓಟಿನ ಹಕ್ಕಿನ ಮಹತ್ವವನ್ನು ಜನರಿಗಾಗಿ ದುಡಿಯುವ ಪ್ರತಿನಿಧಿಗಳನ್ನು ಆರಿಸುವುದರಲ್ಲಿ ಸಾರ್ಥಕಗೊಳಿಸಬೇಕಾಗಿ ವಿನಂತಿ.

ಪ್ರಜಾಸೇವಕ.

ದಿವಂಗತ ಆರ್. ನರಸಿಂಹಾಚಾರ್ಯರು

ಪ್ರಾಕ್ತನ ಸಂಶೋಧನ ವಿಚಕ್ಷಣ, ಮುಂಬಯಿನ ವಿಶ್ರಾಂತ [illegible] ಶ್ರೀಮಾನ್ ಆರ್. ನರಸಿಂಹಾಚಾರ್ಯರವರ ಮರಣದಿಂದ ಕರ್ನಾಟಕ ದೇಶಕ್ಕೆ ಅಪಾರವಾದ ನಷ್ಟವುಂಟಾಗಿದೆ. ಅವರು ಅದ್ವಿತೀಯರಾದ ಭಾಷಾಕೋವಿದರು. ಅಪ್ರತಿಮರಾದ ಸಂಶೋಧಕರು. ಅನಾದೃತರಾದ [illegible]. ಅವರ ಶೋಧನೆಗಳ ಖ್ಯಾತಿಯು ಪಾಶ್ಚಾತ್ಯ ದೇಶಗಳಿಗೂ ಹರಡಿತ್ತು. ಬಹಳ ಸಂಪ್ರದಾಯಶೀಲರಾಗಿದ್ದರು. ವೈದಿಕವಿದ್ಯಾ ವ್ಯಾಸಂಗಕ್ಕೆ ವಿಶೇಷ ಪ್ರೋತ್ಸಾಹ ಕೊಡುತ್ತಿದ್ದರು ಮತ್ತು ಅನೇಕ ಬಡ ವಿದ್ಯಾರ್ಥಿಗಳಿಗೂ ಬಹಳರಿಗೂ ಉಪಕಾರದ ಪ್ರಯತ್ನ ಮಾಡುತ್ತಿದ್ದರು. [illegible] ಕರ್ನಾಟಕ ಕವಿಚರಿತೆಯು ಅತ್ಯುಪಯುಕ್ತವಾದ ಗ್ರಂಥವಾಗಿದೆ. ಇವರು ಅನೇಕ ಗ್ರಂಥಗಳನ್ನು ರಚಿಸಿರುವರು.

ಅವರ ಆತ್ಮಕ್ಕೆ ಭಗವಂತನು ಶಾಂತಿ ಕರುಣಿಸಲಿ!

ರಾಜಧಾನಿಯ ಪೌರಸಭಾ ಚುನಾವಣೆ

ಇದೇ ತಿಂಗಳು ತಾ॥ 18-12-36ನೇ ದಿನ ನಡೆಯುವ ಪೌರಸಭಾ ಸದಸ್ಯರ ಚುನಾವಣೆಗೆ, ಈ ಕೆಳಗೆ ಕಂಡ ಮಹನೀಯರುಗಳು ಉಮೇದುವಾರರಾಗಿ ನಿಂತಿರುವರು.

ಚಿಕ್ಕ ಮೊಹಲ್ಲಾ—ಮ॥ ಗಳಾದ ಎಂ. ಕೆ. ಕೃಷ್ಣರಾವ್, ಜಿ. ವೆಂಕಟಶೆಟ್ಟಿ.

ಚಾಮರಾಜ ಮೊಹಲ್ಲಾ—ಮ॥ ಗಳಾದ ಎ. ಕೃಷ್ಣರಾವ್, ಸಿ. ಲಿಂಗಪ್ಪಯ್ಯ, ಎ. ವೆಂಕಟೇಶಯ್ಯ, ಎಸ್. ಕೃಷ್ಣಸ್ವಾಮಿ ರಾವ್, ಜಿ. ರಾಮಾನುಜಯ್ಯಂಗಾರ್, ಎಸ್. ರಂಗರಾಮಯ್ಯ.

ಕೃಷ್ಣರಾಜ ಮೊಹಲ್ಲಾ—ಮ॥ ಗಳಾದ ಸಿ. ನರಸಿಂಹಯ್ಯ, ಪಿ. ಸೀತಾರಾಮಯ್ಯ, ಜಿ. ಆರ್. ಜೋಸ್ಯರ್, ಟಿ. ಎಸ್. ರಾಜಗೋಪಾಲಯ್ಯಂಗಾರ್, ರಾವ್‌ಸಾಹೇಬ್ ಎಂ. ರಾಮಸ್ವಾಮಿ.

ದೇವರಾಜ ಮೊಹಲ್ಲಾ—ಮ॥ ಗಳಾದ ಬಿ. ಪಿ. ಸಿದ್ದಲಿಂಗಯ್ಯ, ಎಂ. ಸಿ. ತಮ್ಮಯ್ಯ, ನಂಜುಂಡಪ್ಪ, ಟಿ. ತಮ್ಮಣ್ಣ, ಯು. ಎಸ್. ರಾಮಚಂದ್ರರಾವ್.

ಮಂಡಿ ಮೊಹಲ್ಲಾ—ಮ॥ ಗಳಾದ ಎಂ. ಕೆ. ಮಾಧವರಾವ್ ಪ್ರಧಾನ್, ಜಿ. ಅಹಮದ್ ಖಾನ್, ಎಂ. ರಂಗಯ್ಯ, ಮಹಮದ್ ಗೌಸ್ ಪೀರ್, ಎಸ್. ಸಿ. ಪಾಪಣ್ಣ, ಟಿ. ಮರಿಯಪ್ಪ, ಸಿ. ವರದರಾಜಶೆಟ್ಟಿ.

ಲಷ್ಕರ್ ಮೊಹಲ್ಲಾ—ಮ॥ ಗಳಾದ ಕೆ. ಧನಕೋಟಿಶೆಟ್ಟಿ, ವೈ. ಶಿವರಾಮಕೃಷ್ಣಯ್ಯ, ಎಸ್. ಸಿದ್ದಪ್ಪರಾವ್, ಮಹಮದ್ ಷರೀಫ್, ಮಹಮದ್ ವಲಿಯುಲ್ಲಾ, ಪಿ. ಗೋಪಾಲಕೃಷ್ಣಶೆಟ್ಟಿ, ಡಾ॥ ಎಚ್. ರಾವ್, ಎಂ. ಸಿ. ಲಕ್ಷ್ಮೀನರಸಯ್ಯ.

ನಜರಬಾದ್ ಮೊಹಲ್ಲಾ—ಮ॥ ಎಲ್. ಲಿಂಗಣ್ಣ. (ಇವರು ಪ್ರತಿಸ್ಪರ್ಧಿ ಇಲ್ಲದೆ ಚುನಾಯಿಸಲ್ಪಟ್ಟಿರುವರು.)

ಶಾರದಾವಿಲಾಸ ಹೈಸ್ಕೂಲು

ಮುಖ್ಯವಾದ ಸ್ಕೂಲಿನ ವಾರ್ಷಿಕೋತ್ಸವವು ಈ ತಿಂಗಳು ತಾ॥ 19 ಮತ್ತು ತಾ॥ 20 ರಲ್ಲಿ ನಡೆಯುವುದು. ಶ್ರೀ [illegible] ಮುಖ್ಯಸ್ಥರು ಅಧ್ಯಕ್ಷತೆಯನ್ನು ವಹಿಸುವರು. [illegible] ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಬೇಕಾಗಿ ಕೋರಲ್ಪಟ್ಟಿದೆ. [illegible] ಕಾರ್ಯದರ್ಶಿಗಳು ಕೃತಜ್ಞತೆಯಿಂದ ಸ್ವೀಕರಿಸುವರು.

ಬೃಂದಾವನ ದೀಪೋತ್ಸವ

ಕ್ರಿಸ್‌ಮಸ್ ರಜದ ಪ್ರಯುಕ್ತ ಈ ತಿಂಗಳು ತಾ॥ 19 ನೇ ಶನಿವಾರದಿಂದ ಜನವರಿ ತಾ॥ 9 ನೇ ಭಾನುವಾರದವರೆಗೆ ಕೃಷ್ಣರಾಜಸಾಗರದ ಬೃಂದಾವನ ತೋಟದಲ್ಲಿ ಪ್ರತಿದಿನವೂ ರಾತ್ರಿ 10 ಗಂಟೆವರೆಗೆ ವಿದ್ಯುದ್ದೀಪ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ವಿಜಯನಗರದ ವೈಭವ.

(ಸ್ಮಾರಕೋತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀಯುತ ವೀರಭದ್ರಪ್ಪ ಹಾಲಭಾವಿಯವರು ಕನ್ನಡಿಗರಲ್ಲಿ ಅರಿಕೆಮಾಡಿಕೊಂಡಿರುವ ವಿಷಯದ ಸಾರಾಂಶ.)

ಇಂದು ೬೦೦ ವರ್ಷಗಳ ಹಿಂದೆ ಕರ್ನಾಟಕದ ಇತಿಹಾಸದಲ್ಲಿಯೂ, ಭಾರತೀಯ ಇತಿಹಾಸ ಪ್ರಪಂಚದಲ್ಲಿಯೂ, ಅದ್ವಿತೀಯ ಅಪೂರ್ವವೂ ಚಿರಸ್ಮರಣೀಯವೂ ಆದ ಒಂದು ಮಹಾ ಘಟನೆ ಸಂಭವಿಸಿತು. ಗತವೈಭವವಾದ ಒಂದು ಜನಾಂಗದಲ್ಲಿ, ಹತಪ್ರಭವಾದ ಒಂದು ರಾಷ್ಟ್ರದಲ್ಲಿ ಸ್ವಾಭಿಮಾನದ, ಸ್ವಾತಂತ್ರ್ಯದ, ಪ್ರಚಂಡವಾದ ತೇಜೋಜ್ಯೋತಿ ಉದಿಸಿ ಕರ್ನಾಟಕವನ್ನು ದಕ್ಷಿಣಭಾರತವನ್ನು ಪ್ರಜ್ವಲಿಸಗೊಳಿಸಿ ಅವಿಚ್ಛಿನ್ನವಾದ ಉನ್ನತಿಗೆ ಸಾಧನ ಸಾಮಗ್ರಿಯಾಗಿ ಮಹಾವೀರ ಲೋಕವನ್ನು ಬೆರಗುಗೊಳಿಸಿತು. ಸಾವಿರಾರು ವರ್ಷದ ತುಂಗಭದ್ರೆಯ ತೀರದ ಹಂಪೆಯ ಶ್ರೀ ವಿರೂಪಾಕ್ಷಸ್ವಾಮಿಯ ಸನ್ನಿಧಾನದಲ್ಲಿ ಶ್ರೀ ವಿದ್ಯಾರಣ್ಯ ಯೋಗಿಗಳ ಪ್ರೇರಣೆಯಿಂದ ೧೩೩೬ರಲ್ಲಿ ಸ್ಥಾಪಿತವಾಗಿ ಎರಡೂವರೆ ಶತಮಾನ ನಡೆದ ವಿಜಯನಗರ ಸಾಮ್ರಾಜ್ಯವೇ ಈ ಸನ್ನಾಹದ ಭವ್ಯವಾದ ದಿವ್ಯವಾದ ತೇಜೋಮೂರ್ತಿಯು.

ವಿಜಯನಗರವು ಕನ್ನಡಿಗರ ಸಾಮ್ರಾಜ್ಯವಾಗಿದ್ದಿತು. ವಿಜಯನಗರವು ಅಖಿಲ ಭಾರತೀಯವೂ, ತನ್ನಿಂದ ಎಂದು ಅಭಿಮಾನದಿಂದ ಹೇಳಿಕೊಳ್ಳಬಹುದಾದ ಸಾಮ್ರಾಜ್ಯವಾಗಿದ್ದಿತು. ವಿಜಯನಗರವು ಕೇವಲ ಕನ್ನಡಿಗರ ಸಾಮ್ರಾಜ್ಯವಾಗಿದ್ದಿತು, ಎಂಬ ಒಂದೇ ಕಾರಣದಿಂದಲೇ ಆಗಲಿ, ಭಾರತೀಯರಿಗೆ ಬೇಕಾದ ಸಾಮ್ರಾಜ್ಯವಾಗಿದ್ದಿತು ಎಂಬ ಇನ್ನೊಂದು ಭಾವದಿಂದಲೇ ಆಗಲಿ ಅದರ ಘನತೆಯನ್ನು ನಾವೀಗ ಸಾರಿ, ಹೊಗಳಿ, ನೆನಪಿಕೆ ಮಾಡಿಕೊಳ್ಳಬೇಕು ಎಂದೆನ್ನುವುದಾಗ ಮಾತ್ರ ಕೇಳುವುದು ಉದ್ದೇಶವಲ್ಲ. ಪ್ರಪಂಚದಲ್ಲಿ ಬಹುಕಾಲ ಬದುಕಿದ ಸಾಮ್ರಾಜ್ಯಗಳಲ್ಲಿ ಒಂದಾಗಿ ಸುಮಾರು ಮುನ್ನೂರು ವರ್ಷಗಳನ್ನು ಮೀರಿ (೧೩೩೬-೧೬೪೯) ಬಾಳಿದ ಈ ಸಾಮ್ರಾಜ್ಯದ ಸುದೀರ್ಘವಾದ ಜೀವನದಲ್ಲಿ ಅದರ ಮಾನವನ ಜನಾಂಗಕ್ಕೆ ಮಾನವಜನಾಂಗ ಆದರಣೀಯವೂ ಆದ ಹಲವು ಮಹತ್ವದ ಸನ್ನಿವೇಶಗಳುಂಟು. ವಿಜಯನಗರ ಸಾಮ್ರಾಜ್ಯದ ಲೋಕೋತ್ತರವಾದ ಆ ವೈಶಿಷ್ಟ್ಯಗಳನ್ನು ಸಂಕ್ಷೇಪವಾಗಿ ಇಲ್ಲಿ ಹೀಗೆ ಕಾಣಿಸಬಹುದು:—

(೧) ವಿಜಯನಗರದ ಸಾಮ್ರಾಜ್ಯವು ಮಿಕ್ಕ ಸಾಮ್ರಾಜ್ಯಗಳಂತೆ ವೈಯಕ್ತಿಕ ಸ್ವಾರ್ಥ ಇಚ್ಛೆಯ ಮಹತ್ವಾಕಾಂಕ್ಷೆಯ ಫಲವಾಗಲಿಲ್ಲ. ಸ್ವಸಂಸ್ಕೃತಿಯನ್ನು ಸ್ವಧರ್ಮವನ್ನು ಸ್ವರಾಷ್ಟ್ರವನ್ನು ಉದ್ಧರಿಸಿಕೊಳ್ಳುವ ಕೇವಲ ಉದಾತ್ತತತ್ವವು ಅದಕ್ಕೆ ಮೂಲಾಧಾರವಾಗಿ ಪ್ರೇರಕಶಕ್ತಿಯಾಗಿದ್ದಿತು. ವಿಜಯನಗರವು ಸ್ವಾಭಿಮಾನದ ದಿವ್ಯ ಜ್ಯೋತಿಯನ್ನು ಲೋಕಕ್ಕೆ ತೋರಿತು.

(೨) ವಿಜಯನಗರವು ಭಗ್ನವಾದ ಭಾರತೀಯ ಸಂಸ್ಕೃತಿಯನ್ನು, ವಿಶೇಷವಾದ ಕರ್ನಾಟಕ ಸಂಸ್ಕೃತಿಯ ಪರಂಪರೆಯನ್ನು ಅಭಂಗಗೊಳಿಸಿ ಅದನ್ನು ವಿಸ್ತರಿಸಿ ವಿಶ್ವತೋಮುಖವಾಗಿ ವೃದ್ಧಿಗೊಳಿಸಿತು. ಇಂತು ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದಕ್ಕಾಗಿ ಅಖಿಲ ಭಾರತವು ವಿಶ್ವಪ್ರಪಂಚವು ವಿಜಯನಗರಕ್ಕೆ ಋಣಿಯಾಗಿರಬೇಕಾಗಿದೆ. ಪರಂಪರಾಗತವಾಗಿ ಸಂವರ್ಧಿತವಾದ ಕರ್ನಾಟಕ ಸಂಸ್ಕೃತಿಯ ತತ್ವನಿಷ್ಠೆ, ಸದ್ಧರ್ಮಾಭಿಮಾನ, ಔದಾರ್ಯ, ಕಲಾಪ್ರೀತಿ, ತ್ಯಾಗಬುದ್ಧಿ, ಉದಾರವಾದ ಧರ್ಮಭಾವನೆ ಮುಂತಾದ ಉನ್ನತ ಸದ್ಗುಣಗಳು ವಿಜಯನಗರ ಸಾಮ್ರಾಜ್ಯದಲ್ಲಿ ಪರಿಪೂರ್ಣ ಪ್ರಮಾಣದಲ್ಲಿ ಬೆಳೆದುಬಂದಿವೆ. ಕರ್ನಾಟಕ ಸಂಸ್ಕೃತಿಯ ವೈಭವವು ವಿಜಯನಗರ ಸಾಮ್ರಾಜ್ಯದಲ್ಲಿ ಕಂಗೊಳಿಸಿದಷ್ಟು ಬೇರೆ ಎಲ್ಲಿಯೂ ಕಾಣಬರುವದಿಲ್ಲ. ಆಧುನಿಕ ಕರ್ನಾಟಕ ಸಂಸ್ಕೃತಿಯ ಸಾರಸರ್ವಸ್ವವು ರೂಪುಗೊಂಡುದು ವಿಜಯನಗರ ಸಾಮ್ರಾಜ್ಯಕಾಲದಲ್ಲಿ.

(೩) ವಿದ್ಯಾರಣ್ಯರನ್ನು ತುಳಿದ ಭಕ್ತನ ಸ್ವರೂಪದಲ್ಲಿಯೇ ಸಾಮ್ರಾಜ್ಯದ ಕಲ್ಪನೆಯನ್ನು ಕಾಣುತ್ತಿರುವ ಈ ಯುಗದಲ್ಲಿ ನಾವು ಆ ಯುಗದಲ್ಲಿ ಪ್ರವೇಶಿಸಿ ವಿಜಯನಗರ ಸಾಮ್ರಾಜ್ಯದ ಯಥಾರ್ಥವಾದ ಸ್ವರೂಪವನ್ನು ಅರಿತುಕೊಳ್ಳಬೇಕಾಗಿದೆ. ವಿಜಯನಗರ ಸಾಮ್ರಾಜ್ಯವು ಪ್ರಜೆಗಳಿಗಾಗಿ ಜನತೆಯ ಹಿತಕ್ಕಾಗಿ ಹುಟ್ಟಿತು, ಬೆಳೆಯಿತು, ಹೋರಾಡಿತು, ಪರಮಂತ ಬಾಳಿತು. ವಿಜಯನಗರದಲ್ಲಿ ಪ್ರತಿಯ ಜನರನ್ನು ಮೊದಲುಗೊಂಡು ಸಾಮಾನ್ಯರವರೆಗೆ ಪ್ರಜಾಜನರು ತಮ್ಮ ಜೀವನದ ಸುಖದುಃಖಗಳನ್ನು ತಾವಾಗಿ ವಿಚಾರಿಸಿ ಸಾಂಘಿಕವಾಗಿ ತಮ್ಮ ತಮ್ಮ ಹಕ್ಕು ಬಾಧ್ಯತೆಗಳನ್ನು ಕಾಯ್ದುಕೊಂಡು ಸ್ವತಂತ್ರವಾಗಿ ಜೀವಿಸುವ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದರು. ವಿದ್ಯಾರಣ್ಯರು ಮದ್ದನಾರಾಯಣ ನಾಗರಿಕ ಪ್ರಸನ್ನನಾರಾಯಣನಾಗಿ ನಲಿಯುತ್ತಿದ್ದನು.

(೪) ವಿಜಯನಗರದ ನಾಗರಿಕತೆ ಉಚ್ಚ ತರಗತಿಯದಾಗಿತ್ತು. ವಿಜಯನಗರದ ಸಂಸ್ಕೃತಿಯು ವಿಶ್ವಮಾನ್ಯವಾಗಿದ್ದಿತು. ವಿಜಯನಗರದ ನಾಗರಿಕತೆಯನ್ನು ಕಣ್ಣಾರೆ ಕಂಡು ಮನಸಾರೆ ಅನುಭವಿಸಿದ ಆ ಕಾಲದ ಪ್ರಪಂಚದ ಅನೇಕ ಜನಾಂಗಗಳು ಅದ್ಭುತವಾಗಿ ಅದನ್ನು ಕೊಂಡಾಡಿವೆ. ವಿಜಯನಗರ ಸಂಸ್ಕೃತಿಯ ಈ ವೈಭವವು ಅದರ ವಿಶಾಲವಾದ ಸಾಹಿತ್ಯಲೋಕದಲ್ಲಿಯೂ ಮನೋಹರವಾದ ಕಲಾಪ್ರಪಂಚದಲ್ಲಿಯೂ ಪ್ರತಿಬಿಂಬಿತವಾಗಿದೆ. ವಿಜಯನಗರ ಕಾಲದಲ್ಲಿ ಸಂಸ್ಕೃತ, ಕನ್ನಡ ಮೊದಲಾದ ಭಾಷೆಗಳ ಸಾಹಿತ್ಯವು ಅಸದೃಶವಾಗಿ ಅಭಿವೃದ್ಧಿಗೊಂಡಿತು. ವಿಜಯನಗರಕಾಲದಲ್ಲಿ ಕರ್ನಾಟಕದ ಚಿತ್ರ, ಶಿಲ್ಪ, ಸಂಗೀತಾದಿ ಕಲೆಗಳು ಸುಫಲಿತವಾಗಿ ವಿಕಸಿತವಾದವು.

(೫) ವಿಜಯನಗರ ಸಾಮ್ರಾಜ್ಯದಲ್ಲಿ ಹಿಂದೂ, ಮುಸಲ್ಮಾನ, ಕ್ರಿಸ್ತ ಮೊದಲಾದ ಭಿನ್ನ ಭಿನ್ನ ಧರ್ಮೀಯರೂ ಜೈನ, ರಾಮಾನುಜ, ವೀರಶೈವ ಮೊದಲಾದ ಅನೇಕ ಮತಗಳ ಅನುಯಾಯಿಗಳೂ ನೆಲೆಯಾಗಿದ್ದರು. ವಿಜಯನಗರದ ಅರಸರು ಇವರೆಲ್ಲರೊಡನೆ ಸಮತೆಯಿಂದಲೂ ಸಮಭಾವನೆಯಿಂದಲೂ ನಡೆಸಿದರು. ವಿಜಯನಗರದ ರಾಜ್ಯವ್ಯವಹಾರದಲ್ಲಿ ಅನ್ಯ ಮತಗಳ ಬಗೆಗೆ ದ್ವೇಷಾಸೂಯೆಗಳು ಬಲಿತು ಬೆಳೆಯಲಿಲ್ಲ. ಅನ್ಯ ಧರ್ಮಮತಗಳನ್ನು ಹಿಂಸಿಸುವ ಸ್ವಧರ್ಮಮತಗಳಲ್ಲಿ ನಿಷ್ಠೆಯನ್ನು ತಳೆಯುವನ್ನು ವಿಜಯನಗರದ ಧರ್ಮಭಾವನೆಯು ಉದಾತ್ತವಾಗಿದ್ದಿತು. ವಿಜಯನಗರದ ಹೃದಯವು ಬಹು ವಿಶಾಲವಾಗಿದ್ದಿತು. ವಿಜಯನಗರವು ಹಿಂದುಗಳದಾಗಿತ್ತು. ಮುಸಲ್ಮಾನರದು, ಜೈನರದು, ಕ್ರೈಸ್ತರದಾಗಿತ್ತು. ವಿಜಯನಗರವು ವೈಷ್ಣವರದಾಗಿತ್ತು, ಶೈವರದು? ಎಲ್ಲ ಮತಪಂಗಡದವರದಾಗಿತ್ತು.

ವ್ಯಕ್ತಿಯ ಜೀವನದಲ್ಲಿಯೂ ರಾಷ್ಟ್ರದ ಜೀವನದಲ್ಲಿಯೂ ಜನರ ವಿಮರ್ಶೆ ಎಂಬುದು ಅಗತ್ಯವಾಗಿ ಇರಬೇಕಾದುದು. ಮುಂದುವರಿಯಬೇಕಾದ ಜನಾಂಗಗಳಿಗೆ ಜೀವನವಿಮರ್ಶೆಯೊಂದೇ ಅಭ್ಯುದಯದ ಮೂಲಮಂತ್ರವಾಗಿದೆ. ರಭಸದಿಂದ ನಡೆದಿರುವ ಇಂದಿನ ಜಾಗತಿಕ ಸ್ಪರ್ಧೆಯಲ್ಲಿ ಕರ್ನಾಟಕವು ಮುಂದುವರಿಯಬೇಕೇಕು. ಬಲಿಷ್ಠವಾದ ಜನಾಂಗವು, ಸುಸಂಸ್ಕೃತವಾದ ನಾಗರಿಕತೆಯನ್ನು ಕಟ್ಟಿದ ಜನಾಂಗವು, ಒಮ್ಮೆ ಪ್ರಸಿದ್ಧಿಗೆ ಏರಿದ ಬೆಳಗಿದ ಕನ್ನಡ ಜನಾಂಗವು ಹೀಗೆ ಏಕೆ ಕೆಳಗಿಳಿದಿರುವದು? ಕನ್ನಡರಾಷ್ಟ್ರವು ಮತ್ತೆ ಏಳಲಾರದೇ? ಎದ್ದು ಬೆಳೆಯಲಾರದೇ? ಬೆಳೆದು ಬೆಳಗಲಾರದೆ? ಎಂಬುದು ಎಲ್ಲರೂ ಆಳವಾಗಿ ಆಲೋಚಿಸಬೇಕಾದ ವಿಷಯವು.

ಅದ್ವಿತೀಯವಾದ ಕರ್ನಾಟಕದ ಈ ಕೊನೆಯ ಸಾಮ್ರಾಜ್ಯವನ್ನು ಸ್ಥಾಪಿಸಿ ೬೦೦ ವರ್ಷಗಳು ಗತಿಸಿ ಹೋಗುತ್ತಿರುವ ಈ ಸಮಯದಲ್ಲಿ, ಹಳೆಯ ಕರ್ನಾಟಕವು ಹಿಂದಿನ ಹೊಸಯುಗದ ಹೊಸಕರ್ನಾಟಕವು ಚೇತನಗೊಂಡು ನಿರ್ಮಾಣವಾಗಲಿರುವ ಈ ಸಂಧಿಕಾಲದಲ್ಲಿ ವಿಶಾಲ ಕರ್ನಾಟಕವು ವಿಜಯನಗರ ಜಯಂತಿಯ ಸ್ಮಾರಕರೂಪವಾಗಿ ಒಮ್ಮೆ ತನ್ನ ಜೀವನ ವಿಮರ್ಶೆಯನ್ನು ಮಾಡಿಕೊಂಡು ಪುನಃ ದಣ ಅಭ್ಯುದಯ ಗಳಿಸುವದನ್ನು ಆಲೋಚಿಸಿ ಮಾಡುವದು ಸಮುಚಿತವಾಗಿದೆ.

ವಿಜಯನಗರದ—ನಾವು ಬಲಿಷ್ಠರಾಗಬೇಡವೇ? ಪರಾಕ್ರಮಿಗಳಾಗಬೇಡವೇ? ವಿಜಯನಗರದ ವಿಜಯಶಾಲಿತ್ವವನ್ನು ನಾವು ಪಡೆಯಬೇಕೆ? ವಿಜಯನಗರದ ಸ್ವಾಭಿಮಾನವು ನಮಗೆ ಮಾರ್ಗದರ್ಶಿಯಾಗಬೇಡವೇ? ವಿಜಯನಗರದಂತಹ ಸಮೃದ್ಧಿ, ಸೌಭಾಗ್ಯ, ಸೌಖ್ಯಗಳು ನಮಗೀಗ ಬೇಕಾಗಿಲ್ಲವೇ? ವಿಜಯನಗರದ ಧರ್ಮಬಾಂಧವ್ಯವನ್ನು ನಾವು ಅನುಸರಿಸುವುದಾದರೆ ನಮ್ಮಲ್ಲಿಯ ಹಿಂದೂ-ಮುಸಲ್ಮಾನರ ಕಲಹಗಳು, ಕೂಡಲೇ ಮಾಯವಾಗಲಾರವೇ? ವಿಜಯನಗರದ ಪರಮತ ಸೌಹಾರ್ದವನ್ನು ಅವಲಂಬಿಸಿದಾದರೆ ನಮ್ಮಲ್ಲಿಯ ಬ್ರಾಹ್ಮಣ-ಬ್ರಾಹ್ಮಣೇತರ ಮೊದಲಾದ ವೈಮನಸ್ಯಗಳು ಅಳಿದು ಹೋಗಲಾರವೇ? ವಿಜಯನಗರದ ಬುದ್ಧಿ ವೈಭವವನ್ನು ಪ್ರತ್ಯಕ್ಷಗೊಳಿಸುವುದನ್ನು ಸಾಧಿಸಿದೆವಾದರೆ ನಮ್ಮ ಸಾಹಿತ್ಯವು ಅಸದೃಶವಾದ ಅಭಿವೃದ್ಧಿಯನ್ನು ಹೊಂದಲಾರದೇ? ವಿಜಯನಗರದ ಕಲಾಪ್ರೌಢಿಮೆಯನ್ನು ಗಳಿಸಿದೆವಾದರೆ ನಮ್ಮ ಈಗಿನ ಕಲಾ ದಾರಿದ್ರ್ಯವು ದೂರವಾಗಲಾರದೆ?

ಬಾಂಧವರೇ, ವಿಜಯನಗರ ಸಾಮ್ರಾಜ್ಯವನ್ನು ನಾವು ನೆನೆವುದು ಇದಕ್ಕಾಗಿ. ವಿಜಯನಗರ ಸಾಮ್ರಾಜ್ಯವನ್ನು ನಾವು ನೆನೆವುದು ನವ ಕರ್ನಾಟಕದ ಸಂಘಟನೆಗಾಗಿ, ಸಂವರ್ಧನಕ್ಕಾಗಿ, ನೂತನವಾದ ಜೀವನದ ನಿರ್ಮಾಣಕ್ಕಾಗಿ. ಇಂದಿನ ಈ ಸಂಧಿಕಾಲದಲ್ಲಿ ಇಂದಿನ ಈ ಕರ್ನಾಟಕದ ನವಯುಗಾರಂಭದಲ್ಲಿ ಅನೇಕಶಾಪ ವಿಜಯನಗರದ ಜೀವನವನ್ನು ಆಳವಾಗಿ ನೆನೆದುಕೊಂಡು, ನಮ್ಮಾಯ ಈಗಿನ ಜೀವನದ ವಿಮರ್ಶೆಯನ್ನು ಮಾಡಿಕೊಂಡು ಪ್ರಸೀದರಾಗಿ, ಉತ್ಸಾಹಿತರಾಗಿ, ಸಮರ್ಥರಾಗಿ, ಸುಸಂಘಟಿತರಾಗಿ ಕರ್ನಾಟಕದಲ್ಲಿ ಒಂದು ಹೊಸದಾದ ಜೀವನವನ್ನು ಕಟ್ಟಿ ಬೆಳೆಸಲು ಸಿದ್ಧರಾಗುವ, ಸಂಕಲ್ಪಬದ್ಧರಾಗುವ.

ಉದಾರ ದಾನ.

ಮೈಸೂರು ಸಿ. ಸಿ. ಸಿ. ಪೆರೋಕಾಲ್ ಕಪ್ಪನಿಯ ಮಾಲೀಕರಾದ ಶ್ರೀ ಸಿ. ನೆರ ಸಾಹೇಳಿಕೆಟ್ಟಿಯವರು, ನಂಜನಗೂಡು ತಾಲ್ಲೂಕಿನ ಕಿಂಡ್ಯ ಗ್ರಾಮದಲ್ಲಿ ಒಂದು ಬಾಲಕರ ದ ಪಾಠಶಾಲೆಯನ್ನು ಕಟ್ಟಿಸುವುದಕ್ಕಾಗಿ ಒಂದು ಸಾವಿರ ರೂ. ದಾನಮಾಡಿರುವರು. ಕಿಂಡ್ಯ ಗ್ರಾಮವನ್ನು ಸರ್ಕಾರದವರು ಮಾದರಿ ಗ್ರಾಮವನ್ನಾಗಿ ಮಾಡಬೇಕಾಗಿರುವರು.

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ!

ಚಿತ್ರಶಾಲಾ ಸ್ಪರ್ಧೆ ನಂ. ೧೫.

ಎರಡು ವಾರಗಳು ಮಾತ್ರ.

ಬಿಳಿಯ ಕಾಗದದಮೇಲೆಯೂ ಬರೆದು ಕಳುಹಿಸಬಹುದು

೧೦೦ ರೂ. ಬಹುಮಾನ

ಮೊದಲನೇ ಬಹುಮಾನ ೬೦ ರೂ.

ಇತರ ಬಹುಮಾನಗಳು ೪೦ ರೂ.



ಕೂಪನ್ ನಂಬರು ....

ಹೆಸರು ....

ವಿಳಾಸ ....

— ಎಡದಿಂದ ಬಲಕ್ಕೆ —

೧. ದಕ್ಷಿಣ ೩. ನೆರವಾಗು ೭. ಒಡೆಯರು ೧೦. ...ಮಾಡುವುದು ೧೨. ಮೊಗಲಾಯಿ ಚಕ್ರವರ್ತಿ ...ಷ್ಟ ೧೪. ಬಾಳು ೧೬. ಬಿರುಕು ಬಿಟ್ಟಿರುವ ೧೮. ...ನಾಚಿಸು, ಈ ಕೋಟೆಯನ್ನು ಕಟ್ಟಿಸಿದ ೨೦. ಇವು ನಾಲ್ಕು ಇವೆ ೨೧. ಕತ್ತಲೂ ಒಂದು ...ವ ಸಾಧನೆ ಮಾಡುವವನು ೨೪. ಹೊಸ ರಕ್ತಿ ...ವೇರಿಯುವರು ೨೫. ಸಮಾನತ್ವ ೨೬. ತುಂಬ ೨೮. ಇದು ಕಣ್ಣಿಗೆ ಕಾಣಿಸದು ೩೦. ಕಾದು ಮುಂದಾಗುವವನ್ನು ಹೇಳುವದು ೩೪. ಮತ್ತ... ...ಥವು ೩೬. ಪದಾರ್ಥ ೩೮. ನೋವಿನಾದರು ವನ ಸಂಚಾರಿ ೪೦. ಇಂಥಾ ಮನುಷ್ಯರು ...ಗಳೂ ಇನ್ನೊಬ್ಬರ ಸಹಾಯವನ್ನು ಅಪೇಕ್ಷಿಸು... ೪೧. ಕೊಡಿಸು.

— ಮೇಲಿನಿಂದ ಕೆಳಕ್ಕೆ —

೧. ಇದು ಬಹಳ ಹಿಂದಿನಕಾಲದಿಂದಲೂ ಇರುವದು ೨. ಜೀವಿತದ ಕಾಲ ೪. ಸಂಕೋಚ ೫. ಜಟೆಯನ್ನು ... ... ೬. ಒಂದು ಗಿಡ ೮. ಹಸ್ತದ ೯. ಇವರ ಜೀವನವನ್ನು ಗೊತ್ತುಮಾಡುವನು. ಕಷ್ಟ ೧೧. ಅಸ್ಪೃಶ್ಯ ೧೩. ಬಿಟ್ಟ ಯಾಹಿ. ೧೫. ಶಿಗಿರಿಕ ೧೭. ಮರಿಚಿಂತನೆ ೧೯. ಪಾತ್ರೆಯಿಯರು ಇವನ್ನು ... ಕೊಡುವ ಸಾಧಿಕೆ ಇವೆ. ೨೨. ಸರಕಾರೀ ಉದ್ಯೋಗ ೨೭. ಮಾಧ್ಯಮಿ. ೨೯. ರುಚಿ. ಗಳಿಲ್ಲದು ೩೨. ಹೆಂಗಸರಿಗೆ ಈ ಕಾಲವು ತುಂಬಾ ಕಷ್ಟಕರವಾದದ್ದು. ೩೪. ಅರಿಕೆ. ೩೫. ಅವಸರದ ... ೩೬. ಹಿಂಬಾಲಿಸು ೩೭. ದೇವರು ೩೯. ಮನೆಯ... ಅಸ್ಪಷ್ಟತೆ... ೪೦. ಅನೇಕರಾಗಳು ೪೧. ಹಿಂದೂ, ಈಗಲೂ, ಮುಂದೂ ಇವಕ್ಕೆ ಗೌರವ ಇದ್ದೇ ಇದೆ. ೪೨. ಮಗಳು.

ಸೂಚನೆ:— ಈ ಸ್ಪರ್ಧೆಯ ಸರಿಯಾದ ಉತ್ತರವು ಸಾ ಥ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲುತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುದು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿ ... ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ...ವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ಪ್ರವೇಶಧನವನ್ನು ...ಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯುತಕ್ಕವರು ಸಾ ಥ್ವಿ ಪೇಪರಿನ ...ರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರದಲ್ಲಿರುವಂತೆ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು ಡಿಸೆಂಬರು 24 ನೇ ತಾರೀಖು ಕೊನೆಯದಿನ. ನಂತರ ಬಂದ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು ಡಿಸೆಂಬರು 28 ನೇ ತಾರೀಖಿನ ಸಾ ಥ್ವಿ ...ಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ:— ಮ್ಯಾನೇಜರ್ ಚಿತ್ರಶಾಲಾ ಸ್ಪರ್ಧೆ, ಚಿತ್ರಶಾಲಾ, ವಾಣೀವಿಲಾಸ ಮೊಹಲ್ಲಾ ಒಂಟಿಕೊಪ್ಪಲ್, ಮೈಸೂರು.

ವಿ. ಸೂ. ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮುಸಲ್ಸ್ ಸ್ಟೇಟ್ ಮಾರ್ಟ್ ಇವರಿಗೆ ಹಾಜರುಮಾಡಬೇಕಾಗಿ ವಿನಂತಿ. ಮ್ಯಾ. ಚಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ಗೆಡ್ಡೆಯನ್ನು ಜಾತಂ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ಬಿನ್ನೇ ... ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ ...

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ANANDA SODA FACTORY,

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡುಭಟ್ಟರ ಆಯುರ್ವೇದೀಯ ಔಷಧಗಳೆಲ್ಲವೂ ಸದಾ ದೊರಕುತ್ತವೆ.

ಮೈಸೂರು ಅರಮನೆಗೆ ಸಪ್ಲೈ ಮಾಡುವ

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು



ಈ ಮಾತ್ರೆಗಳು 1 2 ನ್ನು ಪ್ರತಿ ದಿನ ಊಟವಾದ ಒಳಗೆ ತೆಗೆದುಕೊಳ್ಳುವದರಿಂದ ಜಾಗರೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತ, ಎಂತಹ ಗಟ್ಟಿಯಾದ ಆಹಾರವನ್ನಾದರೂ ಜೀರ್ಣಿಸಿ ಕೊಳಕಾದ ನೀರು, ಕೆಟ್ಟಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನು ಒಳಗೆ ಸೇರಿಸದ ಹಾಗೆ ದೂರಪಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ.

ಮಕ್ಕಳ ಪಕ್ಕೆಸಟೆತ (ಎಳೆವು, ಕಾಲುಕೈ ಸೆಳೆತ, ಬಾಯಿಕಟ್ಟು ಮೊದಲಾದ ಶೀತವಾತ) ಮಕ್ಕಳ ಮತ್ತು ದೊಡ್ಡವರ ಜ್ವರ, ಕೆಮ್ಮು, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ... ಭೇದಿ, ಹೊಟ್ಟೆ ಉಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ... ಪ್ಲೇಗು, ಶೀತಭೇದಿ ಇವುಗಳನ್ನು ... ಅನೇಕ ರೋಗಗಳನ್ನು ಗುಣಪಡಿಸುತ್ತದೆ.

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷಾಂತರ ಜನರು ಉಪಯೋಗಿಸುತ್ತಿರುತ್ತಾರೆ. ಈ ಮಾತ್ರೆಗಳಲ್ಲಿ ಅಪೀಮಾಗಲಿ, ವಿಷವಸ್ತುವಾಗಲಿ, ಸಿಂಧೂರವಾಗಲಿ ಸೇರಿಲ್ಲ. ಒಂದೇ ಒಂದು ಈ ಸೀಸೆಯು ಮನೆಯಲ್ಲಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ, ಸಣ್ಣ ಅನೇಕ ವ್ಯಾಧಿಗಳನ್ನು ಗುಣಪಡಿಸಬಹುದಾಗಿರುತ್ತದೆ.

250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1 ಕ್ಕೆ 4 ಆಣೆ. ಟಪಾಲು ಮೂಲಕವಾದರೆ 1 ಸೀಸೆಗೆ 9 ಆಣೆ. 6 ಸೀಸೆಗೆ 1—8—0. 12 ಕ್ಕೆ 2 -13- 0. 25 ಕ್ಕೆ 5—3—0.

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರಿ, ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶಕ್ತಿ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ... ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ... ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾ... ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟು ... ಪ್ರದರ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣ... ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು.

1 ಬಾಟ್ಲಿ ಬೆಲೆ ರೂ. ೧—೪—೦, 3 ಬಾಟ್ಲಿ ೩—೮—೦, 1 ಡಜನ ಬಾಟ್ಲಿ ಬೆಲೆ ೧೨—೦—೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ, ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

ಮೈಸೂರು ಸ್ಟಾಕಿಸ್ಟ್ಸ್:—ಟಿ. ಪಿ. ನಟರಾಜ್, ಬೊಂಬಾಯಿ ಆನಂದ ಭವನ ಮಾಡರ್ನ ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ:—ಸಿ. ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ. ತುಂಕೂರು—ಟಿ. ಆರ್. ಗುರು ಚನ್ನಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ. ಎಚ್. ಮಂಜಯ್ಯಶೆಟ್ಟಿ. ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಪಂಡರೀರಾವ್ ಬ್ರದರ್ಸ್. ದಾವಣಗೆರೆ—ಮುದ್ದೀರಪ್ಪ ಮತ್ತು ಕೆ. ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್.

"ಪ್ರೇಮ ಪಿಲ್ಸ್"

INVENTED BY A HIMALAYAN SAGE.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ರಸ

ವಿಧಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದ್ರಕರನನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ. ೫—೦—೦   ೩೦ ಮಾತ್ರೆಗಳು ರೂ. ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.)

ಡಾ॥ ಎ. ಎಸ್. ಮೂರ್ತಿ, ಬರಂಪೋಲ್, ಗಂಜಾಮ್ ಡಿಸ್ಟ್ರಿಕ್ಟ್.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಪೂಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗ ದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರವಾಗಿ ಕೈಕೊಂಡ, ಬಹಳ ವಿಷಯಗಳಿರುವ ಕಥೆ.

೧೬೮ ಪುಟಗಳು ಕ್ರಯ ರೂ. ೦—೮—೦

ಸಹಸ್ರಾಂಯುಚರಿತ್ರೆ:—ನಾರಾಯಣಪ್ರಭಾವ ಅರಸನ ಜ್ಯೇಷ್ಠಪತ್ನಿಯಲ್ಲಿ ನಾರಾಯಣನ ವರಪ್ರಸಾದದಿಂದ ಜನಿಸಿ, ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ.

೪೭೫ ಪುಟಗಳು ಕ್ರಯ ರೂ. ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ಋಷಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೬೭೫ ಪುಟಗಳು ಕ್ರಯ ರೂ. ೨—೫—೦

N. B. ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಮೊಬಲಗು ಅಡ್ವಾನ್ಸು ಕಳುಹಿಸಿದರೆ ಬಾಕಿಗೆ ವಿ. ಪಿ. ಮಾಡಲಾಗುತ್ತೆ.

ಅಡ್ರೆಸ್ಸು:—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೇಶಿಕಾಚಾರ್,

೩೦೭, ಕರುಹಟ್ಟಿಕೇರಿ, ಮೈಸೂರು.

THE SADHVI

RECOMMENDED FOR SCHOOLS BY THE DEPARTMENT.

No TI- 3778-146—35-36.

OFFICE OF THE DIRECTOR OF PUBLIC INSTRUCTION IN MYSORE.

Bangalore. Dated 20th April 1936.

ANNUAL SUBSCRIPTION.

Local	...	Rs 2—4—0.
Moffusil	...	

Edited Printed & Published by Agaram Rangiah, B. A., at Sri Rama Press, D. Subbiah Road, Mysore.

REGD. NO. M. 3524.

HALF ANNA

ಸಾಧ್ವಿ

SADHVI. LEADING WEEKLY

ಸಂಪಾದಕರು: ಅಗರಂ ರಂಗಯ್ಯ, ಬಿ. ಎ.

ಸಂಪುಟ ೨] 13-12-37 ಮೈಸೂರು: ಸೋಮವಾರ ೧೩—೧೨—೧೩೭ [ಸಂಚಿಕೆ ೪೩

ಜಪಾನೀ ನೃತ್ಯದ ಒಂದು ದೃಶ್ಯ.

Impressive Figures

Business in Force Exceeds ... Rs 11,30,52,000
Total Assets Exceed .... Rs 3,00,00,000
Claims Paid Exceed ... . Rs 1,80,00,000
New Business for 1936 Exceeds....Rs 1,75,00,000

Branch and Agency Offices throughout India, Burma, Ceylon, British East Africa and the Federated Malay States

WANTED Influential Agents on good terms

Apply to Sub Branch Secretary,
NATIONAL INSURANCE Co LTD,
Kempegowda Road, Bangalore City

NATIONAL INSURANCE COMPANY, LTD
7 COUNCIL HOUSE STREET,
CALCUTTA

ಅಮೃತಾಂಜನ



ಶೀಘ್ರವಾಗಿ ಗುಣಪಡಿಸುತ್ತದೆ.

ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಇವರಲ್ಲಿ ಸಿದ್ಧವಿರುತ್ತವೆ. ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ರಘುಂದೂರವರ ಆಯುರ್ವೇದೀಯ ಔಷಧಗಳೆಲ್ಲವೂ ಸದಾ ದೊರಕುತ್ತವೆ

ಅತ್ಯುತ್ತಮವಾದ
ಶಾಯಿಪುಡಿ
ಮೈಸೂರು ಕೌಸಲ್ಯ ಸ್ಟೋರ್ಸ್‌ನಲ್ಲಿ ದೊರೆಯುತ್ತದೆ.
ಎಲ್ಲಾ ಅಂಗಡಿಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

ಆರನೆಯ ವರ್ಷಾರಂಭ
ಜನವರಿ ೧೯೩೮

ಮುಫತ್ತು | ಇನಾಂ | ಮುಫತ್ತು

ಜೀವನನೌಕಾ

ಮನುಷ್ಯರ ಜೀವನ
ಯಾತ್ರೆಯನ್ನು ಸುಖಸೌಖ್ಯದಿಂದ ಜರಗಿಸುವುದಕ್ಕೆ ದಾರಿಯನ್ನು ತೋರಿಸುವ
ಪುಸ್ತಕವು

ಟಿ. ಖರ್ಚು ಇಲ್ಲಾ : ಕ್ರಯವಿಲ್ಲಾ

ಮದನಮಂಜರಿ ಫಾರ್ಮಸಿ,
1194 ಚೈನಾ ಬಜಾರ್, ಮದರಾಸು.

ವೇಪ್ರಿನ್ (Regd.)

ಚಿಕ್ಕ ಡಾಕ್ಟರ್ ಸ್ವದೇಶಿ ವಸ್ತು.

ಇದರ ಉಪಯೋಗದಿಂದ ಕಜ್ಜಿ ಗಾಯ, ವ್ರಣ, ಇಸಬು, ಸುಣ್ಣಬೊಕ್ಕೆ ಮೊದಲಾದ ವ್ಯಾಧಿ. ಮೈಲಿನ ಗಾಯ, ಮೊಡವೆ (Pimples) ಸುಟ್ಟ ಗಾಯ, ಕತ್ತಿಗಾಯ, ... ಗುಣವಾಗುವವು. ಇದು ಹರಿಯುತ್ತಿರುವ ರಕ್ತವನ್ನು ...

... ಮ್ಯಾನುಫ್ಯಾಕ್ಚರಿಂಗ್ ಕಂಪನಿ, ಬೆಂಗಳೂರು ಸಿಟಿ.
... ಪ್ರಕಾಶ ಸ್ಟೋರ್ಸ್, ... ಬಿಲ್ಡಿಂಗ್ಸ್, ಮೈಸೂರು.

ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಬೆಂಕಿ ಪೆಟ್ಟಿಗೆಗೆ ಗಿರಾಕಿಗಳನ್ನೊದಗಿಸಲು ಅಖಿಲ ಕರ್ನಾಟಕದಲ್ಲಿಯೂ ಡಿ. ಏಜಂಟರು ಬೇಕಾಗಿದೆ. ಇಷ್ಟವುಳ್ಳವರು 2 ಆಣೆ ಪೋಸ್ಟೇಜ್ ಸ್ಟಾಂಪಿನೊಡನೆ ಕೂಡಲೆ ಬರೆದುಕೊಳ್ಳಿ.

ಶ್ರೀ ಸಂಜೀವಿನಿ ವರ್ಕ್ಸ್,
ಸೋಲ್ ಏಜೆಂಟ್ಸ್
ಕರ್ನಾಟಕ ಅಂಡ್ ಬಸವಲಿಂಗ
ಮ್ಯಾಚ್ ವರ್ಕ್ಸ್,
2530 ಹಳ್ಳದಕೇರಿ, ಮೈಸೂರು.

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪುಟ ೨] MYSORE : MONDAY 13—12-37 ಮೈಸೂರು ಸೋಮವಾರ ೧೩—೧೨—೩೭ [ಸಂಚಿಕೆ ೪೩

ಭಾಷಣ ಕೇಳಿದ್ದಕ್ಕೇ ದಸ್ತಗಿರಿ!

ವಿಚಾರಿಸದೆ ಕೊಲ್ಲುವ ರೀತಿಯು ಯಾವ ಯಾವ ರೂಪವನ್ನು ತಾಳುತ್ತದೆಯೋ, ಬಲ್ಲವರಾರು? ಭಾಷಣ ಮಾಡುವವರನ್ನು ಬಂಧಿಸುವ ವಿಷಯವನ್ನು ಕೇಳಿದ್ದೇವೆ. ಸಭೆಗಳನ್ನು ಕೂಡಿಸುವುದನ್ನು ನಿಷೇಧಿಸುವುದನ್ನು ನೋಡಿದ್ದೇವೆ. ಉಪನ್ಯಾಸ ಕೇಳಲು ಹೋದವರನ್ನು ದಸ್ತಗಿರಿ ಮಾಡಿದ ಅಂಶವು ಎಲ್ಲೂ ತಿಳಿದುಬಂದಿಲ್ಲ. ಆದರೂ ಗ್ರೀಸ್ ದೇಶದ ಆಥೆನ್ಸ್ ನಗರದಲ್ಲಿ ಇದು ನಡೆದಿದೆ. ಫ್ರಾನ್ಸಿನ ವಿದ್ಯಾ ಖಾತೆಯ ಮಂತ್ರಿಯಾದ ಜೀನ್ ಜೇ ಎಂಬುವನ ಭಾಷಣ ಕೇಳಿದ್ದೇ ಮಹಾಪರಾಧ! ನೂರಾರು ಜನ ಸ್ತ್ರೀಯರೂ ಪುರುಷರೂ ದಸ್ತಗಿರಿಯಾದರು. ಪೆಟ್ಟುಗಳನ್ನು ತಿಂದರು. ಕೆಲವರಿಗೆ ಗಡೀಪಾರೂ ಆಯಿತಂತೆ. ಸಭೆಯಲ್ಲಿದ್ದವರ ಹೆಸರನ್ನೆಲ್ಲಾ ಪೋಲೀಸರು ಬರೆದುಕೊಂಡರು. ಜೇಯವರು ಗ್ರೀಸ್ ದೇಶದ ಸರ್ಕಾರಿ ಅತಿಥಿಗಳಾಗಿ ಬಂದಿದ್ದರು. ಸರ್ಕಾರಿ ಅತಿಥಿಗಳ ಪಾಡೇ ಹೀಗಾದರೆ ಉಳಿದವರ ಗತಿಯೇನು?

ರಾಮೇಶ್ವರದಲ್ಲೂ ಶನೇಶ್ವರ

ಬ್ರಿಟಿಷ್ ಪಾರ್ಲಿಮೆಂಟಿನಲ್ಲೂ ಸಿ.ಐ.ಡಿ. ಗಳ ಕಾಟವಂತೆ. ಅವರ ಸದಸ್ಯರಿಗೂ ಅವರ ಬಾಧೆ ತಪ್ಪಲಿಲ್ಲ. ಕಮ್ಯೂನಿಸ್ಟ್ ಪಂಗಡದ ಮುಖಂಡರಾದ ವಿಲಿ ಗಲ್ಲಚರ್ ಎಂಬುವರು ಪಾರ್ಲಿಮೆಂಟ್ ಸದಸ್ಯರು. ಟೆಲಿಫೋನ್ ಮೂಲಕ ಅವರು ತಮ್ಮ ಪಕ್ಷದ ಸದಸ್ಯರೊಡನೆ ಮಾತನಾಡಲು ಹೊರಟರೆ, ಅದಕ್ಕೂ ಬಹಳ ಅಡಚಣೆಗಳಾಗುತ್ತವೆ. ಪೋಲೀಸಿನವರೂ ಸಹ ಅವರು ಏನು ಮಾತನಾಡುವರೆಂದು ಕೇಳಿಕೊಳ್ಳುತ್ತಾರೆ. ಈ ವಿಧವ ಅಡಚಣೆಗಳನ್ನು ಕುರಿತು ಇತರ ಹಲವು ಸದಸ್ಯರೂ ಟೀಕೆಗಳನ್ನು ಮಾಡಿದರು. ಪ್ರಜಾ ಸ್ವಾತಂತ್ರ್ಯಕ್ಕೆ ಆದರ್ಶಪ್ರಾಯವಾದ ಪಾರ್ಲಿಮೆಂಟ್ ಸಭೆಯು ಅವನ್ನೆಯೂ ಹೀಗಾಗಬಹುದೆ?

ರಷ್ಯಾದಲ್ಲಿ ಪಾನನಿರೋಧ

ರಷ್ಯದ ರಾಜಧಾನಿಯಾದ ಮಾಸ್ಕೋ ನಗರದ ಅನೇಕ ಭಾಗಗಳಲ್ಲಿ ಪಾನನಿರೋಧ ಕಾರ್ಯಕ್ರಮವು ಆರಂಭವಾಗಿದೆ. ಅನೇಕ ಪಡಖಾನೆಗಳು ಮುಚ್ಚಲ್ಪಟ್ಟು ಅವುಗಳಲ್ಲಿ ತರಕಾರಿ ಅಂಗಡಿಗಳು ಇಡಲ್ಪಟ್ಟಿವೆ. ಸ್ಕೂಲು ಮತ್ತು ಗಿರಣಿಗಳ ಬಳಿ ಮಾದಕ ಪದಾರ್ಥಗಳನ್ನು ಮಾರಕೂಡದೆಂದು ಕಟ್ಟಪ್ಪಣೆ ಆಗಿದೆ. ಇದಲ್ಲದೆ ಮೊನ್ನೆ ತಾನೆ ಸಿಗರೇಟುಗಳ ಮಾರಾಟದ ವಿಷಯದಲ್ಲಿಯೂ ಒಂದು ಆಜ್ಞೆ ಆಯಿತು. ಹದಿನಾರು ವರ್ಷಕ್ಕೆ ಕಡಿಮೆಯಿರುವವರಿಗೆ ಸಿಗರೇಟುಗಳನ್ನು ಮಾರುವುದು ಅಪರಾಧವಾಗಿದೆ. ಸೋವಿಯಟ್ಟರಿಗಾಗಿ ಈ ನಿರ್ಬಂಧಗಳನ್ನು ಹಾಕಿರುವರು. ಇಂತಹ ನಿರ್ಬಂಧಗಳಿಗೆ ಪ್ರಜಾಬೆಂಬಲವೂ ಇದ್ದೇ ಇರುವುದು.

ಬೈಸಿಕಲ್ ತೆರಿಗೆ ಹೆಚ್ಚು

ಬೆಂಗಳೂರು ದಂಡಿನ ಪೌರಸಭೆಯವರು ಬೈಸಿಕಲ್ ತೆರಿಗೆಯನ್ನು ಮೂರು ರೂಪಾಯಿನಿಂದ ಎರಡು ರೂಪಾಯಿಗೆ ಇಳಿಸಿದ್ದಾರೆ. ಮದರಾಸಿನಂತಹ ದೊಡ್ಡ ಪಟ್ಟಣದಲ್ಲಿಯೂ ಸಹ ಎರಡು ರೂಪಾಯೀ ಇವೆ. ಮದರಾಸು ಅಧಿಪತ್ಯದ ಅನೇಕ ಪ್ರಮುಖ್ಯ ನಗರಗಳಲ್ಲಿ ಒಂದೇ ರೂಪಾಯಿ ಇದೆ. ಬೈಸಿಕಲ್ಲುಗಳಿಂದ ರಸ್ತೆಗಳಿಗೆ ಆಗುವ ತೊಂದರೆಯು ಕೇವಲ ಅಲ್ಪವೆಂದೂ ಈ ತೆರಿಗೆಯು ನೆಪಮಾತ್ರಕ್ಕೆ ಮಾತ್ರ ಇರಬೇಕೆಂದೂ ಅವರುಗಳು ಭಾವಿಸಿರುತ್ತಾರೆ. ಆದರೆ ನಮ್ಮ ಮಾದರಿ ಮೈಸೂರಿನಲ್ಲಿಯೂ ಬೆಂಗಳೂರಿನಲ್ಲಿಯೂ ಈ ತೆರಿಗೆಯು ಮೂರು ರೂಪಾಯಿ ಇದೆ. ಕಾನೂನಿನ ಪ್ರಕಾರ ಐದು ರೂ. ವರೆಗೆ ಹೆಚ್ಚಿಸಲು ಅವಕಾಶವಿದೆ. ಇದು ಬಹಳ ದುಬಾರಿ. ಬೆಂಗಳೂರು ದಂಡಿನಲ್ಲಿ ಹೆಚ್ಚಾದದ್ದು ಬೆಂಗಳೂರು ಮೈಸೂರಿನಲ್ಲಿಯೂ ಮಾದರಿಯಲ್ಲವೆ?

ರೆಡ್ ಕ್ರಾಸ್ ಪ್ರಚಾರ

ರೆಡ್‌ಕ್ರಾಸ್ ಸಂಸ್ಥೆಯೆಂಬ ಒಂದು ಸಂಸ್ಥೆಯು ಈಚೀಚೆಗೆ ಬಹಳ ಪ್ರಾಬಲ್ಯಕ್ಕೆ ಬರುತ್ತಿದೆ. ಸ್ಕೌಟು ಸಂಸ್ಥೆಯು ಬಂದು ನಮ್ಮ ದೇಶವನ್ನು ಉದ್ಧಾರ ಮಾಡಿಯಾಯಿತು. ಈಗ ರೆಡ್ ಕ್ರಾಸ್ ಹೊರಟಿದೆ. ಇದರಲ್ಲಿ ಅನೇಕ ವಿಧದ ಪ್ರಚಾರಗಳು ಆಗುತ್ತಿವೆ. ಅವುಗಳಲ್ಲಿ ಅಪಪ್ರಚಾರವೇ ಹೆಚ್ಚು. ಬಂಗಾಳ ಪಟ್ನದ ರೆಡ್‌ಕ್ರಾಸ್ ಸಂಘದ ಕಾರ್ಯದರ್ಶಿಯಾದ ಕುಮಾರಿ ಮ್ಯಾರಿಯಟ್ ಸ್ಪೆರ್ ಎಂಬಾಕೆಯು ಒಂದು ಸಂದರ್ಭದಲ್ಲಿ ಹೀಗೆ ಹೇಳಿದಳು:- “ಭಾರತೀಯ ಸ್ತ್ರೀಯರು ಸಂಸಾರದ ಪತ್ನಿಯರೂ ತಾಯಂದಿರೂ ಅಲ್ಲ.”

ಈಕೆಯ ಮಾತು ನಿಜ. ಮಾತೆತ್ತಿದರೆ ಭಾರತೀಯ ಸ್ತ್ರೀಯರು ವಿವಾಹ ವಿಚ್ಛೇದನಕ್ಕಾಗಿ ಕೋರ್ಟಿಗೆ ನುಗ್ಗುವುದಿಲ್ಲ. ಮಕ್ಕಳನ್ನು ದಾದಿಯರ ಪಾಲು ಮಾಡಿ ನಾಯಿ, ಬೆಕ್ಕುಗಳನ್ನು ಮುದ್ದಿಸುವುದಿಲ್ಲ. ಸಂತಾನನಿರೋಧದ ಕೃತಕ ಸಾಧನಗಳನ್ನು ಉಪಯೋಗಿಸುವುದಿಲ್ಲ. ಇದು ಹಾಗಿರಲಿ. ಈಕೆಗೆ ಈ ವಿಷಯವಾಗಿ ಮಾತನಾಡುವ ಅರ್ಹತೆಯೇನು? ಮುದುಕಿಯಾಗುತ್ತ ಬಂದರೂ ಇನ್ನೂ ಮದುವೆಯಾಗದ ಬಸವಿ ಇವಳು. ನೂರಾರು ರೂಪಾಯಿನ ಸಂಬಳ ತಿಂದು ಭಾರತೀಯರನ್ನು ಹಿಯ್ಯಾಳಿಸುವ ಇಂತಹವರ ಅಪಪ್ರಚಾರವು ಧಿಕ್ಕಾರಕ್ಕೆ ಅರ್ಹವಾದುದಲ್ಲವೇ?

ಸಾರ್ವಭೌಮರಿಗೂ ತಪ್ಪಲಿಲ್ಲ

ಆರನೇ ಜಾರ್ಜ್ ಚಕ್ರವರ್ತಿಗಳು ಕ್ರಮ ಪ್ರಕಾರವಾಗಿ ಪಟ್ಟಾಭಿಷಿಕ್ತರಾಗಲಿಲ್ಲವಂತೆ! ಲಂಡನ್ನಿನ ಬ್ಯಾರಿಸ್ಟರ್ ಸ್ಟೂವರ್ಟ್ ಘೋಷರ ವಾದವಿದು. ಕಿರೀಟಧಾರಣೆಯ ಕ್ರಮವು ಇಂಗ್ಲೆಂಡಿನಲ್ಲಿ ಈಚೆಗೆ ಹಲವು ಬದಲಾವಣೆಗಳನ್ನು ಹೊಂದಿದೆ. ಅವುಗಳನ್ನು ಅನುಸರಿಸದೆ ಹಳೇ ಪದ್ಧತಿಯಂತೆ ಈ ಸಾರಿಯೂ ಮಾಡಿಬಿಟ್ಟರು. ದೊರೆಗಳು ತೆಗೆದುಕೊಳ್ಳಬೇಕಾದ ಹೊಸ ಪ್ರತಿಜ್ಞೆಯನ್ನು ತೆಗೆದುಕೊಳ್ಳಲಿಲ್ಲ. ಈ ಕಾರಣದಿಂದ ಕಳೆದ ಮೇ ತಿಂಗಳಲ್ಲಿ ಚಕ್ರವರ್ತಿಗಳ ಕಿರೀಟ ಧಾರಣೆಯಾಗಬೇಕಾಗಿದ್ದಾಗ ಉತ್ಸಾಹಿತನಾದ ಜಾರ್ಜ್ ಕೇಸಿಟ್ ಎಂಬಾತನೊಬ್ಬನು ಕೋರ್ಟಿಗೆ ಹೋಗಿ ಸದರಿ ಉತ್ಸವವು ನಡೆಯದಂತೆ ತಡೆ. ಆ ಪ್ರಶ್ನೆಯನ್ನು ತೆಗೆದುಕೊಳ್ಳಬೇಕೆಂದಿದ್ದನು. ಆದರೆ ಪಕ್ಷಿಲರು ಅದಕ್ಕೆ ಒಪ್ಪಲಿಲ್ಲ. ಆದರೂ ಇಂಗ್ಲೆಂಡಿನಲ್ಲಿ ಜನರಿಗೆ ಎಷ್ಟು ಸ್ವಾತಂತ್ರ್ಯವಿದೆಯೆಂಬುದು ಇದರಿಂದ ಗೊತ್ತಾಗುತ್ತದೆ.

ದಿವಾನರಿಗೆ ಬಿನ್ನವತ್ತಳೆ

ಬೆಂಗಳೂರಿನ ಹೂವಾಡಿಗ ಸಂಘದವರೆಲ್ಲರೂ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಹೂವಿನ ಪಲ್ಲಕ್ಕಿ ಉತ್ಸವವನ್ನು ನೆರವೇರಿಸಿ ಆ ಸಮಯದಲ್ಲಿ ದಿವಾನರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ಹೂವಿನ ತೋಟಗಳನ್ನು ಮಾಡುವುದಕ್ಕೂ ದೇವಸ್ಥಾನದ ತೇರನ್ನು ನಿಲ್ಲಿಸುವುದಕ್ಕೂ ಉಚಿತವಾದ ಸ್ಥಳವನ್ನು ಕೊಡಬೇಕೆಂದು ಕೇಳಿದರು. ದಿವಾನರು ಸೂಕ್ತವಾದ ಉತ್ತರವಿತ್ತರು.

ಪೋಲೀಸಿನವನೂ ಭೂತವೂ

ಪೋರ್ಟ್ಸ್‌ಮತ್ ಎಂಬಲ್ಲಿ ಒಬ್ಬ ಪೋಲೀಸಿನವನು ರಾತ್ರಿ ಗಸ್ತು ತಿರುಗುತ್ತಿದ್ದಾಗ ಒಂದು ಬಿಳಿ ಭೂತಾಕಾರದ ಸ್ತ್ರೀ ವ್ಯಕ್ತಿಯು ಮೆಲ್ಲಗೆ ತನ್ನ ಬಳಿ ಬರುತ್ತಿದ್ದುದನ್ನು ಕಂಡನು. ಅದನ್ನು ನೋಡಿ ಅವನಿಗೆ ಸ್ವಲ್ಪ ವಿಸ್ಮಯವಾಯಿತು. ಸ್ವಲ್ಪ ಹೊತ್ತಾದನಂತರ ಆ ವ್ಯಕ್ತಿಯ ಕೈಯನ್ನು ಹಿಡಿದು ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋದನು. ಆಕೆಯು ಒಂದು ದೆವ್ವವಿರಬಹುದೆಂದು ಮೊದಲು ಎಲ್ಲರೂ ಭಾವಿಸಿದ್ದರು. ಆದರೆ ಆವಳು ನಿದ್ದೆಯಲ್ಲಿದ್ದು ಹಾಗೆಯೇ ಎದ್ದು ಬೀದಿಯಲ್ಲಿ ಬರುತ್ತಿದ್ದಳೆಂದು ಗೊತ್ತಾಯಿತು. ಸ್ಟೇಷನ್ನಿನಲ್ಲಿ ಏನೇನು ಮಾಡಿದರೂ ಆಕೆಗೆ ಎಚ್ಚರವಾಗಲಿಲ್ಲ. ಆಸ್ಪತ್ರೆಗೆ ಕಳುಹಿಸಿದರು. ಅರ್ಧ ಗಂಟೆಯ ಮೇಲೆ ಎಚ್ಚರವಾದಾಗ, ತಾನು ಒಂದು ಆಸ್ಪತ್ರೆಯ ನರ್ಸ್ ಎಂದು ಹೇಳಿದಳು.

ವಿರಾಗಿ

ಲೇಖಕಿ: ಶ್ರೀಮತಿ ಸರೋಜಮ್ಮ ಜಗತ್ ಶಂಕರ್, ಮೈಸೂರು.

ಅವನು [illegible] ಪಾಂಡಿತ್ಯಯುಕ್ತನಾಗಿದ್ದನು. ಬಹಳ ಜನ ಶಿಷ್ಯರಿಗೆ [illegible] ಮನಸ್ಸಿನಲ್ಲಿದ್ದ [illegible] ಅದನ್ನು ಹೊರಗೆ [illegible]. ಹಗಲಿರುಳೂ ಅವನಿಗೆ [illegible]. ಆ ಯೋಚನೆಯು [illegible] ಹೆಚ್ಚಿದ್ದಿತು.

"[illegible] ಇಂದಿರೆ! [illegible]?" [illegible], [illegible], [illegible] ಬಿಡುತ್ತಿರಲಿಲ್ಲ.

ನನ್ನ ಇಂದಿರೆಯು ತಬ್ಬಲಿಯಾದಾಗ, [illegible] ಅವಳಿಗೆ ಯಾರು ಗತಿ?

o o o

ಅವನಿಗೆ ಸಮೀಪದ ಬಂಧುಗಳ್ಯಾರೂ ಇರಲಿಲ್ಲ. [illegible] ಅಪ್ಪನೊಬ್ಬನಿದ್ದನು. ಅವನು [illegible] ಅಪ್ಪಣ್ಣ ಹೊರಗೆ [illegible] ಬಿಟ್ಟು ಹೋಗಿದ್ದನು.

ಇಂದಿರೆಯು ತನ್ನ ಕೊಠಡಿಗೆ ಹಿಂತಿರುಗಿದಳು. ಅಪ್ಪನು ಒಳಕ್ಕೆ ಹೋಗಿ ರೋಗಿಯ ಪಕ್ಕದಲ್ಲಿ ಕುಳಿತನು. ರೋಗಿಗೆ ಸಮಾಧಾನವಾಯ್ತು. ಅತನು ಆಕೆಯ ಗಂಡನ ಪ್ರಾಣಸ್ನೇಹಿತನು. ಸ್ನೇಹಿತನ ಮರಣ ಕಾಲದಲ್ಲಿ ಕೊಟ್ಟಿದ್ದ ವಚನದಂತೆ ಆ ವಿಧವೆಯ ಮತ್ತು ಇಂದಿರೆಯ ಪೋಷಣೆಗೆ ಸಹಾಯಕನಾಗಿದ್ದನು. ಇಂದಿರೆಯು [illegible] ಅತನಲ್ಲಿ ಪ್ರೇಮಭಕ್ತಿ ಸಮಾನ ಪ್ರೀತಿಯುಳ್ಳವಳು.

o o o

"ಇಂದಿರೇ! ಬಾ!!" [illegible]. ನನ್ನ ಕಾಲವು ಸಮೀಪಿಸಿತು. ನಿನಗೆ ಅವನೇ ದಿಕ್ಕು" ಎಂದಳು ರೋಗಿ.

ಇಂದಿರೆಯು ಹತ್ತಿರ ಬಂದು, ಹುಲಿಯ ಮುಂದೆ ನಡುಗುವ ಹುಲ್ಲೆಯಂತೆ, [illegible] ನೋಡಿದಳು.

'ಅಣ್ಣ, ಇಂದಿರೆಯನ್ನು ನಿಮ್ಮ ಕೈಗೆ ಒಪ್ಪಿಸಿದ್ದೇನೆ. ಮುಂದೆ ಅವಳ ಸರ್ವಸ್ವವೂ ನೀನೇ' ಎಂದು ಕೊನೆಯದಾಗಿ ಅಪ್ಪನಿಗೆ ಹೇಳಿದಳು. ಬಳಿಕ ರೋಗಿ ಬಹಳ ಹೊತ್ತು ಬದುಕಲಿಲ್ಲ.

o o o

ಅಪ್ಪನಿಗೆ ಇನ್ನೂ ಮದುವೆ ಇರಲಿಲ್ಲ. ಯಾವ ಸ್ತ್ರೀಯೂ ಅವನನ್ನು ಒಪ್ಪಿರಲಿಲ್ಲ. ಅತನ ಧನವಾದರೂ ಅತನಿಗೆ ಯಾವ [illegible] ವಾಗಲಿಲ್ಲ. [illegible] ಅತನ [illegible] ಕಟ್ಟಿದ [illegible] ನೋಡಿ [illegible] ಆಕೆಗೆ [illegible] ಅವನಿಗೆ [illegible] ಸೌಭಾಗ್ಯ ಎಂದರೆ ಇಲ್ಲ. ಇದರಿಂದ ಅವನಿಗೆ ಸ್ತ್ರೀ ಜಾತಿ ಎಂದರೆ [illegible]. ಹೆಂಗಸರನ್ನು ಕಂಡರೆ ಏಕೆ, ಅವರ ನೆರಳ ಕೂಡ ಅವನಿಗೆ ಸಹಿಸದು. ಅವನಿಗೆ ತಂಗಿಯೊಬ್ಬಳಿದ್ದಳು. ಅವಳು ಕ್ರೂರಿಯಾಗಿದ್ದರೂ ಸ್ವಭಾವತಃ ಒಳ್ಳೆ[illegible]. ಇತರರ ಮನಸ್ಸನ್ನು ನೋಯಿಸುವವಳಲ್ಲ. ಆದರೂ ಇಂದಿರೆಯು ಆಕೆಯ ವ್ಯಕ್ತಿಯನ್ನು [illegible]. ಆಕೆಯನ್ನೇ ತಾಯಿಯಂತೆ ಕಾಣುತ್ತಿದ್ದಳು.

o o o

ಅಪ್ಪನು ಇಂದಿರೆಗೆ ಈಗಿನ ಕಾಲದ ಶಿಕ್ಷಣವೇನನ್ನೂ ಕೊಡಿಸಲಿಲ್ಲ. "ಹೆಂಗಸಿನ ಕೆಲಸವು ಅಡಿಗೆ ಮನೆಯಲ್ಲಿಯೂ, ಸಂಸ್ಕೃತ, ಸಂಗೀತದಲ್ಲಿಯೂ ಮತ್ತು ಪತಿಗೆ ಸಹಧರ್ಮಿಣಿಯಾಗಿರುವುದರಲ್ಲಿಯೂ ಮಾತ್ರವೇ" ಎಂದು ಹಲವು ವೇದಗಳ ಆಧಾರಸಹಿತ ಒದರಿದನು. [illegible]ಗಾಗಿ ನವೀನ ತರುಣಿ ಇಂದಿರೆಗೆ ಬಂಧನವಾಸವಾಯ್ತು. ಆಕೆಯ ವಿದ್ಯಾಭ್ಯಾಸ [illegible]; ಆಕೆಗೆ ಉಡುಪು, ತೊಡುಗೆಗಳ ವಿಷಯದಲ್ಲಿ ಸಹ ಸ್ವಾತಂತ್ರ್ಯವಿರಲಿಲ್ಲ.

ಪಾಪ! ಬಡ ಇಂದಿರೆಯು ಇವನ ಹಟ ಸಾಧನೆಗೆ ಆಹುತಿಯಾದಳು. ಅಪ್ಪನ ತಂಗಿಯೇ ಇಂದಿರೆ.

ಇಂದಿರೆಗೆ ಈಗ 15 ವರ್ಷ. ಅವಳ ತಾಯಿಯನ್ನಗಲಿ 4 ವರ್ಷವಾಗಿತ್ತು. ಅವಳ ವಿದ್ಯಾಭ್ಯಾಸವೂ ಸಂಪೂರ್ಣವಾಗಿತ್ತು. ಇಂದಿರೆಯ ಮದುವೆಯೂ ಆಯಿತು. ಗಟ್ಟಿನ ಮದುವೆಯದು. ಆಡಂಬರವೇ ಇಲ್ಲ. ಇಂದಿರೆಯನ್ನು [illegible] ನೋಡಿ ತರಲು ಪಟ್ಟಣಕ್ಕೆ ಕರೆದುಕೊಂಡು ಹೋಗಿದ್ದರು. ಅದೇ ಇಂದಿರೆಗೆ ಆಗಿದ್ದ ಒಂದು ಸಂತೋಷದ ಬದಲಾವಣೆ!

ಅಪ್ಪನು ಒಂಟಿಯಾಗಿದ್ದ ಮನೆಯೊಂದನ್ನು ಕೊಂಡನು. ಅವನಿಗೆ ಇಂದಿರೆಯಲ್ಲಿ ಬಹಳ ಅನುಮಾನ. ಎಲ್ಲಿ ಈ ಪ್ರಪಂಚದ ತುಂಟ ಗೆಳೆಯರ ವ್ಯಾಮೋಹದ ಬಲೆಗೆ ಬೀಳುವಳೋ ಎಂದು ಅವನ್ನು ಆಭುಕ್ತ ಮೂಲೆಯಲ್ಲಿರಲು ಯುಕ್ತಿಸಿದನು. ಇಂದಿರೆಯನ್ನು ತನ್ನ ಜೊತೆಯಲ್ಲಿಯೆ ಹೊರಕ್ಕೆ ಹೋಗಗೊಡುತ್ತಿರಲಿಲ್ಲ.

ಅಪ್ಪನ ಸಂಶೋಧನೆಯು ಮುಗಿಯಿತು. "ವೇದಾಂತ ರಹಸ್ಯ" ವೆಂಬ ದೊಡ್ಡ ಗ್ರಂಥವನ್ನು ರಚಿಸಿದನು. ಅದರ ಕೀರ್ತಿಯು ದಶದಿಕ್ಕುಗಳಲ್ಲೂ ಹರಡಿತು. ಅಪ್ಪನು ಬಹಳ ಪ್ರಸಿದ್ಧಿಗೆ ಬಂದನು. ಎಲ್ಲೆಲ್ಲಿಯೂ ಅವನಿಗೆ ಗೌರವ. ಆದರೆ ಇಂದಿರೆಗೆ ಇವನ ಸುಖವೇನು ಬೇಕು? ಅವನಿಗೆ ಸಂಸಾರದ ಸುಖದ ತಿರುಳೇನು ಗೊತ್ತು? ಇಂದಿರೆಯನ್ನು ಹೇಗತಾನೇ ತೃಪ್ತಿಪಡಿಸಿಯಾನು?

ಅಪ್ಪನು ಕೆಲವು ದಿನಗಳಲ್ಲೇ ಹೊರಗೆ ಹೋಗಬೇಕಾದ ಪ್ರಸಂಗವೊಂದೊದಗಿತು. ಅವನ ವೇದಾಂತಗಳ ಮೇಲೆ ಉಪನ್ಯಾಸ ಕೊಡಲು ನಾನಾ ಕಡೆಯಿಂದಲೂ ಆಹ್ವಾನಗಳು ಬಂದವು. ಇಂದಿರೆಯನ್ನು ಬಹಳ ಹಠತೋಟಿಯಿಂದ ನೋಡಿಕೊಳ್ಳಲು ತಂಗಿಗೂ, ಸೇವಕರಿಗೂ ಅಪ್ಪಣೆಮಾಡಿ ಹೊರಟುಹೋದನು.

o o o

ಇಂದಿರೆಯು ರಾತ್ರಿ ಎಲ್ಲವನ್ನೂ ಉದ್ಯಾನದಲ್ಲಿ ತಿರುಗಾಡುತ್ತಾ ಕಳೆಯುವಳು. ಅಪ್ಪನು ಹೋಗಿ ಇಂದಿಗೆ ಎಂಟುದಿನಗಳಿದ್ದಿರಬಹುದು. ಇಂದಿರೆಯು ಎಂದಿನಂತೆ ರಾತ್ರಿಯಲ್ಲಿ ಉದ್ಯಾನದಲ್ಲಿ ಸಂಚರಿಸುತ್ತಿರಲು, ವೇಣುಗಾನವು ಹತ್ತಿರದಲ್ಲಿ ಎಲ್ಲೋ ಬರುತ್ತಿರುವಂತೆ ಕೇಳಿತು. ಯಾರೋ ತನ್ನಂತೆಯೇ ಹೃದಯ ಭಾರವನ್ನು ನೀಗಲು ಆ ರೀತಿ ಎಸೆಯುತ್ತಿರುವಂತೆ ತಿಳಿಯಿತು. ಮುಂದಿನ ದಿನದ ರಾತ್ರಿಯೂ ಅದೇ ವೇಣುಗಾನ ಅದೇ ಮಂಜುಳನಾದ. ಕುತೂಹಲ ಹೆಚ್ಚಾಯಿತು. ಸರಿದು ಮುಂದೆ ಹೋದಳು.

ಸುಂದರ ಯುವಕನೊಬ್ಬನು, ಅಪ್ಪನು ಹೋದ ಸಮಯವನ್ನು ತಿಳಿದು ಇಂದಿರೆಯ ಪ್ರೇಮ ಯಾಚನೆಗಾಗಿ ಬಂದಿದ್ದನು. ಅತನೇ ಮುರಳೀಲೋಲ. ತನ್ನ ಗಾನಕ್ಕೆ ತಕ್ಕಂತೆ ಸುಂದರನು. ಇಂದಿರೆಯು ನೋಡಿದಳು. ಅವನೂ ಇಂದಿರೆಯನ್ನು ಹಲವು ಬಾರಿ ನೋಡಿದ್ದನು. ಆದರೆ ಅಪ್ಪನು ಅವಳನ್ನು ಎಡೆಬಿಡುತ್ತಿರಲಿಲ್ಲವಾದ್ದರಿಂದ ಸಮಯವನ್ನು ನಿರೀಕ್ಷಿಸುತ್ತಿದ್ದನು.

o o o

ಯುವಕನು ಇಂದಿರೆಯನ್ನಾಲಂಗಿಸಿದನು. ಇಂದಿರಾ! ನನ್ನ ಸರ್ವಸ್ವ! ನಿನ್ನನ್ನು ಮೊದಲು ನೋಡಿದಂದಿನಿಂದಲೂ ಹುಚ್ಚನಾಗಿದ್ದೇನೆ. ಇಂದಿರಾ! ದಯೆ ತೋರು! ಇಂದಿರೆಯು ಒಲಿದಳು. ಆದರೆ ಮರುಕ್ಷಣದಲ್ಲಿಯೇ ಭಯದಿಂದ ನಡುಗಿದಳು. ತನ್ನ ಮುದುಕನಿಗೆ ತಾನು ದ್ರೋಹ ಮಾಡಿದೆನೆಂದರಿತಳು. ಆದರೆ ಯೌವನವೇ ಮೇಲ್ಮೈಯಾಗಿ, ಅವಳು ಯುವಕನ ಬಾಹುಬಂಧಿಯಾದಳು. ಯುವಕನು ಇಂದಿರೆಯನ್ನು ಚುಂಬಿಸಿದನು. ಚಂದ್ರನು ಮೋಡಗಳ ಮರೆಯಲ್ಲಿ ಬಹಳ ಹೆದರಿಕೆಯಿಂದ ಒಂದೊಂದೇ ಬಾರಿ ಇಣಕಿ ನೋಡುತ್ತಿದ್ದನು.

ಅಪ್ಪನು ತಾನು ಹೇಳಿದ್ದುದಕ್ಕಿಂತ ಮೊದಲೇ ಹಿಂತಿರುಗಿದನು. ಅವನ ಬರುವಿಕೆಯನ್ನು ಇಂದಿರೆಯು ಊಹಿಸಿಯೇ ಇರಲಿಲ್ಲ. ಅವಳ ಸ್ವರ್ಗೀಯ ಸೌಖ್ಯದಲ್ಲಿ ಅವಳಿಗೆ ಮುಂದಿನ ಅರಿವೇ ಇರಲಿಲ್ಲ.

ಅಪ್ಪನು, ಯುವಕನ ಬಾಹು ಬಂಧನದಲ್ಲಿ ಮೈಮರೆತಿದ್ದಳು. ಭಾಗ್ಯ[illegible]ಳಾದ ಇಂದಿರೆಯನ್ನು ನೋಡಿದನು. ಅಪ್ಪನು ಕಿಡಿಕಿಡಿಯಾದನು. ಹಣೆಯ ನರಗಳು ಗಂಟಾದವು.

"ಇಂದಿರಾ" - ಅಪ್ಪನು ಘರ್ಜಿಸಿದನು.

o o o

ಹತ್ತಿರವಿದ್ದ ಪುಷ್ಕರಣಿಯಲ್ಲಿ ಸಪ್ಪಳವಾಯಿತು. ಯುವಕನೂ ಬಹಳ ಹೊತ್ತು ಇರಲಿಲ್ಲ.

o o o

ಪುಷ್ಕರಣಿಯಲ್ಲಿ ಕೋಮಲವಾದ ಕಮಲಗಳಿವೆ. ಮಧ್ಯದಲ್ಲಿ ಮನೋಹರವಾದ ದೊಡ್ಡದೊಂದು ಕಮಲವಿದೆ. ಅದು ಬಾಡುವುದೇ ಇಲ್ಲ.

o o o

ಪಕ್ಕದಲ್ಲೇ ವಿರಾಗಿಯೊಬ್ಬನು ವೇಣುಗಾನ ಮಾಡುತ್ತಾ ಇರುತ್ತಾನೆ.

ಸಂಪೂರ್ಣಂ.

ಜೈನ ಬ್ರಾಹ್ಮಣರಲ್ಲಿ ವಿಜ್ಞಾಪನೆಗಳು.

ಮಹನೀಯರೇ,

ಬಾಲ್ಯವಿವಾಹವು ತರುಣಿಯರ ಸುಖ ಸಂಪತ್ತುಗಳಿಗೆ ಪ್ರಬಲವಾದ ವೈರಿ. ಈ ವೈರಿಯ ಬೆಳವಣಿಗೆಯು ಜೈನಬ್ರಾಹ್ಮಣ ಸಮಾಜದಲ್ಲಿ ಪಸರಿಸಿ ಅನೇಕ ಮಂದಿ ತರುಣಿಯರು ವೈಧವ್ಯಪದವಿಯನ್ನು ಧರಿಸಲಾಗುತ್ತಾ ಇರುವವರಲ್ಲನೇಕರು ಬಾಲ್ಯ ಮೋಹದ ಶೋಧನೆಗೀಡಾಗಿ ಅನಾಚಾರಗಳನ್ನು ಅಂಗೀಕರಿಸಿ ಮಾಡಬಾರದ ಕೆಟ್ಟ ಕೆಲಸಗಳನ್ನೆಲ್ಲಾ ಮಾಡಿ ಮತ ಧರ್ಮಗಳನ್ನೆಲ್ಲಾ ತೊಡೆಯಲುದ್ಯುಕ್ತರಾಗಿ ಮತಕ್ಷೀಣತೆಗೆ ಭಾಗಿಗಳಾಗಿರುವರು. ಅಲ್ಲದೆ ಇದರಿಂದ ಸರ್ವಕುಟುಂಬವರ್ಗಗಳಲ್ಲಿಯೂ, ದ್ವೇಷವೆಂಬ ಬೀಜವನ್ನು ನಾಟಿ ತಾಂಡವವಾಡುತ್ತಿರುವ ವಿಷಯಗಳು ಮನೆ ಮನೆಯಲ್ಲಿಯೂ ಜನತೆಯಲ್ಲಿಯೂ, ಹೊರಬೀಳುವುದನ್ನು ಕಂಡ ವೃತ್ತಪತ್ರಿಕೆಗಳೂ ಸಹ ಘಂಟಾಘೋಷವಾಗಿ ಸಾರುತ್ತಿರುವುದನ್ನು ಕಂಡ ಸಾಮಾಜಿಕರೂ, ಸಮಾಜದಲ್ಲಿ ಹಿರಿಯರೆನ್ನಿಸಿಕೊಳ್ಳುವವರೂ ಬೂದಿಮುಚ್ಚಿನ ಕೆಂಡದಂತೆ ನಿದ್ರಾಪರವಶರಾಗಿರುವುದು ತುಂಬಾ ಶೋಚನೀಯವಾದ ವಿಷಯವಾಗಿದೆ.

ಆದ್ದರಿಂದ ಮಹನೀಯರುಗಳೇ! ಮತ ಧರ್ಮೋದ್ಧಾರಕ್ಕೂ, ಆತ್ಮಗೌರವಕ್ಕೂ ಪ್ರಾಶಸ್ತ್ಯ ಕೊಡಬೇಕೆಂಬ ಧ್ಯೇಯವಿದ್ದರೆ [illegible] ಮುಖಂಡರುಗಳ ದಬ್ಬಾಳಿಕೆಯನ್ನು ನಿಲ್ಲಿಸಲು ಎದೆ ಗೊಡಿ. ಇಲ್ಲವಾದರೆ ಮುಖಂಡರುಗಳ ಧ್ಯೇಯವನ್ನೂ, ತರುಣಸ್ತ್ರೀಯ ವಿಧವೆಯರ ಸ್ವಾಸ್ಥ್ಯ ಸೌಖ್ಯದ ನೆಮ್ಮದಿಯನ್ನೂ ಸ್ಥಿರಪಡಿಸಬೇಕೆಂದಿದ್ದರೆ ನಮ್ಮ ಕಾಂಗ್ರೆಸ್ ಕಮಿಟಿಯವರ ಧ್ಯೇಯದ ಹೋರಾಟದಂತೆ ನೀವುಗಳೂ ಸಹ ಹೋರಾಡಿ ಸ್ಥಿರಪಡಿಸಬೇಕೆಂದು ಪ್ರಾರ್ಥನೆ.

ಓರ್ವ ಸಮಾಜಿಕ

ಪ್ರಪಂಚ ಪರಿಚಯ.

ರಷ್ಯಾ- ರಷ್ಯ, ಜರ್ಮನಿಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರತಿ ಸ್ಕೂಲಿನಲ್ಲಿಯೂ ಯುದ್ಧಕ್ಕೆ ಸಿದ್ಧರಾಗಿರಿ ಎಂದು ಪ್ರತಿ ತರಗತಿಗೂ ಒಂದೊಂದು ಪಾಠವನ್ನು ಹೇಳಿಕೊಡುತ್ತಿದ್ದಾರೆ. ಅದರಲ್ಲಿ ನವೀನ ಯುದ್ಧ ಸಾಮಗ್ರಿಗಳು, ವಿಷವಾಯುವಿನಿಂದ [illegible] ಬಗೆ, ಮುಂತಾದ ಸಂಗತಿಗಳನ್ನು ಕಡ್ಡಾಯವಾಗಿ ಬೋಧಿಸುತ್ತಿದ್ದಾರೆ.

ಇಂಗ್ಲೆಂಡು — ಇಲ್ಲಿನ ಮಂತ್ರಿ ವರ್ಗದ [illegible] ಸಂಯೋಜನ ಕಾರ್ಯವನ್ನು [illegible] ಜರ್ಮನಿಗೂ ಇಟಲಿಗೂ [illegible] ಕಲ್ಪಿಸಿ, ಆಗಲಿರು [illegible] ಬಗೆ ಬಿಕ್ಕಟ್ಟನ್ನು [illegible] ಸಿದ್ಧಗೊಳಿಸುವುದು, [illegible] ಇಂಥಿವಾ [illegible] ದಿನಗಳಲ್ಲಿ ಬರುವಂಥ [illegible] ವಿಮಾನಗಳು ಇಷ್ಟರಲ್ಲಿಯೇ [illegible] ವಾಗುವುದಂತೆ. ಘಂಟೆಗೆ ಇನ್ನೂ [illegible] ಮೈಲಿಯಂತೆ ಹೋಗಬಲ್ಲುವು ಇವು.

ಜರ್ಮನಿ — ಹೆರ್ ಹಿಟ್ಲರನ ಮತ್ತು [illegible] ಹ್ಯಾಲಿಫ್ಯಾಕ್ಸರ ನಡುವೆ ನಡೆದಿರ [illegible] ಸಂಭಾಷಣೆಯು ಬೇಗಿರಬಹುದು [illegible] ತೋರುವುದು. ಪ್ರಪಂಚದ ಎಲ್ಲೆ [illegible] ಜರ್ಮನರೆಲ್ಲರನ್ನೂ ಏಕತೆ [illegible] ಉಂಟುಮಾಡುವುದು, [illegible] ಕಳೆದ [illegible] ಜರ್ಮನಿಗೆ [illegible] — ಇವೇ ಮುಖ್ಯವಾದುವು. ಇಂತ [illegible] ಸಂಗತಿಗಳಲ್ಲಿ ಜರ್ಮನ್ ಸರ್ಕಾರವು [illegible] ಎಲ್ಲ ಏರ್ಪಾಡುಗಳಿಗೂ [illegible] ಸರ್ಕಾರವು ಮುಮ್ಮನಿರಬೇಕು. [illegible] ಯೂರೋಪಿನ, ಸೆಕೋಸ್ಲೊವೇಕಿ [illegible] ಆಸ್ಟ್ರಿಯಾ ದೇಶಗಳನ್ನು ನಾಜೀ ಸ [illegible] ವಾರ್ಪಡಿಸುವ ಯತ್ನವು [illegible] ಸಂಪೂರ್ಣವಾಗಿ ಕೈಗೂಡಿಲ್ಲ.

ಇಟಲಿ — ನೋಡದಗಳ ಆಡಿಗೆ ಚೆನ್ನಾಗಿ [illegible] ಒಂದು ಹೊಸ ಯಂತ್ರ ಒಂದ [illegible] ಇಲ್ಲಿನ ಒಬ್ಬ ಇಂಜನಿಯರನು ಕಂಡು ಹಿಡಿದಿರುವನಂತೆ. ಇದು ಯುದ್ಧ ಕಾಲದ [illegible] ಬಹು ಸಹಾಯವಾದೀತಂತೆ.

ಇಂಡಿಯಾ — ಹರಿಪುರದ ಕಾಂಗ್ರೆಸ್ [illegible] ಸ್ವೈಸರಾಯರ ದಕ್ಷಿಣಾ ಪ್ರವಾಸದ [illegible] ಇವೇ ಮುಖ್ಯ ಚಲನವಲನಗಳು.

ಮೈಸೂರು — ಸರ್ಕಾರವೂ, ಕಾಂಗ್ರೆಸ್ಸೂ [illegible] ಪ್ರಚಾರ [illegible] ಗಳನ್ನು ನಡೆಸುತ್ತಿವೆ [illegible] [illegible] ಕಾಂಗ್ರೆಸ್ಸಿನ ಕಡೆ [illegible]

ವ್ಯಾಪಾರ ಪ್ರಪಂಚ — [illegible] [illegible] ಗೆ [illegible] ಜರ್ಮನ್ [illegible] [illegible] ಹಿಟ್ಲರನ [illegible] ಮೊದಲಿನ ಜರ್ಮನಿಯ [illegible]

ಯಂತ್ರದಿಂದ ಉಸಿರಾಡು ವುದು.

ಕೆಲವು ಮಕ್ಕಳಿಗೆ ಜನಿಸಿದ ಬಗೆಯ [illegible] ಸರಿಯಾಗಿ ನಡೆಯುತ್ತಿರುವುದೂ, ಅದಕ್ಕಾಗಿ ಛೇದಿಸಿ [illegible] ಹಲವು ಬಗೆಯ ಔಷಧಿಗಳಿಂದ [illegible] ಚೂರಿಯಿಂದ [illegible] ಇಂತಹ ರೋಗಿಗಳಿಗೆ [illegible] ಯಂತ್ರವನ್ನು [illegible] ಯಂತ್ರದ ಒಳಗೆ [illegible] [illegible] ಒಳಕ್ಕೆ ಬರುತ್ತಿದೆ ಆ ಯಂತ್ರದಲ್ಲಿ ಉಸಿರಾಡುವುದಕ್ಕೆ ತಕ್ಕ [illegible] [illegible] ವಿಶ್ರಾಂತಿಯಿಂದ ಪೂರ್ವಸ್ಥಿತಿಗೆ ಬಂದು [illegible] ಉಸಿರಾಡಲು ಪ್ರಾರಂಭಿಸಿದ ನಾಗಲ್ಲಾ ಈ ಯಂತ್ರದಿಂದ ಹೊರಕ್ಕೆ [illegible] ಬಿಡಬಹುದಂತೆ. ಇದರ ಬೆಲೆ [illegible] ಪೌಂಡುಗಳಂತೆ. ಈ ಯಂತ್ರದ ಹೆಸರು ಡ್ರಿಂಕರ್ ಅಪರೇಟಸ್ ಎಂದು. ಲಂಡನ್ನಿನ [illegible] ಒಂದೆರಡು ಆಸ್ಪತ್ರೆಗಳು [illegible] ಇಟ್ಟಿರುವರಂತೆ.

ಪರಿಸ್ಥಿತಿಗೂ, ಈಗಿನ ಸ್ಥಿತಿಗೂ ಅಜಗಜಾಂತರ. ಬ್ರೆಜಿಲ್ ದೇಶದ ಹಣಕಾಸಿನ ಪರಿಸ್ಥಿತಿಯು ಇಂಗ್ಲೆಂಡಿನಲ್ಲೂ ಚಿಂತೆಯನ್ನುಂಟುಮಾಡಿದೆ. ಬ್ರೆಜಿಲಿನ ಡಿಕ್ಟೇಟರಾದ ವಾರ್ಗಾಸ್‌ರವರು ಹೊಸದೇಶದ ಬ್ಯಾಂಕುಗಳು ತಮ್ಮ ದೇಶದಲ್ಲಿ ಆಡಳಿತವನ್ನು ನಡೆಸಲಾಗದೆಂದಿದ್ದಾರೆ. ಇಟಲಿ ಮತ್ತು ಜರ್ಮನಿಗಳೊಡನೆ ಮೈತ್ರಿಯೇ ಇದಕ್ಕೂ ಇರುವುದರಿಂದ ಇಂಗ್ಲೆಂಡಿನ ವ್ಯಾಪಾರಕ್ಕೆ ಪ್ರತಿಬಂಧಕವೇನೂ ಇಲ್ಲ. ಇಂಗ್ಲೆಂಡಿನ ಕಲ್ಲಿದ್ದಲ್ಲನ್ನು ಇಟಲಿಯು ಕೊಳ್ಳುತ್ತಿದೆ.



" ನಾಗರ ಸಿಂಹ " ದ ಒಂದು ದೃಶ್ಯ.

ಸಕ್ಕರೆ ಕಾರ್ಖಾನೆಯಲ್ಲಿ ರಾಜದ್ರೋಹವೆ?

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ಶ್ರೀ॥ ಎಂ. ಎಸ್. ಶ್ರೀನಿವಾಸರಾವ್ ಎಂಬವರು ಕೆಲಸದಲ್ಲಿದ್ದರು. ಅವರು ಕಾಂಗ್ರೆಸ್ ಚಳವಳಿಯಲ್ಲಿ [illegible] ಭಾಗವಹಿಸುತ್ತಿದ್ದರು. ಅನೇಕ ಕಡೆಗಳಲ್ಲಿ ಭಾಷಣ ಮಾಡಿದರು. ಅದರಿಂದ ಕಾರ್ಖಾನೆಯ ಮ್ಯಾನೇಜರ [illegible] ಅವರನ್ನು ಕೆಲಸದಿಂದ ತೆಗೆದುಹಾಕಿದ್ದಾರೆ. ಅ [illegible] ಕಾರಣಗಳು ವಿಚಿತ್ರವಾಗಿವೆ. [illegible] ಬರೆಯುವುದೇನೆಂದರೆ

ಮಂಡ್ಯದ ಸಕ್ಕರೆ ಕಾರ್ಖಾನೆಯ ಮ್ಯಾ [illegible] ಎಂ. ಎಸ್. ಶ್ರೀನಿವಾಸರಾಯರಿಗೆ ತಿಳಿಸುವುದೇನೆಂದರೆ —

ನೀವು [illegible] ಬಹಿರಂಗ ಭಾಷಣಮಾಡಿ ವಿಚಾರ [illegible] ಸಭಿಕರನ್ನು [illegible] ನಿಮ್ಮ ಮೇಲೆ ಸಕ್ಕರೆ ಕಾರ್ಖಾನೆ. ಸಕ್ಕರೆಯನ್ನು ತಯಾರು ಮಾಡುವುದರಲ್ಲಿ ಮಾತ್ರವಲ್ಲ ಮಾಡುವವರು ನಮಗೆ ಬೇಕೇ ವಿನಹ, ರಾಜನೀತಿಜ್ಞರಲ್ಲ. ಕಾರ್ಖಾನೆಯ ಒಬ್ಬ ನೌಕರನು ಅವ್ಯವಹಾರ [illegible] ದಿಂದ ಇದೇ ಕಾರ್ಖಾನೆಯೇ ಒಂದು ರಾಜದ್ರೋಹದ ಚಳವಳಿಯಲ್ಲಿ ಸಿಕ್ಕಿ ನರಳಲು ನಾವು ಸಿದ್ಧರಿಲ್ಲ.

ಆದ್ದರಿಂದ ಮುಂದಿನ [illegible] ನಿಮ್ಮನ್ನು ಕೆಲಸದಿಂದ ತೆಗೆದುಹಾಕಿದೆ. ನೀವು ಕಾರ್ಖಾನೆಯನ್ನು ಈಗಲೇ ಬಿಟ್ಟು ಹೊರಡಬೇಕು. ಪುನಃ ಬರಕೂಡದು.

[ಈ ಅಪ್ಪಣೆಯು ಎಲ್ಲಾ ನ್ಯಾಯಶಾಸ್ತ್ರ ತತ್ವಗಳ ಉಲ್ಲಂಘನೆಯನ್ನೇ ಮಾಡಿರುವುದು. ಸಂ.]

ವಿಷಜ್ವರ, ಕಜ್ಜಿ, ಮುಳಕಡ್ಡಿಗೆ ಚಿಕಿತ್ಸೆ.

ಲೇ:— ಮ॥ ನರಸಿಂಹ ಪುರಾಣಿಕರು, ಹೊಸ್ಪಳ್ಳಿ

ಒಂದು ತೊಲ ಪಾದರಸವನ್ನು ಒಂದು ತಾಮ್ರದ ಪಟ್ಟಿಯಲ್ಲಿ ಹಾಕಿ ಒಂದು ಕಟ್ಟಿಗೆ ಬಳಿದ ಪೇರಲೆಯನ್ನು ಕೆಳಗಿನಿಂದ ಕಾಯಿಸಿ ಹಿಂಡಿದ ರಸದಲ್ಲಿ ತಾಮ್ರದ [illegible] ರಸವೆಲ್ಲಾ ಹಿಂದಾಗುವವರೆಗೂ ಚೆನ್ನಾಗಿ ಮರ್ದಿಸಿ ಅದಕ್ಕೆ [illegible] ತೊಲ ಇಂಗಳೀಕದ ಪುಡಿ, ಒಂದು ತೊಲ ರಸಕರ್ಪೂರದ ಪುಡಿ, ಒಂದು ತೊಲ ಮುರದಾರಸಿಂಗಿಯ ಪುಡಿ, ಒಂದು ತೊಲ ಬಿಳೀ ಮರ್ಕ್ಯದ ಪುಡಿ. ಒಂದು ತೊಲ ಆರತಿ ಕರ್ಪೂರದ ಪುಡಿ ಮತ್ತು ಒಂದು ಪಾವು ದನುವಿನ ಬೆಣ್ಣೆ, ಒಂದು ತೊಲ ವ್ಯಾಸಲೈನ್ ಸೇರಿಸುವದರಿಂದ ಮುಲಾಮು ಸಿದ್ಧವಾಗುವದು ಒಂದು ತೊಲ ಸೇರಿಸಿ ಚೆನ್ನಾಗಿ ಅರೆದು ದಿನಕ್ಕೊಂದಾವರ್ತಿ ಹಚ್ಚಿಕೊಂಡರೆ ಮೇಲೆ ಹೇಳಿದ ವ್ರಣ ಸಹ ಗುಣವಾಗುತ್ತದೆ. ಈ ಔಷಧವು ಹೊಟ್ಟೆಯೊಳಗೆ ಹೋಗಬಾರದು. ಕೈ ಚೆನ್ನಾಗಿ ತೊಳೆದುಕೊಳ್ಳಬೇಕು.

ಗೀತಾ ಸಪ್ತಾಹ

ಮೈಸೂರಿನ ಗೀತಾ ಪ್ರಚಾರಣೀ ಸಭೆಯು ನೆರವಾಗಿ ಇದೇ ಈಶ್ವರನಾಮ ಸಂವತ್ಸರದ ಮಾರ್ಗಶಿರ ಶುದ್ಧ ಏಕಾದಶೀ [illegible] ನೇ ಮಂಗಳವಾರದಿಂದ [illegible] ಭಾನುವಾರದವರೆಗೆ ಶ್ರೀ ಗೀತಾ ಜಯಂತಿ ಪ್ರಯುಕ್ತ ಶ್ರೀ ಗೀತಾ ಸಪ್ತಾಹವೂ ಮತ್ತು ತತ್ಸಂಬಂಧವಾದ ಮಹೋತ್ಸವಗಳೂ, ಶ್ರೀವರಾ [illegible] ಸುಬ್ರಹ್ಮಣ್ಯ ಅಯ್ಯರ್‌ರವರ ಆಧ್ಯಕ್ಷತೆಯಲ್ಲಿ ಮೈಸೂರು ದೊಡ್ಡ ಪೇಟೆ ಯಲ್ಲಿರುವ ಸಾಹುಕಾರ್ ಜಗ್ಗೂ [illegible] ರವರ ಧರ್ಮಶಾಲೆಯಲ್ಲಿ ನಡೆಯುವುವು. ಸಮಸ್ತರೂ ಭಾಗಿಗಳಾಗಿ ಭಗವದನುಗ್ರಹಕ್ಕೆ ಪಾತ್ರರಾಗಬೇಕಾಗಿ ಕೋರಲ್ಪಟ್ಟಿದೆ. ಪದ್ಧತಿ ಪ್ರಕಾರ ಪಾರಾಯಣ, ಉಪನ್ಯಾಸ ಪರೀಕ್ಷೆಗಳು ನಡೆಯುವುವು. [illegible] ನೇ ತಾರೀಖು ಉತ್ಸವವೂ ನಡೆಯುತ್ತದೆ.

ಪವಿತ್ರ ಹೊಸ ಕನ್ನಡ ಪಾಠಬೋಧೆ

ಶ್ರೀ॥ ನರಸಿಂಹ ಪುರಾಣಿಕರು ರಚಿಸಿರುವ ಮೇಲ್ಕಂಡ ಗ್ರಂಥವು ಆರು ಭಾಗಗಳನ್ನುಳ್ಳದ್ದಾಗಿ ಕಾಣುತ್ತಿದ್ದಾರೆ. ಇವುಗಳನ್ನು [illegible] ಪ್ರಕಟಿಸಿದ್ದಾರೆ. ಅವುಗಳಲ್ಲಿ ಚಿತ್ರಸಹಿತವಾಗಿ ಸ್ವಾಭಾವಿಕವಾಗಿ [illegible] ಕ್ರಮಕ್ರಮವಾಗಿ ಕಲಿಸುವ [illegible] [illegible] [illegible] [illegible] ಬೆಲೆ [illegible] ಹೊಸ್ಪಳ್ಳಿ.

ಸಾಧ್ವಿ

೧೩—೧೨—೩೭ ನೇ ಸೋಮವಾರ

ರಾಜೀನಾಮೆಗಳು.

ಮೈಸೂರು ಸರ್ಕಾರದವರ ಇಂದಿನ ನೀತಿಯನ್ನು ಖಂಡಿಸುವುದಕ್ಕಾಗಿಯೂ, ಪ್ರಜಾಭಿಪ್ರಾಯವು ಕಾಂಗ್ರೆಸ್ಸಿನ ಕಡೆಯೇ ಇದೆಯೆಂಬುದನ್ನು ಪ್ರಕಾಶಪಡಿಸುವುದಕ್ಕಾಗಿಯೂ, ಶಾಸನ ಸಭೆಯ ಹನ್ನೊಂದು ಜನ ಕಾಂಗ್ರೆಸ್ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟಿದ್ದಾರೆ. ಮೈಸೂರಿನ ರಾಜಕೀಯ ಇತಿಹಾಸದಲ್ಲಿ ಇದೊಂದು ಅಪೂರ್ವ ಪ್ರಸಂಗ. ಒಂದು ಬಿಕ್ಕಟ್ಟಿನ ರಾಜಕೀಯ ಪರಿಸ್ಥಿತಿಯು ಸಂಪ್ರಾಪ್ತವಾದಾಗ ಮಹಾಜನರ ಅಭಿಪ್ರಾಯವು ಯಾವ ರೀತಿಯಿದೆಯೆಂಬುದನ್ನು ಸ್ಪಷ್ಟವಾಗಿ ವ್ಯಕ್ತಪಡಿಸಲು ಎಲ್ಲಾ ದೇಶಗಳಲ್ಲಿಯೂ ಪ್ರಜಾ ಮುಖಂಡರು ಅನುಸರಿಸುವ ಶಾಸನ ಬದ್ಧವಾದ ನೀತಿಯೇ ಇದು.

ಪ್ರಜೆಗಳಿಂದ ಚುನಾಯಿತರಾಗಿ ಬಂದು ಶಾಸನ ಸಭೆಗಳಲ್ಲಿ ಸ್ಥಾನವನ್ನು ಪಡೆದಿರುವ ಸದಸ್ಯರು ತಮ್ಮ ತಮ್ಮ ಸ್ಥಾನಗಳಿಂದ ಸಂಪೂರ್ಣವಾಗಿಯೂ ತೃಪ್ತಿಕರವಾಗಿಯೂ ಪ್ರಜಾಸೇವೆ ಮಾಡಲು ಸಾಧ್ಯವಿಲ್ಲವೆಂದು ತೋರಿದಾಗ ಈ ಕ್ರಮವನ್ನೇ ಅನುಸರಿಸುವರು. ಕೆಲವು ಸಂದರ್ಭಗಳಲ್ಲಿ ಸದಸ್ಯರು ಒಟ್ಟಾಗಿಯೂ, ಕೆಲವು ಸಂದರ್ಭಗಳಲ್ಲಿ ಎಂದರೆ, ದೇಶದ ಕೇವಲ ಒಂದೊಂದು ಭಾಗಕ್ಕೆ ಮಾತ್ರ ಅನ್ವಯಿಸುವ ಸಮಸ್ಯೆಗಳು ಬಂದಾಗ ವೈಯಕ್ತಿಕವಾಗಿಯೂ ಹೀಗೆ ಮಾಡುತ್ತಾರೆ.

ಅನಂತರ ನಡೆಯುವ ಉಪಚುನಾವಣೆಯಲ್ಲಿ ಅವರುಗಳೇ ಉಮೇದುವಾರರಾಗಿ ನಿಲ್ಲುತ್ತಾರೆ. ತಮ್ಮ ರೀತಿ ನೀತಿಗಳನ್ನೂ ಧ್ಯೇಯಗಳನ್ನೂ ಮಹಾಜನರ ಮುಂದಿಡುತ್ತಾರೆ. ಅವರಿಗೇ ಪುನಃ ಬೆಂಬಲವು ದೊರೆತರೆ ಆಗ ಸರ್ಕಾರದ ನೀತಿಯನ್ನು ಖಂಡಿಸಿದಂತೆ ಆಯಿತು. ಅವರು ಸೋತರೆ ಸರ್ಕಾರದ ನೀತಿಗೇ ಬೆಂಬಲ ದೊರೆಯುವುದು.

ಈ ರೀತಿಯಲ್ಲಿ ಪ್ರದರ್ಶಿಸುವ ಅಭಿಪ್ರಾಯಗಳಂತೆ ನಾಗರಿಕ ದೇಶಗಳ ಸರ್ಕಾರಗಳವರೂ ತಮ್ಮ ವರ್ತನೆಯನ್ನು ಕ್ರಮಪಡಿಸಿಕೊಳ್ಳುವರು. ಇದು ರಾಜಕೀಯದಲ್ಲಿ ಮುಂದುವರಿದ ಎಲ್ಲಾ ದೇಶಗಳಲ್ಲಿಯೂ ನಡೆಯುವ ಪದ್ಧತಿ. ಇದು ಮಹಾಜನರ ಮತ್ತು ಪ್ರಜಾಪ್ರತಿನಿಧಿಗಳ ಹಕ್ಕು. ಆದರೆ ನಮ್ಮ ಸೀಮೆಯಲ್ಲಿ ಎಲ್ಲಾ ಹೊಸದು. ರಾಜಕೀಯ ಅನುಭವವು ಎಲ್ಲರಿಗೂ ಹೊಸದಾಗಿ ಬರಬೇಕಾಗಿದೆ. ಮಹಾಜನರೂ ಪ್ರಜೆಗಳ ಮುಖಂಡರೂ ತಮ್ಮ ಹಕ್ಕು ಬಾಧ್ಯತೆಗಳನ್ನು ಚಲಾಯಿಸಲು ಈಗೀಗ ತಿಳಿಯುತ್ತಿದ್ದಾರೆ. ಪ್ರಜಾಸ್ವಾತಂತ್ರ್ಯಸಾಧನಾ ಮಾರ್ಗದಲ್ಲಿ ಇದೊಂದು ಮೆಟ್ಟಿಲು.

ಈ ಪ್ರಸಂಗದ ಸಂಪೂರ್ಣ ಪರಿಣಾಮವು ನಮ್ಮ ಸರ್ಕಾರದವರ ಮೇಲೆ ಆಗಿ ಅವರು ಮಹಾ ಜನರ ಅಭಿಪ್ರಾಯದಂತೆ ತಮ್ಮ ರೀತಿನೀತಿಗಳನ್ನು ಮಾರ್ಪಡಿಸಿಕೊಂಡು ದೇಶದಲ್ಲಿ ಸುಖ ಶಾಂತಿಗಳನ್ನು ಸ್ಥಾಪಿಸಲೆಂದು ಹಾರೈಸುತ್ತೇವೆ.

ಕೋರ್ಟುಗಳೂ ಸರ್ಕಾರಗಳೂ

ಕಳೆದ ಸೋಮವಾರ ದೆಹಲಿ ನಗರದಲ್ಲಿ ಭರತಖಂಡದ ಫೆಡರಲ್ ಕೋರ್ಟು ಆರಂಭಿಸಲ್ಪಟ್ಟಿತು. ಅನೇಕ ಜನ ಮಹಾ ಮಹಿಮರಾದ ವಕೀಲರುಗಳೂ, ದೊಡ್ಡ ಮನುಷ್ಯರೂ ಸೇರಿದ್ದರು. ನ್ಯಾಯ ನಿರ್ವಹಣೆಯು ನಿಷ್ಪಕ್ಷಪಾತದಿಂದಲೂ, ಧರ್ಮ ದೃಷ್ಟಿಯಿಂದಲೂ ನಡೆಯಬೇಕೆಂದು ಹೇಳಿ ಹಲವರು ಮಾತನಾಡಿದರು.

ಸರ್ ತೇಜ್ ಬಹದ್ದೂರ್ ಸಪ್ರೂರವರು ಮಾಡಿದ ಭಾಷಣವು ಬಹಳ ಪ್ರಭಾವಶಾಲಿಯಾಗಿತ್ತು. ಕೋರ್ಟುಗಳು ಯಾವ ಪ್ರಭಾವಕ್ಕೂ ಒಳಗಾಗಬಾರದೆಂದು ಅವರು ತಿಳಿಸಿದರು. ಸರ್ಕಾರವಾಗಲಿ ಅಥವ ರಾಜಕೀಯ ಪಾರ್ಟಿಗಳಾಗಲಿ ಇವುಗಳಲ್ಲಿ ಯಾವುದರ ಕಡೆಗೂ ದಾಕ್ಷಿಣ್ಯವನ್ನು ತೋರಿಸಕೂಡದೆಂದು ಸೂಚಿಸಿದರು. ರಾಜಕೀಯ ಅಭಿಪ್ರಾಯಗಳಲ್ಲಿ ಕೋರ್ಟುಗಳು ಪ್ರವೇಶಿಸಕೂಡದೆಂದೂ ತಿಳಿಸಿದರು. ಇದು ನ್ಯಾಯದ ನಿಜವಾದ ಆದರ್ಶ. ಇಂತಹ ಪರಿಸ್ಥಿತಿಯು ದೇಶದಲ್ಲೆಲ್ಲಾ ಬರಲೆಂದು ಎಲ್ಲರೂ ಹಾರೈಸುತ್ತಾರೆ. ಅಲ್ಲದೆ ಎಲ್ಲಾ ನ್ಯಾಯಸ್ಥಾನಗಳೂ ಈ ಆದರ್ಶವನ್ನೇ ಇಟ್ಟುಕೊಳ್ಳಲೆಂದು ಸಕಲರೂ ಹಾರೈಸುತ್ತಾರೆ.

ಈಗಿರುವ ಪದ್ಧತಿಯಲ್ಲಿ ಕೋರ್ಟುಗಳೂ, ನ್ಯಾಯಾಧೀಶರುಗಳೂ ರಾಜ್ಯಾಡಳಿತ ನಡೆಸುವವರ (ಎಗ್ಸಿಕ್ಯುಟಿವ್) ಅಧೀನರು. ಅನೇಕ ಸಂದರ್ಭಗಳಲ್ಲಿ ಅಧಿಕಾರಿ ವರ್ಗದವರ ಕೃತ್ಯಗಳನ್ನೇ ಅವರು ವಿಮರ್ಶೆ ಮಾಡಬೇಕಾಗುತ್ತದೆ. ಆಗ ತಮ್ಮ ಸ್ವತಂತ್ರವಾದ ವಿವೇಚನೆಯನ್ನು ಮಾಡುವುದು ಅವರಿಗೆ ಕಷ್ಟವಾಗುತ್ತದೆ. ಆದ್ದರಿಂದ ಈ ಎರಡು ರಾಜ್ಯಾಡಳಿತ ಭಾಗಗಳನ್ನೂ ಸಂಪೂರ್ಣವಾಗಿ ಬೇರೆ ಬೇರೆಯಾಗಿಡಬೇಕೆಂದು ವಾದವು ನಡೆಯುತ್ತಿದೆ. ಈ ಬದಲಾವಣೆಯು ಆದಲ್ಲದೆ ಸಂಪೂರ್ಣವಾದ ನ್ಯಾಯ ಪರಿಷ್ಕರಣವು ಆಗುವುದು ಸಾಧ್ಯವಿಲ್ಲ.

ದಂಡಿನ ಪ್ರಶ್ನೆ

ಬೆಂಗಳೂರು ದಂಡನ್ನು ಸಧ್ಯದಲ್ಲಿಯೇ ಮೈಸೂರಿಗೆ ಕೊಟ್ಟುಬಿಡುತ್ತಾರೆಂಬ ವದಂತಿಯೊಂದು ಹೊರಟಿತ್ತು. ಇದಕ್ಕಾಗಿ ಎಲ್ಲಾ ಸಿದ್ಧತೆಗಳೂ ಸಂಪೂರ್ಣವಾಗಿವೆಯೆಂದೂ, ತಿಳಿಸಲ್ಪಟ್ಟಿತ್ತು. ಆದರೆ ಈ ಸುದ್ದಿಗೆ ಆಧಾರವಿಲ್ಲವೆಂದು ಅಧಿಕಾರಯುತವಾಗಿ ತಿಳಿದು ಬಂದಿದೆ. ಸಿದ್ಧತೆಗಳು ಇನ್ನೂ ಆಗಿಲ್ಲ. ದಂಡಿನ ಸಿವಿಲ್ ಪ್ರದೇಶಗಳನ್ನು ಮಾತ್ರ ಸಧ್ಯಕ್ಕೆ ಕೊಡುವರಂತೆ. ಮಿಲಿಟರಿ ಪ್ರದೇಶವನ್ನು ಕೊಡುವ ಯೋಜನೆಯು ಇನ್ನೂ ಇಲ್ಲ. ದಂಡಿನಲ್ಲಿರುವ ಪ್ರಮುಖ ಸಂಸ್ಥೆಗಳ ಮತ್ತು ದೊಡ್ಡ ಮನುಷ್ಯರ ಅಭಿಪ್ರಾಯಗಳನ್ನು ಅಧಿಕಾರಿಗಳು ತೆಗೆದುಕೊಳ್ಳುತ್ತಿರುವರು.

ಈ ವಿಷಯವು ಬಹಳ ದಿನಗಳಿಂದಲೂ ಎಳೆಯುತ್ತಿದೆ. ಇನ್ನೇನು ದಂಡು ಮೈಸೂರಿಗೆ ಸೇರಿಬಿಟ್ಟಿತು, ಎನ್ನುವಷ್ಟರಲ್ಲಿ ಏನಾದರೂ ಒಂದು ತೊಡಕು ಬರುತ್ತಿದೆ. ಹಿಂದೆಯೇ ಅಲ್ಲಿನ ಜನರ ಅಭಿಪ್ರಾಯಗಳನ್ನು ತೆಗೆದುಕೊಳ್ಳಲಾಗಿತ್ತು. ಮೈಸೂರಿಗೆ ದಂಡನ್ನು ಕೊಟ್ಟುಬಿಡಬಹುದೆಂಬ ಅಭಿಪ್ರಾಯವೇ ಅನೇಕ ಕಡೆಗಳಿಂದ ಬಂದಿತ್ತು. ಈಗ ಪುನಃ ಅಭಿಪ್ರಾಯಗಳನ್ನು ತೆಗೆದುಕೊಳ್ಳುವುದೇತಕ್ಕೊ? ಇದರಿಂದ ಬರೀ ಕಾಲಹರಣಕ್ಕೆ ಅವಕಾಶ. ಈ ಪ್ರಶ್ನೆಯು ಸಂಪೂರ್ಣವಾಗಿ ಬಗೆ ಹರಿಯಲು ಇನ್ನೂ ಎಷ್ಟು ದಿನಗಳು ಬೇಕೊ?

ಕಸದಿಂದ ರಸ

ಇಂಗ್ಲೆಂಡಿನಲ್ಲಿ ಕಸವೆಂದು ಬಿಸಾಡುವ ಸಾಮಗ್ರಿಗಳ ಬೆಲೆಯು ವರ್ಷಕ್ಕೆ ೩೫ ಲಕ್ಷ ಪೌಂಡುಗಳಾಗುತ್ತವೆ. ಅವುಗಳನ್ನು ಸಂಗ್ರಹಿಸಿ ಉತ್ತಮವಾದ ಗೊಬ್ಬರವನ್ನು ಮಾಡಲು ಏರ್ಪಾಡಾಗಿದೆ. ಇದಕ್ಕಾಗಿ ಪ್ರತಿದಿನವೂ ಹೊಸ ಹೊಸ ಶೋಧನೆಗಳು ನಡೆಯುತ್ತಿವೆ. ಸೀಮೆ ಗೊಬ್ಬರಕ್ಕಿಂತಲೂ ಅಗ್ಗವೂ ಹೆಚ್ಚು ಪ್ರಯೋಜನಕರವೂ ಆದ ಗೊಬ್ಬರವನ್ನು ತಯಾರಿಸುತ್ತಿದ್ದಾರೆ. ಇದರಿಂದ ಪುರನಿವಾಸಿಗಳಿಗೆ ಕಡೇ ಪಕ್ಷ ಐದು ಸಾವಿರ ಪೌಂಡುಗಳ ಲಾಭವು ದೊರೆಯುತ್ತದೆ.

ಲೋಹದ ಚೂರುಗಳೂ ಕಾಗದದ ಚೂರುಗಳೂ, ಚಿಂದಿ ಬಟ್ಟೆಗಳೂ, ಮೂಳೆ, ಗಾಜು, ಬೂದಿ ಮುಂತಾದುವೂ ವಿಶೇಷವಾಗಿ ಕಸದೊಡನೆ ದೊರೆಯುತ್ತವೆ. ಹೀಗೆ ಕಸದಿಂದಲೂ ಪ್ರಯೋಜನ ಪಡೆಯುವ ಏರ್ಪಾಡುಗಳಾಗುತ್ತಿವೆ.

ಸುಬ್ಬರಾಯನ ಕೆರೆಗೂ ಬಂಧನ

ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಹಿಂದೆ ಮೈಸೂರು ಟೌನ್‌ಹಾಲ್ ಮೈದಾನದಲ್ಲಿಯೂ ಅರಮನೆ ಸುತ್ತಮುತ್ತಲಿನಲ್ಲಿರುವ ಪಾರ್ಕುಗಳಲ್ಲಿಯೂ ಸಭೆಗಳನ್ನು ಮಾಡಕೂಡದೆಂದು ಹುಕುಂ ಮಾಡಿದ್ದರು. ಆದ್ದರಿಂದ ಕಾಂಗ್ರೆಸ್ ಸಮಿತಿಯವರು ಆ ಸ್ಥಳಗಳನ್ನು ಬಿಟ್ಟು ಸುಬ್ಬರಾಯನ ಕೆರೆ ಮೈದಾನದಲ್ಲಿ ಕಳೆದ ಒಂದೂವರೆ ತಿಂಗಳಿನಿಂದಲೂ ಸಭೆಗಳನ್ನು ನಡೆಸುತ್ತಿರುವರು. ಜನರು ತಂಡೋಪತಂಡವಾಗಿ ಬಂದು ಸೇರಿ ಭಾಗ ವಹಿಸುತ್ತಿರುವರು. ಯಾವ ಗಲಭೆಗಳಾಗಲೀ, ಕೋಲಾಹಲವಾಗಲೀ ಆಗಿಲ್ಲ. ಆದರೂ ಸದರಿ ಕೆರೆಯ ಅಂಗಳದಲ್ಲಿ ಸಭೆಗಳನ್ನು ನಡೆಸಿದರೆ ಜನರಿಗೆ ತೊಂದರೆಯಾಗುವುದೆಂಬ ಕಾರಣದಮೇಲೆ ಡಿ॥ ಮ್ಯಾಜಿಸ್ಟ್ರೇಟರು ಅಲ್ಲಿ ಎರಡು ತಿಂಗಳಕಾಲ ಸಭೆ ಮಾಡಕೂಡದೆಂದು ತಿಳಿಸಿದ್ದಾರೆ. ಡಿಸ್ಟ್ರಿಕ್ಟ್ ಕೋರ್ಟು ಎದುರಿಗಿರುವ ಪಾರ್ಕನ್ನೂ ಈ ನಿರ್ಬಂಧಕ್ಕೆ ಸೇರಿಸಿದ್ದಾರೆ. ಊರಿನಲ್ಲಿ ಎಲ್ಲೂ ಸಭೆಗಳಾಗಕೂಡದೆಂದು ಮಾತ್ರ ನಿಷೇಧಿಸಿಲ್ಲ. ಆದ್ದರಿಂದ ಬೇರೆ ಸ್ಥಳಗಳನ್ನು ಹುಡುಕಬೇಕು.

ರುಜು ಹಾಕಲು ಹೊತ್ತಿಲ್ಲವೆ?

ರುಜು ಹಾಕದ ಒಂದು ಕಾಗದವು ಸರ್ಕಾರದಿಂದ ಬೆಂಗಳೂರು ಪೌರ ಸಭೆಗೆ ಬಂದು ಬಿಟ್ಟಿದ್ದಿತಂತೆ. ಅದರ ಮೇಲೆ ವಿಶೇಷ ಚರ್ಚೆ ನಡೆದು ಕಡೆಗೆ ಆ ಕಾಗದವನ್ನೇ ಗಮನಕ್ಕೆ ತೆಗೆದುಕೊಳ್ಳಬೇಕಾಗಿಲ್ಲವೆಂದು ತೀರ್ಮಾನವಾಯಿತು. ಕಾಗದಕ್ಕೆ ರುಜುವನ್ನು ಹಾಕದೆ ಕಳುಹಿಸುವ ಪ್ರಸಂಗವು ಪ್ರಮಾದಕರವಾದುದು. ಸದರಿ ಕಾಗದದಲ್ಲಿ ಪೌರ ಸಭೆಯ ಮೇಲೆ ಅನೇಕ ಟೀಕೆಗಳಿದ್ದವು. ಟೀಕೆ ಮಾಡುವುದಕ್ಕೆ ಹೋಗಿ ಕಾಗದವೇ ಟೀಕೆಗೆ ಒಳಗಾಗಬಹುದೆ? ನಮ್ಮ ಅಧಿಕಾರಿಗಳಿಗೆ ರುಜು ಹಾಕಲು ಹೊತ್ತಿರಲಿಲ್ಲವೆ? ಅಥವಾ ಅವರ ಕೈ ಕೆಳಗಿನ ನೌಕರರು ಅಷ್ಟು ಉದಾಸೀನದಿಂದ ವರ್ತಿಸುತ್ತಿರುವರೆ?

ಮಹಾತ್ಮ ಗಾಂಧಿಯವರು

ಮಹಾತ್ಮರವರು ದೇಹಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳುವುದಕ್ಕಾಗಿ ಬೊಂಬಾಯಿ ಬಳಿಯಿರುವ ಜುಹು ಎಂಬಲ್ಲಿಗೆ ಬಂದಿರುವರು. ಇದು ಸಮುದ್ರ ತೀರ, ಬಹಳ ಪ್ರಶಾಂತವಾಗಿದೆ. ಅಲ್ಲಿನ ಹವೆ ಮಹಾತ್ಮರಿಗೆ ತುಂಬಾ ಅನುಕೂಲವಾಗಿದೆ. ಅವರ ದೇಹ ಸ್ಥಿತಿಯು ಈಗ ಬಹಳ ಉತ್ತಮಗೊಂಡಿದೆ. ಅವರಿಗೆ ವಿಶ್ರಾಂತಿಯು ಬಹಳ ಅವಶ್ಯಕ.

ವಜ್ರದ ಸುಂಕ

ಇಂಡಿಯಾ ಸರ್ಕಾರವು ವಜ್ರಗಳ ಮೇಲಿನ ಸುಂಕವನ್ನು ಶೇ॥ ೧೦ ರಿಂದ ೫ಕ್ಕೆ ಇಳಿಸಬೇಕೆಂದು ನಿರ್ಧರಿಸಿದೆ. ಇದರಿಂದ ಬಡ ಪ್ರಜೆಗಳಿಗೆ ಬಹಳ ಉಪಕಾರವಾಗಬಹುದಲ್ಲವೆ?

ವರ್ತಮಾನ ಸಂಗ್ರಹ

ರಾಜೀನಾಮೆಗಳು

ಸರ್ಕಾರದ ನೀತಿಯನ್ನು ಖಂಡಿಸಿ ಪ್ರಜಾಭಿಪ್ರಾಯವು ಕಾಂಗ್ರೆಸ್ಸಿನ ಕಡೆ ಇದೆಯೆಂಬುದನ್ನು ಪ್ರಕಟಪಡಿಸುವುದಕ್ಕಾಗಿ ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಪೈಕಿ ಹನ್ನೊಂದು ಜನರು ರಾಜೀನಾಮೆ ಇತ್ತಿದ್ದಾರೆ. ಕೋಲಾರದ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ಶ್ರೀ|| ಕೆ. ಚಂಗಲರಾಯ ರೆಡ್ಡಿಯವರೂ, ಮದ್ದೂರು ಪೌರಸಭಾ ಉಪಾಧ್ಯಕ್ಷಸ್ಥಾನಕ್ಕೆ ಶ್ರೀ|| ಹೆಚ್. ಕೆ. ವೀರಣ್ಣಗೌಡರೂ ಸಹ ರಾಜೀನಾಮೆ ಕೊಟ್ಟಿದ್ದಾರೆ.

ರಾಜದ್ರೋಹದ ಮೊಕದ್ದಮೆಗಳು

ರಾಜದ್ರೋಹದ ಆಪಾದನೆಗೆ ಒಳಗಾಗಿರುವ ಶ್ರೀ|| ಎಸ್. ರಂಗರಾಮಯ್ಯ, ಶ್ರೀ|| ಎಂ. ಎನ್. ಜೋಯಿಸರನ್ನು ಜಾಮೀನಿನ ಮೇಲೆ ಬಿಡಬೇಕೆಂದು ಅರ್ಜಿ ಹಾಕಲ್ಪಟ್ಟಿತು. ರಂಗರಾಮಯ್ಯನವರ ಜಾಮೀನು ಅರ್ಜಿಯನ್ನು ಸಿಟಿ ಮ್ಯಾಜಿಸ್ಟ್ರೇಟರು ತಿರಸ್ಕರಿಸಿದರು. ಡಿ|| ಸೆಷನ್ಸ್ ಜಡ್ಜರಲ್ಲಿ ಅಪೀಲು ಮಾಡಲ್ಪಟ್ಟಿತು. ಅವರೂ ತಿರಸ್ಕರಿಸಿದರು. ಹೈಕೋರ್ಟಿನಲ್ಲಿ ಜಾಮೀನಿನ ಮೇಲೆ ಬಿಡಬಹುದೆಂದು ತೀರ್ಮಾನವಾಗಿ ಮೊನ್ನೆ ರಾತ್ರಿ ಅವರು ಬಿಡುಗಡೆಯಾದರು. ಶ್ರೀ|| ಎಂ. ಎನ್. ಜೋಯಿಸರ ಜಾಮೀನು ವಿಚಾರವಾಗಿ ಕಳೆದ ಶುಕ್ರವಾರ ವಾದವಿವಾದಗಳು ನಡೆದವು. ಈ ದಿನ ಫಲಿತಾಂಶವು ಗೊತ್ತಾಗುವುದು.

ಬಹಿರಂಗ ಸಭೆಗಳು

ರಾಜಧಾನಿಯ ಸುಬ್ಬರಾಯನ ಕೆರೆ ಮೈದಾನದಲ್ಲಿ ಕಳೆದ 6 ನೇ ತಾ|| ಮತ್ತು 8 ನೇ ತಾ|| ಭಾರಿ ಬಹಿರಂಗ ಸಭೆಗಳಾದವು. ಸರ್ಕಾರದ ಇಂದಿನ ನೀತಿಯನ್ನು ಖಂಡಿಸುವುದಕ್ಕೂ ಮತ್ತು ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಸಂಕಲ್ಪವನ್ನು ಮಾಡುವುದಕ್ಕೂ ಭಾಷಣಗಳಾದವು. ಠರಾವುಗಳೂ ಮಾಡಲ್ಪಟ್ಟವು. ಶಾಸನ ಸಭೆಗೆ ರಾಜೀನಾಮೆ ಕೊಟ್ಟ ಸದಸ್ಯರಿಗೆ ಅಭಿವಂದನೆ ಸಲ್ಲಿಸಲ್ಪಟ್ಟು ಮಹಾಜನರು ಸದಾಕಾಲದಲ್ಲಿಯೂ ಅವರಿಗೆ ಬೆಂಬಲರಾಗಿರಬೇಕೆಂದು ಪ್ರಾರ್ಥಿಸಲ್ಪಟ್ಟಿತು. ಸಭೆಗಳಿಗೆ ಸುಮಾರು ಐದಾರು ಸಾವಿರ ಜನರು ಸೇರುತ್ತಿದ್ದರು.

ಶಾರದಾವಿಲಾಸ ಹೈಸ್ಕೂಲ್

ಜನವರಿ ಅಂತ್ಯದಲ್ಲಿ ಮೈಸೂರು ಶಾರದಾವಿಲಾಸ ಹೈಸ್ಕೂಲಿನ ವಾರ್ಷಿಕೋತ್ಸವವನ್ನು ನಡಸುವಂತೆ ನಿಶ್ಚಯವಾಗಿದೆ. ಸ್ಕೂಲಿನ ಸದುದ್ದೇಶಗಳನ್ನು ನೆರವೇರಿಸಲು ಒಂದು ಮೂಲ ನಿಧಿಯನ್ನು ಸ್ಥಾಪಿಸಬೇಕೆಂದು ತೀರ್ಮಾನವಾಗಿದೆ. ಸ್ಕೂಲಿನ ವಿದ್ಯಾರ್ಥಿಗಳೆಲ್ಲರೂ ವಾರ್ಷಿಕೋತ್ಸವಕ್ಕೂ ಮೂಲಧನದ ನಿಧಿಗೂ ಉದಾರವಾಗಿ ದ್ರವ್ಯ ಸಹಾಯವನ್ನು ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಿಗೆ ಕಳುಹಿಸಬೇಕಾಗಿ ಕೋರಲ್ಪಟ್ಟಿದೆ.

ಕೇಂಬ್ರಿಡ್ಜಿನಲ್ಲೂ ಖಂಡನೆ

ಬೆಂಗಳೂರಿನಲ್ಲಿ ಗುಂಡು ಹಾರಿಸಿದ ಪ್ರಕರಣವನ್ನು ಖಂಡಿಸಲು ಕೇಂಬ್ರಿಡ್ಜಿನ ಸೋಶಲಿಸ್ಟ್ ಮತ್ತು ಲಿಬರಲ್ ಸಂಘಗಳು ಬಹಿರಂಗ ಸಭೆಗಳನ್ನು ನಡೆಸಿದವು. ಆಕ್ಸ್‌ಫರ್ಡಿನ ವಿದ್ಯಾರ್ಥಿ ಸಂಸ್ಥೆಗಳು ಪೋಲೀಸರ ವರ್ತನೆಯನ್ನು ಖಂಡಿಸಿವೆ. ಬೆಂಗಳೂರಿನ ಪ್ರಕರಣವು ಇಂಗ್ಲೆಂಡಿನಲ್ಲಿರುವ ಭಾರತೀಯ ವಿದ್ಯಾರ್ಥಿಗಳಿಗೆ ಕಳವಳವನ್ನುಂಟುಮಾಡಿದೆ. ಉದ್ರೇಕಗೊಂಡ ಗುಂಪಿನ ಮೇಲೆ ಗುಂಡುಗಳನ್ನು ಹಾರಿಸುವುದು ಬರಿ ಮೂರ್ಖತನವೆಂದು ಅವರು ಅಭಿಪ್ರಾಯಪಡುತ್ತಾರೆ.

ಕರ್ನಾಟಕ ಸಂಘ, ಚನ್ನರಾಯಪಟ್ಟಣ

ಈ ಸಂಘದವರು ಚೆನ್ನರಾಯಪಟ್ಟಣದ ತಾಲ್ಲೂಕಿನ ಪ್ರಾಥಮಿಕ ಶಾಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಕಂಠ ಪಾಠ ಸ್ಪರ್ಧೆಯನ್ನೂ ಹಾಸನ ಜಿಲ್ಲೆಯ ಮಾಧ್ಯಮಿಕ ಶಾಲಾ ಮತ್ತು ಇಂಗ್ಲಿಷ್ ಸ್ಕೂಲು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕಂಠ ಪಾಠ ಸ್ಪರ್ಧೆಯನ್ನೂ ಕನ್ನಡ ನಾಡಿಗೆಲ್ಲಾ ಲೇಖನ ಸ್ಪರ್ಧೆಗಳನ್ನೂ ಏರ್ಪಡಿಸಿದ್ದಾರೆ. ಅಪೇಕ್ಷಕರ ಪತ್ರಿಕೆಗಳು ಪ್ರವೇಶಧನದೊಡನೆ ಮುಂದಿನ ಫೆಬ್ರವರಿ ಕೊನೆಯೊಳಗೆ ಕಾರ್ಯದರ್ಶಿಗಳಿಗೆ ತಲುಪಬೇಕು. ಏಪ್ರಿಲ್ 10 ನೇ ತಾ|| ಬಹುಮಾನ ವಿನಿಯೋಗವು ನಡೆಯುವುದು.

ಶರಣ ಸಾಹಿತ್ಯ

ಕೀರ್ತನ ಕೇಸರಿ ಮುಂತಾದ ಬಿರುದುಗಳನ್ನು ಪಡೆದಿರುವ ತುಮಕೂರಿನ ಶ್ರೀ|| ಶಿವಮೂರ್ತಿ ಶಾಸ್ತ್ರಿಗಳವರು "ಶರಣ ಸಾಹಿತ್ಯ" ಎಂಬ ಹೆಸರಿನ ಮಾಸಪತ್ರಿಕೆಯನ್ನು ಹೊರಡಿಸಲು ಉದ್ಯುಕ್ತರಾಗಿದ್ದಾರೆ. ಇದಲ್ಲದೆ ವೀರಶೈವ ಮತಕ್ಕೆ ಸಂಬಂಧಪಟ್ಟ ಅನೇಕ ಅಮೂಲ್ಯ ಗ್ರಂಥಗಳನ್ನು ಪ್ರಕಟಿಸುವವರಾಗಿದ್ದಾರೆ. ಈ ಕಾರ್ಯದಲ್ಲಿ ಇವರಿಗೆ ಅನೇಕ ಜನ ಮಾನ್ಯ ವೀರಶೈವ ಮಹನೀಯರು ಬೆಂಬಲರಾಗಿದ್ದಾರೆ. ಇವರ ಪ್ರಯತ್ನವು ಬಹಳ ಶ್ಲಾಘ್ಯವಾದದ್ದು. ಕನ್ನಡ ಭಾಷಾಭಿಮಾನಿಗಳೆಲ್ಲರೂ ಇದಕ್ಕೆ ಬೆಂಬಲರಾಗುವರೆಂದು ನಂಬಿದ್ದೇವೆ.

ಕೆಲಸಗಾರರ ರಜಾ

ಹತ್ತಿ ಗಿರಣಿ ಕೂಲಿಯವರಿಗೆ ವರ್ಷಕ್ಕೆ ಸಂಬಳ ಸಹಿತ ೪ ವಾರಗಳ ರಜಾ ಕೊಡುವ ಸಲಹೆಯನ್ನು ಬೊಂಬಾಯಿ ಸರ್ಕಾರವು ಪರಿಗಣಿಸುತ್ತಿದೆ.

ಹತ್ತಿ ಬೆಳೆ

ಈ ವರ್ಷ ಮಾರ್ಕಟ್ಟಿಗೆ ಇಂಡಿಯಾದಲ್ಲಿ ೩೧-೮-೩೭ ರಲ್ಲಿ [illegible] ಮೂಟೆ ಹತ್ತಿಯಿದ್ದಿತು. [illegible] ಎಕರೆ ಜಮೀನಿನಲ್ಲಿ ಹತ್ತಿ ಬೆಳೆಯಾಯಿತು.

ಕಾಂಗ್ರೆಸ್ ಆಡಳಿತ

ಸಂಯುಕ್ತ ಪ್ರಾಂತದ ಸರ್ಕಾರದವರು ಅನೇಕ ಆದರ್ಶರೂಪವಾದ ಏರ್ಪಾಡುಗಳನ್ನು ಮಾಡಿರುವರು. ಸುಮಾರು ಮೂರುಸಾವಿರ ಮಂದಿ ಸಾಮಾನ್ಯ ವೈದ್ಯರನ್ನು ಏರ್ಪಡಿಸಿರುವರು. ಅವರು ಹಳ್ಳಿಯಲ್ಲಿ ಸಾಮ್ಯವಾದ ಗ್ರಾಮೋದ್ಧಾರದ ಕಾರ್ಯಕ್ರಮವನ್ನು ಕೈಗೊಂಡಿರುವರು. ಇದರಿಂದ ಇಪ್ಪತ್ತು ಲಕ್ಷ ಜನರಿಗೆ ಉಪಕಾರವಾಗುವುದು. ಸರ್ಕಾರದ ಖರ್ಚನ್ನು ಕಡಿಮೆಮಾಡಲು ಒಂದು ಕತ್ತರಿ ಪ್ರಯೋಗದ ಸಮಿತಿಯನ್ನು ನೇಮಿಸಿರುವರು. ಬಿರುದುಬಾವಲಿಗಳನ್ನು ಕೊಡುವ ಪದ್ಧತಿಯನ್ನು ತಪ್ಪಿಸುವ ಏರ್ಪಾಡು ಮಾಡುತ್ತಿರುವರು. ದೇಶಾಭಿಮಾನಕ್ಕೆ ಸಂಬಂಧಪಟ್ಟ ಪುಸ್ತಕಗಳ ಮೇಲೆ ಹಾಕಿದ್ದ ನಿರ್ಬಂಧವನ್ನು ತೆಗೆದುಹಾಕಿರುವರು. ಶಾಸನ ಸಭೆಯಲ್ಲಿ ಅಧ್ಯಕ್ಷರ ಪೀಠದ ಹಿಂದೆ "ವಂದೇ ಮಾತರಂ" ಎಂಬ ವಾಕ್ಯವನ್ನು ಸ್ಫುಟವಾಗಿ ಬರೆಸಿರುವರು. ಇನ್ನೂ ಅನೇಕ ರೀತಿಗಳಲ್ಲಿ ಸೌಲಭ್ಯವನ್ನು ಮಾಡುತ್ತಿರುವರು.

ಹೊಸ ಇಂಗ್ಲಿಷ ವಿಮಾನಗಳು

ಇವುಗಳ ವಿಸ್ತಾರವು ೧೩೦ ಅಡಿಗಳು. ಅಗಲವು ೧೧೪ ಅಡಿಗಳು, ಎತ್ತರವು ೨೩ ಅಡಿಗಳು. ಒಳಗಿನ ಕೋಣೆಯಗಲ ೧೦ ಅಡಿಗಳು. ಒಟ್ಟು ತೂಕ ೨೦ ಟನ್ನುಗಳು. ಇದರಲ್ಲಿ ನಲವತ್ತೆರಡು ಮಂದಿ ಪ್ರಯಾಣಿಕರು ಹೋಗಬಹುದು. ಕೋಣೆಗಳು ಸಜ್ಜಿತವಾದವು. ಇಂಜನ್ನಿನ ಸದ್ದು ಕೂಡ ಕೇಳಿಸುವುದಿಲ್ಲ. ಯಂತ್ರವೆಲ್ಲವೂ ಲೋಹದಿಂದ ಹೊದಿಸಲ್ಪಟ್ಟಿದೆ. ಪ್ರಯಾಣಿಕರು ಸೌಕರ್ಯವಾದ ಕುರ್ಚಿಗಳಲ್ಲಿ ಕೂಡಬಹುದು. ನಾಲ್ಕು ಕೊಟ್ಟಡಿಗಳಿರುವುವು. ಇಪ್ಪತ್ತು ಸಾವಿರ ಅಡಿಗಳ ಎತ್ತರಕ್ಕೆ ಹೋಗಬಲ್ಲವು. ೨೦೦೦ ಮೈಲಿಗಳು ಎಲ್ಲಿಯೂ ನಿಲ್ಲದೆ ಸಂಚರಿಸಬಲ್ಲುವು. ಅಟ್ಲಾಂಟಿಕ ಸಾಗರವನ್ನು ಹದಿನೈದು ಘಂಟೆಯೊಳಗಡೆ ದಾಟಬಹುದು.

ವೈದ್ಯ ಗ್ರಂಥ

ಭಟ್ಟ ವಿಷ್ಣುಪಂತ ದಾಮೋದರರು ಬರೆದ "ಆರೋಗ್ಯ ಚಿಂತಾಮಣಿ" ಎಂಬ ವೈದ್ಯಗ್ರಂಥವು ಕನ್ನಡ ಲಿಪಿಯಲ್ಲಿ ಸಂಸ್ಕೃತ ಶ್ಲೋಕರೂಪದಲ್ಲಿದೆ. ಇದು ಅಚ್ಚಾಗಿದೆಯೆ? ಎಲ್ಲಿ ದೊರೆಯುತ್ತದೆ? ಎಂಬುದನ್ನು ವಾಚಕರು ತಮ್ಮ ಸಾಧ್ವಿ ಪತ್ರಿಕಾ ಮೂಲಕ ಪ್ರಕಟಿಸುವದಲ್ಲದೆ ಈಗ ಕನ್ನಡದಲ್ಲಿ ಹೊರಡುತ್ತಿರುವ ವೈದ್ಯದ ಪತ್ರಿಕೆ ಮಾಸಪತ್ರಿಕೆಗಳವರಾಗಲೀ ವಾಚಕರಾಗಲೀ ತಿಳಿಸಬೇಕಾಗಿ ಪ್ರಾರ್ಥನೆಗಳು—ಎಂದು "[illegible] ಪುರಾಣಿಕ ಬಾಡಿಹೋಳಿ ಆಫೀಸ್, ಹೊನ್ನಾವರ" ಇವರು ಬರೆಯುತ್ತಾರೆ.

ಮೈಸೂರಿನ ಜಮ್ನಾಲಾಲ್ ಬಜಾಜ್.

ಸಾಹುಕಾರ್ ಚನ್ನಯ್ಯನವರು

ಮೈಸೂರಿನ ಸುಪ್ರಸಿದ್ಧ ನಿವಾಸಿಗಳಾದ ಸಾಹುಕಾರ್ ಚನ್ನಯ್ಯನವರು ವಿದ್ಯಾಪ್ರಚಾರಕ್ಕಾಗಿ ಸುಮಾರು ಐವತ್ತು ಸಾವಿರ ರೂಪಾಯಿಗಳನ್ನು ದಾನಮಾಡಿರುತ್ತಾರೆ. ಇದಕ್ಕಾಗಿ ನಾವು ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ. ನಜರಬಾದಿನಲ್ಲಿರುವ ತಮ್ಮ ಒಂದು ಭಾರಿ ಬಂಗಲೆಯನ್ನೂ ಒಂಟಿಕೊಪ್ಪಲಿನಲ್ಲಿ ಅನಾಥಾಲಯಕ್ಕಾಗಿ ಒಂದು ನಿಲಯವನ್ನೂ, ಬೆಳಗೊಳದ ಬಳಿ ಮೂರು ಎಕರೆ ಜಮೀನನ್ನೂ ಧರ್ಮಾರ್ಥವಾಗಿ ಬಿಟ್ಟುಕೊಟ್ಟು ಒಟ್ಟು ಸುಮಾರು ಐವತ್ತು ಸಾವಿರ ರೂಪಾಯಿಗಳನ್ನು ದಾನಮಾಡಿರುತ್ತಾರೆ.

ಇವರ ತೀರ್ಥರೂಪರವರ ಕಾಲದಿಂದಲೂ ಈ ಧರ್ಮವನ್ನು ಮಾಡಬೇಕೆಂಬ ಆಲೋಚನೆಯಿತ್ತು. ಈಚೆಗೆ ನಡೆದ ಕೆಲವು ವಿದ್ಯಮಾನಗಳಿಂದ ಇದು ಪುಷ್ಟೀಕರಿಸಲ್ಪಟ್ಟಿತು. ಶ್ರೀ|| ಚನ್ನಯ್ಯನವರು ಕಾಂಗ್ರೆಸ್ಸಿಗೆ ಸೇರಿದಮೇಲೆ ಈ ಸಂಕಲ್ಪವು ಕಾರ್ಯರೂಪವಾಗಿ ಪರಿಣಮಿಸಿತು. ಅವರು ತ್ರಿಕರಣ ಪೂರ್ವಕವಾಗಿಯೂ ಈಶ್ವರ ಪ್ರೀತ್ಯರ್ಥವಾಗಿಯೂ ಧರ್ಮವನ್ನು ಮಾಡುತ್ತಾರೆ. ಮೊನ್ನೆ ಶ್ರೀ|| ಕೆ. ಎಫ್. ನರೀಮನ್ನರು ಮೈಸೂರಿಗೆ ಬಂದಿದ್ದಾಗ, ಶ್ರೀ|| ಚನ್ನಯ್ಯನವರ ಧರ್ಮಬುದ್ಧಿಯನ್ನೂ ದೇಶಸೇವಾ ತತ್ಪರತೆಯನ್ನೂ ನೋಡಿ ಇವರು ಮೈಸೂರಿನ ಜಮ್ನಾಲಾಲ್ ಬಜಾಜರೆಂದು ಹೇಳಿದರು. ಸೇಟ್ ಜಮ್ನಾಲಾಲ್ ಬಜಾಜರು ತಮ್ಮ ಅಷ್ಟೈಶ್ವರ್ಯವನ್ನೂ ಕಾಂಗ್ರೆಸ್ಸಿಗೆ ಧಾರೆಯೆರೆದು ಹೇಗೆ ದೇಶಸೇವೆ ಮಾಡುತ್ತಿರುವರೋ ಹಾಗೆಯೇ ಶ್ರೀ|| ಚನ್ನಯ್ಯನವರೂ ಮಾಡುತ್ತಿರುವರೆಂದು ಅಭಿಪ್ರಾಯಪಟ್ಟರು.

ನಿರಾಡಂಬರದಿಂದಲೂ ಆತ್ಮಪ್ರೇರಣೆಯಿಂದಲೂ ಮಾಡಿದ ಇಂತಹ ಧರ್ಮಗಳು ಶಾಶ್ವತವಾದ ದೇಶ ಕಲ್ಯಾಣವನ್ನುಂಟುಮಾಡುವುವು. ಸಾಹುಕಾರ್ ಚನ್ನಯ್ಯನವರಿಗೆ ಭಗವಂತನು ಇತೋಪ್ಯತಿಶಯವಾದ ಧರ್ಮಬುದ್ಧಿಯನ್ನು ಕೊಟ್ಟು ಕಾಪಾಡಲೆಂದು ಪ್ರಾರ್ಥಿಸುತ್ತೇವೆ.

ಚಂದೂರವರಿಗೆ ಶಿಕ್ಷೆ

ಬೆಂಗಳೂರು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದ ಶ್ರೀ|| ಎಂ. ಎನ್. ಚಂದೂರ್ಕರರು ಒಳ್ಳೇ ನಡತೆಗಾಗಿ ಮೂರು ತಿಂಗಳಕಾಲ ಜಾಮೀನು ಕೊಡಬೇಕೆಂದು ಮೊಕದ್ದಮೆ ನಡೆಯುತ್ತಿತ್ತು. ಜಾಮೀನು ಕೊಡಲು ಅವರು ನಿರಾಕರಿಸಿದರು. ಆದ್ದರಿಂದ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಅವರಿಗೆ ಮೂರು ತಿಂಗಳ ಸಾದಾ ಸಜ ವಿಧಿಸಿದರು.

"ವೀರಶೈವ ಧರ್ಮತತ್ವ"

ಶ್ರೀ|| ಸಾನಂದ ಸಿದ್ಧರಾಮಪ್ಪನವರ ಭಾಷಣ

ಸಂಗ್ರಾಹಕರು:—ಎಸ್. ಚಂದ್ರಶೇಖರಪ್ಪ, ಮಹಾರಾಜರವರ ಕಾಲೇಜು, ಮೈಸೂರು.

(ಮುಕ್ತಾಯಭಾಗವು)

ವೀರಶೈವದಲ್ಲಿ [illegible]

ಪ್ರತಿಯೊಬ್ಬ ಮಾನವನೂ [illegible]

ಈ ಬಂಗಾಳದ [illegible]

ಧರ್ಮಾಧರ್ಮ ವಿಮರ್ಶೆ

ಟಿ.—ಕೆ. ಚಂದ್ರಶೇಖರ ಸಾಧು, ನಂಜನಗೂಡು.

ಧರ್ಮವೇ ನ್ಯಾಯ, ಧರ್ಮವೇ ಸತ್ಯ ಧರ್ಮವೇ [illegible]

ಅಪೂರ್ವ ವ್ಯವಸಾಯಗಾರ

ಈತನ ಹೆಸರು ಜಾರ್ಜ್ ಹೆನ್ರಿ ಮುಲ್ಲರ್ ಎಂದು. ಇವನಿರುವುದು ಕಾರ್ನ್‌ವಾಲ್ ಜಿಲ್ಲೆಯ ಒಂದು ಹಳ್ಳಿಯಲ್ಲಿ. ನೆರೆಯವರು ಇವನನ್ನು ಹುಚ್ಚನೆನ್ನುವರು. ಆದರೆ ಇವನ ಕಾರ್ಯವು ಇವರಿಗೆ ಆಶ್ಚರ್ಯವನ್ನುಂಟುಮಾಡುತ್ತಿದೆ.

ಈತನು ಬಹು ಪುರಾತನವಾದ ಬಿತ್ತನೆಯನ್ನೇ ಅನುಸರಿಸುವನು. ಪೂರ್ಣಿಮೆಗೆ ಒಂದೆರಡು ದಿನಗಳಿರುವಾಗ ಮಾತ್ರ ಬಿತ್ತುತ್ತಾನೆ. ಒಂದೇ ಪಂಟಿನಲ್ಲಿ ಏಳು ತೆನೆಗಳನ್ನು ಬೆಳೆಯುತ್ತಾನೆ. ಬೆಂಡೆಕಾಯಿ ಮಾಸನೆ [illegible] ಕಬ್ಬಿನ ಹಾಗೆ ತಿನ್ನಬಹುದಾದ [illegible] ಇಂತಹ ಆಶ್ಚರ್ಯಕರವಾದ ಬೆಳೆಗಳನ್ನೇ ಅವನು ಬೆಳೆಯುತ್ತಿರುವನು.

ಚಂದ್ರ ಕಿರಣವೇ ಬೆಳೆಯುವ ಪ್ರತಿ ವಸ್ತುವಿಗೂ ಕಾರಣವೆಂದು ಈತನು ಹೇಳುತ್ತಾನೆ. ಇತ್ತೀಚೆಗೆ ನಮ್ಮ ಪೂರ್ವಿಕರ ಅಮೂಲ್ಯವಾದ ಹಲವು ಪದ್ಧತಿಗಳನ್ನು ಜನರು ಮರೆತು ಬಿಟ್ಟಿರುವರಂತೆ. ಈ ಭೂಮಿಗೆ ರಸಾಯನಿಕ ಗೊಬ್ಬರಗಳನ್ನು ಹಾಕಬಾರದಂತೆ. ಹಸುರೆಲೆಯ ಗೊಬ್ಬರವನ್ನೇ ಉಪಯೋಗಿಸಬೇಕಂತೆ. ಪ್ರಾಣಿ ಸಂಬಂಧವಾದ ಗೊಬ್ಬರಗಳೂ ಕೂಡದಂತೆ.

ಬಿತ್ತನೆಯೇ ಮುಖ್ಯ. ಒಂದು ಒಣ್ಣೆಯಬಟ್ಟೆಯಲ್ಲಿ ಕೆಲವು ಬೀಜಗಳನ್ನು ಸುತ್ತಿ ಇಡಿರಿ. ಪೂರ್ಣಿಮೆಗೆ ಮೊದಲೂ, ಅದಾದಮೇಲೆ ಒಂದೆರಡು ದಿನಗಳು ಆಳಿದೂ ಬಿತ್ತಿರಿ. ಇವುಗಳೇ ಯಾವುದು ಬೇಗನೆ ಬೆಳೆಯುವುದೆಂಬುದು ಗೊತ್ತಾಗುವುದು, ಎಂದು ಹೇಳುತ್ತಾನೆ.

ಯಲ್ಲಿ ಸರ್ವಪ್ರಿಯವಾದ ಪ್ರಾಣಹಾನಿಯನ್ನು [illegible]

ANANDA SODA FACTORY

Best Aerated Water Suppliers.

Complete Requisites For Aerated Water Manufacturers Available.

[illegible]

[illegible], ಮೈಸೂರು.

ಆರೋಗ್ಯ ವಿಚಾರ

ವಿಷಮಶೀತಜ್ವರ (ಸನ್ನಿಪಾತ)

ಲೇಖಕರು:— **ಡಾಕ್ಟರ್ ಎಸ್. ಕೃಷ್ಣಮಾಚಾರ್ಯ, ಎಲ್. ಎ. ಎಂ. ಎಸ್.**
ಆಯುರ್ವೇದ ವಿದ್ವಾನ್, ಚಲುವಾಂಬಾ ಅಗ್ರಹಾರ, ಮೈಸೂರು.

ನಾವು ಸೇವಿಸುವ ಆಹಾರ ವಿಹಾರಗಳಲ್ಲಿ ಹೆಚ್ಚು ಕಡಿಮೆಯಾಗುವುದರಿಂದ, ಶರೀರದಲ್ಲಿ ಸಹಜವಾಗಿರುವ, ಇರಬೇಕಾದ ಉಷ್ಣವು ಹೆಚ್ಚಿದರೆ ಆಗ ಸಾಮಾನ್ಯವಾಗಿ ಜ್ವರ ಬಂದಿದೆಯೆಂದು ಹೇಳುತ್ತೇವೆ. ಹೀಗೆ ಉಂಟಾದ ಜ್ವರವನ್ನು ನವೀನ ಶಾಸ್ತ್ರಜ್ಞರು ಅನೇಕ ವಿಧವಾಗಿ ವಿಂಗಡಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವು, ಟೈಫಾಯಿಡ್, ನ್ಯೂಮೋನಿಯಾ, ಇನ್ಫ್ಲುಯೆಂಜಾ, ಮಲೇರಿಯಾ ಇವೇ. ಇವುಗಳಲ್ಲಿ ಬಹಳ ದೀರ್ಘಕಾಲ ಮನುಷ್ಯನನ್ನು ಕಾಡಿಸುವುದು ಟೈಫಾಯಿಡ್ ಎಂಬುದೇ !! ಇದನ್ನೇ ವಿಷಮಶೀತ ಜ್ವರ ಅಥವಾ ಸನ್ನಿಪಾತಜ್ವರವೆಂದು ಕರೆಯುವ ವಾಡಿಕೆ.

ಈ ವ್ಯಾಧಿಯ ಸೋಂಕು ಮನುಷ್ಯನಲ್ಲಿ ಹುಟ್ಟಿದೊಡನೆಯೇ ಅವನನ್ನು ಅದು ಹಾಗೆ ಹಿಡಿಯುವಂತೆ ಮಾಡುವುದಿಲ್ಲ. ಪ್ರಾರಂಭದಲ್ಲಿ ಆತನಿಗೆ ಯಾವ ಕೆಲಸದಲ್ಲೂ ಬೇಜಾರು ಕಾಣುತ್ತ ಬರುವುದು. ಶರೀರದಲ್ಲಿನ ಶಕ್ತಿಯೂ ಕಡಿಮೆಯಾಗುವುದು. ಕ್ರಮೇಣ ಆತನಿಗೆ ಬಹಳವಾಗಿ ನಿಶ್ಶಕ್ತಿ ಕಾಣುವುದಲ್ಲದೆ, ಜತೆಯಲ್ಲಿಯೇ ಸ್ವಲ್ಪ ತಲೆನೋವು, ಅನ್ನ ದ್ವೇಷ ಇವು ತೋರುವುವು. ಇವು ಮಾತ್ರವಲ್ಲದೆ, ಸ್ವಲ್ಪ ಛಳಿಯಾದಂತೆಯೂ ಜ್ವರ ಬಂದಂತೆಯೂ ಆಗುವುದು. ಇವುಗಳೆಲ್ಲವನ್ನೂ ತಡೆಯಲು ಸಾಧ್ಯವಾದಾಗಲೇ ಆತನು ಹಾಸಿಗೆಯನ್ನು ಹಿಡಿಯುವುದು.

ಈ ಜ್ವರವು ಸಾಮಾನ್ಯವಾಗಿ ಮನುಷ್ಯನನ್ನು 21 ದಿನಗಳವರೆಗೂ ಕಾಡಿಸುತ್ತದೆ. ಈ ಜ್ವರದಲ್ಲಿ ಮೂರು ಅಂತಸ್ತುಗಳುಂಟು. ಜ್ವರ ಬರಲು ಆರಂಭಿಸಿದ ಮೊದಲನೆಯ ವಾರದಲ್ಲಿ ಶರೀರದ ಉಷ್ಣವು (ಜ್ವರವು) ಸ್ವಲ್ಪ ಸ್ವಲ್ಪವಾಗಿ ಹೆಚ್ಚುತ್ತ ಹೋಗುವುದು. ನಾಡಿಯ ಗತಿಯೂ ವೇಗವಾಗಿಯೇ ಇದ್ದರೂ ಜ್ವರದಷ್ಟು ವೇಗವಾಗಿರುವುದಿಲ್ಲ. ಈ ವಾರದಲ್ಲಿ ರೋಗಿಗೆ ಭೇದಿಯಾಗುವ ಸಂಭವವೂ ಉಂಟು, ಆದರೆ ಕೆಲವರಲ್ಲಿ ಮಾತ್ರ ಮಲಬದ್ಧತೆಯು ಕಾಣಿಸಿಕೊಳ್ಳುವುದು.

ಎರಡನೆಯ ವಾರದಲ್ಲಿ ಜ್ವರವು ಹೆಚ್ಚಾಗಿ ಏರುವುದು. ರೋಗಿಯಲ್ಲಿ ಹೆಚ್ಚು ಉಪದ್ರವಗಳು ಕಾಣಿಸಿಕೊಳ್ಳುವುವು. ಮತ್ತು ಈ ಅವಸ್ಥೆಯು ಬಹಳ ಅಪಾಯಕರವಾಗಿರುವುದು. ಹೊಟ್ಟೆನೋವು, ಅತಿಸಾರ ಇವುಗಳಿರುವುವಲ್ಲದೆ, ಬ್ರಹ್ಮಾಂಡ ಕುಗ್ಗಿ ಹೋಗುವುದು.

ಮೂರನೆಯ ವಾರದಲ್ಲಿ ಶರೀರದಲ್ಲಿ ಅಶಕ್ತತೆಯು ಹೆಚ್ಚಾಗಿ ಪುನಃ ಅತಿಸಾರವು ಕಾಣಿಸಿಕೊಳ್ಳುವುದು. ಜ್ವರದ ವೇಗದಿಂದ ತಾತ್ಕಾಲಿಕವಾಗಿ ಬುದ್ಧಿ ಸ್ವಾಧೀನವಿಲ್ಲದೆ, ಸಿಕ್ಕಿದಂತೆ ಕೂಗಿಕೊಳ್ಳಲು ಆರಂಭಿಸುವನು. ಕಣ್ಣುಗಳು ಕೆಂಪಗಿರುತ್ತವೆ. ಕಿವಿ ನೋವು ಏನೂ ಶಬ್ದವಾಗುವುದು, ಇವನ್ನು ಅನುಭವಿಸುತ್ತಾನೆ. ಈ ವಾರದಲ್ಲಿಯೇ ರೋಗಿಗೆ ಕ್ರಮೇಣ ಜ್ವರವು ಕಡಿಮೆಯಾಗುತ್ತಾ ಬಂದು 21 ದಿನಗಳು ಪೂರ್ಣವಾಗಿ ಕಳೆದ ಮೇಲೆ ಶರೀರದಲ್ಲಿ ಬೇಕಾದ ಸಹಜವಾದ ಉಷ್ಣವು ಕಾಣಿಸಿಕೊಳ್ಳುವುದು.

ಹೀಗೆ ಜ್ವರವು ಪೂರ್ತಿಯಾಗಿ ನಿಂತ ಮೇಲೆ, ರೋಗಿಯು ಆಹಾರ, ವಿಹಾರಗಳಲ್ಲಿ ಪಥ್ಯದಿಂದಿರಬೇಕು. ಅಪಥ್ಯವಾದುದರಿಂದ ಜ್ವರವು ಮೊದಲಿನಂತೆಯೇ ಪುನಃ ಮರುಕಳಿಸುವುದು. ಮತ್ತೆ ಕೆಲವರಲ್ಲಿ ಜ್ವರವು ಮೂರು ವಾರಗಳಲ್ಲಿ ನಿಲ್ಲದೆ, ಇನ್ನೂ ಒಂದೆರಡು ವಾರಗಳು ಕಾಡಿಸಬಹುದು. ಅನುಭವವಿಲ್ಲದ ವೈದ್ಯರು ವ್ಯತ್ಯಾಸ ಹೊಂದುವಿಕೆ ಸರಿಯಾದ ಉಪಚಾರ ನಡಿಯದಿರುವಿಕೆ, ಇವೇ ಅದರ ಕಾರಣಗಳು.

"ಸನ್ನಿಪಾತದಲ್ಲಿ ಚಿಕಿತ್ಸೆ"

ಈ ಜ್ವರದಲ್ಲಿ ಔಷಧಕ್ಕೆ ಪ್ರಾಧಾನ್ಯತೆಯಿಲ್ಲ. ರೋಗಿಗೆ ಮಾಡುವ ಉಪಚಾರ, ಆತನಿಗೆ ಕೊಡುವ ಆಹಾರ ನಿರ್ಣಯ ಕ್ರಮ, ಇವೇ ಮುಖ್ಯವಾದವು.

"ಉಪಚಾರ"

ರೋಗಿಯನ್ನು ಚೆನ್ನಾಗಿ ಗಾಳಿಯಾಡುವ ಜಾಗದಲ್ಲಿ, ಶುಚಿಯಾಗಿಯೂ ಮೆತ್ತಗೂ ಇರುವ ಹಾಸಿಗೆಯ ಮೇಲೆ ಮಲಗಿಸಬೇಕು. ಆತನನ್ನು ಉಪಚರಿಸುವ ಒಂದೆರಡು ಜನರನ್ನು ಬಿಟ್ಟು ಮತ್ತೆ ಯಾರೂ ಇರಕೂಡದು. ಆತನಿಗೆ ಹಾಸುವ, ಉಡಿಸುವ, ಬಟ್ಟೆಗಳು, ಮಾತ್ರವಲ್ಲದೆ ಆತನನ್ನು ಮಲಗಿಸುವ ಜಾಗವೂ, ಸಹ ನಿರ್ಮಲವಾಗಿರಬೇಕು. ಈ ಬಟ್ಟೆಗಳನ್ನು ಪದೇ ಪದೇ ಬದಲಾಯಿಸುತ್ತಿರಬೇಕು. ರೋಗಿಯನ್ನು ಉಪಚರಿಸುವ ಪರಿಚಾರಕರೂ ಸಹ ಹೀಗೆಯೇ ಶುಭ್ರವಾಗಿರಬೇಕು. ಜ್ವರವು ಬಂದ ಎರಡನೆಯವಾರದಲ್ಲಿ ಆತನಿಗೆ ವಿಶೇಷ ನಿಶ್ಶಕ್ತಿಯು ಕಾಣಿಸಿಕೊಳ್ಳುವುದರಿಂದ ಹಾಸಿಗೆಯಲ್ಲೇ ಮಲಮೂತ್ರಗಳನ್ನು ವಿಸರ್ಜಿಸುವ ಸಂಭವವುಂಟು, ಆದುದರಿಂದ ಹಾಗೆ ಹಾಸಿಗೆಯಲ್ಲೇ ಇದ್ದು ವಿಸರ್ಜಿಸಿದ ಮಲವನ್ನು ತೆಗೆದಿಡಲು ಉಪಯುಕ್ತವಾದ ಪಾತ್ರೆಗಳನ್ನು ಜೊತೆಪಡಿಸಿಕೊಂಡಿರಬೇಕು.

ಆತನಿಗೆ ಜ್ವರದೊಡನೆ ವಿಶೇಷವಾಗಿ ತಲೆನೋವಿದ್ದಲ್ಲಿ, ತಲೆಯಮೇಲೆ ಒದ್ದೆಯ ಬಟ್ಟೆಯನ್ನಾಗಲಿ, ಅಥವಾ ಮಂಜಿನ ಗಡ್ಡೆಯಿಂದ ತುಂಬಿದ ಚೀಲವನ್ನಾಗಲಿ ಇಡುತ್ತಿರಬೇಕು. ಮತ್ತು, ಅವನ್ನು ಪದೇ ಪದೇ ಬದಲಾಯಿಸುತ್ತಿರಬೇಕು. ಹೊಟ್ಟೆ ನೋವು ಕಾಣಿಸಿಕೊಂಡರೆ, ಆ ಭಾಗಗಳಲ್ಲಿ ಶಾಖ ಕೊಡುವುದು ಹಿತಕಾರಿಯಾಗುವುದು.

ರೋಗಿಯ ಬಾಯಿ ಮತ್ತು ಹಲ್ಲುಗಳನ್ನು ಯಾವಾಗಲೂ ಶುಭ್ರವಾಗಿಟ್ಟುಕೊಂಡಿರಬೇಕು. ಸರಿಯಾಗಿ ಮಲ ವಿಸರ್ಜನೆಯಾಗದಿದ್ದಲ್ಲಿ ಬಸ್ತೀಕರ್ಮ ಪಿಚಕಾರಿಯನ್ನು ಕೊಡಬಹುದು ಭೇದಿಯಾಗುತ್ತಿದ್ದಲ್ಲಿ ಉಷ್ಣೋದಕ ಪಿಚಕಾರಿಯು ಪ್ರಯೋಜನವು.

ರೋಗಿಯ ಅಂಗಗಳಲ್ಲಿ ಸುಲಭವಾಗಿ ಬೆವರು ಬರುವಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ಆತನ ಅಂಗಗಳನ್ನು ಒಂದಾದ ಮೇಲೆ ಒಂದರಂತೆ, ಒಂದೇ ಸಮನಾಗಿ ಕಾದಿರುವ ನೀರಿನಲ್ಲಿ ಅದ್ದಿದ ಸ್ಪಂಜಿನಿಂದಾಗಲಿ ಅಥವಾ ಫ್ಲಾನಲ್ ಬಟ್ಟೆಯಿಂದಾಗಲಿ ಒರೆಸಬೇಕು.

ಹೀಗೆ ಒಂದು ಅಂಗವನ್ನು ಒರೆಸುವ ಕಾಲದಲ್ಲಿ ಇತರ ಅಂಗಗಳನ್ನು ಚೆನ್ನಾಗಿ ಬಟ್ಟೆಯಿಂದ ಮುಚ್ಚಿರಬೇಕು. ಒಂದು ಅಂಗವನ್ನು ಹೀಗೆ ಒರೆಸಿದನಂತರ ಒಂದು ಶುಭ್ರವಾದ ಟವಲಿನಿಂದ ಆ ಜಾಗದಲ್ಲಿ ಸ್ವಲ್ಪವೂ ತೇವವಿಲ್ಲದಂತೆ ಒರೆಸಿ ಆ ಜಾಗವನ್ನು ಚೆನ್ನಾಗಿ ಮುಚ್ಚಿ, ನಂತರ ಇನ್ನೊಂದು ಅಂಗವನ್ನು ಒರೆಸಬೇಕು. ಹೀಗೆಯೇ ಪ್ರತಿಯೊಂದು ಅಂಗವನ್ನು ಒರೆಸಬೇಕು. ದಿನ ಬಿಟ್ಟು ದಿನವಾದರೂ ಹೀಗೆ ಮಾಡುವುದು ಒಳ್ಳೆಯದು.

"ಆಹಾರ"

ಹೊಸದಾಗಿಯೂ ಮತ್ತು ಶುದ್ಧವಾಗಿಯೂ ಇರುವ ಹಾಲನ್ನು ಮೂರು ಘಂಟೆಗಳಿಗೊಮ್ಮೆ ಕೊಡಬಹುದು. ರೋಗಿಯ ಜೀರ್ಣಶಕ್ತಿಯನ್ನರಿತು ಜೀರ್ಣಿಸುವಷ್ಟು ಮಾತ್ರ ಕೊಡಬೇಕು. ಬದಲಾವಣೆಗಾಗಿ ಅಕ್ಕಿ ಬಿಡಿಸ ಸಣ್ಣ ಗಂಜಿಯನ್ನಾದರೂ ಕೊಡಬಹುದು. ಇವುಗಳ ಮೇಲೆ ಅಪೇಕ್ಷೆ ಇಲ್ಲದಿದ್ದಲ್ಲಿ ಅಥವಾ ಇವು ಜೀರ್ಣಿಸದೆ ಅತಿಸಾರವನ್ನುಂಟುಮಾಡಿದಲ್ಲಿ ಹಾಲನ್ನು ಒಡೆದು ಅದರ ನೀರನ್ನು ಕೊಡಬಹುದು. ಜ್ವರವು ಸಾಮಾನ್ಯಾವಸ್ಥೆಗೆ ಬಂದ ಮೇಲೆ. ಒಂದು ವಾರ ಕಳೆಯುವವರೆಗಾದರೂ ಖಂಡಿತವಾಗಿ ಅನ್ನವೇ ಮೊದಲಾದ ಘಟ್ಟಿ ಪದಾರ್ಥಗಳನ್ನು ಕೊಡದೆ ದ್ರವಪದಾರ್ಥಗಳನ್ನೇ ಕೊಡಬೇಕು. ರೋಗಿಯನ್ನು ಎಚ್ಚರಿಕೆಯಿಂದ ಉಪಚರಿಸುತ್ತಿರಬೇಕು.

ಹೀಗೆ ಸಾವಧಾನದಿಂದ ನೋಡುಕೊಳ್ಳುತ್ತಿದ್ದಲ್ಲಿ ಔಷಧವಿಲ್ಲದೆಯೇ ರೋಗವು ವಾಸಿಯಾಗಿ ಪುನಃ ಆರೋಗ್ಯವಂತನಾಗಿರುತ್ತಾನೆಂಬುದರಲ್ಲಿ ಸಂದೇಹವಿಲ್ಲ.

ದೇಶಸೇವೆ

ಅನ್ಯರೊಳಿದರಿ ಪಡೆದ ದೇಹವು ।
ಮಣ್ಣಿನಲಿ ಕೂಡುವುದದೆಂಬುವ ॥
ದನ್ನು ತಿಳಿಯುತ ಮಾಡು ।
ನಿನ್ನಯ ದೇಶ ಸೇವೆಯನು ॥
ಸನ್ನುತ ಸುರರೀರ ಪಿರೆ ಪಟಿ ।
ಜನ್ಮಭೂಮಿಯ ಸೇವೆಮಾಡದ ॥
ಪುಣ್ಯಹೀನ ನರನಿದ್ದರೂ ಸರಿ ।
ಬಿದ್ದರೂ ಸರಿಯು ॥ ॥೧॥

ಅವನು ದೇಶಸೇವೆಯನು ।
ಮಾಡಲು ತನ್ನಯ ಸೌಖ್ಯಮಂ ॥
ಭಾವಿಸದಿರ್ದ ಸದ್ಗುಣ ಮತೀ ।
ಲಸು ಹೆಚ್ಚಿನ ಗಾಂಧಿ ಮಹಾತ್ಮನು ॥
ಕೇವಲ ತನ್ನ ದೇಶಹಿತಕ್ಕಾಗಿ
ಸುಗ ಬಿದ್ದನು ಜೇಲಿನಲಿ ನೋಡ್ ।
ಪಾವನನಲ್ಲವೇನು ? ಸಟೆ ಪೇಳ ।
ಸೇವೆಯನು ಮಾಡುವಾತನು ॥ ॥೨॥

ಇಂತು ಮಹಾತ್ಮರು ದೇಶಸೇವೆಯ ।
ಸಂತಸದಿ ಮಾಡುತಿರಲು ನಾ ॥
ವೆಂತು ಕೂಡ್ರುವದೈಯ್ಯ ।
ಸುಮ್ಮನೆ ಕಾಲಕಳೆಯುತಲಿ ॥
ಇಂತು ಕೂಡ್ರುವುದು ಉಚಿತವಲ್ಲವು ।
ಚಿಂತೆ ಇಲ್ಲದೆ ಇಂಥ ಕಾಲದಿ ।
ಸಂತಸದಿ ಐಕ್ಯಯ್ಯ ರಾಷ್ಟ್ರದ ।
ಸೇವೆ ಗೈಯ್ಯುದಕೆ ॥೩॥

ಮೇಷ್ಟ್ರು —(ಇಂಗ್ಲೀಷಿನಲ್ಲಿ ಗ್ರಾಮರನ್ನು ಮಾಡುತ್ತ) ರಾಮು "ಕೇಸ್" ಎಂದರೇನು ?

ರಾಮು— ಲಾಯರುಗಳ ಕೈಯಲ್ಲಿ ಹಿಡಿದುಕೊಂಡು ಹೋಗುವ ಚೀಲ.

ಮೇಷ್ಟ್ರು—ಅದರಲ್ಲಿ ಎಷ್ಟು ವಿಧ ?

ರಾ—ನಾಲ್ಕು. ಕೆಂಪು, ನೀಲಿ, ಕಪ್ಪು ಮತ್ತು ಕಾಕಿ.

ಆರ್. ನಾಗರಾಜ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ಗಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. ೩೦ ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 1 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜೆಂಟರಿದ್ದಾರೆ.

ಸದ್ವೈದ್ಯಶಾಲಾ, ನಂಜನಗೂಡು.

ಚಿತ್ರಶಾಲಾ ಸ್ಪರ್ಧೆ ನಂ. ೪೭

ಬಹುಮಾನ ಪಡೆದವರು

ಸರಿಯಾದ ಉತ್ತರಗಳನ್ನು ಕಳುಹಿಸಿದ ಮೂರು ಜನರಿಗೆ ಮೊದಲನೇ ಬಹುಮಾನವನ್ನು ತಲಾ 50-0-0 ರೂ. ನಂತೆ ಕೊಟ್ಟಿರುತ್ತೆ. ಎಸ್. ಕೃಷ್ಣಮೂರ್ತಿ ಕಸ್ತೂರಿಗೋಪಾಲಯ್ಯನವರ ಬೀದಿ, ಓಪ್ಲರ್ ಮೊಹಲ್ಲಾ ಮೈಸೂರು. ಶ್ರೀಮತಿ ಇಂದಿರಾ ದೊಡ್ಡ ತಿಪ್ಪನಹಳ್ಳಿ, ಚಿತ್ರದುರ್ಗ ಡಿಸ್ಟ್ರಿಕ್ಟ್ ಸದಾನಾಥಯ್ಯ 3 ನೇ ರೋಡು ಚಾಮರಾಜಪೇಟೆ, ಬೆಂಗಳೂರು ಸಿಟಿ

ಒಂದು ತಪ್ಪಿನ ಉತ್ತರಗಳನ್ನು ಕಳುಹಿಸಿದ ೭ ಜನರಿಗೆ ಎರಡನೆ ಬಹುಮಾನದ ಕ್ಕೆ ತಲಾ 6-14-0ಯಂತೆ ಕೊಟ್ಟಿರುತ್ತೆ. ಸರಸ್ವತೀಬಾಯಿ, ಬಳಮುಸಾಗರ. ಎಸ್. ಶೇಷಮ್ಮ ಎಲ್. ಈಶ್ವರಪ್ಪ ಮೈಸೂರು ಎಚ್. ಸೀತಮ್ಮ ತುಮಕೂರು. ಎಸ್. ವಿ. ದಾಸಯ್ಯ ಶ್ರೀರಂಗಪಟ್ಣ. ವಿ. ದಿ. ಪಾಟೀಲ್ ಉಪ್ಪಿನಂಗಡಿ ಶ್ರೀ ನೌರಮ್ಮ ಬೆಂಗಳೂರು.

ಎರಡು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 51 ಜನರಿಗೆ ತಲಾ 2-0-0 ನಂತೆ ಕೊಟ್ಟಿರುತ್ತೆ. ಕೆ. ಗೋಪಾಲಾಚಾರ್ ಎಂ. ವಿ. ಸುಬ್ಬರಾವ್ ಪಿ. ಮಹ್ಮದಿಬಾವ ಸಾಹೆಬ್. ಎಸ್. ವೆಂಕಟರಾಮು (ನಂಜನಗೂಡು) ಟಿ. ವಿ. ಶ್ರೀನಿವಾಸರಾವ್ ಎಚ್. ಎಸ್. ಸುಬ್ಬಮ್ಮ ಎಂ. ಆರ್. ಕೃಷ್ಣಮೂರ್ತಿ ಎಸ್. ರುಕ್ಮಿಣೀಬಾಯಿ ಎ. ಡಿ. ಶಾರದಮ್ಮ ಎಚ್. ಎಸ್. ರಂಗಸ್ವಾಮಿ ಮೈ. ಜಿ. ನರಸಿಂಹಯ್ಯಂಗಾರ್ ಕೆ. ಲಕ್ಷ್ಮಯ್ಯ ಸೆಟ್ಟಿ ಎಂ. ಜಯಮ್ಮ ಎಸ್. ಎಂ. ಪಾಳೆಪಾಚಾರ್ರು ಎಂ. ಎಸ್. ರಾಮಣ್ಣ ಎಸ್. ಟಿ. ಎಸ್. ಕಾಂತರ್ ಎಸ್. ಬಿ. ಜಯರಾಂ ಎಸ್. ಕೆ. ರಘುನಾಥರಾ ಮೈಸೂರು. ಎಸ್. ನರಸಿಂಹಯ್ಯ ಎಸ್. ಸೀತಾರಾಂ ಎಂ. ಲಕ್ಷ್ಮೀನಿವಾಸಮ್ಮ ಬಿ. ಎಸ್. ಬಸಪ್ಪ (ಬಿಡದಿ) ಎಸ್. ಸುಬ್ಬಮ್ಮ ಎಸ್. ವೆಂಕಟಕೃಷ್ಣ ಪಾಚಾರ್ ಶ್ರೀಮತಿ ಆರ್. ಕೆ. ಕೂಸನೂರ್ ಎಸ್. ಬಾಲಕೃಷ್ಣ ಆರ್. ರಂಗಸ್ವಾಮಿ ಲಕ್ಷ್ಮೀದೇವಮ್ಮ (ನೆಲಮಂಗಲ) ಎಂ. ಎಸ್. ಗುರುಬಸಪ್ಪ ಬೆಂಗಳೂರು ಟಿ. ವಿ. ಸಂಜೀವಮೂರ್ತಿ ವೀರರಾಜಪೇಟೆ. ಎಸ್. ನಾರಾಯಣರಾವ್ ಸಂಗನಹಳ್ಳಿ. ಟಿ. ಶ್ರೀಕಂಠಶಾಸ್ತ್ರಿ ಹುಚ್ಚೀನಹಳ್ಳಿ. ಎಸ್. ಕೆ. ದೇಶಿಕಯ್ಯಂಗಾರ್ ಮಾರಗೌಡನಹಳ್ಳಿ. ಆರ್. ಎಸ್. ನಾರಾಯಣರಾವ್ ಚಾಮರಾಜ ಹೆಗ್ಗಡದೇವನಕೋಟೆ. ಸಿ. ನಾರಣಪ್ಪ ಡಿ. ರಾಮಲಿಂಗಯ್ಯ ಮಂಡ್ಯ. ಎಸ್. ವೆಂಕಟೇಶಯ್ಯ ಎಳ್ಳೀಪುರ. ಬಿ. ಶೇಷ. ದೇವರಾಜ್ ತರೀಕೆರೆ. ಎಂ. ಆರ್. ರಾಜಲಕ್ಷ್ಮಮ್ಮ ಮಲ್ಲೇಶ್ವರ. ಶ್ರೀ ಶಾಂತಮ್ಮ ಹಾಸನ. ಕುಂಬಳೆ ಶಾರದಮ್ಮ ಕೆ. ಎಸ್. ಚಂದ್ರಶೇಖರಯ್ಯ ತೀರ್ಥಹಳ್ಳಿ. ಕೆ. ಲಕ್ಷ್ಮಮ್ಮ ಗೋಣಿಬೀಡನೂರು. ಕೆ. ವಿ. ಕೃಷ್ಣಸ್ವಾಮಿ ಬಿ. ಸುಂದರರಾಜರಾವ್ ಶಿವಮೊಗ್ಗ. ಪುಟ್ಟೀರಾಯಮ್ಮ ಮಂಗನಹಳ್ಳಿ. ಎಂ. ಎಸ್. ಗುರುನಂಜಪ್ಪ ಯಳಂದೂರು. ಟಿ. ಎಸ್. ಗುಂಡಪ್ಪ ಕೊಪ್ಪ. ಕೆ. ವಾಸುದೇವ ಪೈ, ಉಪ್ಪಿನಂಗಡಿ. ಕೆ. ರಾಮ ಶೆಟ್ಟಿ. ಕುಮ್ಟಾಪಾಡಿ.

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರಗಳನ್ನು (130) ಕಳುಹಿಸಿದ್ದ ಮಿ॥ ರಾ ಎಸ್. ಟಿ ಎಸ್. ಕಾರ್ತರ್ 691 ದಾಸಕುಟೀರಂ ಹರೀ ಬಿನ್ನಪಾರ ಮೈಸೂರು, ಇವರಿಗೆ ಸ್ಪೆಷಲ್ ಬಹುಮಾನದ ಬಾಬ್ತು 30 ರೂ. ಕೊಟ್ಟಿರುತ್ತೆ.

ಮ್ಯಾ. ಚಿ.

ಸ್ಪರ್ಧಾಮಣಿ ದರ್ಪಣ

ಮೈಸೂರು ದೇವರಾಜ ಮೊಹಲ್ಲೆಯಲ್ಲಿರುವ ಸ್ಪರ್ಧಾ ಮಣಿದರ್ಪಣದ ಆಫೀಸಿನಲ್ಲಿ ಮಿ॥ ಎಂ. ಎಸ್. ನಂಜುಂಡಯ್ಯನವರಿಂದ ಪ್ರಕಟವಾಗಿರುವ "ಕನ್ನಡ ಸ್ಪರ್ಧಾಮಣಿ ದರ್ಪಣ" ದ ಪ್ರಥಮ ಸಂಚಿಕೆಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ನಮ್ಮ ಸಂಸ್ಥಾನದಲ್ಲಿ ಪ್ರಕಟವಾಗುವ ಎಲ್ಲಾ ಪ್ರಮುಖ ಸ್ಪರ್ಧೆಗಳಿಗೂ ಇವುಗಳಲ್ಲಿ ಉತ್ತರಗಳು ಸೂಚಿಸಲ್ಪಟ್ಟಿವೆ. ಇವರು ಇನ್ನು ಮೇಲೆ ಆಗಿಂದಾಗ್ಯೆ ತಮ್ಮ ಸ್ಪರ್ಧಾಮಣಿ ದರ್ಪಣವನ್ನು ಪ್ರಕಟಿಸುವರು. ಸ್ಪರ್ಧೆಗಳಲ್ಲಿ ಭಾಗವಹಿಸುವವರಿಗೆ ಇದು ಬಹಳ ಸಹಕಾರಿ. ಬೆಲೆ ಅರ್ಧಾಣೆ ಮಾತ್ರ.

ವಿದ್ಯಾರ್ಥಿಗಳ ಸಭೆ

ಮೈಸೂರಿನ ವಿದ್ಯಾರ್ಥಿಗಳೆಲ್ಲರೂ ಸೇರಿ ತಮ್ಮ ಹಿತಚಿಂತನೆಯನ್ನು ಮಾಡಿಕೊಳ್ಳಲು ಕಳೆದ ಶುಕ್ರವಾರ ಜೈನ ವಿದ್ಯಾರ್ಥಿನಿಲಯದಲ್ಲಿ ಒಂದು ಭಾರೀ ಸಭೆಯನ್ನು ನಡೆಸಿದರು. ಸುಮಾರು ಮುನ್ನೂರು ಜನರು ಸೇರಿದ್ದರು. ಶ್ರೀ॥ ಹೆಚ್. ಕೆ. ಶ್ರೀನಿವಾಸಮೂರ್ತಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ವಿದ್ಯಾರ್ಥಿಗಳ ಕರ್ತವ್ಯವನ್ನು ಕುರಿತು ಅನೇಕರು ಭಾಷಣಗಳನ್ನು ಮಾಡಿದರು. ಎಲ್ಲಾ ವಿದ್ಯಾರ್ಥಿಗಳನ್ನೂ ಒಳಗೊಂಡ ಒಂದು ಸಂಘವು ಸ್ಥಾಪಿಸಲ್ಪಟ್ಟಿತು. ಶ್ರೀ॥ ಎಂ. ಆರ್. ಜೋಯಿಸರು ಅದಕ್ಕೆ ಅಧ್ಯಕ್ಷರಾಗಿಯೂ ಶ್ರೀ॥ ಟಿ. ಎಸ್. ಮಾದಪ್ಪ ಗೌಡರು ಉಪಾಧ್ಯಕ್ಷರಾಗಿಯೂ ಶ್ರೀ॥ ಎಂ. ಎ. ಕೃಷ್ಣಸ್ವಾಮಿಯವರು ಜನರಲ್ ಸೆಕ್ರೆಟರಿಯವರಾಗಿಯೂ ಶ್ರೀ॥ ಹುಚ್ಚಮಾಸ್ತಿಯವರೂ ಮಿ॥ ಸಿ. ಎ. ಜಲೀಲರೂ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು.

ಪ್ರಪಂಚದ ಅದ್ಭುತಗಳು

೧. ಈಜಿಪ್ಟಿನ ಪಿರಮಿಡ್ಡುಗಳು. ಇದರಲ್ಲಿ ಖಗೋಳ ಶಾಸ್ತ್ರವಿದೆ, ಇದೊಂದು ಗೋರಿಯೂ ಹೌದು.

೨. ಬಾಬಿಲೋನಿನ ತೂಗು ತೋಟಗಳು. ಇವುಗಳಲ್ಲಿ ಎಷ್ಟು ಜನರಿದ್ದರೂ ಭಯವಿಲ್ಲ.

೩. ಎಫೀಸಸ್ಸಿನ ಡಯಾನಾ ದೇವಾಲಯ.

೪. ಮಾಸೋಲಸ್ಸನಿಗಾಗಿ ಅವನ ವಿಧವೆಯು ಕಟ್ಟಿಸಿದ ಗೋರಿ.

೫. ರೋಡ್ಸಿನ ಗೋಪುರದಂತಹ ಅದ್ಭುತ ವಿಗ್ರಹ. ಇದರ ಚಾಚಿದ ಕಾಲುಗಳ ಮಧ್ಯೆ ಹಡಗುಗಳು ಹೋಗಿ ಬರುತ್ತಿದ್ದುವು.

೬. ಒಲಿಂಪಿಯಾದ ಬಂಗಾರ ಮತ್ತು ದಂತದ ಜೂಪಿಟರ್ ವಿಗ್ರಹ.

ಈ ಕಡೆಯ ೫ ಅದ್ಭುತಗಳೂ ಗ್ರೀಕ್ ದೇಶದವು. ಇವೆಲ್ಲಾ ಪೂರ್ವ ಕಾಲದವು.

ಆಧುನಿಕ ಕಾಲದವುಗಳ ಪೈಕಿ ಒಂದು ೪೦೦ ವರ್ಷಗಳ ಹಿಂದಿನದು. ಅದು ರೋಮ್ ನಗರದ ಸೆಂಟ್ ಪೀಟರ್ಸ್ ಚರ್ಚ್. ಇದರಷ್ಟು ದೊಡ್ಡ ಕ್ರೈಸ್ತ ದೇವಾಲಯವು ಪ್ರಪಂಚದಲ್ಲೇ ಇಲ್ಲ.

ಎರಡನೆಯದು 1 ನೇ ನೆಪೋಲಿಯನ್ನನ ವಿಜಯಸ್ಮಾರಕ ತೋರಣ. ಇದು 100 ವರ್ಷದ ಹಿಂದಿನದು.

ಉಳಿದ ಐದು ಭಾರಿ ಇಂಜನೀರಿಂಗ್ ಕೆಲಸಗಳು. ಆ ಪೈಕಿ ಮೊದಲನೆಯದು ಈಜಿಪ್ಟಿನ ಸೂಯಸ್ ಕಾಲುವೆ. ಇದರಿಂದ ಹಡಗುಗಳಿಗೆ 5000 ಮೈಲಿ ಪ್ರಯಾಣವನ್ನು ಕಡಿಮೆಮಾಡಿಕೊಟ್ಟಂತಾಯಿತು. ಇದು 1859 ರಲ್ಲಿ ಶುರುವಾಗಿ 1864 ರಲ್ಲಿ ಮುಗಿಯಿತು. 8 ಕೋಟಿ ಡಾಲರುಗಳು ಖರ್ಚಾದುವು.

1869 ರಲ್ಲಿ ಮೊದಲನೆ ಹಡಗು ಅಲ್ಲಿ ಪ್ರವೇಶ ಮಾಡಿತು.

ಮೂರನೆಯದು ಫರ್ತ್ ಆಫ್ ಫೋರ್ತಿನ ಸೇತುವೆ. ಆಸರೆಯಿಲ್ಲದ ಈ ಕ್ಯಾಂಟಿಲಿವರ್ ಸೇತುವೆಯು 900 ಅಡಿ ಉದ್ದವಿದೆ.

ನಾಲ್ಕನೆಯದು ಸೆಂಟ್ ಗೋಥಾರ್ಡಿನ ಸುರಂಗಮಾರ್ಗ. ಇದು ಆಲ್ಪ್ಸ್ ಪರ್ವತದ ಅಡಿಯಲ್ಲಿ ೧೦ ಮೈಲಿ ದೂರವಿದೆ.

ಐದನೆಯದು ಒಲಿಂಪಿಕ್ ಮತ್ತು ಟೈಟಾನಿಕ್ ಎಂಬ ಭಾರಿ ಹಡಗುಗಳು ಅವುಗಳಲ್ಲಿ ಟೈಟಾನಿಕ್ ಮುಳುಗಿದುದನ್ನು ಎಲ್ಲರೂ ಬಲ್ಲರು.

COORG LODGE.

Boarding & Resting Home

OPP. KRISHNARAJENDRA HOSPITAL, MYSORE.

The most Popular, Desirable, Homely Lodge in MYSORE. Situated in the heart of the City. Nearest to business Centres, Hospitals, Market, Palace, Theatres Parks Etc., High Class Nicely furnished and well ventilated Rooms are available.

Accommodation for both Vegetarians and non-Vegetarians.

Reasonable monthly Rates.

MANAGER.

ಮಹಾತ್ಮರಿಗೆ ಪ್ರಶಸ್ತಿ

ನಾಗಪುರದ ವಿಶ್ವವಿದ್ಯಾಲಯದವರು ಮಹಾತ್ಮಾ ಗಾಂಧಿಯವರಿಗೆ "ಡಾಕ್ಟರ್ ಆಫ್ ಲಾಸ್" ಎಂಬ ಗೌರವ ಪ್ರಶಸ್ತಿಯನ್ನು ಕೊಡಬೇಕೆಂದಿದ್ದಾರೆ. ಮಹಾತ್ಮರು ಇದನ್ನು ಅಂಗೀಕರಿಸುತ್ತಾರೋ ಇಲ್ಲವೋ ಗೊತ್ತಿಲ್ಲ. ಗೌರವ ಪ್ರಶಸ್ತಿಯನ್ನು ಕೊಡುವುದು ಈ ಕಾಲದಲ್ಲಿ ಒಂದು ದಿನಚರಿ ಪದ್ಧತಿಯಾಗಿದೆ. ಇಂತಹ ಪದವಿ ದೊರೆಯಲೆಂದೂ ಕೆಲವರು ಹಾತೊರೆಯುವರು. ಆದರೆ ಮಹಾತ್ಮರಿಗೆ ಇದೇನೂ ಬೇಕಿಲ್ಲವೆಂದು ಕಾಣುತ್ತೆ. ಈ ಪ್ರಶಸ್ತಿಯಿಂದ ಅವರ ಮಹಿಮೆಯೇನೂ ಹೆಚ್ಚಬೇಕಾಗಿಲ್ಲ. ಮತ್ತು ಇದನ್ನು ಕೊಟ್ಟದ್ದರಿಂದ ವಿದ್ಯಾಲಯಕ್ಕೂ ವಿಶೇಷ ಪ್ರಯೋಜನವಾಗಲಾರದು. ಮಹಾತ್ಮರು ಮುದುಕರು. ಈ ಡಿಗ್ರಿಗಳನ್ನು ಇಟ್ಟುಕೊಂಡು ಅವರೇನು ಮಾಡಿಯಾರು?

ಒಂದು ಕೋಟಿ ಕಾಂಗ್ರೆಸ್ ಸದಸ್ಯರು

ಈ ವರ್ಷ ಕಾಂಗ್ರೆಸ್ಸಿಗೆ ಕೇವಲ ಮುಪ್ಪತ್ತೊಂದು ಲಕ್ಷ ಜನರು ಮಾತ್ರ ಕಾಂಗ್ರೆಸ್ ಸದಸ್ಯರಾಗಿದ್ದಾರೆ. ಮುಂದಿನ ವರ್ಷದೊಳಗಾಗಿ ಒಂದು ಕೋಟಿ ಸದಸ್ಯರು ಆಗಬೇಕೆಂದು ಮಿ॥ ಎಸ್. ಸತ್ಯಮೂರ್ತಿಯವರು ಒಂದು ಭಾಷಣದಲ್ಲಿ ಹೇಳಿರುವರು. ಒಂದು ಕೋಟಿ ಸದಸ್ಯರಾದರೆ ಕೂಡಲೆ ಸ್ವರಾಜ್ಯವು ಸ್ಥಾಪಿಸಲ್ಪಡುವುದೆಂಬ ಭರವಸೆಯನ್ನು ಕೊಟ್ಟಿರುವರು. ಕಾಂಗ್ರೆಸ್ ಸದಸ್ಯರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದು. ಒಂದು ಕೋಟಿ ಸದಸ್ಯರನ್ನು ಸೇರಿಸುವುದು ಏನೂ ಕಷ್ಟದ ಕೆಲಸವಲ್ಲ. ಇದಕ್ಕೆ ಮೈಸೂರಿನ ಸಹಾಯವು ಎಷ್ಟರಮಟ್ಟಿಗೆ ದೊರೆಯುವುದು?

ಚೀನಾ ಜಪಾನ್ ಯುದ್ಧ

ಯುದ್ಧವು ಬಿರುಸಿನಿಂದಲೇ ನಡೆಯುತ್ತಿದೆ. ವಿಮಾನಧಾಳಿಯು ವಿಪರೀತವಾಗಿದೆ. ಅಂತರಿಕ್ಷದಿಂದ ಬಾಂಬುಗಳನ್ನು ಎಸೆಯುತ್ತಿದ್ದಾರೆ. ಚೀಣೀಯರ ನಷ್ಟ ಬಹಳ ನಷ್ಟಗಳಾಗಿವೆ. ಅವರೂ ಅವರ ಎದೆಗುಂದದೆ ಕಾದಾಡುತ್ತಿದ್ದಾರೆ. ಜಪಾನರು ಅನೇಕ ಗ್ರಾಮಾಂತರ ಪ್ರದೇಶಗಳನ್ನು ಆಕ್ರಮಿಸಿದ್ದಾರೆ. ಚೀಣಾದ ಮುಖಂಡರಾದ ಚಿಯಾಂಗ್ ಕೈಷೇಕ್‌ರವರು ಅವರ ಸತಿಯೊಡನೆ ವಾಯುವಿಮಾನದಲ್ಲಿ ಹೋಗುತ್ತಿದ್ದಾಗ ಜಪಾನಿನ ಒಂದು ವಿಮಾನವು ಅವರನ್ನು ಅಟ್ಟಿಸಿಕೊಂಡು ಹೋಯಿತು. ಆದರೆ ಅವರು ಅದೃಷ್ಟವಶಾತ್ತಾಗಿ ತಪ್ಪಿಸಿಕೊಂಡರು. ನ್ಯಾಂಕಿಂಗ್ ನಗರವು ಅಗ್ನಿಜ್ವಾಲೆಯಲ್ಲಿ ಬಹಳ ಮಟ್ಟಿಗೆ ಉರಿಯಿತು. ಈ ಮಧ್ಯೆ ಜರ್ಮನಿಯು ಚೀಣಾ--ಜಪಾನುಗಳಿಗೆ ಸಂಧಿ ಮಾಡಿಸುತ್ತದೆಂಬ ವದಂತಿಯೊಂದು ಹೊರಟಿದೆ. ಇದು ಎಷ್ಟು ಫಲಕಾರಿಯಾಗುವುದೋ ನೋಡಬೇಕು.

ಪನಾಮಾ ಕಾಲುವೆಯೂ ಸ್ಯಾನ್ ಫ್ರಾನ್ಸಿಸ್ಕೋದ ಸೇತುವೆಯೂ ಈಚೆಗೆ ಕಟ್ಟಲ್ಪಟ್ಟು ಇವೆಲ್ಲವನ್ನೂ ಮೀರಿಸಿದಂತಿವೆ.



ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಕ್ಷಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲುತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ನಾಲ್ಕು ಉತ್ತರಗಳನ್ನು ಕಳುಹಿಸುವವರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಡಿಸೆಂಬರ್ 13 ಮತ್ತು 20 ನೇ ಸಾಕ್ಷಿ ಕೂಪನ್ನುಗಳಲ್ಲಾಗಲಿ ಅಥವ ಶಾಯಿನಾಡು [illegible] ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರವಿದ್ದಂತೆ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1937 ನೇ ಇಸವಿ ಡಿಸೆಂಬರ್ 30 ನೇ ತಾರೀಖು ಕೊನೆಯದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು 1938 ನೆ. ಜನವರಿ 3 ನೇ ತಾರೀಖಿನ ಸಾಕ್ಷಿ ಯಲ್ಲಿ ಪ್ರಕಟಿಸಲಾಗುತ್ತೆ.

ಚಿತ್ರಶಾಲಾ ಸ್ಪರ್ಧೆ ನಂ. ೪೮



ಪೋಸ್ಟು ಮೂಲಕ ಕಳುಹಿಸು
ನವರು ೩೦ ನೇ ತಾರೀಖು
ಕೊಡ [illegible] ಕಳುಹಿಸಬಹುದು

ಎಲ್ಲರಿಗಿಂತಲೂ ಹೆಚ್ಚಿಗೆ
ಉತ್ತರಗಳನ್ನು
ಕಳುಹಿಸಿದವರಿಗೆ
ಸ್ಪೆಷಲ್ ಬಹುಮಾನ
೫೦
ರೂಪಾಯಿ

ಹೆಸರು ....

ವಿಳಾಸ ....

ಕೂಪನ್ ನಂ. .... ಪೋಸ್ಟಲ್ ಆರ್ಡರ್ ನಂಬರು. ....

ಚಿತ್ರಶಾಲಾ ಸ್ಪರ್ಧೆ ನಂ. ೪೯



ಹೆಸರು ....

ವಿಳಾಸ ....

ಕೂಪನ್ ನಂ. ....ಪೋಸ್ಟಲ್ ಆರ್ಡರ್ ನಂಬರು .....

ಎಡದಿಂದ ಬಲಕ್ಕೆ

೧. ಗಾಳಿ. ೩. ಮೈಸೂರಿನಲ್ಲಿ ಕಬ್ಬಿಣದ ಕಾರ್ಖಾನೆ ಇರುವ ಸ್ಥಳ. ೬. [illegible] ಕತನಿಂದ ಪ್ರಪಂಚಕ್ಕೇ ತುಂಬಾ ಪ್ರಯೋಜನವಾಗಿರುತ್ತೆ. ೭. ಅಸ್ಪಷ್ಟ [illegible] ೧೦. ಇದಕ್ಕಾಗಿ ಅನೇಕರು ತುಂಬಾ ಶ್ರಮಪಡುತ್ತಾರೆ. ೧೧. ಗಡ [illegible] ಧ್ವನಿ. ೧೩. ಇವರಲ್ಲಿ ತುಳಸಿಗಿಡಗಳನ್ನು ಬೆಳೆಸಿ ಪೂಜಿಸುತ್ತಾರೆ. ೧೬. ಎಲ್ಲರೂ. ೧೮. ವಿಷ್ಣು. ೨೧. ಸಾಧ್ಯವಾದಷ್ಟು ಎಲ್ಲರೂ ಪ್ರಪಂಚಕ್ಕೆ ...... ಮಾಡಬೇಕು. ೨೪. ರಸಾತಲ. (ಅಕ್ಷರ ಸ್ಥಳಪಲ್ಲಟ) ೨೬. ಗುಮಾಸ್ತೆ. [illegible]...... ......ನಾಗಿರುವವನನ್ನು ಎದುರಿಸುವುದು ತಪ್ಪು. ೨೮. ಇಲ್ಲದವನಿಗೆ, ಮುಖ ಮತ್ತು ಕಣ್ಣುಗಳ ಅರಿವೇ ಇಲ್ಲವೆಂದು ಹೇಳುತ್ತಾರೆ. ೩೦. ಕದ ೩೩. ಕೆಲವು ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಇದನ್ನು ಬಿಡದೆ ಯುಕ್ತವಾಗಿ ನಡೆಯುವು [illegible] ೩೪. ......ಕ್ಕೆ ಪ್ರವೇಶವಾದವ ಸೀರೆ, ನಾಟಕ, ನೋಟಕರೆಂಬ [illegible] ಇವುಗಳನ್ನೆಲ್ಲಾ ಬಿಡಬೇಕು. ೩೫. ಇಂತಹ ನೈಪುಣ್ಯದ ಸೋಲಿನ [illegible]

ಮೇಲಿನಿಂದ ಕೆಳಕ್ಕೆ

೧. ಓದದೇ ಇರುವ ಇದನ್ನು ಕೇವಲ ಯಾರಿಗೂ ಬೇಕಾಗುವುದಿಲ್ಲ. ೪. ಸಾಧಾರಣವಾಗಿ ಇತರರಿಗಿಂತಲೂ ಇವನಿಗೆ ಮಾತ್ರವೇ ಪ್ರಮೇಯ ಹೆಚ್ಚು (ದೇಹ ಪ್ರಮೇಯ ಕಡಿಮೆ) ೫. . . . . ವಾದ ಪ್ರವೇಶ ಕೆಲವರು ಸುಮ್ಮನೆ ವಸೂಲಾಗಿ ಇಟ್ಟುಕೊಂಡು ಇರುತ್ತಾರೆ. ೭. ಕುರುಕ್ಷೇತ್ರ ಯುದ್ಧದಲ್ಲಿ ಬಲರಾಮ ಸಹಿತ ಇವರೆಲ್ಲರೂ ಕೌರವರ ಪಕ್ಷದಲ್ಲಿದ್ದರು. ೮. ಇಂತಹ ಅನೇಕ ಗುಣಗಳನ್ನು ಹೆಚ್ಚಾಗಿ ಇಲ್ಲಿ ನೋಡಬಹುದು. ೯. ವರದಾ (ಅಕ್ಷರಗಳ ಸ್ಥಳಪಲ್ಲಟ) ೧೨. ಸಮಾಧಾನಪಡಿಸು. ೧೪. ದೇವೇಂದ್ರ ೧೫. . . . . ವಿಲ್ಲದೆ, ಯಾವ ಸಂಸ್ಥೆಯೂ ನಡೆಯಲಾಗಿಲ್ಲ. ೧೬. ಯೋಗ್ಯರಾದವರು [illegible] ಇದನ್ನು ನಡೆಸುವುದು. ೧೯. [illegible] ೨೦. ಧೈರ್ಯವಾಗಿ ಇದನ್ನು [illegible] ೨೨. [illegible] ಪ್ರಧಾನ ದಿನ, ಈ ಮಂತ್ರಿ [illegible] ೨೫. [illegible] ಧರಿಸಿದ ೨೬. ಕ್ರೀಡೆಯಾದ ಕಪ ೨೭. [illegible] ೨೯. ಕಷ್ಟ [illegible] ಬಂದ ಇದನ್ನು [illegible] ೩೨. ಇದನ್ನು [illegible] ಪ್ರತಿದಿನವೂ [illegible] ಕೊಡುವುವು.

ವಿಳಾಸ:— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ವಿ. ಸೂ.—ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಟೇಟ್ ಮೋಟಾರ್ಸ್—[illegible]. ಬೆಂಗಳೂರಿನಲ್ಲಿ [illegible] ಎಚ್. ಕೆ. ವಕೀಲ್, ಕ್ಲಿಯರಿಂಗ್ ಏಜಂಟ್, ಶೇಂಗಿನರಾಯ ಪಾಂಡುರಂಗ, ನಂ. 16 ಸ್ಟ್ಯಾಂಡ್ ಮಾರ್ಕೆಟ್, [illegible] [illegible] ಹೋಟೆಲ್, [illegible] [illegible]

ಗ್ಯಾರಂಟಿಯಾದ ಸಿದ್ಧೌಷಧಗಳು.

ಬಾಲ ಸಿಲೇಚಸಿ ಚೂರ್ಣ— [illegible] 0—8—0.

ಬಾಲ ವಾತಘ್ನ— [illegible] 0—1—0

ಹಾಸಜ್ವರಾಂಕುಶ— [illegible] 0—8—0 [illegible]

ಕ್ಷಯ ಸಂಜೀವಿನಿ— [illegible] 1—0—0

ಶ್ವಾಸ ಕುಠಾರ— [illegible] 1ಕ್ಕೆ ರೂ 0—1—0

ಪ್ರಸವಿಸಿದವರಿಗೆ— [illegible]

[illegible]

ಜಿ. ಶ್ರೀನಿವಾಸ ದೇಶಿಕಾಚಾರ್,

301, [illegible], ಮೈಸೂರು.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್,

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು



ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲಸೇವನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತಾ ಎಂತಹ ಗಮಸಾದ ಆಹಾರವನ್ನಾದರೂ ಜೀರ್ಣೀಕರಿಸಿ ಕೊಳಕಾದ ನೀರು, ಕೆಟ್ಟ ಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಬಳಿಗೆ ಸೇರಿಸದೆ ಮಲಬದ್ಧವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ.

ಮಕ್ಕಳ ಪಕ್ಕಸಕೆತ (ಎಳವು, ಕಾಲುಕೈ ವದರು ಬಾಯಲ್ಲಿ ಜೊಲ್ಲು ಸುರಿಸುವ ಸೀತವಾತ) ಮಕ್ಕಳ ಮತ್ತು ದೊಡ್ಡವರ ಸೀತ, ಸೆಗಣಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣದ ಭೇದಿ, ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಇಷ್ಟಾಪ್ಸಂಜಿ, ಪ್ಲೇಗು, ಶೀತಭೇದಿ ಇವನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿದ್ದಾರೆ. ಈ ಮಾತ್ರೆಗಳಲ್ಲಿ ಅಫೀಮಾಗಲಿ, ವಿಷವಸ್ತುವಾಗಲಿ, ಖಂಡಿತವಾಗಿ ಸೇರಿಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ, ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವರಾಗುತ್ತೀರಿ.

250 ರಿಂದ 300 ಮಾತ್ರೆಗಳವರೆವಿಗಿರುವ ಸೀಸೆ 1 ಕ್ಕೆ 4 ಆಣೆ. ಟಪಾಲು ಮೂಲಕವಾದರೆ 1 ಸೀಸೆಗೆ 9 ಆಣೆ. 6 ಸೀಸೆಗೆ 1—8—0. 12 ಕ್ಕೆ 2—13—0. 25 ಕ್ಕೆ 5—3—0.

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹಿಂದೂಸ್ಥಾನಕ್ಕೆ

ಅಚ್ಚುಮೆಚ್ಚಿಗೆಯಾದ ಸ್ನಾನದ ಸಾಬೂನು



ಸಾನಾ ಸನ್ನೆಯಿಂದ ಕೂಡಿ ಉಲ್ಲಾಸವುಳ್ಳ ನಯವಾದ ಈ ಸಾಬೂನು ಬಾದಾಮಿ ಗ್ರಹಕರ ಪ್ರೀತಿ ಪಾತ್ರವಾಗಿದೆ.

ನಿಮಗೆ ಬೇಕಾಗಿದೆ?

ಮೈಸೂರು

ಗಂಧದ

ಸಾಬೂನು

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಗೌರ್ನಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು

ಬಗೆಬಗೆಯ ಆಕಾರ.

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ.

ನಮ್ಮಲ್ಲಿನ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ. ಮತ್ತು ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ.

೮ ಪಾಯಿಂಟಿನಿಂದ ೧೮ ಪಾಯಿಂಟಿನವರಿಗೆ ವಿಧವಿಧವಾದ ಸುಂದರಾಕ್ಷರಗಳಿವೆ. ನಮ್ಮ "ರಂಗನಾಥ ಕನ್ನಡ ದಾಮಿನಿ" ಅಕ್ಷರಗಳನ್ನು ನೋಡಲು ಮರೆಯಬೇಡಿರಿ

ನಾವು ಕಾಪರ್ ಅಲಾಯ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸುಲಭ ಬೆಲೆ. ಗ್ಯಾರಂಟಿಯಾದ ಬಾಳಿಕೆ.

Edited, Printed & Published by Agaram Rangiah, B.A., at Sri Rama Press, D. Subbiah Road, Mysore.

REGD. NO. M. 3524.

HALF ANNA

ಸಾಧ್ವಿ

SADHVI. LEADING WEEKLY

ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

ಸಂಪುಟ ೨] 20-12-37 ಮೈಸೂರು : ಸೋಮವಾರ ೨೦—೧೨—೧೯೩೭ [ಸಂಚಿಕೆ ೪೪



"ಷಾಹೀದೇ ಮೋಹಬ್ಬತ್"—ಚಲನಚಿತ್ರದ ಒಂದು ದೃಶ್ಯ,
ಇಂಪೀರಾ ಟಾಕೀಸಿನಲ್ಲಿ ಜರುಗಲಿರುವುದು.

Impressive Figures

Business in Force Exceeds	Rs	11,30,52,000
Total Assets Exceed .	Rs	3,00,00,000
Claims Paid Exceed	Rs	1,80,00,000
New Business for 1936 Exceeds....Rs		1,75,00,000

Branch and Agency Offices throughout India, Burma, Ceylon, British East Africa and the Federated Malay States

WANTED Influential Agents on good terms.

Apply to Sub Branch Secretary
NATIONAL INSURANCE CO., LTD.,
Kempegowda Road, Bangalore City,
FOR
NATIONAL INSURANCE COMPANY, LTD.
7 COUNCIL HOUSE STREET,
CALCUTTA



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇದರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿ ಮಾರಾಟಕ್ಕಿರುವವು. ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಭಾವದಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

ಹಿಂದೂಸ್ಥಾನಕ್ಕೆ ಅಚ್ಚುಮೆಚ್ಚಿಗೆಯಾದ ಸ್ನಾನದ ಸಾಬೂನು



ಸುವಾಸನೆಯಿಂದ ಕೂಡಿ ಉಲ್ಲಾಸಜನಕವಾಗಿರುವ ಈ ಸಾಬೂನು ಸಾವಿರಾರು ಜನರಿಗೆ ಅಚ್ಚುಮೆಚ್ಚಾಗಿದೆ

ನಿಮಗೆ ಏಕಾಗದು?

ಮೈಸೂರು ಗಂಧದ ಸಾಬೂನು

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಗೌರ್ನಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು

ಅಮೃತಾಂಜನ.



ಶೀಘ್ರವಾಗಿ ಗುಣಪಡಿಸುತ್ತದೆ.

ಅತ್ಯುತ್ತಮ. ಮಾದರಿಯವು

ಮೈಸೂರು ಕೌಸಲ್ಯ ಸ್ಟೋರ್ಸ್‌ನಲ್ಲಿ ದೊರೆಯುತ್ತದೆ

ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕಾಗಿದ್ದಾರೆ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವೂ ಆಗಿ...

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರಿ, ಬೇಗೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ನಂತರ ನಿಮಗೆ ತಿಳಿದೀತು.

1 ಬಾಟ್ಲಿ ಬೆಲೆ ರೂ ೧-೪-೦, 3 ಬಾಟ್ಲಿ ೩-೮-೦, 1 ಡಜ಼ನ ಬಾಟ್ಲಿ ಬೆಲೆ ೧೦-೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ್—ಟಿ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ:—ಸಿ. ಡಿ. ಶಾಸ್ತ್ರಿ ಅಂಡ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ. ಆರ್. ಗುರು. ಚನ್ನಬಸಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ. ಎಲ್ ಮಂಜಯ್ಯಶೆಟ್ಟಿ. ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಖಂಡೇರಾವ್ ಬ್ರದರ್ಸ್. ದಾವಣಗೆರೆ—ಮಲ್ಲೇಶಪ್ಪ ಮತ್ತು ಕೆ. ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪುಟ ೨] MYSORE : MONDAY 20—12-37 ಮೈಸೂರು ಸೋಮವಾರ ೨೦—೧೨—೩೭ [ಸಂಚಿಕೆ ೪೪

...ಯಿನ ತೊಡಕುಗಳು

...ದನ್ನು ಮೈಸೂರಿಗೆ ಸೇರಿಸಿದರೆ ವಿ...ಬಹುದಾದ ತೊಡಕುಗಳು ಯಾವುವು ...ಬರುತ್ತವೆಂದು ಪರ್ಯಾಲೋಚಿಸ...ಒಂದು ಸಭೆ ನಡೆಯಿತು. ಆ ಪ್ರದೇಶವು ಮೈಸೂರಿಗೆ ಸೇರಿದರೂ ವಿದ್ಯಾಭ್ಯಾಸ ಮಾತ್ರ ಮದರಾಸು ವಿಶ್ವವಿದ್ಯಾಲಯದ ಆಶ್ರಯಕ್ಕೆ ಸೇರಬೇಕೆಂದು ಅಲ್ಲಿ ...ನಿರ್ಣಯವಾಯಿತಂತೆ. ಇದೆಂತಹ ನ್ಯಾಯ? ವಿದ್ಯಾಭ್ಯಾಸ, ಕೈಗಾರಿಕೆ, ವ್ಯವಸಾಯ, ವ್ಯಾಪಾರ ಮುಂತಾದವುಗಳನ್ನೆಲ್ಲ ಮದರಾಸ್ ಆಧಿಪತ್ಯಕ್ಕೆ ಒಪ್ಪಿಸಿಬಿಟ್ಟರೆ, ಇನ್ನು ಮೈಸೂರಿಗೆ ಉಳಿಯುವುದೇನು?

...ಸಿದರೆ ದೊರೆಯುವುದೇ?

ದೇಶಸೇವಕರು ಪ್ರಾಂತ್ಯಗಳಲ್ಲೊಂದು ...ಪಂಡಿತ ಜವಾಹರಲಾಲರು ಹೇಳಿದ್ದು... ಯಾವುದೂ ಮಂತ್ರದಿಂದ ಸ್ವರಾಜ್ಯವನ್ನು ಅವರು ತಂದುಕೊಡಲಾರರೆಂದೂ ತಿಳಿಸಿರುವರು. ಸ್ವರಾಜ್ಯವು ಪ್ರತಿಯೊಬ್ಬ ಪ್ರಜೆಯ ಶ್ರಮಾರ್ಜಿತ ದ್ರವ್ಯ. ಅದನ್ನು ಯಾರೂ ಯಾರಿಗೂ ಗಳಿಸಿ ಕೊಡಲಾಗುವುದಿಲ್ಲ. ದೇವರೂ ನಮ್ಮ ಸ್ವರಾಜ್ಯವನ್ನು ದಾನವಾಗಿ ನಮಗೆ ಕೊಡಲಾರನೆಂದು ಮಹಾತ್ಮರು ಹೇಳಿರುವರು. ಪ್ರತಿಯೊಬ್ಬರೂ ಅದಕ್ಕಾಗಿ ಅವಶ್ಯಕವಾದ ತ್ಯಾಗವನ್ನು ಮಾಡಿ ಕಷ್ಟಪಟ್ಟು ಸಂಪಾದಿಸಬೇಕು. ಹೀಗೆ ಗಳಿಸಿದ ಸ್ವಾತಂತ್ರ್ಯವೇ ಶಾಶ್ವತವಾಗಿ ನಿಲ್ಲುವುದು.

ಇಂಗ್ಲೆಂಡಿನ ಆಶೆ ಮುಗಿಯಿತು.

ವಿಮಾನಘಾಳಿಯಲ್ಲಿ ಇಂಗ್ಲೆಂಡು ಬಹಳ ಹಿಂದೆ ಇದೆಯಂತೆ. ಇನ್ನೊಂದು ಯುದ್ಧವು ಸಂಭವಿಸಿದರೆ ಆಗ, ವಿಮಾನದ ಧಾಳಿಯ ಅನಾಹುತಕ್ಕೆ ಇಂಗ್ಲೆಂಡು ಈಡಾಗುವುದೆಂದು ...ಟ್ಲೆಟ್ ಎಂಬ ವೈಮಾನಿಕ ಪ್ರವೀಣನು ಹೇಳಿರುವನು. ನಾನೂರು ಕಟ್ಟಡಗಳನ್ನು ವೈರಿಯಿಂದ ರಕ್ಷಿಸಬಹುದು, ಸೈನ್ಯ, ನೌಕಾಬಲಗಳನ್ನು ಹೆಚ್ಚಿಸಬಹುದು. ಆದರೆ ಅಂತರಿಕ್ಷದಿಂದ ಬರುವ ಅನಾಹುತಗಳನ್ನು ನಿವಾರಿಸುವುದು ಬಲು ಕಷ್ಟವೆಂದು ಆತನ ಅಭಿಪ್ರಾಯ. ಅಂತೂ ಇನ್ನು ಮುಂದೆ ಇಂಗ್ಲೆಂಡಿಗೆ ಕಷ್ಟಕಾಲ.

ಜೇಬಿನಲ್ಲಿ ಸಾವಿರ ಜವಾಹರಲಾಲರು

ಬಂಗಾಳದ ಮಂತ್ರಿ ಮಹಾಶಯ ಫಜಲುಲ್ ಹಕ್ಕರ ಅಹಂಕಾರಕ್ಕೆ ಎಲ್ಲೆಯೇ ಇಲ್ಲ. ಕಾಂಗ್ರೆಸ್ಸನ್ನು ಟೀಕಿಸುವುದೇ ಇವರ ದಿನಚರಿ ಕೆಲಸವಾಗಿದೆ. ಇಲ್ಲದಿದ್ದರೆ ಅವರಿಗೆ ಉಂಡ ಅನ್ನವು ಜೀರ್ಣವಾಗುವುದಿಲ್ಲ. ಕಾಂಗ್ರೆಸ್ಸು ಒಂದು ಹಿಂದೂ ಸಂಸ್ಥೆಯಂತೆ. ಅಬ್ದುಲ್ ಗಫಾರ್ ಖಾನ್, ಅಬ್ದುಲ್ ಕಲಾಂ ಆಜಾದ್, ಮುಂತಾದ ಮಹನೀಯರುಗಳು ಕಾಂಗ್ರೆಸ್ ನಾಯಕರಾಗಿರುವುದು ಇವರಿಗೆ ಗೊತ್ತಿಲ್ಲವೇನೋ? ಇನ್ನೊಂದು ಕೋಟಿ ಹಿಂದೂಗಳನ್ನು ತಾನೊಬ್ಬನೇ ಎ...ಮುಕ್ತವಾಗಿ ಪ್ರಕಾಶಿಸಿದ್ದಾರೆ. ಮುಸ್ಲಿಂ ಮಂತ್ರಿಗಳ ಬಾಯಿನ ಮುಕ್ತಾಫಲಗಳಿವು. ಎಲ್ಲಕ್ಕಿಂತಲೂ ಹೆಚ್ಚಾಗಿ ಅವರು ಹೇಳುವುದೇನೆಂದರೆ, "ಸಾವಿರ ಜವಾಹರಲಾಲರನ್ನಾದರೂ ನನ್ನ ಜೇಬಿನಲ್ಲಿಟ್ಟುಕೊಳ್ಳುವಷ್ಟು ಶಕ್ತನಾಗಿದ್ದೇನೆ."

ಜವಾಹರರಲ್ಲಿ ಇಂತಹ ಬಡಾಯಿಗಳೆಲ್ಲಿ? ಇದು ಬರಿ ಬಣ್ಣ ಆಡಂಬರವಲ್ಲವೆ?

ಮೈಸೂರಿನ ಜಮನಾಲಾಲ್ ಬಜಾಜ್

ಸಾಹುಕಾರ್ ಎಸ್. ಚನ್ನಯ್ಯನವರು.

ಇವರು ವಿದ್ಯಾ ಪ್ರಚಾರಕ್ಕಾಗಿ ಐವತ್ತು ಸಾವಿರ ರೂಪಾಯಿ ದಾನಮಾಡಿರುವರು.

ಕುಟ್ಟಿದ ಅಕ್ಕಿಗೆ ಕಾಲ

ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸುವಂತೆ ಪ್ರಚಾರವು ಎಲ್ಲಾ ಕಡೆಯಲ್ಲಿಯೂ ಹೆಚ್ಚು ಹೆಚ್ಚಾಗಿ ನಡೆಯುತ್ತಿದೆ. ಮದರಾಸಿನಲ್ಲಿ ಇದು ಬಿರುಸಿನಿಂದ ನಡೆಯುತ್ತಿದೆ. ಅಲ್ಲಿನ ಆಸ್ಪತ್ರೆಗಳಲ್ಲಿ ಕುಟ್ಟಿದ ಅಕ್ಕಿಯನ್ನೇ ಉಪಯೋಗಿಸುವಂತೆ ಏರ್ಪಾಡಾಗುತ್ತಿದೆ. ಮಹಾತ್ಮ ಗಾಂಧಿಯವರು ಇದಕ್ಕಾಗಿ ಒಂದು ದೊಡ್ಡ ಚಳುವಳಿಯನ್ನು ಕೈಗೊಂಡಿದ್ದಾರೆ. ಮಿಲ್ಲುಗಳ ಮಾಲೀಕರು ತಾವು ಲಕ್ಷಾಂತರ ರೂಪಾಯಿಗಳನ್ನು ಹಾಕಿ ಸ್ಥಾಪಿಸಿರುವ ಯಂತ್ರಗಳನ್ನು ತೆಗೆದುಹಾಕಲು ಸಮ್ಮತಿಸುವುದಿಲ್ಲ. ಆದರೆ ಮಿಷನ್ನಿನ ಅಕ್ಕಿಯಿಂದ ಜನರಿಗೆ ಉಂಟಾಗುವ ಅನಾರೋಗ್ಯವನ್ನು ತಪ್ಪಿಸಲು ಬೇರೆ ಮಾರ್ಗವೂ ಇಲ್ಲ. ಆದ್ದರಿಂದ ಸರ್ಕಾರದವರೇ ಒತ್ತಾಯದಿಂದ ಕುಟ್ಟಿದ ಅಕ್ಕಿಗೆ ಪ್ರೋತ್ಸಾಹವನ್ನು ದೊರಕಿಸಬೇಕು.

ಹಿಂದೂ-ಮುಸಲ್ಮಾನ ವಿವಾಹ

ಶ್ಯಾಮಕುಮಾರಿ ನೆಹರೂರವರು ಅಲಹಾಬಾದಿನ ಸುಪ್ರಸಿದ್ಧ ಸ್ತ್ರೀ ವಕೀಲರು. ಬಹಳ ಬುದ್ಧಿಶಾಲಿಗಳು, ಅನೇಕ ಸಾರ್ವಜನಿಕ ಚಳುವಳಿಗಳಲ್ಲಿ ಭಾಗವಹಿಸಿದವರು. ಇವರು ಈಗ ಒಬ್ಬ ಮುಸಲ್ಮಾನನನ್ನು ಮದುವೆಯಾಗಿದ್ದಾರೆ. ಆತನ ಹೆಸರು ಜಮೀಲ್ ಖಾನ್. ಆತನು ಪೋಲೀಸ್ ಇಲಾಖೆಯವನು. ಕಾನೂನು ಪ್ರಕಾರ ಇವರು ದೆಹಲಿ ಸಿವಿಲ್ ... ಸಮಕ್ಷಮದಲ್ಲಿ ವಿವಾಹವಾದರು. ಇವರಿಬ್ಬರೂ ತಮ್ಮ ಮತಗಳಲ್ಲಿ ತಮಗೆ ನಂಬಿಕೆಯಿಲ್ಲವೆಂದು ಹೇಳಿದರಂತೆ. ಇಂತಹ ಜನರಿಗೆ ಯಾವುದಾದರೂ ಮತದಲ್ಲಿ ನಂಬಿಕೆ ಇದೆಯೇ? ಸ್ವೇಚ್ಛಾ ಧರ್ಮದಲ್ಲಿಯೇ ಇವರಿಗೆ ಪರಿಪೂರ್ಣವಾದ ನಂಬಿಕೆ ಇರಬೇಕು.

ಪ್ರಾಣಿಗಳ ಮೇಲೆ ದಾವೆ

ಸರ್ಕಾರದ ಅಪ್ಪಣೆಯಿಲ್ಲದೆ ಪ್ರಾಣಿಗಳನ್ನು ಗುಂಡಿನಿಂದ ಹೊಡೆಯುವುದು ಜುಗೋಸ್ಲಾವಿಯಾ ಎಂಬಲ್ಲಿ ಒಂದು ಅಪರಾಧ. ಇದಕ್ಕೆ ಮೂರು ತಿಂಗಳ ಶಿಕ್ಷೆ ಇದೆ. ಅಪ್ಪಣೆ ಪಡೆಯಬೇಕಾದರೆ ನಾಲ್ಕು ಪೌಂಡುಗಳ ವೆಚ್ಚವಾಗುತ್ತದೆ. ಅಲ್ಲಿನ ಒಬ್ಬ ರೈತನ ಹೊಲದಲ್ಲಿ ಒಂದು ಕರಡಿಯೂ ಅದರ ಎರಡು ಮರಿಗಳೂ ನುಗ್ಗಿ ಫಸಲನ್ನೆಲ್ಲಾ ಮೇಯುತ್ತಿದ್ದುವು. ಅವುಗಳನ್ನು ಹೊಡೆಯುವುದಕ್ಕೆ ರೈತನಿಗೆ ಅವಕಾಶವಿರಲಿಲ್ಲ. ಆದ್ದರಿಂದ ಅವನು ಆ ಪ್ರಾಣಿಗಳ ಮೇಲೆ ದಾವೆ ಹೂಡಿದ್ದಾನೆ

ಕೋಲಾರದಲ್ಲಿ ಸಂಭ್ರಮ

ಶ್ರೀಮನ್ಮಹಾರಾಜರವರ ಭೇಟಿ.

ಕಳೆದ ಸೋಮವಾರ ಶ್ರೀಮನ್ಮಹಾರಾಜರವರು ಕೋಲಾರಕ್ಕೆ ಭೇಟಿಕೊಟ್ಟರು. ಅಲ್ಲಿ ಸುಮಾರು ಒಂದು ಲಕ್ಷ ರೂಪಾಯಿನ ವೆಚ್ಚದಿಂದ ಕಟ್ಟಲಾಗಿರುವ ಶ್ರೀ ನರಸಿಂಹರಾಜಾ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಪ್ರಭುಗಳ ಗೌರವಾರ್ಥವಾಗಿ ನಗರದಲ್ಲೆಲ್ಲಾ ವಿಸ್ತಾರವಾದ ಅಲಂಕಾರಗಳು ಮಾಡಲ್ಪಟ್ಟಿದ್ದವು. ಸ್ಥಳ ಪರಿಸರಗಳಿಂದ ಸಹಸ್ರಾರು ಜನರು ಬಂದಿದ್ದರು. ಅನೇಕ ದೊಡ್ಡ ದೊಡ್ಡ ಅಧಿಕಾರಿಗಳೂ, ಊರಿನ ಮುಖ್ಯ ಮುಖ್ಯರೂ ಬಂದಿದ್ದರು. ಶ್ರೀಮನ್ಮಹಾರಾಜರೊಡನೆ ದಿವಾನ್ ಸರ್ ಮಿರ್ಜಾ ಇಸ್ಮಾಯಿಲರೂ, ಮಿಲಿಟರಿ ಸೆಕ್ರೆಟರಿಯವರಾದ ಸರ್ ಚಾರ್ಲ್ಸ್ ಟಾಡ್ ಹಂಟರ್‌ರವರೂ, ಹುಜೂರ್ ಸೆಕ್ರೆಟರಿ ರಾಜಸಭಾಭೂಷಣ ಟಿ. ತಂಬೂಚೆಟ್ಟಿಯವರೂ ಆಗಮಿಸಿದ್ದರು.

ಪ್ರಾತಃಕಾಲ 9 ಗಂಟೆಯಿಂದ 11 ಗಂಟೆವರೆಗೆ ಪ್ರಭುಗಳು ನಗರದ ಮುಖ್ಯ ಬೀದಿಗಳಲ್ಲೆಲ್ಲಾ ಮೆರವಣಿಗೆ ಹೊರಟರು. ಇವರಿಗೆ ಆನರ ಉತ್ಸವಕ್ಕಾಗಿ ನೋಟಕರುಗಳೂ, ಕುದುರೆ ಗಾಡಿಗಳೂ, ಉಪಯೋಗಿಸಲ್ಪಡುತ್ತಿದ್ದವು. ಸವಾರಿ ರಥಕ್ಕೆ ಒಂದು ಜೊತೆ ಎತ್ತುಗಳನ್ನು ಕಟ್ಟಿದ್ದರು. ಇದು ಒಂದು ವಿಶೇಷ.

ಸಾಯಂಕಾಲ ಪ್ರಭುಗಳು ಆಸ್ಪತ್ರೆಯ ಆರಂಭೋತ್ಸವವನ್ನು ನೆರವೇರಿಸಿದರು. ಸೀನಿಯರ್ ಸರ್ಜನ್ನರಾದ ರಾ॥ ಎಸ್. ಸುಬ್ಬರಾಯರು ಶ್ರೀಮನ್ಮಹಾರಾಜರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಅನಂತರ ಪ್ರಭುಗಳು ಒಂದು ಪ್ರಾಮುಖ್ಯವಾದ ಭಾಷಣ ಮಾಡಿ ಆರಂಭೋತ್ಸವವನ್ನು ನೆರವೇರಿಸಿದರು. ಅವರ ಭಾಷಣದ ಕೆಲವು ಭಾಗಗಳು ಇಲ್ಲಿ ಕೊಡಲ್ಪಟ್ಟಿವೆ :—

ಆಧುನಿಕ ಕಾಲದ ಚಿಕಿತ್ಸಾ ಸಾಧನಗಳಿಂದ ಸುಸಜ್ಜಿತವಾದ ಆಸ್ಪತ್ರೆಗಳು ಒದಗಬೇಕಾದುದು ಅತ್ಯಾವಶ್ಯಕ. ಆದಕಾರಣ, ತತ್ಸಂಬಂಧವಾದ ಕಾರ್ಯಕ್ರಮವೊಂದು ಸಿದ್ಧವಾಗಿ, ಹಿಗ್ಗೆ ಹತ್ತು ವರ್ಷಗಳಿಂದ ಇದರಂತೆ ಕೆಲಸ ನಡೆಯುತ್ತಿದೆ. ಈ ಆಸ್ಪತ್ರೆಯಿಂದ ಆ ಪ್ರಯತ್ನದ ಮತ್ತೊಂದು ಮಜಲು ಮುಂದುವರಿದಂತಾಗಿದೆ. ಸಾಧ್ಯವಾದ ಆಸ್ಪತ್ರೆಗಳೂ ಒಟ್ಟಾಗಿ ಒಂದೇ ಪ್ರದೇಶದಲ್ಲಿ ಸ್ಥಾಪಿತವಾಗುವಂತೆ ಮಾಡುವುದು ಪ್ರಯೋಜನಕರ. ಬೆಂಗಳೂರು ಮೈಸೂರು ನಗರಗಳಲ್ಲಿ ಈ ಕಾರ್ಯಕ್ರಮವನ್ನವಲಂಬಿಸಿದ್ದೇವೆ.

ಹೀಗೆ ಚಿಕಿತ್ಸಾ ಸೌಕರ್ಯಗಳನ್ನು ದೊರಕಿಸುವ ಪ್ರಯತ್ನದಲ್ಲಿ, ಉದಾರ ಬುದ್ಧಿಯುಳ್ಳ ಪ್ರಜೆಗಳು ಧರ್ಮಾರ್ಥವಾಗಿ ನೀಡಿರುವ ಸಹಾಯವು ತುಂಬ ನೆರವಾಗಿದೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಆಸ್ಪತ್ರೆಗಳ ಸಂಬಂಧದಲ್ಲಿ ದೊರೆತ ಧರ್ಮಾರ್ಥವಾದ ದೇಣಿಗೆ ಹನ್ನೆರಡೂವರೆ ಲಕ್ಷ ರೂಪಾಯಿಗಳಿಗಿಂತಲೂ ಅಧಿಕವಾಗಿದೆ. ಹೀಗೆ ಧರ್ಮಾರ್ಥವಾಗಿ ಸಹಾಯ ಮಾಡುವ ಭಾಗದಲ್ಲಿ ಕೋಲಾರದ ನಿವಾಸಿಗಳೂ ಉತ್ಸುಕರಾಗಿ ವರ್ತಿಸಿರುವುದು ನನಗೆ ವಿಶೇಷ ಸಂತೋಷಕರವಾಗಿದೆ. ನೂತನವಾಗಿ ನಿರ್ಮಿತವಾಗಿರುವ ಈ ಆಸ್ಪತ್ರೆಯ ಕಟ್ಟಡಕ್ಕೂ ಸಾಧನ ಸಲಕರಣೆಗಳಿಗೂ ವ್ಯಯವಾಗಿರುವ ಒಟ್ಟು ಮೊತ್ತವು ೯೦,೦೦೦ ರೂ. ಈ ಮೊತ್ತದಲ್ಲಿ ೬೦,೦೦೦ ರೂ. ಗಳಿಗಿಂತ ಅಧಿಕವಾದ ಮೊತ್ತವು ಕೋಲಾರ ಡಿಸ್ಟ್ರಿಕ್ಟಿನ ನಿವಾಸಿಗಳಿಂದ ಒದಗಿರುವ ಚಂದಾವು ನನ್ನ ಗಮನಕ್ಕೆ ಬಂದಿದೆ.

ಸೀನಿಯರ್ ಸರ್ಜನ್‌ರವರು ಒಪ್ಪಿಸಿದ ಬಿನ್ನವತ್ತಳೆಯಲ್ಲಿ ಸೂಚಿತವಾಗಿರುವ ಕೆಲವು ಅಂಶಗಳು, ವಿಶೇಷತಃ ಗಮನಾರ್ಹವಾಗಿವೆ. ಸಂಸ್ಥಾನದ ಆಸ್ಪತ್ರೆಗಳಲ್ಲಿಟ್ಟುಕೊಂಡು ಚಿಕಿತ್ಸೆ ಮಾಡುವ ರೋಗಿಗಳ ಸಂಖ್ಯೆಯು ವರ್ಷಕ್ಕೆ ಅರ್ಧ ಲಕ್ಷವೆಂದು ಅವರು ತಿಳಿಸಿದ್ದಾರೆ. ಮನೆಗಳಿಂದ ಬಂದು ಚಿಕಿತ್ಸೆಯನ್ನು ಪಡೆದು ತೆರಳುವವರ ಸಂಖ್ಯೆಯು ವರ್ಷಕ್ಕೆ ಐವತ್ತು ಲಕ್ಷವೆಂದೂ ಸೂಚಿತವಾಗಿದೆ. ಇಷ್ಟು ಅಧಿಕ ಸಂಖ್ಯೆಯವರಿಗೂ ಬಹುತರವಾಗಿ ಈಗ ಉಚಿತವಾಗಿಯೇ ಚಿಕಿತ್ಸೆ ನಡೆಯುತ್ತಿದೆ. ಈ ಪ್ರಮಾಣದಲ್ಲಿ ಹೀಗೆ ಚಿಕಿತ್ಸೆ ನಡೆಯುವುದು ಸಹಿಸಲು ಶಕ್ಯವಿಲ್ಲವಷ್ಟು ಶ್ರಮದಾಯಕವಾಗಿ ಪರಿಣಮಿಸಿದೆಯೆಂದು ಅವರು ತಿಳಿಸಿದ್ದಾರೆ. ಅಲ್ಲದೆ, ಪ್ರಜಾವರ್ಗದವರ ಧರ್ಮ ಸಹಾಯವೂ, ಸರ್ಕಾರದ ಧನಸಹಾಯವೂ ಅಧಿಕ ಪ್ರಮಾಣದಲ್ಲಿ ಲಭಿಸಿಯೂ ಚಿಕಿತ್ಸಾ ಸೌಕರ್ಯಗಳು ಸಾಲದೆ ಹೋಗಿವೆಯೆಂದು ಸೂಚಿಸಿದ್ದಾರೆ. ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಡೆಯಿಸುವ ಡಾಕ್ಟರುಗಳಿಗೂ, ರೋಗಿಗಳನ್ನು ಉಪಚರಿಸುವವರಿಗೂ, ಇತರ ಕೆಲಸಗಳನ್ನು ನಿರ್ವಹಿಸುವ ಸಿಬ್ಬಂದಿಗಳವರಿಗೂ ಮಿತಿಮೀರಿ ಶ್ರಮವಾಗಿ, ಅವರು ಕಷ್ಟಪಡುತ್ತಿರುವ ಅಂಶವೂ ವಿಶದವಾಗಿದೆ. ಆದಕಾರಣ, ರೋಗಿಗಳೆಲ್ಲರೂ ಆಸ್ಪತ್ರೆಗಳಲ್ಲೇ ಚಿಕಿತ್ಸೆ ಹೊಂದುವ ಆಕಾಂಕ್ಷೆಯನ್ನು ಪರಿತ್ಯಜಿಸಿ, ಚಿಕಿತ್ಸಾ ವೃತ್ತಿಯನ್ನವಲಂಬಿಸಿರುವವರಿಂದಲೂ ಚಿಕಿತ್ಸೆ ಪಡೆಯುವ ವ್ಯವಸ್ಥೆಯೂ ಏರ್ಪಡಬೇಕಾದುದು ಯುಕ್ತವಾಗಿದೆ.

ಚಿಕಿತ್ಸೆಗಾಗಿ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆಯು ಕಡಮೆಯಾಗುವಂತೆ ಮಾಡಲು, ನೀವು ಅನುಸರಿಸಬಹುದಾದ ಮತ್ತೊಂದು ಮುಖ್ಯ ಮಾರ್ಗವು ಇದೆ. ಅದೂ ಅಷ್ಟರಷ್ಟೇ ಮುಖ್ಯವಾದುದು. ಮಹಾಜನರ ಆರೋಗ್ಯಸ್ಥಿತಿಯನ್ನು ಮತ್ತಷ್ಟು ಉತ್ತಮವಾಗಿ ಕಾಪಾಡುವ ಪ್ರಯತ್ನವನ್ನು ನಿರಂತರವೂ ನೆರವೇರಿಸುವುದೇ ಆ ಮಾರ್ಗ. ನಮ್ಮ ಸಂಸ್ಥಾನದಲ್ಲಿರುವ ಸ್ತ್ರೀಪುರುಷರಲ್ಲಿ ಪ್ರತಿಯೊಬ್ಬರೂ—ನಮ್ಮ ಸಂಸ್ಥಾನದಲ್ಲಿರುವ ಆಬಾಲವೃದ್ಧರಲ್ಲಿ ಪ್ರತಿಯೊಬ್ಬರೂ—ಈ ಮಾರ್ಗವನ್ನನುಸರಿಸಿ ಕಾರ್ಯಸಿದ್ಧಿ ಹೊಂದಬೇಕೆಂಬುದು ನನಗಿರುವ ತೀವ್ರಾಭಿಲಾಷೆ.

ಕೆಲವು ರೋಗಾದ್ಯುಪದ್ರವಗಳು ಅನಿವಾರ್ಯವಾದ ನಮ್ಮ ಪ್ರಾರಬ್ಧ ಕರ್ಮಫಲವೆಂಬ ಭಾವನೆಯುಂದಿರುವ ರೂಢಿಯೇ, ನಮ್ಮಲ್ಲಿ ಅಧಿಕವಾಗಿ ಕಂಡುಬರುತ್ತದೆ. ಅವುಗಳನ್ನು ಪರಿಹಾರ ಮಾಡುವ ನಾನಾ ಉಪಾಯಗಳೂ ಈಗ ಗೊತ್ತಾಗಿರುವುದನ್ನೂ ವಿಜ್ಞಾನ ಸಂಶೋಧನವು ಬಹಳವಾಗಿ ಮುಂದುವರಿಯುತ್ತಿರುವುದನ್ನೂ ಗಮನಿಸದಿರುವುದೇ ನಮ್ಮಲ್ಲಿ ವಿಶೇಷ ವಾಡಿಕೆ. ಹಿಂದಿನ ಕಾಲದಲ್ಲಿ ಪ್ರತಿ ವರ್ಷವೂ ಕಾಲರಾ ಜಾಡ್ಯದಿಂದ ಸಾವಿರಗಟ್ಟಲೆಯಾಗಿ ಮರಣಗಳು ಸಂಭವಿಸುತ್ತಿದ್ದುವು; ಸ್ಥಳದಿಂದ ಸ್ಥಳಕ್ಕೆ ರೋಗವು ಹರಡಿ ದಾಂಧಲೆ ಮಾಡುತ್ತಿದ್ದಿತು. ಈಚೆಗೆ ನಡೆದ ಸಂಶೋಧನೆಗಳ ಫಲವಾಗಿ ಈ ವ್ಯಾಧಿಯು ಮಾನವನ ಹತೋಟಿಗೊಳಪಟ್ಟಿದೆ. ಇದರಿಂದ ಮೃತಪಡುವವರ ಸಂಖ್ಯೆಯೂ ತೀರ ಕನಿಷ್ಠ ಪರಿಮಿತಿಗೆ ಇಳಿದಿದೆ. ಸಾವುಗಳು ಇದೇ ರೀತಿ ಹತೋಟಿಗೆ ತಂದುಕೊಳ್ಳಬೇಕಾದ ವಿವಿಧ ಜ್ವರಗಳು, ಕ್ಷಯ, ಕ್ರಿಮಿಕೀಟಗಳಿಂದ ಸಂಭವಿಸುವ ರೋಗಗಳು, ಮೇಹಜಾಡ್ಯ, ಮುಂತಾದ ಹಲವು ವ್ಯಾಧಿಗಳಿವೆ. ಅವುಗಳಲ್ಲಿ ಪ್ರತಿಯೊಂದನ್ನೂ ನಿರ್ಮೂಲವಮಾಡುವ ವಿಧಾನವನ್ನೂ ನಮಗೆ ವಿಜ್ಞಾನವು ಬೋಧಿಸಿಕೊಟ್ಟಿದೆ.

ಚಾಲಕರ ಅಶ್ರದ್ಧೆಯಿಂದಲೂ ಅಜ್ಞಾನದಿಂದಲೂ, ಕೆಟ್ಟುಹೋದ ಮೋಟಾರು ಕಾರುಗಳನ್ನು ಸರಿಮಾಡುವುದರಲ್ಲಿ ಕಾಲವನ್ನು ವ್ಯಯ ಮಾಡಬೇಕಾಗುವ ಇಂಜನಿಯರುಗಳ ಸ್ಥಿತಿಯೇ, ಈಗ ಡಾಕ್ಟರುಗಳಿಗೂ ಒದಗಿದೆ. ಜನಗಳು ಅಜಾಗರೂಕತೆಯಿಂದಲೂ ಅಜ್ಞಾನದಿಂದಲೂ ರೋಗಗ್ರಸ್ತರಾದುದಕ್ಕೆಲ್ಲ ಅವರು ಚಿಕಿತ್ಸೆ ಮಾಡಬೇಕಾದ ಆವಶ್ಯಕತೆಯೊದಗಿದೆ. ಸಾಧ್ಯವಾದ ಮಟ್ಟಿಗೂ ಈ ಆವಶ್ಯಕತೆಯು ಕಡಮೆಯಾಗಿ, ಆಕಸ್ಮಿಕಗಳೂ ವ್ಯಾಪ್ತವಾಗದ ವ್ಯಾಧಿಗಳೂ ಸಂಭವಿಸಿದರೆ ಮಾತ್ರವೇ ಚಿಕಿತ್ಸೆ ನಡೆಯುವಂತಾಗಬೇಕು. ಹೆಚ್ಚೇಕೆ? ರೋಗಿಗಳಿಗೆ ಈಗ ಚಿಕಿತ್ಸೆ ನಡೆಯುತ್ತಿರುವ ಆಸ್ಪತ್ರೆಗಳಿಗೂ ಪ್ರಜೆಗಳಾದ ನಿಮ್ಮ ಅವಲಂಬನವು ಬೇಕು. ಅಲ್ಲದೆ, ಇನ್ನು ಮುಂದೆ ಜನಾರೋಗ್ಯ ಸ್ಥಿತಿಯು ಈಗಿರುವುದಕ್ಕಿಂತ ಉತ್ತಮವಾಗುವಂತೆ ಮಾಡಿ, ಜನ್ಮಮೂಲಕ ರೋಗಿಗಳ ಸಂಖ್ಯೆಯೂ ಆಸ್ಪತ್ರೆಗಳ ಸಂಖ್ಯೆಯೂ ಕಡಮೆಯಾಗುವುದಕ್ಕೂ ನಿಮ್ಮ ಪ್ರಯತ್ನವು ನಡೆಯಬೇಕು. ಇದೇ ನನಗಿರುವ ತೀವ್ರಾಭಿಲಾಷೆ.

ಮಹಿಳೆಯರೇ ಮತ್ತು ಮಹಾಶಯರೇ, ಇಲ್ಲಿ ನಿರ್ಮಿತವಾಗಿರುವ ಶ್ರೀ ನರಸಿಂಹರಾಜ ಆಸ್ಪತ್ರೆಯ ಪ್ರವೇಶ ಮಹೋತ್ಸವವನ್ನು ನೆರವೇರಿಸಿ, ಕಾರ್ಯಾರಂಭವಾಗಬಹುದೆಂದು ಅನುಜ್ಞೆಯನ್ನು ಕೊಡಲು ಹರ್ಷಿಸುವೆನು. ಕೋಲಾರದವರಿಗೂ ಕೋಲಾರ ಡಿಸ್ಟ್ರಿಕ್ಟಿನವರಿಗೂ ಇದರಿಂದ ವಿಪುಲವಾಗಿ ಚಿರಕಾಲ ಸಹಾಯವು ದೊರಕಿ ಅನುಕೂಲವಾಗುವಂತೆ ಹಾರೈಸುತ್ತೇನೆ.

ಆಯುರ್ವೇದ ಸಮ್ಮೇಳನ
ರಾಯಚೂರು

ಸೇಕ್ಸಿಂಡ ಸಮ್ಮೇಳನವೂ, ಆಯುರ್ವೇದ ವಸ್ತುಪ್ರದರ್ಶನವೂ ಹೈದರಾಬಾದ್ ಕರ್ನಾಟಕದ ಮುಖ್ಯ ಕೇಂದ್ರವಾದ ರಾಯಚೂರಿನಲ್ಲಿ ಇದೇ ಡಿಸೆಂಬರು ೨೪-೨೫ ಮತ್ತು ೨೬ ನೇ ತಾರೀಕುಗಳಲ್ಲಿ ನಡೆಯುತ್ತವೆ. ಕರ್ನಾಟಕದ ಎಲ್ಲ ವೈದ್ಯರೂ ಹಕೀಮರೂ ವೈದ್ಯ ವಿದ್ಯಾರ್ಥಿಗಳೂ ಅಭಿಮಾನಿಗಳೂ ಸಹ ದಯೆಯಿಟ್ಟು ತಾ॥ ೨೩ ರ ಮಧ್ಯಾಹ್ನದೊಳಗೆ ಅಲ್ಲಿಗೆ ಬರತಕ್ಕದ್ದೆಂದು ಆಹ್ವಾನಗಳು ಆಗಲೇ ಹೋಗಿರುತ್ತವೆ.

ಪೌರ್ವಾತ್ಯ ಪಾಶ್ಚಾತ್ಯ ಶಾಸ್ತ್ರಗಳಲ್ಲಿ ವಿಖ್ಯಾತ ವೈದ್ಯರಾದ ಅಗಲೆಯ ಅಖಿಲಭಾರತಾಯುರ್ವೇದ ಮಹಾ ಸಮ್ಮೇಳನದ ಜನರಲ್ ಸೆಕ್ರೆಟರಿಯವರಾಗಿದ್ದು ಹಾಲಿ ಮೈಸೂರು ಗ॥ ಆಯುರ್ವೇದಿಕ್ ಯುನಾನಿ ಕಾಲೇಜಿನ ಪ್ರಿನ್ಸಿಪಾಲರಾದ ಭಿಷಕ್‌ಚೂಡಾಮಣಿ ಡಾ॥ ವೈ. ಲಕ್ಷ್ಮೀನರಸಿಂಹ ಶಾಸ್ತ್ರಿಗಳು ಎಲ್. ಎಂ. ಪಿ. ಆಯುರ್ವೇದ ವಿದ್ವಾಂಸರವರು ಸರ್ವಾನುಮತದಿಂದ ಅಧ್ಯಕ್ಷತೆಯನ್ನು ವಹಿಸಲು ಅಂಗೀಕರಿಸಿರುತ್ತಾರೆ. ಇದರ ಅಂಗವಾಗಿ ಹಲವು ಕಾರ್ಯಕ್ರಮಗಳು ಆಯಾಯಾ ಮಹನೀಯರ ನೇತೃತ್ವದಲ್ಲಿ ಜರುಗುತ್ತವೆ. ಪ್ರತಿನಿಧಿ ಶುಲ್ಕವು ಮೂರು ರೂಪಾಯಿಗಳೆಂದೂ ಪ್ರದರ್ಶನ ನೋಡಲು ಒಂದು ರೂಪಾಯಿ ಶುಲ್ಕವೆಂದೂ ಪ್ರತಿನಿಧಿಗಳ ವಾಸಕ್ಕೂ ಭೋಜನಕ್ಕೂ ಉಚಿತ ವ್ಯವಸ್ಥೆ ಮಾಡತಕ್ಕದ್ದೆಂದೂ ನಿರ್ಧರಿಸಲಾಗಿದೆ. ಸರ್ವರೂ ದಯಮಾಡಿ ಸಮ್ಮೇಳನವನ್ನು ಯಶಸ್ವಿಯನ್ನಾಗಿ ಮಾಡಬೇಕಾಗಿ ಪ್ರಾರ್ಥಿಸಲಾಗಿದೆ.

ಒಂದು ವೇಳೆ ವಿಳಾಸಗಳು ತಿಳಿಯದ ಕಾರಣ ಇದುವರೆಗೆ ಯಾವ ವೈದ್ಯರಿಗಾದರೂ ಆಹ್ವಾನವು ತಲುಪದಿದ್ದರೆ ಇದನ್ನೇ ಆಹ್ವಾನವಾಗಿ ಅಂಗೀಕರಿಸಿ ದಯಮಾಡಿಸಬೇಕು. ಅಥವಾ ಅಂಥವರ ವಿಳಾಸವನ್ನು ಸ್ವಾಗತ ಸಮಿತಿಗೆ ತಿಳಿಸಿದರೆ ಕೂಡಲೆ ಆಹ್ವಾನವನ್ನು ಕಳುಹಿಸಲು ತಕ್ಕ ಏರ್ಪಾಡು ಮಾಡಲಾಗುತ್ತೆ—ಎಂಬುದಾಗಿ ವ್ಯವಸ್ಥಾಪಕರು ಬರೆಯುತ್ತಾರೆ.

ಡಾಕ್ಟರ್ — (ರೋಗಿಯನ್ನು ಕುರಿತು) ಏನಯ್ಯ ಹೆಣದ ಹಾಗೆ ಕಾಣುತ್ತೀಯಲ್ಲಾ.

ರೋಗಿ—ನಾನೇನೂ ಹೆಣವಲ್ಲಾ, ಜೀವ ಸಹಿತ ಇದ್ದೇನೆ ಸಾರ್.

ನರಸು — ಅಯ್ಯಾ, ಸುಮ್ನೆ ಇರು, ಡಾಕ್ಟರಿಗಿಂತ ನಿನಗೆ ಗೊತ್ತೇನು?

ಎಸ್. ಕೃಷ್ಣಮೂರ್ತಿ.

ವಿ ವಿ ಧ ವ ರ್ತ ಮಾ ನ

ಡಾ|| ಪಟ್ಟಾಭಿಯವರ ಆಗಮನ

ಅಖಿಲ ಭಾರತ ದೇಶೀಯ ಸಂಸ್ಥಾನ ಸಮ್ಮೇಳನದ ಅಧ್ಯಕ್ಷರೂ ಕಾಂಗ್ರೆಸ್ ನಾಯಕರೂ ಆದ ಡಾ|| ಪಟ್ಟಾಭಿ ಸೀತಾ ರಾಮಯ್ಯನವರು ಈ ತಿಂಗಳು ೧೯ ನೇ ಜನವರಿಯಿಂದ ೩೦ನೇ ಜನವರಿಯವರೆಗೆ ನಮ್ಮ ಸಂಸ್ಥಾನದಲ್ಲಿ ಸಂಚರಿಸುವರು. ಇಲ್ಲಿನ ರಾಜಕೀಯ ಸ್ಥಿತಿಗತಿಗಳನ್ನು ಪರಿಶೀಲಿಸುವರು. ಬಹಿರಂಗ ಸಭೆಗಳಲ್ಲಿ ಭಾಷಣ ಮಾಡುವರು. ಮೈಸೂರಿಗೆ ೨೫ ನೇ ತಾರೀಖಿಗೆ ಬರುವರು ಅವರೊಡನೆ ಸದರಿ ಸಮ್ಮೇಳನದ ಕಾರ್ಯದರ್ಶಿ ಮ|| ಬಲ ವಂತರಾಯ ಮೆಹತಾರವರೂ ಬರುವರು.

ದಿವಾನರಿಗೆ ಬಿನ್ನವತ್ತಳೆ

ಬೆಂಗಳೂರಿನಲ್ಲೂ ದಂಡಿನಲ್ಲೂ ಇರುವ ಮುದಲಿಯಾರ್ ಜನಾಂಗದವರು ಈ ತಿಂಗಳಿನಲ್ಲಿ ದಿವಾನ್ ಸರ್ ಮಿರ್ಜಾ ಇಸ್ಮಾಯಿಲರನ್ನು ಔತಣಕ್ಕೆ ಕರೆದು ಬಹುಮಾನಿಸಿ ಅವರನ್ನು ಸತ್ಕರಿಸಿ ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದಿರುವುದಾಗಿ ತಿಳಿದುಬರುತ್ತದೆ

ಹೊಸ ರೆಸಿಡೆಂಟರು

ಬ್ರಿಟಿಷ್ ರೆಸಿಡೆಂಟರಾಗಿದ್ದ ಕರ್ನಲ್ ಪ್ಲೌಡೆನ್‌ರವರು ತಮ್ಮ ಅಧಿಕಾರದ ಅವಧಿಯನ್ನು ಮುಗಿಸಿಕೊಂಡು ಇಂಗ್ಲೆಂಡಿಗೆ ತೆರಳಿದರು. ಅವರ ಸ್ಥಾನದಲ್ಲಿ ಲೆಫ್ಟಿನೆಂಟ್ ಕರ್ನಲ್ ಜೆ. ಡಬ್ಲ್ಯು. ಹೆ ಗಾರ್ಡನ್ ರವರು ರೆಸಿಡೆಂಟರಾಗಿ ನೇಮಿಸಲ್ಪಟ್ಟಿದ್ದಾರೆ. ಅವರು ಕಳೆದ ಗುರುವಾರ ತಮ್ಮ ಪದವಿಯನ್ನು ಸ್ವೀಕರಿಸಿದರು.

ಭಾವಚಿತ್ರ ಅನಾವರಣ

ಕನ್ನಡ ಬಾಲಬೋಧ, ಆರ್ಯಶೀಲ ಮುಂತಾದ ಗ್ರಂಥಗಳನ್ನು ರಚಿಸಿ ಕನ್ನಡದ ಸೇವೆಯನ್ನು ಮಾಡಿರುವ ಮ|| ಚ. ವಾಸುದೇವಯ್ಯನವರ ಭಾವ ಚಿತ್ರವು ಕಳೆದ ೧೬ನೇ ತಾ|| ಭಾನುವಾರ ಬೆಂಗಳೂರು ಮಲ್ಲೇಶ್ವರದ ಶ್ರೀರಾಮ ಮಂದಿರದಲ್ಲಿ ಅನಾವರಣ ಮಾಡಲ್ಪಟ್ಟಿತು. ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್ ಎಂ. ಶಾಮರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಯುತ ಡಿ. ವಿ. ಗುಂಡಪ್ಪನವರು ವಾಸುದೇವಯ್ಯನವರ ಜೀವನ ಮತ್ತು ಗ್ರಂಥಗಳ ವಿಷಯವಾಗಿ ಭಾಷಣಮಾಡಿದರು.

ಸಂಬಳ ಅಟ್ಯಾಚ್ ಮಾಡುವುದು

ಇಪ್ಪತ್ತು ರೂ. ನ ಮಾಹೆಯಾನ ಸಂಬಳ ಅಥವ ವರಮಾನವುಳ್ಳವರ ಉತ್ಪತ್ತಿಯಲ್ಲಿ ಸಾಲಗಳಿಗಾಗಿ ಅಟ್ಯಾಚ್‌ಮೆಂಟು ಮಾಡತಕೂಡದೆಂದು ಈಗ ಕಾನೂನಿರುವುದಷ್ಟೆ. ಈ ಪ್ರಮಾಣವು ಸಾಲದೆಂದು ಸರ್ಕಾರದವರು ಅದನ್ನು ೫೦ ರೂಗಳಿಗೆ ಹೆಚ್ಚಿಸಬೇಕೆಂದು ಒಂದು ಮಸೂದೆಯನ್ನು ತಯಾರುಮಾಡಿದ್ದಾರೆ. ಅದು ಜರುಗುವ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬರುವುದು.

ಮೊ ಕ ದ್ದ ಮೆ

ಗಲಾಟೆ ಮಾಡಿದರೆಂದೂ ದುರ್ಭಾಷೆಗಳನ್ನಾಡಿದರೆಂದೂ ಆಪಾದಿಸಿ ಮೈಸೂರು ಕೃಷ್ಣರಾಜ ನೊಹಲ್ಲಾದಲ್ಲಿರುವ ಶ್ರೀಮತಿ ದೇವೂಬಾಯಿಯವರ ಮೇಲೆಯೂ, ರಸ್ತೆಯಲ್ಲಿ ಸೌದೆ ಒಡೆಸಿದರೆಂಬ ಆಪಾದನೆಯ ಮೇಲೆ ಶ್ರೀ|| ಎಸ್. ವಿಷಕಂಠರಾಯರ ಮೇಲೂ ಸಿಟಿ ಪೋಲೀಸರು ಮೊಕದ್ದಮೆ ಹೂಡಿದ್ದಾರೆ. ಶ್ರೀ|| ವಿಷಕಂಠರಾಯರು ಕನ್ನಡ ಲಾವಣಿಗಳನ್ನು ರಚಿಸಿ ಹಾಡುವುದರಲ್ಲಿ ಸುಪ್ರಸಿದ್ಧರು. ಆಕಾಶವಾಣಿಯಲ್ಲಿಯೂ ಇತರ ಅನೇಕ ಸ್ಥಳಗಳಲ್ಲಿಯೂ ಇವರು ಲಾವಣಿಗಳನ್ನು ಬಹಳ ಚೆನ್ನಾಗಿ ಹಾಡಿರುವರು. ಶ್ರೀಮತಿ ದೇವೂಬಾಯಿಯವರು ಅವರ ಮಾತೃಶ್ರೀಯವರು

ಕನ್ನಡದ ಉತ್ಸವ

ಕಳೆದ ಮಂಗಳವಾರ ಸಾಯಂಕಾಲ ಮೈಸೂರು ಟೌನ್‌ಹಾಲಿನಲ್ಲಿ ರಾಜಧಾನಿಯಲ್ಲಿ ಕರ್ನಾಟಕ ಸಂಘಗಳ ಆಶ್ರಯದಲ್ಲಿ ಕನ್ನಡದ ಉತ್ಸವವು ವಿಶೇಷ ಉತ್ಸಾಹದಿಂದ ಜರುಗಿತು ಪ್ರೊ|| ಬಿ. ಎಂ. ಶ್ರೀಕಂಠಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಭವನದ ತುಂಬಾ ಮಹಿಳೆಯರೂ, ಮಹನೀಯರೂ ಕಿಕ್ಕಿರಿದು ತುಂಬಿದ್ದರು. ನೂರಾರು ಜನರು ಸ್ಥಳವಿಲ್ಲದೆ ವಾಪಸು ಹೋಗಬೇಕಾಯಿತು. ಪ್ರಾರ್ಥನೆ, ವಾಚನ, ಭಾಷಣಾದಿಗಳೂ, ದೃಶ್ಯಾವಳಿಗಳೂ, ಸ್ಪರ್ಧೆಗಳೂ ನಡೆದವು ಬಹುಮಾನವಿನಿಯೋಗವಾಯಿತು. ಧನ್ಯವಾದಗಳಾದ ತರುವಾಯ ಮಂಗಳದೊಡನೆ ಸಭೆ ಮುಕ್ತಾಯವಾಯಿತು.



ಶ್ರೀ|| ಎಸ್. ವಿಷಕಂಠರಾವ್.

ಅಬ್ಬೀನಿಯಾ ಚಕ್ರವರ್ತಿಗಳು

ಬಾತ್ ಎಂಬಲ್ಲಿರುವ ಅಬ್ಬೀನಿಯದ ಚಕ್ರವರ್ತಿ ಹೈಲಿ ಸಿಲಾಸಿಯವರು ಬಹು ಬಡತನದಲ್ಲಿರುವರು ತಮ್ಮ ಮನೆ ಮತ್ತು ಸಾಮಾನುಗಳನ್ನು ಮಾರಿ ಜೀವನ ಮಾಡುವುದರಲ್ಲಿರುವರು. ಬೇಳಿದಂತೆ ಕೇಳಿಕೊಂಡು ಬ್ಯಾಂಕಿನ ವ್ಯವಹಾರ ನಡೆಸುವುದಾಗಿ ದ್ದರೆ ತನಗೆ ಹಿಂದಿನ ವೈಭವವೆಲ್ಲವು ಬರುವಂತೆ ಮಾಡುವೆನೆಂದೂ ಪ್ರೈಸರಾಯಿ ತದವರ ಕೊಡುವೆನೆಂದೂ ಮುಸ್ಸೋಲಿನಿಯು ಹೇಳುತ್ತಿರುವನು ಅವರ ಅವರು ಹಾಗೆ ಮಾಡುವುದಿಲ್ಲ.

ಭಾರಿ ದಾವಾ

ಫಿಲಡೆಲ್ಫಿಯಾದ ಎಚ್. ಇ ಗ್ಯಾರೆಟ್ ಎಂಬಾಕೆಯ 60 ಲಕ್ಷ ಪೌಂಡುಗಳ ಆಸ್ತಿಯನ್ನು ಬಿಟ್ಟು 18-11-37 ರಲ್ಲಿ ಸತ್ತಳು. ವಿಲ್ ಬರೆದಿಟ್ಟಿಲ್ಲ 17,000 ಮಂದಿ ಹಕ್ಕುದಾರರು ಆಕೆಯ ಆಸ್ತಿಗೆ ದಾವಾ ನಡೆಸುತ್ತಿರುವರು 3500 ಮಂದಿ ಲಾಯರುಗಳು ಇದಕ್ಕಾಗಿ ವಾದಿಸುವರು ಆಸ್ತಿಯು ವಿಲೇ ಆಗುವುದಕ್ಕೆ 15 ವರ್ಷ ಕಾಲ ಹಿಡಿಯುವುದಂತೆ.

ಗಾಂಧಿಜಿಯವರ ಪ್ರತಿಮೆ

ಗುಂಟೂರು ಮುನಿಸಿಪಾಲಿಟಿಯವರು ಮಹಾತ್ಮ ಗಾಂಧಿಯವರ ಪ್ರತಿಮೆಯನ್ನು ಸ್ಥಾಪಿಸಲು ೧೫೦೦ ರೂಪಾಯಿಗಳನ್ನು ಮಂಜೂರು ಮಾಡಿರುವರು

ಜಪಾನಿನ ಮಂತ್ರಿ

ಜಪಾನಿನ ಹಾಲಿ ಮುಖ್ಯ ಮಂತ್ರಿಯಾದ ಪ್ರಿನ್ಸ್ ಕೊನೊಯಿಯವರು ಪ್ರಪಂಚದ ಮುಖ್ಯ ಮಂತ್ರಿಗಳೆಲ್ಲರಿಗಿಂತ ಚಿಕ್ಕ ವಯಸ್ಸಿನವರಂತೆ. ಅವರಿಗೆ 45 ವಯಸ್ಸು ಅವರ ಮನೆ ಕೋಟೆಯಂತಿದೆ, ಬಾಂಬು ಹಾಕಿದರೂ ಭಯವಿಲ್ಲ.

ವಿಚಿತ್ರ ಮರಣ

ಎಕ್ಸ್‌ಟರಿನವರಾದ ಆತ ಎಂಬಲ್ಲಿ ವಿದ್ಯಾರ್ಥಿಯಾದ ಒಂದು ಹುಡುಗನಲ್ಲಿ ಗಾಡಿಯ ಮಾರದಲ್ಲಿಕೆಂದು ಅಪ್ಪಾಸಿಸಿದ ವಿಕ್ಕೆ ಒಪ್ಪಿದ್ದವರು ಐದು ಜನರೂ ಒಬ್ಬರ ನಂತರ ಒಬ್ಬರು ಸತ್ತುಹೋದರು.

ಪತ್ರಿಕಾ ಪ್ರದರ್ಶನ

ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನವು ಇದೇ ತಿಂಗಳ ೨೯-೩೦-೩೧ ತಾರೀಖುಗಳಿಗೆ ಜಮಖಂಡಿಯಲ್ಲಿ ಕೂಡುವದು. ಪತ್ರಿಕೆಗಳ ಪ್ರದರ್ಶನದ ಜೊತೆಗೆ ಕೈ ಬರಹದ ಪತ್ರಿಕೆಗಳ ಪ್ರದರ್ಶನವನ್ನೂ ಏರ್ಪಡಿಸಲಾಗಿದೆಯೆಂದು ಈ ಮೊದಲೇ ತಿಳಿಸಿದೆ ಅದರಂತೆ ಕೆಲವು ಪತ್ರಿಕೆಗಳು ಬಂದಿವೆ. ಆದುದರಿಂದ ಎಲ್ಲ ಸಂಘ, ಶಾಲೆ, ಕಾಲೇಜುಗಳಲ್ಲಿಯ ಸಂಪಾದಕರು ತಮ್ಮ ತಮ್ಮ ಪತ್ರಿಕೆಗಳನ್ನು ದಯವಿಟ್ಟು ಕೂಡಲೆ ಕಳಿಸಬೇಕು. ಪ್ರದರ್ಶನ ಮುಗಿದ ನಂತರ ಅವುಗಳನ್ನು ನಮ್ಮ ವೆಚ್ಚದಿಂದ ತಿರುಗಿ ಕಳಿಸುವೆವು ತಾ ೩೧ ರ ಒಳಗಾಗಿ ಕಳಿಸಬೇಕು—ಎಂದು ಬಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ

ಕರ್ನಾಟಕಸ್ಥರಲ್ಲಿ ಬಿನ್ನಹ

ಜಮಖಂಡಿಯಲ್ಲಿ ಮುಂದೆ ಜರುಗುವ ೨೯, ೩೦, ೩೧ ನೇ ತಾರೀಖಿಗೆ ಅಖಿಲ ಕರ್ನಾಟಕ ಸಾಹಿತ್ಯಸಮ್ಮೇಳನವು ನಡೆಗುವದೆಂಬ ಸಂಗತಿಯು ಈ ಮೊದಲೇ ಪ್ರಸಿದ್ಧಿಪಡಿಸಲ್ಪಟ್ಟಿದೆಯಷ್ಟೆ ಸ್ವಾಗತ ಸಮಿತಿಯ ಸದಸ್ಯರು ಮತ್ತು ಪ್ರತಿನಿಧಿಗಳ ವಸತಿಯ ವ್ಯವಸ್ಥೆಯನ್ನೂ ಸ್ವಾಗತ ಸಮಿತಿಯವರು ಮಾಡುವರಾಗಿ ಬಯಸುವರು ಈ ಸಮ್ಮೇಳನಕ್ಕೆ ಬರಲಿಚ್ಛಿಸುವವರು ೨೦ ನೇ ತಾರೀಖಿನೊಳಗಾಗಿ ಸ್ವಾಗತ ಮಂಡಳಿಯವರಿಗೆ ತಿಳಿಸುವುದು. ಅದರಿಂದ ವಿದಾರದ ವ್ಯವಸ್ಥೆಯನ್ನು ಮಾಡಲು ಅನುಕೂಲವಾಗುವದು—ಎಂದು ಸ್ವಾಗತಮಂಡಳಿಯವರು ಪ್ರಕಟಿಸಿರುತ್ತಾರೆ

ನಾಟಕದ ಆಸೆಯಿಂದ ಕಳವು

ಒಂದು ಸಣ್ಣ ಸಂಸಾರ ಒಂದು ದಿನ ದಂಪತಿಗಳಿಬ್ಬರಿಗೂ ಬಿಟ್ಟಿ ನಾಟಕದ ಟಿಕೆಟ್ಟುಗಳು ಅಂಚೆಯ ಮೂಲಕ ಬಂದವು. ಯಾರು ಕಳುಹಿಸಿದರೆಂಬುದು ತಿಳಿಯಲಿಲ್ಲ. ಆ ದಿನ ರಾತ್ರೆ ಇಬ್ಬರೂ ನಾಟಕಕ್ಕೆ ಹೋದರು ವಾಪಸು ಬಂದವೇಳೆ ಮನೆಬಾಗಿಲು ತೆಗೆದಿತ್ತು. ಒಡವೆಗಳೆಲ್ಲ ಕಳುವಾಗಿದ್ದವು. ಒಂದು ಚೀಟಿಯಲ್ಲಿ "ಯಾರು ನಾಟಕದ ಟಿಕೆಟ್ ಕಳುಹಿಸಿದವರೆಂಬುದು ತಿಳಿಯಿತೇ? ಎಂದು ಬರೆದಿಟ್ಟಿದ್ದಿತು

ದಂಪತಿಗಳಿಗೆ ನಡೆದ ಮೋಸದಿಂದ ಬಹಳ ವ್ಯಸನವಾಯಿತು

ANANDA SODA FACTORY

Best Aerated Water Suppliers.

Complete Requisites For Aerated Water Manufacturers Available.

ಆನಂದಾ ಸೋಡಾ ಫ್ಯಾಕ್ಟರಿ

ದೊಡ್ಡಪೇಟೆ, ಮೈಸೂರು.

ಸಾಧ್ವಿ

೨೦—೧೨—೩೭ ನೇ ಸೋಮವಾರ

ಅಂತರಂಗವೇಕೆ ?

ರಾಜಧಾನಿಯ ಮತ್ತು ಮೈಸೂರು ಡಿಸ್ಟ್ರಿಕ್ಟಿನ ಕೆಲವು ಮಹನೀಯರುಗಳು ಮೈಸೂರು ಲಕ್ಷ್ಮೀವಿಲಾಸ ರಸ್ತೆಯಲ್ಲಿರುವ ಒಂದು ಮನೆಯಲ್ಲಿ ಕಳೆದ ಬುಧವಾರ ಒಂದು ಸಭೆ ನಡೆಸಿದರು. ಸುಮಾರು ಐವತ್ತು ಜನರು ಸೇರಿದ್ದರೆಂದು ತಿಳಿಯಬರುತ್ತದೆ. ಅವರಲ್ಲಿ ಕೆಲವರು ನಿಜವಾಗಿಯೂ ಮಾನ್ಯರಾದವರು ಇದ್ದರು. ಇನ್ನು ಕೆಲವರು ಯಾವ ಕಾರ್ಯಸಾಧನೆಗಾಗಿ ಸೇರಿದ್ದರೋ ಗೊತ್ತಿಲ್ಲ.

ಸಭೆಯು ಬಹಳ ಗೋಪ್ಯವಾಗಿ ಜರುಗಿತು. ಕೇವಲ ಆಹ್ವಾನಿತರಿಗೆ ಮಾತ್ರ ಅದರಲ್ಲಿ ಪ್ರವೇಶವಿತ್ತು. ಕಾಂಗ್ರೆಸ್ಸಿಗೆ ಸೇರದೇ ಇರುವ ಮತ್ತು ಸೇರಲು ಇಷ್ಟಪಡದೇ ಇರುವ ದೇಶಭಕ್ತರಾದ ಮೈಸೂರು ಪ್ರಜೆಗಳ ಕರ್ತವ್ಯವನ್ನು ವಿಚಾರಿಸಲೂ ಮತ್ತು ಸಂಸ್ಥಾನದಲ್ಲಿ ಒದಗಿರುವ ರಾಜಕೀಯ ಪರಿಸ್ಥಿತಿಯನ್ನು ವಿಚಾರಮಾಡಲೂ ಈ ಸಭೆ ಸೇರಿತ್ತೆಂದು ಹೇಳಲಾಗಿದೆ. ಇದು ಮೈಸೂರು ಡಿಸ್ಟ್ರಿಕ್ಟಿನ ಕೆಲವು ಮುಖಂಡರ ಸಣ್ಣ ಸಭೆಯೆಂದು ಸಮೂದಿಸಲ್ಪಟ್ಟಿದೆ. ಅದಕ್ಕೆ ಶ್ರೀಮಾನ್ ಡಿ. ನಾಕಪ್ಪನವರೂ, ಮಿ॥ ಅಮೀರ್ ಜಾನ್‌ರವರೂ, ಮಿ॥ ಬಿ. ಎಸ್. ಪುಟ್ಟಸ್ವಾಮಿಯವರೂ ಇನ್ನು ಕೆಲವರೂ ಚಾಲಕರು. ಇವರುಗಳನ್ನು ಈ ಡಿಸ್ಟ್ರಿಕ್ಟಿನ ಮುಖಂಡರೆಂದು ಜನ ನಾಯಕರಾಗಿ ಯಾರು ಆರಿಸಿದವರೋ ಗೊತ್ತಿಲ್ಲ. ಇವರುಗಳು ಒಂದು ಕೋಣೆಯಲ್ಲಿ ಯಾರಿಗೂ ತಿಳಿಯದಂತೆ ಸೇರಿಕೊಂಡು ಇಂದಿನ ರಾಜಕೀಯ ಬಿಕ್ಕಟ್ಟನ್ನು ಪರಿಹರಿಸುವರಂತೆ.

ರಾಜಕೀಯವೆಂಬುದು ಅಷ್ಟು ಸುಲಭದ ವಿಷಯವಲ್ಲ. ಕೇವಲ ಹಲಕೆಲವು ಮಂದಿ ಯಾರಿಗೂ ತಿಳಿಯದಂತೆ ಗುಟ್ಟಾಗಿ ಒಂದು ಮೂಲೆಯಲ್ಲಿ ಕುಳಿತು ನಿರ್ಧರಿಸುವ ಅಂಶವಲ್ಲ. ಬಹಿರಂಗವಾಗಿಯೂ, ಮಹಾಜನರ ಸಮ್ಮುಖದಲ್ಲಿಯೂ ಎಲ್ಲರ ಹಿತವನ್ನೂ ಗಮನಿಸಿ ಸಮ್ಮತಿಯಿಂದ ಕಾರ್ಯ ಮಾಡುವುದೇ ನಿಜವಾದ ರಾಜಕೀಯ ನಿರ್ಣಯ. ಸಂಕುಚಿತ ವಾತಾವರಣದಲ್ಲಿ ಸೇರಿಕೊಂಡು ತಮ್ಮ ಮನಸ್ಸಿಗೆ ತೋಚಿದಂತೆ ಮಾಡಿಕೊಳ್ಳುವುದು ಕೇವಲ ದೇಶದ್ರೋಹ ಅಥವಾ ಸ್ವಾರ್ಥಸಾಧನೆ. ಇದಕ್ಕೆ ಯಾರೂ ಮರುಳಾಗಬಾರದೆಂದು ನಾವು ಸೂಚಿಸುತ್ತೇವೆ.

ಈ ಮಹನೀಯರುಗಳು ಕಾಂಗ್ರೆಸ್ಸಿನ ಹೆಸರನ್ನೇಕೆ ಎತ್ತಿದರೋ ಗೊತ್ತಿಲ್ಲ. ಆ ಪವಿತ್ರ ಹೆಸರನ್ನು ಹೇಳಲು ತಮಗೆ ಅರ್ಹತೆ ಇದೆಯೆಂದು ಅವರು ತಿಳಿದುಕೊಂಡಿರುವರೊ? ಅಥವ ಕಾಂಗ್ರೆಸ್ಸು ಅವರಲ್ಲಿರುವ ಕಲ್ಮಷಗಳನ್ನು ಸುಟ್ಟು ಭಸ್ಮಮಾಡುವ ಅಗ್ನಿ ಕುಂಡವೆಂದು ಅವರು ಅರಿತಿರುವರೋ? ಸರ್ ಮಿರ್ಜಾರವರೇ ಎಲ್ಲರಿಗಿಂತಲೂ ಹೆಚ್ಚಿನ ಕಾಂಗ್ರೆಸ್ಸಿನವರೆಂದು ಹೇಳಿಕೊಳ್ಳಲು, ಹೆಮ್ಮೆಪಡುವಾಗ ಕಾಂಗ್ರೆಸ್ಸಿನ ಹೆಸರಿಗೇ ಗಾಬರಿಬೀಳುವ ಈ ವ್ಯಕ್ತಿಗಳು ಸಾಮಂತರೆನಿಸಿಕೊಳ್ಳಲು ಏಕೆ ಕಾತರ ಪಡಬೇಕು ?

ಈ "ಮುಖಂಡರು" ಗಳೆಂಬುವರು ಮತಾಂಧವಿಶ್ವವನ್ನು ತಂದೊಡ್ಡುವರೋ ಎಂಬುದೊಂದೇ ಪ್ರಶ್ನೆ. ಗುಟ್ಟಾದ ಕಾರ್ಯಕ್ರಮಗಳು ಪ್ರಜಾಪ್ರಭುತ್ವಕ್ಕೆ ಎಂದಿಗೂ ಸಾಧಕಗಳಲ್ಲ. ನಮ್ಮ ನಾಡು ಬೇರೆ ಬೇರೆ ಪಂಗಡಗಳ ತವರೂರಾಗಿ ತುಂಡು ತುಂಡಾಗಿ ಒಡೆದು ಹೋಗದಿರಲಿ. ಏಕಾಭಿಸಂಧಿ, ಸಹೃದಯತೆಗಳೇ ಆದರ್ಶವಾಗುವುದು ಲಕ್ಷ್ಯ ನಮ್ಮ ಬಾಂಧವರಲ್ಲಿ ಬೆಳೆಯಲಿ. ಸ್ವಪ್ರತಿಷ್ಠೆಗಾಗಿ ಪಂಗಡಗಳನ್ನು ಯಾರೂ ಮಾಡದಿರಲಿ. ಏಕ್ಯತೆಗಾಗಿಯೇ ಎಲ್ಲರೂ ದುಡಿಯಲಿ ಇದೇ ನಮ್ಮ ಪ್ರಾರ್ಥನೆ.

ದಿವಾನರ ಮಕ್ಕಳು ನವಾಬರಾದರು.

ದಿವಾನ್ ಸರ್ ಮಿರ್ಜಾ ಇಸ್ಮೇಲರವರ ಕುಮಾರರಾದ ಮಿ॥ ಹುಮಾಯೂನ್ ಮಿರ್ಜಾರವರು ಬಂಗನಪಲ್ಲಿ ಸಂಸ್ಥಾನದ ದಿವಾನರಾಗಿ ಮೊನ್ನೆ ತಾನೆ ನೇಮಿಸಲ್ಪಟ್ಟಿರುವರಷ್ಟೆ. ಅಲ್ಲಿನ ನವಾಬರು ಸಧ್ಯದಲ್ಲಿಯೇ ಇರಾನ್, ಇರಾಕ್, ಅರೇಬಿಯಾ ಮುಂತಾದ ಕ್ಷೇತ್ರಗಳಿಗೆ ಯಾತ್ರೆ ಹೊರಡುವರು. ಆದ್ದರಿಂದ ಕಳೆದ ೭ ನೇ ತಾ॥ ನವಾಬರು ಒಂದು ದರ್ಬಾರನ್ನು ನೆರವಿಸಿದರು. ತಮ್ಮ ದೇಶದ ಪ್ರಮುಖ ದೊಡ್ಡ ಮನುಷ್ಯರಿಗೆ ಮಿ॥ ಹುಮಾಯೂನ್ ಮಿರ್ಜಾರವರ ಪರಿಚಯವನ್ನು ಮಾಡಿಕೊಟ್ಟರು. ಮತ್ತು ನವಾಬ್‌ಗಿರಿಯ ಸಂಪೂರ್ಣ ಆಡಳಿತ ಅಧಿಕಾರವನ್ನು ಅವರಿಗೆ ವಹಿಸಿಕೊಟ್ಟರು.

ಮಿ॥ ಹುಮಾಯೂನ್‌ರವರು ಬಹಳ ಅದೃಷ್ಟಶಾಲಿಗಳು. ದಿವಾನರಾಗಿ ಹೋದ ತರುಣದಲ್ಲೇ ಸರ್ವಾಧಿಕಾರವನ್ನೂ ಪಡೆದಿರುವರು. ನವಾಬರು ಅವರ ಗುಣಕಥನವನ್ನು ಮಾಡಿ ಅವರು ಭರತಖಂಡದ ದಿವಾನರಲ್ಲೆಲ್ಲಾ ವಯಸ್ಸಿನಲ್ಲಿ ಅತ್ಯಂತ ಚಿಕ್ಕವರೆಂದೂ, ಅವರೂ, ದರ್ಬಾರದಲ್ಲಿಯೂ ರಾಜ್ಯಾಡಳಿತದ ವಿತರಣೆಯಲ್ಲಿಯೂ ಬಹಳ ಯಶಸ್ಸು ಪಡೆಯುವರಲ್ಲಿ ಸಂದೇಹವಿಲ್ಲವೆಂದೂ ತಿಳಿಸಿದರು.

ವಿದ್ಯಾರ್ಥಿಗಳಿಗೆ ಜುಲ್ಮಾನೆ

ಮೈಸೂರಿನಲ್ಲಿರುವ ಕಾಲೇಜು ವಿದ್ಯಾರ್ಥಿಗಳು ಕೆಲವು ದಿನಗಳ ಹಿಂದೆ ಮುಷ್ಕರ ಹಿಡಿದ ಕಾರಣದ ಮೇಲೆ ಅವರಲ್ಲಿ ಅನೇಕರಿಗೆ ಹದಿನೈದು ರೂಪಾಯಿನಿಂದ ಐದು ರೂಪಾಯಿವರೆಗೆ ಜುಲ್ಮಾನೆ ವಿಧಿಸಿರುವುದಾಗಿ ಕೇಳುತ್ತೇವೆ. ಅಲ್ಲದೆ ಅವರ ಹಾಜರಿಯಲ್ಲಿ ಮೂರು ದಿನ ಗೈರ್ ಹಾಜರ್ ಸಹ ಹಾಕಿರುವುದಾಗಿಯೂ ಗೊತ್ತಾಗಿದೆ. ಇದು ಅತ್ಯಂತ ವಿಷಾದಕರವಾದ ವಿಚಾರ.

ವಿದ್ಯಾರ್ಥಿಗಳು ಸ್ವಾಭಾವಿಕವಾಗಿ ಉತ್ಸಾಹ ಶಾಲಿಗಳು. ದೇಶದಲ್ಲಿ ನಡೆಯುವ ಅನೇಕ ಪ್ರಸಂಗಗಳಲ್ಲಿ ಅವರು ಸಹಜವಾದ ಕುತೂಹಲವನ್ನು ತೋರ್ಪಡಿಸುವರು. ದೇಶದ ಪರಿಸ್ಥಿತಿಯು ವಿಪರೀತ ಉಲ್ಬಣಿಸಿದಾಗಲಾಗಲಿ ಅಥವ ತಮ್ಮ ಸಹೋದರ ವರ್ಗದವರಿಗೆ ಘೋರವಾದ ವಿಪತ್ತು ಸಂಭವಿಸಿದಾಗಲಾಗಲೀ ಅವರು ತಮ್ಮ ಸಹಾನುಭೂತಿಯನ್ನು ತೋರಿಸುವುದು ಎಲ್ಲ ದೇಶಗಳಲ್ಲಿಯೂ ವಾಡಿಕೆಯಾಗಿದೆ. ನಮ್ಮ ಮೈಸೂರಿನ ವಿದ್ಯಾರ್ಥಿಗಳೂ ಇದರಂತೆ ಬೆಂಗಳೂರಿನಲ್ಲಿ ತಮ್ಮ ಸಹಪಾಠಿಗಳು ಲಾಠಿ ಏಟುಗಳಿಗೂ ಗುಂಡಿನೇಟುಗಳಿಗೂ ತುತ್ತಾದ ವಿಚಾರದಲ್ಲಿ ತಮ್ಮ ಸಹಾನುಭೂತಿಯನ್ನು ತೋರಿಸಲು ಮುಷ್ಕರವನ್ನಾಚರಿಸಿದರು.

ಮುಷ್ಕರಗಳನ್ನು ಕೈಗೊಳ್ಳುವುದು ಪ್ರಕೃತಿಯೊಪ್ಪಿದ ಮನುಷ್ಯನ ಜನ್ಮಸಿದ್ಧವಾದ ಹಕ್ಕೆಂದು ಎಲ್ಲಾ ಕಡೆಯಲ್ಲಿಯೂ ಅಂಗೀಕರಿಸಲ್ಪಟ್ಟಿದೆ. ವಿದ್ಯಾರ್ಥಿಗಳಾಗಲೀ, ಕೂಲಿಯಾಳುಗಳಾಗಲಿ, ಇತರರಾಗಲೀ ತಮ್ಮ ತಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಲು ಅನುಸರಿಸುವ ಕ್ರಮಬದ್ಧವಾದ ಮಾರ್ಗಗಳಲ್ಲಿ ಇದೊಂದು. ಅದರಿಂದ ಇದನ್ನು ಶಿಸ್ತಿನಿಂದಲೂ ವ್ಯವಸ್ಥೆಯಿಂದಲೂ ಆಚರಿಸಬೇಕು. ಕೆಲವು ವೇಳೆ ಮುಷ್ಕರಗಳು ಅತಿಯಾಗುವುದೂ ಉಂಟು. ಅತಿಕ್ರಮಿಸುವುದೂ ಉಂಟು. ಮುಷ್ಕರಗಳನ್ನು ಬಹಳ ಅಗತ್ಯವಾದ ಕಡೆಗೆಂದೂ, ಅಪರೂಪದ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸಬೇಕೆಂದೂ ಪಂಡಿತ ಜವಾಹರಲಾಲರೇ ಮುಂತಾದ ಮುಖಂಡರು ಹೇಳುವರು.

ಪ್ರಕೃತದಲ್ಲಿ ವಿದ್ಯಾರ್ಥಿಗಳು ಆಚರಿಸಿದ ಮುಷ್ಕರವು ಅವರ ಸಹಜವಾದ ಉತ್ಸಾಹ ಮತ್ತು ಅನುತಾಪದ ಒಂದು ಪ್ರದರ್ಶನವಾಗಿತ್ತು. ಅದರಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವುಗಳನ್ನು ತಿದ್ದುವುದು ಉಪಾಧ್ಯಾಯರ ಮತ್ತು ವಿದ್ಯಾಲಯದವರ ಕರ್ತವ್ಯ. ಅದು ಬಿಟ್ಟು ವಿದ್ಯಾರ್ಥಿಗಳಿಗೆ ಜುಲ್ಮಾನೆ ಹಾಕಿದರೆ ಅವರ ಬಡ ತಂದೆ ತಾಯಿಗಳಿಗೆ ಶಿಕ್ಷೆ ವಿಧಿಸಿದಂತೆಯೇ ಸರಿ. ಇದನ್ನು ತಂದೆ ತಾಯಿಗಳು ಹೇಗೆ ಸ್ವೀಕರಿಸುವರೆಂಬುದನ್ನು ಹೇಳಬೇಕಾಗಿಲ್ಲ.

ಅಟೆಂಡೆನ್ಸನ್ನು ಹೊಡೆದು ಹಾಕುವ ವಿಚಾರವು ಕೇವಲ ಖಂಡನೀಯವಾದುದು. ಕಾಲೇಜಿಗೆ ಬಂದಿದ್ದ ಹುಡುಗರನ್ನು ಮೂರು ದಿನಗಳು ಬರಲಿಲ್ಲವೆಂದು ಬರೆದುಕೊಳ್ಳುವುದು ಶುದ್ಧ ಸುಳ್ಳಾಗುತ್ತದೆ. ಇಂತಹ ಮಾರ್ಗಗಳಿಂದ ವಿದ್ಯಾರ್ಥಿಗಳಿಗೆ ವಿದ್ಯಾನಿಲಯದವರೇ ಕೆಟ್ಟ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಂತಾಗುತ್ತದೆ.

ಆದ್ದರಿಂದ ವಿದ್ಯಾರ್ಥಿಗಳ ಉತ್ಸಾಹವನ್ನು ಸಹಾನುಭೂತಿ ದೃಷ್ಟಿಯಿಂದ ಪರಿಶೀಲಿಸಿ ಅವರ ಶಿಕ್ಷೆಗಳನ್ನು ರದ್ದುಮಾಡಿ ಅವರು ನಿಜವಾದ ದೇಶಾಭಿಮಾನಿಗಳೂ, ಧೀರ ವೀರರೂ ಆಗುವಂತೆ ಸಹಾಯ ಮಾಡಬೇಕೆಂದು ನಾವು ಕೋರುತ್ತೇವೆ.

ಕಕ್ಕಸ್ಸುಗಳ ಸಮಸ್ಯೆ

ರಾಜಧಾನಿಯ ಫ್ಲಷಿಂಗ್ ಕಕ್ಕಸ್ಸುಗಳ ಸಮಸ್ಯೆಯು ಒಂದು ಭೂತಾಕಾರವಾಗಿ ಪರಿಣಮಿಸಿದೆ. ಅದು ಪೌರಸಭಾ ಸದಸ್ಯರಿಗಿರುವ ಹಕ್ಕು ಬಾಧ್ಯತೆಗಳ ಪರೀಕ್ಷೆಯ ಒರೆಗಲ್ಲಾಗಿ ಪರಿಣಮಿಸಿರುತ್ತೆ.

ಹೊಸ ಮಾದರಿಯ ಫ್ಲಷಿಂಗ್ ಕಕ್ಕಸ್ಸುಗಳನ್ನು ಕಟ್ಟಿಸದೆ ಇರುವುದರಿಂದ ರಾಜಧಾನಿಯ ನೂರಾರು ಜನ ನಿವಾಸಿಗಳ ಮೇಲೆ ಮೊಕದ್ದಮೆ ನಡೆದು ಅದಕ್ಕಾಗಿ ಮಹಾಜನರಲ್ಲಿ ವಿಶೇಷ ಅಸಮಾಧಾನವೂ ಆತಂಕವೂ ಉಂಟಾಗಿದ್ದ ವಿಷಯವು ಸರ್ವಜನವಿದಿತವಾಗಿದೆ. ಅದರ ಮೇಲೆ ಪೌರಸಭೆಯವರು ಈ ವಿಷಯವನ್ನು ಕೂಲಂಕಷವಾಗಿ ವಿಮರ್ಶಿಸಿ ಇಂತಹ ಕಕ್ಕಸ್ಸುಗಳನ್ನು ಇಡಬೇಕೆಂದು ನಿರ್ಬಂಧ ಮಾಡಲು ಪೌರಸಭೆಗೆ ಅಧಿಕಾರವಿಲ್ಲವೆಂದು ತೀರ್ಮಾನಿಸಿದರು. ಅಲ್ಲದೆ ಈ ಬಲಾತ್ಕಾರದಿಂದ ಬಡಪ್ರಜೆಗಳಿಗೆ ವಿಶೇಷವಾದ ತೊಂದರೆಯಾಗುವುದೆಂದೂ ಸೂಚಿಸಿದರು. ಅಧ್ಯಕ್ಷರೂ ಸಹ ಮಹಾಜನರಿಗೆ ತೊಂದರೆಯಾಗುವ ಕಾರ್ಯವನ್ನು ಮಾಡುವುದು ತಮ್ಮ ಅಭಿಮತವಲ್ಲವೆಂದು ತಿಳಿಸಿದ್ದರು. ಆದರೂ ಸರ್ಕಾರದವರು ಮಾತ್ರ ಬೇರೆ ಅಭಿಪ್ರಾಯಪಟ್ಟಿದ್ದಾರೆ. ಪೌರಸಭೆಯ ನಿರ್ಣಯವು ನ್ಯಾಯಬದ್ಧವಾಗಿಲ್ಲವೆಂದು ತಿಳಿಸಿದ್ದಾರೆ.

ಆದ್ದರಿಂದ ಈ ಕಕ್ಕಸ್ಸುಗಳಿಗಾಗಿ ಮೊಕದ್ದಮೆಗಳು ಪುನಃ ಪ್ರಾರಂಭವಾಗಿವೆ. ಪೌರಸಭೆಯ ತೀರ್ಮಾನವು ಮೂಲೆಯ ಪಾಲಾಗಿದೆ. ಮಹಾಜನರ ಕುಂದುಕೊರತೆಗಳು ಅರಣ್ಯ ರೋದನವಾಗಿದೆ. ಪೌರಸಭಾ ಸದರ ಅಧಿಕಾರವು ನಾಮಮಾತ್ರವಾಗಿದೆ.

ಇಂತಹ ಸಣ್ಣ ವಿಷಯಗಳಲ್ಲಿಯೂ ತಮ್ಮ ಅಭಿಪ್ರಾಯಕ್ಕೆ ಮನ್ನಣೆ ದೊರೆಯದಿರುವುದರಿಂದ ಅಸಮಾಧಾನವನ್ನು ಸೂಚಿಸಲು ಅನೇಕ ಜನ ಸದಸ್ಯರು ರಾಜೀನಾಮೆ ಕೊಡಲು ಸಿದ್ಧರಿರುವುದಾಗಿ ಕೇಳುತ್ತೇವೆ. ಸ್ಥಳೀಯ ಸಂಸ್ಥೆಗಳಿಗೆ ಇಷ್ಟು ಮಾತ್ರವೂ ಸ್ವಾತಂತ್ರ್ಯವಿಲ್ಲದಿದ್ದರೆ ಅವುಗಳನ್ನು ಮುಚ್ಚಿಬಿಡುವುದು ಒಳ್ಳೆಯದು.

ಮೈಸೂರು ಶಾಸನದ ಬಿಕ್ಕಟ್ಟು

ಕೌಲು ಕರಾರುಗಳ ನಿರ್ಬಂಧ.

ಲೇಖಕ:— ಕೌಟಿಲ್ಯ.

“ಈಚೆನ ಮೈಸೂರು ಯಾಕೋ ಚೆನ್ನಾಗಿಲ್ಲ. ಸರ್ಕಾರವು ಹೊಸ ದಾರಿಗಳನ್ನು ಹಿಡಿಯ ಬೇಕಾಗಿದೆ” ಎನ್ನುವ ಹೇಳಿಕೆಯು ಪತ್ರಿಕೆಗಳಲ್ಲಿ ಕೆಲವರದು. ಅನ್ಯಾಯವಾಗಿ ಸಲ್ಲದ ಚಳವಳಿಗಳನ್ನೆಬ್ಬಿಸಿ ಗುಲ್ಲು ಮಾಡುವರು ನಮ್ಮ ಶಾಂತಿಮಯವಾಗಿದ್ದ ರಾಜ್ಯಾಡಳಿತವನ್ನು ದುಃಖಕ್ಕೆ ಈಡುಮಾಡಿದ್ದಾರೆ— ಎನ್ನುತ್ತಾರೆ ಇವರು. ಅವರು ಅದಕ್ಕೆ ಹಲವು ಕಾರಣಗಳನ್ನು ತೋರಿಸಿ ಕೊಡುತ್ತಾರೆ. “ಚಳವಳಿಗಾರರು ಕೇಳುವುದು ಮೈಸೂರು ದರ್ಬಾರಿಗೇ ಇಲ್ಲದ ಅಧಿಕಾರವನ್ನು. ಅವರು ಕೇಳುವುದನ್ನು ಕೊಡಲು ಅವಕಾಶವೇ ನಮ್ಮ ಪ್ರಭುಗಳಿಗಿಲ್ಲ. ಇಂತಹ ಪರಿಸ್ಥಿತಿಗಳಿರುವ ಮೈಸೂರಿನಲ್ಲಿ ‘ಜವಾಬ್ದಾರಿ ಸರಕಾರ’ ಎಂಬ ಮಾತೇ ಆಗದು. ವೃಥಾ ಬಯಕೆ—” ಹೀಗೆಂದು ಹೇಳಿ ಅದಕ್ಕೆ ಕಾರಣಗಳಾಗಿ ಮೈಸೂರು ಕರಾರುಗಳ ಸೂತ್ರಗಳನ್ನೂ ಉದ್ಧರಿಸಿ ಹೇಳಿದ್ದಾರೆ.

೧೮೮೧ ನೇ ವರ್ಷದ ಮೈಸೂರು ಕೌಲು ವಿಧಿಸೂತ್ರಗಳು

(೧೯) ಮಹಾರಾಜಾ ಶ್ರೀ ಚಾಮರಾಜ ಒಡೆಯರಿಗೆ ರಾಜ್ಯ ವಾಪಸು ಕೊಡುತ್ತಿರುವ ಈ ಸಮಯದಲ್ಲಿರುವ ರಾಜ್ಯಾಂಗದ ಸನದುಗಳನ್ನು ತೆಗೆದುಹಾಕಲು, ಬದಲಾಯಿಸಲು ಮತ್ತು ಈ ಶಾಸನಗಳಿಗೆ ವಿರೋಧವಾಗುವಂತಹ ಹೊಸ ಶಾಸನ ನಿಯಮಗಳನ್ನು ಆಚರಣೆಗೆ ತರಲು ಗೌರ್ನರ್ ಜನರಲ್ ಇನ್ ಕೌನ್ಸಿಲ್‌ರವರ ಒಪ್ಪಿಗೆಯಿಂದಲ್ಲದೆ ಅವಕಾಶವಿಲ್ಲ.

(೨೦) ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರ ಅಪ್ಪಣೆಯ ಹೊರತಾಗಿ ಶ್ರೀ ಚಾಮರಾಜ ಒಡೆಯರನ್ನು ಪದವಿಗೇರಿಸುವ ಸಮಯದಲ್ಲಿರುವ ರೀತಿಯ ಸರ್ಕಾರದಲ್ಲಿ ಅಧಿಕ ಬದಲಾವಣೆಗಳೇನೂ ಮಾಡಕೂಡದು.

(೨೨) ರಾಜ್ಯದ ಹಣಕಾಸು, ಆಯವ್ಯಯ, ಸುಂಕ, ನ್ಯಾಯ ಶಾಸನ, ವಾಣಿಜ್ಯ ವಿಸ್ತಾರ, ವ್ಯಾಪಾರೋತ್ತೇಜನ, ವ್ಯವಸಾಯ ಮತ್ತು ಕೈಗಾರಿಕೆ ಇವೇ ಮೊದಲಾದ ವಿಚಾರಗಳಲ್ಲಿ ಮೈಸೂರು ಪ್ರಜಾಕ್ಷೇಮಕ್ಕೂ ಮತ್ತು ಸಾಮ್ರಾಜ್ಯ ಸರಕಾರದ ಸಂಬಂಧದ ಹಿತಕ್ಕೂ ಸಂಬಂಧಿಸುವಂತಹ— ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರೂ ಆಗಿಂದಾಗ್ಗೆ ಕೊಡಬಹುದಾದ ಸಲಹೆ ಸೂಚನೆಗಳನ್ನು ಯಾವಾಗಲೂ ಅಂಗೀಕರಿಸಲೇಬೇಕು.

(೨೩) ಈ ಕರಾರುಗಳಿಗೆ ತಪ್ಪಿ ನಡೆದರೆ ರಾಜ್ಯವನ್ನು ಮುಟ್ಟುಗೋಲು ಹಾಕಿಕೊಂಡು ಮೈಸೂರು ಪ್ರಜೆಗಳ ಕ್ಷೇಮ ಮತ್ತು ಮೈಸೂರಿನಲ್ಲಿ ಬ್ರಿಟಿಷ್ ಹಿತರಕ್ಷಣೆಗಳಿಗೆ ಅನುಸಾರವಾಗುವಂತೆ ಸ್ವಂತವಾಗಿ ಆಡಳಿತವನ್ನು ನಡೆಸಲು ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರಿಗೆ ಪೂರ್ಣ ಅಧಿಕಾರವಿದೆ.

೧೯೧೩ ಇಸವಿಯ ಮೈಸೂರು ಕೌಲಿನಿಂದ

......ಸನ್ 1881 ರಲ್ಲಿ ರಾಜ್ಯವನ್ನು ಹಿಂತಿರುಗಿಸಿದಾರಭ್ಯ ಕಳೆದ 32 ವರ್ಷಗಳಲ್ಲಿ ಮೈಸೂರು ದೊರೆಗಳು ತೋರಿಸಿರುವ ಸಮ್ರಾಟ್ ರಾಜಭಕ್ತಿ ಮತ್ತು ರಾಜ್ಯಭಾರ ದಕ್ಷತೆಗಳಿಂದ ಸಂತುಷ್ಟರಾದ ಬ್ರಿಟಿಷ್ ಸರ್ಕಾರದವರು ಮೈಸೂರು ಶ್ರೀಮನ್ಮಹಾರಾಜರಲ್ಲಿಟ್ಟಿರುವ ಗೌರವದ ಗುರುತಾಗಿ ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರು 1881 ರ ಕರಾರಿನಲ್ಲಿ ಹಲವು ಬದಲಾವಣೆಗಳನ್ನು ಮಾಡಲು ಒಪ್ಪಿಸಿದ್ದಾರೆ.

ನಿಯಮ (3) ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರೂ ಮೈಸೂರು ಮಹಾರಾಜರೆನ್ನಿಸಿಕೊಳ್ಳುವ ಅವರ ಪರಂಪರೆಯವರೂ ಸರ್ವದಾ ಬ್ರಿಟಿಷ್ ಪ್ರಭುಪರಂಪರೆಗೆ ಅಧೀನರಾಗಿದ್ದುಕೊಂಡು, ನಿಷ್ಠೆಯಿಂದ ಮುಂದೆ ಹೇಳಿರುವ ಕರ್ತವ್ಯಗಳನ್ನೆಲ್ಲಾ ನೆರವೇರಿಸುತ್ತಾ ಬರತಕ್ಕದು.

ನಿಯಮ (10) ಇತರ ರಾಜ್ಯಗಳ ಅಧಿಕಾರಿಗಳೊಡನೆಯಾಗಲಿ ಸರ್ಕಾರಗಳೊಡನೆಯಾಗಲಿ ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರ ಮೂಲಕವೇ ಹೊರತು ಸ್ವತಂತ್ರವಾಗಿ ಪತ್ರವ್ಯವಹಾರ ಮೊದಲಾಗಿ ನಡೆಸಕೂಡದು. ಮತ್ತು ಅವರ ರಾಜಕಾರಣಗಳಲ್ಲಿ ಸಂಬಂಧವಿಟ್ಟುಕೊಳ್ಳಕೂಡದು.

ನಿಯಮ (19) ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರ ಅನುಮತಿಯಿಲ್ಲದೆ ಈಗಿನ ಸರ್ಕಾರ ಪದ್ಧತಿಯಲ್ಲಿ ಯಾವ ಪರಿಣಾಮಕಾರಿಯಾದ ಬದಲಾವಣೆಯನ್ನೂ ಮಾಡಕೂಡದು.

ನಿಯಮ (21) ಮೈಸೂರು ಮಹಾರಾಜರ ಆಡಳಿತ ಸ್ವಾತಂತ್ರ್ಯದ ವಿಚಾರದಲ್ಲಿ ಒಳಾಡಳಿತಗಳಲ್ಲಿ ಕೈಹಾಕಲು ಬ್ರಿಟಿಷ್ ಸರ್ಕಾರವು ಯಾವತ್ತೂ ಸಿದ್ಧವಾಗಿಲ್ಲ. ಆದರೂ ಮೈಸೂರು ಪ್ರಜೆಯ ಹಿತ ಮತ್ತು ಸಾಮ್ರಾಟ್ ಸರ್ಕಾರದ ಹಿತಗಳಿಗಾಗಿ ಒಳ ಆಡಳಿತದಲ್ಲಿ ಪ್ರವೇಶಿಸಬೇಕಾದರೆ ಹಾಗೆ ಕೈಹಾಕುವ ಸ್ವಾತಂತ್ರ್ಯವು ಯಾವತ್ತೂ ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರಿಗಿರುತ್ತದೆ.

ನಿಯಮ (23) ಈ ನಿಯಮಗಳ ಪಾಲನೆಯ ವಿಚಾರದಲ್ಲಾಗಲಿ, ಮತ್ತು ಗಾದಿ (ಸಿಂಹಾಸನಕ್ಕೆ) ವಿಚಾರದಲ್ಲಿಯಾಗಲಿ ಅಭಿಪ್ರಾಯಭೇದಗಳು ಹುಟ್ಟಿದಲ್ಲಿ ಗೌರ್ನರ್ ಜನರಲ್ ಇನ್ ಕೌನ್ಸಿಲ್ಲರ ತೀರ್ಮಾನವೇ ಕಟ್ಟಕಡೆಯದು.

ಮೇಲೆ ಹೇಳಿದ ನಿಯಮಗಳೆಲ್ಲಾ ಸಾಮ್ರಾಜ್ಯ ಸರಕಾರಕ್ಕೂ ಮೈಸೂರೊಡೆಯರಿಗೂ ಆಗಿರುವ ಕರಾರಿನ ಕರಡಿನಿಂದಲೇ ನೇರವಾಗಿ ತೆಗೆದ ಅಂಶಗಳು.

ನಮ್ಮ ಮಹಾಪ್ರಭುಗಳವರು ಆಗಿಂದಾಗ್ಗೆ ಪ್ರಜಾಪ್ರತಿನಿಧಿಸಭೆಗೆ ದಯಪಾಲಿಸಿದ ಸಂದೇಶಗಳಲ್ಲಿ ಪ್ರತಿಯೊಂದರಲ್ಲೂ “ನಮ್ಮ ಪ್ರಜೆಗಳಲ್ಲಿ ಉಂಟಾಗುತ್ತಿರುವ ಹೆಚ್ಚಿನ ನಾಗರಿಕ ಯೋಗ್ಯತೆಯನ್ನು ಕಂಡು ನಾವು ಹಿಗ್ಗುತ್ತೇವೆ. ಅವರು ಬೆಳೆದಷ್ಟೂ ಯೋಗ್ಯರಾದಷ್ಟನ್ನು ಹೆಚ್ಚು ಆಡಳಿತ ಭಾರವನ್ನು ಅವರ ಕಡೆಗೆ ವಹಿಸಿಕೊಡುವುದೇ ನಮ್ಮ ಸದಾಶಯ” ಎಂಬ ಅಭಿಪ್ರಾಯದ ಅಮೃತವಾಣಿಗಳನ್ನು ನುಡಿದಿದ್ದಾರೆ.

ಮೈಸೂರು ಹಳೆಯದಾಯಿತು, ಚೆನ್ನಾಗಿಲ್ಲ. ಬೇರೆ ದಾರಿ ಹಿಡಿಯೋಣ ಎಂದು ಹೊರಟಿರುವ ಜನರು ಕೇಳುವುದೇನನ್ನು? ಅವರ ಆಶಯವು ಸಾಧುವೇ, ಹುಂಬಾಟವೇ, ಸ್ವಲ್ಪ ನೋಡೋಣ. ಅವರು ಬೇಡುವುದು “ಶ್ರೀಮನ್ಮಹಾರಾಜರ ಆಶ್ರಯದಲ್ಲಿ” ಜವಾಬ್ದಾರಿ ಸರ್ಕಾರವನ್ನು. ಅವರು ಬಯಸುವುದು ಪ್ರಜೆಗಳ ಪಾಲಿಗೆ ಪ್ರತಿನಿಧಿತ್ವದ ಗೌರವವನ್ನು.

ಚಳವಳಿಗಾರರ ಉದ್ದೇಶವು— “ಬೆತ್ತದ ಮೋಕ್ಷ” ಹಿಂದಿನ ಕಾಲದವರು. ಅದು ಈಗ ಬೇಡ. ನಾವು ಬೇಡುವುದು ನಮ್ಮ ಮಹಾಪ್ರಭುಗಳ ಆಶ್ರಯದಲ್ಲಿ “ಸತ್ಪ್ರಜೆ” ಎನಿಸಿಕೊಳ್ಳುವ ಯೋಗ್ಯತೆಯನ್ನು; “ಕರ್ತವ್ಯದಕ್ಷ ಪ್ರಜೆ” ಗಳೆನಿಸಿಕೊಳ್ಳುವ ಯೋಗವನ್ನು. ಮನುಷ್ಯನನ್ನು ಮನುಷ್ಯನಂತೆ ಕಾಣದೆ, ಮೃಗಗಳಂತೆ ಆಳಬೇಡಿ, ಎಂದು ಬೇಡುವುದು ಅಪರಾಧವಾದರೆ, ಮಿತ್ರದ್ರೋಹವಾದರೆ, ಕೃತಘ್ನತೆಯಾದರೆ, ಹೊಸ ಮೈಸೂರು ಉದಯಿಸುವುದಿಲ್ಲ.

ದಿ ಗ್ರ್ಯಾಂಡ್ ಪಾರ್ಲಿಮೆಂಟ್ ಮೈಸೂರು

ಮೇಲ್ಕಂಡ ಸಂಘದವರು ಹಿಂದಿನಂತೆಯೇ ಮೇಲೆ ಮುಂದಿನ ಜನವರಿ ಎರಡನೇ ವಾರದಲ್ಲಿ ಮಾಧ್ಯಮಿಕ ಶಾಲಾ (ಮಿಡಲ್ ಸ್ಕೂಲ್) ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಾರ್ಷಿಕ ಸ್ಪರ್ಧಾ ಪರೀಕ್ಷೆಯೊಂದನ್ನು ಏರ್ಪಡಿಸಿದ್ದಾರೆ. ಮಿಡಲ್ ಸ್ಕೂಲ್ ಪರೀಕ್ಷೆಗೆ ವಿದ್ಯಾ ಇಲಾಖೆಯಿಂದ ಗೊತ್ತುಮಾಡಿರುವ ವಾಚಕ ಪ್ರವಚನಗಳಲ್ಲಿಯೇ ಪರೀಕ್ಷೆ ನಡೆಸಲ್ಪಡುವುದು. ಉತ್ತಮ ಪರೀಕ್ಷೆಯಲ್ಲಿ ಉತ್ತರ ಬರೆದವರಿಗೆ ಬೆಳ್ಳಿ ಬಟ್ಟಲು, ಮೆಡಲು ಇತ್ಯಾದಿ ಸಮಿತಿಯವರ ಬಹುಮಾನಗಳು ಗ್ರ್ಯಾಂಡ್ ಪಾರ್ಲಿಮೆಂಟಿನ ವಾರ್ಷಿಕೋತ್ಸವದ ದಿನ ಹಂಚಲ್ಪಡುವುವು.

ಇಷ್ಟಪಟ್ಟ ಬಾಲಕ ಬಾಲಕಿಯರು ದಿ ಗ್ರ್ಯಾಂಡ್ ಪಾರ್ಲಿಮೆಂಟ್ ಸಿ. ಸಿ. ಈ ಬೋರ್ಡಿನ ಗೌರವ ಕಾರ್ಯದರ್ಶಿಗಳಿಂದ ಗೊತ್ತಾದ ನಮೂನೆ ಪಡೆದು ನಾಲ್ಕಾಣೆ ಪ್ರವೇಶಧನದೊಡನೆ 163, ಡಿವಾನ್ಸ್ ರೋಡ್ ಮೈಸೂರು, ಎಂಬ ವಿಳಾಸಕ್ಕೆ ಡಿಸೆಂಬರ್ 30 ನೇ ತಾರೀಖಿನೊಳಗಾಗಿ ಅರ್ಜಿ ಹಾಕಿಕೊಳ್ಳಬೇಕೆಂದು ಕೋರಿದೆ.

ಮಧುರ ವಾಣಿ

(ಸಂಗ್ರಹಿಸಿದ್ದು)

ಲೇಖಕ:-ಸೌಭಾಗ್ಯವತಿ ಟಿ. ಎಸ್. ಇಂದಿರಮ್ಮ ಮೈಸೂರು.

ನೀನು ತಪ್ಪು ಮಾಡಿರುವಿ ಎಂದು ತಿಳಿದುಕೊಂಡಮೇಲೆ ಮುಂದೆ ತಪ್ಪುಗಳನ್ನು ಮಾಡಕೂಡದೆಂದು ನಿರ್ಧರಿಸಿಕೊ. ತನ್ನ ತಪ್ಪುಗಳನ್ನು ಒಪ್ಪಿಕೊಳ್ಳುವವನು, ತನ್ನಲ್ಲಿನ ನ್ಯೂನತೆಗಳನ್ನು ಮುಂದೆ ಸರಿಪಡಿಸಿಕೊಂಡರೆ, ತಪ್ಪು ಮಾಡುವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ.

೦ ೦ ೦

ನಿನ್ನ ನೆರಳಿಗೆ ನೀನು ಹೆದರಿ ನಡೆಯುತ್ತಾ ಭಗವಂತನ ಧ್ಯಾನದಲ್ಲಿದ್ದರೆ ಅವನ ಸಾನ್ನಿಧ್ಯವು ಸುಲಭವಾಗುವುದು. ದೇವರಲ್ಲಿ ನಂಬಿಕೆ ಇಟ್ಟಿದ್ದವನಿಗೆ ಹಿಂದೆ ಎಂದೂ ತೊಂದರೆ ಬಂದಿಲ್ಲ. ಈಗ ಬಂದೂ ಇಲ್ಲ. ಮುಂದೆ ಬರುವುದೂ ಇಲ್ಲ.

೦ ೦ ೦

ದುಷ್ಕೃತ್ಯದ ಫಲವನ್ನು, ರತ್ತಿದವರು ಅನುಭವಿಸಿಯೇ ತೀರಬೇಕು. ದೇವರು ಒಂದು ವೇಳೆ ನಮ್ಮ ಸಾವಿರ ತಪ್ಪುಗಳನ್ನಾದರೂ ಮನ್ನಿಸಬಹುದು. ಪ್ರಕೃತಿ ಯಾವದರೋ ನಮ್ಮ ಅತಿ ಸ್ವಲ್ಪವಾದ ತಪ್ಪನ್ನು ಕೂಡಾ ಕ್ಷಮಿಸುವುದಿಲ್ಲ. ದುಷ್ಕೃತ್ಯವನ್ನು ಮಾಡುವಾಗ “ನೀನು ತಪ್ಪು ಮಾಡುತ್ತಿರುವಿ” ಎಂದು ಯಾರ ಅಂತರಾತ್ಮವು ಹೇಳುತ್ತಿರುವುದಿಲ್ಲ?

೦ ೦ ೦

ದೇವರು ನಿನಗೆ ಕೊಟ್ಟಿದ್ದರಲ್ಲಿಯೇ ತೃಪ್ತಿಯನ್ನು ಹೊಂದಿ, ನಿನ್ನ ಕರ್ತವ್ಯವನ್ನು ನೀನು ಮಾಡುತ್ತಿರು. ನಿನ್ನಲ್ಲಿರುವ ಅಂತರಾತ್ಮನು ಹೇಳುವುದನ್ನು ಕೇಳದಿರುವುದರಿಂದಲೇ ನೀನು ಅನೇಕ ತಪ್ಪುಗಳನ್ನು ಮಾಡುವುದಕ್ಕೆ ಕಾರಣ.

೦ ೦ ೦

ಅಂತರಾತ್ಮನು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿರುತ್ತಾನೆ. ತನ್ನನ್ನು ಪಡೆಯಲು ಯತ್ನಿಸುವವನಿಗೆ ದೇವರು ವರಗಳನ್ನು ಕೊಡಲು ಸ್ಥಾನವು ಕಾದಿರುತ್ತದೆ. ಆದರೆ ಮನುಷ್ಯನು ತಾನು ಅನುಭವಿಸುವ ಸುಖದುಃಖಗಳಲ್ಲಿ ಎರಡನ್ನೂ ಮರೆಯುತ್ತಾನೆ. ದೇವರು ಮನುಷ್ಯನಿಗಾಗಿ ಕೆಲಸ ಮಾಡಿದರೆ ಮನುಷ್ಯನು ಆತ್ಮ ದುಡ್ಡಿಗೆ ಯತ್ನಿಸದೆ ದೇಹ ಸೌಖ್ಯಕ್ಕಾಗಿ ಕಷ್ಟಪಡುತ್ತಾನೆ.

೦ ೦ ೦

ಅನ್ಯಾಯದಿಂದ ಹಣವನ್ನು ಸಂಪಾದಿಸಿ ನಿನಗಾಗಿ ದಾನ ಮಾಡಿದ್ದು ಅದು ಯಶಸ್ಸನ್ನು ತರುವುದಿಲ್ಲ. ಅನ್ಯಾಯದ ಹಣವನ್ನು ಎಂದಿಗೂ [illegible] ಇಲ್ಲ. [illegible] ಆಗದು [illegible] ನೇನು?

ಜಗದೀಶ ಚಂದ್ರ ಬೋಸರ

ದಾನ.

ದಿವಂಗತರಾದ ಸರ್ ಜಗದೀಶ ಚಂದ್ರ ಬೋಸರವರು ತಪ್ಪಣೆ ಮಾಡಿಟ್ಟ ಪ್ರಕಾರ ಅವರ ಪತ್ನಿಯವರಾದ ಶ್ರೀಮತಿ ಅಬಲಾ ಬೋಸರವರು ಮೂರೂ ಮುಕ್ಕಾಲು ಲಕ್ಷ ರೂಪಾಯಿಗಳನ್ನು ಕೆಳಗೆ ಕಂಡಂತೆ ವಿನಿಯೋಗಿಸಿರುವರು.— ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಮಾನಸ ಶರೀರ ಶಾಸ್ತ್ರ ಸಂಶೋಧನೆಗಾಗಿ ಒಂದು ಲಕ್ಷ ರೂ. ಬೋಸ್ ಇನ್ಸ್ಟಿಟ್ಯೂಟ್ ವ್ಯಾಸಂಗಕ್ಕೆ ವೇತನಗಳನ್ನು ಕೊಡಲು ಐವತ್ತು ಸಾವಿರ ರೂ. ಬಿಹಾರಿನಲ್ಲಿ ಮದ್ಯಪಾನ ನಿರೋಧ ಪ್ರಚಾರ ಮಾಡಲು ಬಾಬು ರಾಜೇಂದ್ರ ಪ್ರಸಾದರವರ ವಶಕ್ಕೆ ಒಂದು ಲಕ್ಷ ರೂ. ಈ ಹಣವು ಕ್ರಮೇಣ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರ ಮೇಲ್ವಿಚಾರಣೆಗೆ ಕೊಡಲ್ಪಡುವುದು. ಬಿಹಾರ್ ಮತ್ತು ಬಂಗಾಳದ ಸೌಹಾರ್ದವನ್ನು ಹೆಚ್ಚಿಸಲು ಈ ಹಣವು ಕೊಡಲ್ಪಟ್ಟಿದೆ. ಬಂಗಾಳದ ಸ್ತ್ರೀಯರ ವಿದ್ಯಾಭ್ಯಾಸಕ್ಕಾಗಿ ಒಂದು ಲಕ್ಷ ರೂ. [illegible] ಸಂಶೋಧನೆಗೆ ಮೂರು ಸಾವಿರ ರೂ. ಪುಸ್ತಕಗಳನ್ನು ಕೊಳ್ಳಲು ಎರಡು ಸಾವಿರ ರೂ. ತಮ್ಮ ಸ್ನೇಹಿತರಾದ [illegible] ರತ್ನ ಸರ್ಕಾರ್ ರವರ ಜ್ಞಾಪಕಾರ್ಥವಾಗಿ ವಿದ್ಯಾರ್ಥಿ ವೇತನಕ್ಕೆ ಐದು ಸಾವಿರ ರೂ.

ಸಾಹಿತ್ಯ ಸಮ್ಮೇಳನ

ಅಖಿಲಕರ್ನಾಟಕ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಜಮಖಂಡಿಯಲ್ಲಿ ಅತ್ಯಂತ ನಯನ ಮನೋಹರವಾದ ಕಾರ್ಯಕ್ರಮಗಳು ನಡೆಯುವವು. ಸುಪ್ರಸಿದ್ಧ ಭಾರತ ಗಮಕಿಗಳಾದ ಶ್ರೀಧರ್ ಬಿಂದೂರಾಯರು ಬರುವೆವೆಂದು ತಿಳಿಸಿದ್ದಾರೆ. ಕೀರ್ತನ ಕೇಸರಿ ಶಿವಮೂರ್ತಿಶಾಸ್ತ್ರಿಗಳೂ, ರಾಷ್ಟ್ರೀಯ ಕೀರ್ತನಕಾರರಾದ ಶ್ರೀ॥ ಜಂಪು ರಾಮಾಚಾರ್ಯರೂ, ಮೈಸೂರಿನ ಯೋಗ ಪಟುವು ಪ್ರವೀಣರೂ, ತಮ್ಮ ಕೃತಿಗಳಿಂದ ಜನರ ಮನಸ್ಸನ್ನು ರಂಜಿಸುವರು. ತಮ್ಮ ಗಾನ ಕೌಶಲದಿಂದ ಹಿಂದೂಸ್ಥಾನದಲ್ಲಿ ಮೆರೆಯುವ ಶ್ರೀ॥ ರಾಮ ಭಾವು ಕುಂದಗೋಳಕರರವರು ಗಂಧರ್ವ ಗಾನ ಬಡಿಸುವರು. ಇದೂ ಅಲ್ಲದೆ ಪ್ರಸಿದ್ಧ ಪಾದನ ಪಟುಗಳೂ ಬರುವರು. ಆದುದರಿಂದ ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದೆಂದು ವಿನಂತಿ.

ಒಂದೆರಡು [illegible] ಜನರ [illegible]

[illegible]

ಶಿಂಷಾ ವಿದ್ಯುಚ್ಛಕ್ತಿಯ ನಿರ್ಮಾಣ

ಮೈಸೂರು ಶ್ರೀಮನ್ಮಹಾರಾಜರವರು ಶಿಂಷಾಪುರದಲ್ಲಿ 1937ನೆಯ ಇಸವಿ ಡಿಸೆಂಬರ್ 20 ನೆಯ ಸೋಮವಾರದ ದಿನ ಸಾಯಂಕಾಲ ನಾಲ್ಕು ಘಂಟೆಗೆ, "ಶಿಂಷಾ ಹೈಡ್ರೋ—ಎಲೆಕ್ಟ್ರಿಕ್ ಪ್ರಾಜೆಕ್ಟ್" ಎಂಬ ವಿದ್ಯುಚ್ಛಕ್ತಿಯ ನಿರ್ಮಾಣದ ಕಾರ್ಯಕ್ರಮಗಳ ಸಮಾರಂಭೋತ್ಸವ ಸಂದರ್ಭದಲ್ಲಿ ಶಿಲಾ ಪ್ರತಿಷ್ಠಾಪನೆಯನ್ನು ನೆರವೇರಿಸುವವರಾಗಿದ್ದಾರೆ. ಶಿಂಷಾಪುರವು ಮದ್ದೂರು ರೈಲ್ವೆ ಸ್ಟೇಷನ್ನಿನಿಂದ ಸುಮಾರು 30 ಮೈಲಿಗಳ ದೂರದಲ್ಲಿದೆ. ಈ ನಿರ್ಮಾಣದಿಂದ 23,000 ಅಶ್ವಶಕ್ತಿಗಳ ಪ್ರಮಾಣದ ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದಾಗಿದೆ. ಇದಕ್ಕೆ ಸುಮಾರು 36 ಲಕ್ಷ ರೂಪಾಯಿಗಳು ವೆಚ್ಚವಾಗುವುದಾಗಿ ಅಂದಾಜು ಮಾಡಲಾಗಿದೆ. ಈ ನಿರ್ಮಾಣಕ್ಕೆ ಬೇಕಾಗುವ ನೀರನ್ನು ಶಿವನಸಮುದ್ರದ ಬಳಿ ನಿರ್ಮಿಸಿರುವ ಕಟ್ಟೆ ಮತ್ತು ನಾಲೆಗಳಿಂದ ಒದಗಿಸಲಾಗುವುದು [illegible] ಉತ್ಪತ್ತಿ ಮಾಡುವುದಕ್ಕಾಗಿ ಯೋಜನೆ [illegible] ಒದಗಿಸಿಕೊಳ್ಳಲಾಗುವುದು.

ಸ್ವರ್ಧಾಮಣಿ ದರ್ಪಣ

ಏಜಂಟರು ಬೇಕು

ಎಲ್ಲಾ ಊರುಗಳಲ್ಲಿಯೂ ಸ್ವರ್ಧಾಮಣಿ ದರ್ಪಣದ ಪ್ರತಿಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದು ತಿಳಿದು ಕೊಳ್ಳಬಹುದು

ವಿಳಾಸ:—

ಸ್ವರ್ಧಾಮಣಿ ದರ್ಪಣ,
ಆಫೀಸ್
1226 ದೇವರಾಜ ಮೊಹಲ್ಲಾ,
ಪೋಸ್ಟಾಫೀಸು ಹಿಂಭಾಗ, ಮೈಸೂರು.

ಸಿ. ರಾಜಗೋಪಾಲಾಚಾರಿ.

ಮದರಾಸಿನ ಪ್ರಧಾನ ಸಚಿವರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಈ ತಿಂಗಳು ೨೨ ನೇ ತಾ॥ ಬೆಂಗಳೂರಿಗೆ ದಯಮಾಡಿಸುವರು. ಆ ದಿನ ನಡೆಯುವ ಬೆಂಗಳೂರು ಸೆಂಟ್ರಲ್ ಕಾಲೇಜು ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸುವರು. ಇವರು ತಮ್ಮ ಕಾಲೇಜು ವಿದ್ಯಾಭ್ಯಾಸವನ್ನು ಹೇಳ್ಕಂಡ ವಿದ್ಯಾನಿಲಯದಲ್ಲಿ ಮಾಡಿದವರು. ಒಳ್ಳೇ ಮೇಧಾವಿಗಳು. ವಕೀಲ ವೃತ್ತಿಯನ್ನವಲಂಬಿಸಿ ಬಹಳ ಖ್ಯಾತಿಯನ್ನು ಪಡೆದರು. ಅನಂತರ ಮಹಾತ್ಮ ಗಾಂಧಿಯವರ ಚಳವಳಿಯನ್ನು ಸೇರಿ ಅದ್ಭುತವಾದ ಸೇವೆಯನ್ನು ಸಲ್ಲಿಸಿರುವರು.

ಬೆಂಗಳೂರಿಗೆ ಬಂದಕಾಲದಲ್ಲಿ ಅವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದು ಅಲ್ಲಿನ ಪೌರಸಭೆಯವರು ತೀರ್ಮಾನಿಸಿದ್ದರು. ತಾವು ನೇಮಾಲಸ್ಯವ್ಯವಾಗಿರುವುದರಿಂದಲೂ, ತಮ್ಮ ಭೇಟಿಯು ಕೇವಲ ಖಾಸಗಿಯದಾಗಿರುವುದರಿಂದಲೂ ಸದರಿ ಮಾನಪತ್ರವನ್ನು ಅಂಗೀಕರಿಸಲಾರೆವೆಂದು ಅವರು ತಿಳಿಸಿರುತ್ತಾರೆ.

ನಮ್ಮ ಏಜಂಟರುಗಳು.

1. ಮಿ॥ ರಾ॥ ಸೆಟ್. ರಾಮಚಂದ್ರಯ್ಯ, ಮಾರ್ಕೆಂಟ್ ಅಂಡ ನ್ಯೂಸ್ ಏಜೆಂಟ್ ತುಮಕೂರು

2. ಮೆಸರ್ಸ್ "ದಿ ನಂಜನಗೂಡು ನ್ಯೂಸ್ ಏಜೆನ್ಸಿ" ರೈಲ್ವೆ ಸ್ಟೇಷನ್ ಬುಕ್ ಸ್ಟಾಲ್, ಹಾಸನ

ಇವರುಗಳನ್ನು ಆಯಾ ಸ್ಥಳಗಳಲ್ಲಿ ನಮ್ಮ ಏಜೆಂಟರನ್ನಾಗಿ ನೇಮಿಸಿರುತ್ತೆ. ಸ್ಪರ್ಧೆಗೆ ಭಾಗವಹಿಸುವವರು ಇವರುಗಳಲ್ಲಿ ಉತ್ತರಗಳನ್ನೂ ಪ್ರವೇಶಧನವನ್ನೂ ಹಾವತೀಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ.

ಮ್ಯಾನೇಜರ್,
ಚಿತ್ರಶಾಲಾ ಸ್ಪರ್ಧೆ.

ಚಿತ್ರಶಾಲಾ ಸ್ಪರ್ಧೆ ನಂ. ೩೮ ರ ಉತ್ತರ.



ಬಹುಮಾನ ಪಡೆದವರ ಹೆಸರುಗಳನ್ನು ಮುಂದಿನ ವಾರ ಪ್ರಕಟಿಸಲಾಗುತ್ತೆ

ಮುಫತ್ತು | ಇನಾಂ | ಮುಫತ್ತು

ಜೀವನ ನೌಕಾ

ಮನುಷ್ಯರ ಜೀವನ
ಯಾತ್ರೆಯನ್ನು ಸುಖಸೌಖ್ಯ
ದಿಂದ ಜರಗಿಸುವುದಕ್ಕೆ ದಾರಿ
ಯನ್ನು ತೋರಿಸುವ
ಪುಸ್ತಕವು

ಟಿ. ಖರ್ಚು ಇಲ್ಲಾ : ಕ್ರಯವಿಲ್ಲಾ

ಮದನಮಂಜರಿ ಫಾರ್ಮಸಿ
1191 ಚೈನಾ ಬಜಾರ್, ಮದರಾಸು

ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಬೆಂಕಿ ಪೆಟ್ಟಿಗೆಗೆ ಗಿರಾಕಿಗಳನ್ನೊದಗಿಸಲು ಅಖಿಲ ಕರ್ನಾಟಕದಲ್ಲಿಯೂ ಡಿಸ್ಟ್ರಿಬ್ಯೂಟರೂ, ಏಜಂಟರೂ ಬೇಕಾಗಿದೆ. ಇಷ್ಟವುಳ್ಳವರು 2 ಆಣೆ ಪೋಸ್ಟೇಜ್ ಸ್ಟಾಂಪಿನೊಡನೆ ಕೂಡಲೆ ಬರೆದುಕೊಳ್ಳಿರಿ.

ಶ್ರೀ ಸಂಜೀವಿನಿ ವರ್ಕ್ಸ್,
ಸೋಲ್ ಏಜಂಟ್ಸ್.

ಕರ್ನಾಟಕ ಅಂಡ್ ಬಸವಲಿಂಗಂ
ಮ್ಯಾಚ್ ವರ್ಕ್ಸ್,
2830 ಹಳ್ಳದಕೇರಿ, ಮೈಸೂರು.

ಆರನೆಯ ವರ್ಷಾರಂಭ
ಜನವರಿ ೧೯೩೮

ಪ್ರಪಂಚ ಪರಿಚಯ.

ಫ್ರಾನ್ಸ್—ಈಗಿರುವ ಸರ್ಕಾರವನ್ನು ತಲೆಕೆಳಗುಮಾಡಿ, ಇಟಲಿ, ಜರ್ಮನಿಗಳ ಲ್ಲಿರುವಂತಹ ಸರ್ಕಾರವನ್ನು ಸ್ಥಾಪಿಸಬೇಕೆಂದು ಒಂದು ಬಲವಾದ ಪಿತೂರಿಯು ನಡೆದಿದ್ದುದನ್ನು ಕಂಡುಹಿಡಿದಿರುವರು. ಈ ಪಿತೂರಿಯ ಕೇಂದ್ರದಲ್ಲಿ, ಇಟಲಿ, ಜರ್ಮನಿ ದೇಶಗಳ ಶಸ್ತ್ರಾಸ್ತ್ರಗಳೂ, ಮದ್ದುಗುಂಡುಗಳೂ, ಹೇರಳವಾಗಿ ದೊರೆತಿರುವುವಂತೆ. ಇತ್ತೀಚಿನ ಜಪಾನಿನ ವಿಜಯವೂ ಫ್ರಾನ್ಸಿಗೆ ಕಳವಳವನ್ನೇ ಉಂಟುಮಾಡಿದೆ.

ಬೆಲ್ಜಿಯಂ—ಕಳೆದ ನಾಲ್ಕು ತಿಂಗಳುಗಳಿಂದಲೂ ಮಂತ್ರಿ ಮಂಡಲವೇ ಇನ್ನೂ ಏರ್ಪಟ್ಟಿಲ್ಲ. ದೊರೆಯೇ ರಾಜ್ಯದ ಆಡಳಿತಗಳನ್ನು ನಿರ್ವಹಿಸುತ್ತಿದ್ದಾನೆ. ಈವರೆಗೆ ಹಲವು ಮಂದಿ ಪ್ರಜಾ ಮುಖಂಡರನ್ನು ಕರೆದು ಕೇಳಿದರೂ ಮಂತ್ರಿ ಮಂಡಲವನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ.

ಬ್ರೆಜಿಲ್—ಇಲ್ಲಿ ಜರ್ಮನಿ, ಇಟಲಿಯಂತಹ ಫೇಸಿಸ್ಟ್ ಸರ್ಕಾರವು ಸ್ಥಾಪಿತವಾಗಿದೆ. ರಾಷ್ಟ್ರದ ಸಾಲಗಳನ್ನು ತೀರಿಸಲು ಸಾಧ್ಯವಿಲ್ಲವೆಂದೂ ವ್ಯಾಪಾರದ ಸಾಲಗಳು ಮಾತ್ರ ಪರದೇಶದವರಿಗೆ ಸಾವಕಾಶವಾಗುವುದೆಂದೂ ತಿಳಿಸಿರುವರು. ಬ್ರೆಸಿಲ್ ದೇಶವು ದಕ್ಷಿಣ ಅಮೆರಿಕದಲ್ಲಿ ಯೂರೋಪು ಖಂಡಕ್ಕಿಂತಲೂ ವಿಸ್ತಾರವಾದ ದೇಶ. ಬಹು ಫಲವತ್ತಾದುದು.

ಅರ್ಜೆಂಟೈನ್—ಇಲ್ಲಿನ ಸರ್ಕಾರದವರು ತಮ್ಮ ದೇಶಕ್ಕೆ ವಲಸೆಹೋಗಿ ನೆಲಸುವವರಿಗೆ ವಿಶೇಷವಾದ ಸೌಕರ್ಯಗಳನ್ನು ಕಲ್ಪಿಸುತ್ತಿರುವರು. ಅಲ್ಲಿನ ಹೋಟೆಲುಗಳಲ್ಲಿ ಐದು ದಿನಗಳು ವೆಚ್ಚವಿಲ್ಲದೆ ಸತ್ಕಾರ ಮಾಡುವರು. ಸ್ಥಳದ ಸನ್ನಿವೇಶಗಳನ್ನು [illegible]ಗಳಲ್ಲಿ ತೋರಿಸಿ ಗಿರಾಕಿಗಳನ್ನು ಆಕರ್ಷಿಸುತ್ತಿರುವರು. ಭೂಮಿಯು ಫಲವತ್ತಾದುದು. ಇಷ್ಟಾದರೂ ಜನರು ನಿಲ್ಲುತಲಿಲ್ಲ.

ಜರ್ಮನಿ—ಸಂಧಿಗಾಗಿ ಜಪಾನಿನೊಡನೆ ಸಂಧಾನ ನಡೆಯುತ್ತಿರುವಂತೆ ಕಾಣುವುದು. ಫಲವಾಗುವಂತೆ ತೋರಲಿಲ್ಲ. ದಕ್ಷಿಣ ಅಮೆರಿಕ, ಮಧ್ಯ ಯೂರೋಪುಗಳಲ್ಲಿ ಹೆಚ್ಚು ಪ್ರಭಾವದಿಂದ ಕೆಲಸ ಮಾಡುತ್ತಿದೆ.

ಇಂಗ್ಲೆಂಡು—ಸಂಯುಕ್ತ ಸಂಸ್ಥಾನಗಳ ಸಂಗಡ ಪ್ರತ್ಯೇಕವಾದ ವ್ಯಾಪಾರದ ಕರಾರನ್ನು ಮಾಡಿಕೊಳ್ಳಲು ಹವಣಿಸುತ್ತಿದೆ. ಜರ್ಮನಿಯನ್ನು ಸಮಾಧಾನ ಪಡಿಸಲು, ವರ್ಸೇಲ್ಸ್ ಒಪ್ಪಂದವನ್ನು ತಳ್ಳಿಹಾಕಿ, ಹೊಸ ನಿಬಂಧನೆಗಳನ್ನು ಏರ್ಪಡಿಸಿಕೊಂಡು, [illegible] ಮೂಲಕ ಹೊಸದಾಗಿ ಜನಾಂಗ ಸಂಯೋಜನ ಕೂಟವನ್ನು ಸ್ಥಾಪಿಸಬೇಕಂತೆ. ಆದರೆ ಜರ್ಮನಿಯನ್ನು ಸೇರಿಸಿಕೊಂಡು, ಅದಕ್ಕೆ ವಸಾಹತುಗಳನ್ನೊಪ್ಪಿಸಿ, ಯೂರೋಪಿನಲ್ಲಿ ಶಾಂತತೆಯನ್ನುಂಟುಮಾಡಲು [illegible] ಯೋಚಿಸುತ್ತಿದೆ.

ಸಂಗೀತಾಭಿಮಾನಿಗಳಲ್ಲಿ ವಿಜ್ಞಾಪನೆ

ಪ್ರಗತಿ ಹೊಂದುತ್ತಲಿರುವ ಕರ್ನಾಟಕದಲ್ಲಿಂದು ವಿವಿಧ ಕಲೆಗಳನ್ನು ಪ್ರೋತ್ಸಾಹಿಸತಕ್ಕ ಸಂಸ್ಥೆಗಳನೇಕವು ಜನ್ಮವೆತ್ತಿ, ತಮ್ಮ ಕೆಲಸಗಳನ್ನು ಮಾಡುತ್ತ ಯಶಸ್ವಿಗಳಾಗುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಹಾಗೆಯೇ ಸಂಗೀತ ಕಲೆಯನ್ನು ಪ್ರೋತ್ಸಾಹಿಸತಕ್ಕ ಸಂಸ್ಥೆಯೊಂದರ ಅಭಾವವು ಕರ್ನಾಟಕಕ್ಕಿದೆ ಎಂಬುದನ್ನು ಮರೆಯಬಾರದು.

ನಮ್ಮಲ್ಲಿ ಉಭಯ ಸಂಗೀತ ವಿದ್ಯಾಪಾರಂಗತರು ವಿರಾಜಿಸುತ್ತಿದ್ದು, ಈ ವಿಚಾರದಲ್ಲಿ ಇದುವರೆಗೂ ಯಾವ ಪ್ರಯತ್ನವನ್ನೂ ಮಾಡದಿದ್ದುದು ವಿಷಾದಕರವೇ ಸರಿ. ಈ ಕಾರಣದಿಂದ ಸಂಗೀತಾಭಿಮಾನಿಗಳ ಪರಸ್ಪರ ಪರಿಚಯ, ವಿದ್ಯೆ ಮತ್ತು ಸಹಕಾರಕ್ಕೆ ತುಂಬಾ ತೊಡಕುಂಟಾಗಿದೆ. ಇದೊಂದು ಕೊರತೆಯನ್ನು ನಿವಾರಿಸಬೇಕಾದುದು ಕರ್ನಾಟಕ ಸಂಗೀತಾಭಿಮಾನಿಗಳ ಕರ್ತವ್ಯವಿದೆ.

ಇಂಥ ಮಹತ್ಕಾರ್ಯವು ಕೈಗೂಡಬೇಕಾದರೆ ಕಲಾಭಿಮಾನಿಗಳೆಲ್ಲರೂ ಮುಂದು ಬರಬೇಕು. ಒಪ್ಪ ನಿಸ್ವಾರ್ಥ ಕೆಲಸ ಮಾಡಬೇಕು. ಕಾರಣ ಸಂಗೀತಜ್ಞರೂ, ಸಂಗೀತಾಭಿಮಾನಿಗಳೂ, ಕಲಾಪೋಷಕರೂ ಆದ ಸರ್ವರೂ ಜಾಗ್ರತರಾಗಿ ತಮ್ಮ ಕರ್ತವ್ಯವನ್ನು ಮಾಡಬೇಕಾಗಿ ವಿನಂತಿ. ಹಾಗೂ ಈ ವಿಚಾರದಲ್ಲಿ ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಸಂಪೂರ್ಣ ಪರಿಚಯೊಂದಿಗೆ ಕೆಳಗಿನ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ವಿನಂತಿ

ಯಸ್. ಯನ್. ಹರಿದಾಸ್,
ಸಂಗೀತಕಲಾ ಮಂದಿರ,
ಮೂಲ್ಕಿ, ದ. ಕ.

ಕಣ್ಣಿಗೆ ಕಾಣದ ಶಾಯಿ

ಜರ್ಮನಿಯಲ್ಲಿ ಹೊಸ ಮಾದರಿಯ ಶಾಯಿಯೊಂದನ್ನು ಕಂಡುಹಿಡಿದಿರುವರು. ಇದು ಕಾಗದದ ಮೇಲೆ ಬಿದ್ದ ಸ್ವಲ್ಪಕಾಲ ಮಾತ್ರ ಅಕ್ಷರಗಳು ಕಾಣುವುವು. ಅನಂತರ ಮಾಯವಾಗಿ ಕಾಗದವು ಎಂದಿನಂತೆ ಬೆಳ್ಳಗಾಗುವುದು. ಇದರಿಂದ ಒಂದಾವರ್ತಿ ಬರವಣಿಗೆಗೆ ಉಪಯೋಗಿಸಿದ ಕಾಗದವನ್ನೇ ಮತ್ತೊಂದಾವರ್ತಿ ಉಪಯೋಗಿಸುವುದಕ್ಕೂ ಸಹಾಯವಾಗುವುದು. ಜರ್ಮನಿಯಲ್ಲಿ ಕಾಗದಕ್ಕೆ ಅಭಾವ. ಈ ಶೋಧನೆಯಿಂದ ಅವರಿಗೆ ಬಹಳ ಪ್ರಯೋಜನಕರವಾಗಿದೆ.

ಇಟಲಿ—ತೆರಿಗೆಯನ್ನು ಹೆಚ್ಚಿಸಿ, ಲಿಬಿಯ ಪ್ರಾಂತದಲ್ಲಿ ಒಂದು ಲಕ್ಷ ಸುಸಜ್ಜಿತವಾದ ಸೈನ್ಯವನ್ನು ಹೆಚ್ಚಿಸುತಲಿದೆ.

ಇಂಡಿಯ—ಇಲ್ಲಿನ ಕೂಲಿಗಳಿಗೆ ನಿರೋಗ ಕಾನೂನಿನಂತೆ ಚುನಾವಣೆಯ ಬಾಧ್ಯತೆಯಿಲ್ಲವಾಗಿ ಇಲ್ಲಿಂದ ಇನ್ನು ಮುಂದೆ ಕೂಲಿಗಳನ್ನು ಅಲ್ಲಿಗೆ ಕಳುಹಿಸುವುದಿಲ್ಲವಂತೆ. ಇಲ್ಲಿ ಚುನಾವಣೆಯ ಬಾಧ್ಯತೆಯು ಇಲ್ಲ, ನಿವಾಸಿಗಳ ಬಾಧ್ಯತೆಗಳನ್ನೂ ಮದೆಯಲು ಕೇಂದ್ರ ಸರ್ಕಾರವು ಯತ್ನಿಸುತ್ತಿದೆ.

ಕಾಂಗ್ರೆಸ್ ಪ್ರಚಾರ.

ಕಾಂಗ್ರೆಸ್ ಚಳುವಳಿಯು ಈಗಾಗಲೇ ಹಳ್ಳಿ ಹಳ್ಳಿಗಳಿಗೂ ಹರಡಿದೆ. ಜನರಿಗೆ ತಿಳಿದಂತೆ ದೇಶದ ಹೃದಯವನ್ನು ಕಾಂಗ್ರೆಸ್ಸು ಸೆಳೆದಿದೆ. ಜನಾಭಿಪ್ರಾಯಕ್ಕಾಗಿ ಕಾಂಗ್ರೆಸ್ಸು ಸರ್ಕಾರವು ಇಷ್ಟರೂ ಕಾತರರಾಗಿರುವಂತೆ ಕಾಣುವುದು. ಸರ್ಕಾರದಲ್ಲಿ ನಂಬಿಕೆಯ ನಿರ್ಣಯಗಳೂ ಅಲ್ಲಲ್ಲಿ ಆಗುತ್ತಿವೆ. ಇದು ತೀರಾ ಆಶ್ಚರ್ಯಕರ. ಏಕೆಂದರೆ—ಸರ್ಕಾರದಲ್ಲಿ ನಂಬಿಕೆ ಇದ್ದೇ ಇದೆ. ಎಲ್ಲರಿಗೂ ಇದೆ. ಕಾಂಗ್ರೆಸ್ಸು ಸರ್ಕಾರದಲ್ಲಿ ಅಪನಂಬಿಕೆಯನ್ನಿಲ್ಲಿಯೂ ಸಾರಲಿಲ್ಲ. ನೂತನ ರಾಜ್ಯಪದ್ಧತಿಯ ಬಗ್ಗೆ ಸರಿಸವರಿಗಿಂತಲೂ ಹೆಚ್ಚು ನಂಬಿಕೆಯುಳ್ಳವರು ಕಾಂಗ್ರೆಸ್ಸಿನವರು. ಈಗ ಬೇಕಾಗಿರುವುದು ಸರ್ಕಾರದಲ್ಲಿ, ರೀತಿ ನೀತಿಗಳಲ್ಲಿ ಬದಲಾವಣೆ. ಈ ವಿಷಯವಾಗಿ ಕಾಂಗ್ರೆಸ್ಸಿನವರು ಜನಾಭಿಪ್ರಾಯವನ್ನು ತಿಳಿಯಲು ತಮ್ಮ ಸಭೆಗಳ ಸದಸ್ಯಸ್ಥಾನಗಳಿಗೆ ರಾಜಿನಾಮೆ ಕೊಟ್ಟು, ಪುನಃ ಚುನಾವಣೆಗೆ ನಿಂತಿರುವರು. ಇದೇ ಸರಿಯಾದ ದಾರಿ ಎಂದು ನಾವು ಹೇಳಬೇಕಾದುದಿಲ್ಲ. ಪ್ರತಿಪಕ್ಷಗಳು ಎಚ್ಚೆತ್ತು ತಮ್ಮ ಕರ್ತವ್ಯವನ್ನು ಮಾಡುವರೆಂದೂ ಯಾವ ಪ್ರಲೋಭನಕ್ಕೂ ಮರುಳಾಗಬಾರದೆಂದೂ ನಾವು ಕೋರುತ್ತೇವೆ.

ಗಾನಸಾ ಚಟ್ಟಿಯ ಸವಾಲ್

ಜಗಜಟ್ಟಿಯಾದ ಗಾಮನು ಇದುವರೆಗೆ ಅನೇಕ ಸವಾಲುಗಳನ್ನು ಹಾಕಿದ್ದಾನೆ. ತನ್ನನ್ನು ಕುಸ್ತಿಯಲ್ಲಿ ಎದುರಿಸಲು ಪ್ರಪಂಚದ ಯಾವ ಭಾಗದ ಜಟ್ಟಿಗಳಾದರೂ ಮುಂದೆ ಬರಬಹುದೆಂದು ತಿಳಿಸಿದ್ದಾನೆ. ಆದರೆ ಯಾರೂ ಅವನನ್ನು ಎದುರಿಸುವಷ್ಟು ಸಾಹಸವನ್ನು ಮಾಡಿಲ್ಲ ಈಗ ಹಲವು ಪಾಶ್ಚಿಮಾತ್ಯ ಜಟ್ಟಿಗಳು ಭಾರತಖಂಡಕ್ಕೆ ಬಂದಿದ್ದಾರೆ ಅವರಲ್ಲಿ ಯಾರು ಬೇಕಾದರೂ ತನ್ನೊಡನೆ ಕುಸ್ತಿ ಮಾಡಬಹುದೆಂದು ಈಗ ಸವಾಲುಮಾಡಿದ್ದಾನೆ. ಎಲ್ಲರೂ ಬೇಕಾದರೂ ಒಂದೇ ದಿನ ಕುಸ್ತಿಗೆ ಬರಬಹುದೆಂದೂ ಕರೆದಿದ್ದಾನೆ. ಐದು ಸಾವಿರ ರೂ ಬಾಜಿ ಕಟ್ಟಿದ್ದಾನೆ. ಈ ಸವಾಲನ್ನು ಅವರು ಅಂಗೀಕರಿಸುವರೋ ಇಲ್ಲವೋ ನೋಡಬೇಕು.

ಶಸ್ತ್ರ ಸಿದ್ಧತೆ

ಇಟಲಿಯು ಜನಾಂಗ ಸಂಯೋಜನ ಕೂಟವನ್ನು ಬಿಟ್ಟಿತು. ಜಪಾನ್ ದೇಶವು ಚೀನಿಯನ್ನು ಕಬಳಿಸಿಬಿಟ್ಟಿತು. ಬ್ರಿಟಿಷ್ ಸರ್ಕಾರವು ಈಗಿನ ಭಾರತ ಸೈನ್ಯಕ್ಕೆ ಯುದ್ಧ ಶಿಕ್ಷಣವನ್ನು ಕೊಡುತ್ತಿದೆ. ಜಪಾನ್, ಜರ್ಮನಿ, ಇಟಲಿ ಈ ಮೂರು ರಾಷ್ಟ್ರಗಳೂ ವಿರೋಧಿಸಂಧಿಯಿಂದ ಒಂದುಗೂಡಿವೆ. ಅಬಿಸೀನಿಯದ ಆಕ್ರಮಣವು ಮುಗಿಯುವುದಕ್ಕೆ ಮೊದಲೇ ಚೀನದ ಆಘಾತವು. ಇನ್ನು ಮುಂದಿನ ಸರದಿಯು ಯಾವುದೆಂಬುದು ಊಹಿಸಲು ಶಕ್ಯವಾಗಿಲ್ಲ ಇರಲಿ.

ಇಂದು ನಮ್ಮ ಪಾಡೇನು? ಹಿಂದೊಂದು ಕಾಲದಲ್ಲಿ ನಾವು ಸಶಸ್ತ್ರರಾಗಿದ್ದರೆ ಒಬ್ಬೊಬ್ಬರು ಕಲಹವಾಡುವೆವೆಂಬ ನೆವದಿಂದ ನಿಶ್ಶಸ್ತ್ರರಾದೆವು. ನಮ್ಮ ರಕ್ಷಣೆಯ ನೆವದಿಂದ ಬ್ರಿಟಿಷರು ಮಾತ್ರ ಸಶಸ್ತ್ರರಾಗಿ ಉಳಿದರು. ಪರಿಸ್ಥಿತಿಯಿಂದ ಆಗಬೇಕಾದುದೆಲ್ಲವೂ ಆಗಿಹೋಯಿತು. ನಮ್ಮ ಜನಾಂಗದಲ್ಲಿ, ಆತ್ಮಗೌರವವೂ, ಬಾಳಿನಲ್ಲಿ ಹುರುಪೂ ಹೋದುವು. ಹೊಟ್ಟೆಗಾಗಿ ಏನನ್ನು ಬೇಕಾದರೂ ಮಾಡಬಲ್ಲವರಾದೆವು.

ಈ ಪರಿಸ್ಥಿತಿಯಲ್ಲಿ ಎಷ್ಟು ದಿನ ಕಾಲ ಇರಲಾದೀತು? ಸಾವಿರಾರು ಮೈಲಿಗಳಾಚೆಯಿಂದ ಇನ್ನೊಂದು ದೊಡ್ಡ ರಾಷ್ಟ್ರವನ್ನು ಕಾಪಾಡುವುದೆಂದರೆ ಸಾಧ್ಯವಲ್ಲ. ಜಪಾನಿನಂತಹ ಪ್ರಬಲ ಜನಾಂಗವು ನಮ್ಮ ನೆರೆಯಲ್ಲಿ ನೆಲಸುವುದಾದರೆ ಈಗಿನಂತೆ ಆಕಾಶವನ್ನು ನೋಡುತ್ತಾ ಕುಳಿತಿರಲು ನಮಗೆ ಸಾಧ್ಯವಾಗದು. ಈಗ ನೂರಾರು ವರ್ಷಗಳವು. ಸಾವಿರಾರು ವರ್ಷಗಳಾದರೂ ನಮ್ಮನ್ನು ನಾವು ಸಂರಕ್ಷಿಸಿಕೊಳ್ಳುವ ಸ್ಥಿತಿಗೆ ಬರಬಾರದೆ? ಸಾರ್ವಭೌಮ ಸರ್ಕಾರವು ಇನ್ನಾದರೂ ನಮ್ಮನ್ನು ನಾವು ಸಂರಕ್ಷಿಸಿಕೊಳ್ಳುವಂತೆ ಏರ್ಪಡಿಸುವುದೆಂದು ನಂಬುವೆವು

ಪತಿ—ಏನೇ, ಈ ನಿನ್ನ ಫೋಟೋ ನೋಡಿದರೆ ಗಂ ವರ್ಷ ಜಾಸ್ತಿ ಆದವನಂತೆ ಕಾಣ್ತೀನಲ್ಲ.

ಹೆಂಡತಿ—ಹೌದು ಇನ್ನೂ ಗಂ ವರ್ಷ ಕಳೆದು ಫೋಟೋ ತೆಗೆಸುವ ಬದಲು ಉಳೀತು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

- ಬಾಲಸುಧಾ -

ಮಕ್ಕಳ ಸ್ವಭಾವ ಗೆಡ್ಡೆಯನ್ನು ಬಿಡಿಸಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪವಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. ೨೫ ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಕ್ಷೀಣಕ್ಕೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 1 ರೂ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜೆಂಟರು.

ವೈದ್ಯಶಾಲಾ, ನಂಜನಗೂಡು.

☞ ದಿನಚರಿ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಚಂದ್ರಕಲಾ ಸ್ಪರ್ಧೆಯು ಇನ್ನು ಮುಂದೆ ಸಾಧ್ವಿ ಪತ್ರಿಕೆಯಲ್ಲೂ ಸಹ ಪ್ರಕಟವಾಗುತ್ತೆ.

ಚಂದ್ರಕಲಾ ಸ್ಪರ್ಧೆ ನಂ ೯

ಶ್ರೀರಂಗಪಟ್ಟಣ.

ನೊಬಲಿಗು ಕಣ್ಣಿಯೆಂದು ಉದಾಸೀನ ಮಾಡಬೇಡಿ!

ಬಹುಮಾನ 200 ರೂಪಾಯಿಗಳು

ಪ್ರಥಮ ಬಹುಮಾನ ೧೦೦ ರೂಪಾಯಿ — ಇತರ ಬಹುಮಾನ ೧೦೦ ರೂಪಾಯಿ

ಒಂದು ರೂಪಾಯಿಗೆ 7 ಕೂಪನ್ — ಎಂಟು ಆಣೆಗೆ 3 ಕೂಪನ್

ಉತ್ತರಗಳು ತಲಪಲು ಕಡೆಯ ತಾರೀಖು ೨೬-೧೨-೩೭ ನೇ ಭಾನುವಾರ.

ಸೂಚನೆ:- ಈ ಸ್ಪರ್ಧೆಯ ಸರಿಯಾದ ಉತ್ತರವು ಶ್ರೀರಂಗಪಟ್ಟಣದ ಟಿವರ್ ಬ್ಯಾಂಕ್ (ಲಿಮಿಟೆಡ್) ಆಫೀಸಿನಲ್ಲಿ ಮೊಹರು ಮಾಡಿ ಇರಿಸಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೊಂದಿದವರಿಗೆ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವರುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಮೂರಕ್ಕಿಂತ ಕಡಿಮೆ ಉತ್ತರಗಳನ್ನು ಅಂಗೀಕರಿಸುವುದಿಲ್ಲ. 8 ಆಣೆಗೆ ಮೂರು ಉತ್ತರಗಳನ್ನು ಕಳುಹಿಸಬಹುದು. "ಆರು ಉತ್ತರಗಳನ್ನು ಕಳುಹಿಸುವವರು ಇನ್ನೊಂದು ಉತ್ತರವನ್ನು ಮುಕ್ತವಾಗಿ ಕಳುಹಿಸಬಹುದು." ಪ್ರವೇಶ ಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಡಿಸೆಂಬರ್ 20 ನೇ "ಸಾಧ್ವಿ" ಕೂಪನ್ನಿನಲ್ಲಾಗಲಿ ಅಥವ "ತಾಯಿನಾಡು" ಪೇಪರಿನಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ತಿಲ್ಲವಂತೆ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1937 ನೇ ಇಸವಿ ಡಿಸೆಂಬರ್ 26 ನೇ ತಾರೀಖು ಕೊನೆಯ ದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು 1938 ನೇ ಜನವರಿ 3 ನೇ ತಾರೀಖಿನ ಸಾಧ್ವಿಯಲ್ಲಿ ಪ್ರಕಟಿಸಲಾಗುತ್ತೆ.

ಚಂದ್ರಕಲಾ ಸ್ಪರ್ಧೆ ನಂ. ೯.

●	1 ಪ		2	ಯ	3		4	●
5		●	ನೇ	●	ಭಾ	●	6 ಕ	7
8 ಹೇ		9 ಮ		●	10	11 ರ		ತ್ವ
	●		●	12	●		●	
●	13	ದಿ	14	●	15	ತ	16	●
17	ರ	●	18	19 ದಾ		●	ಮ	20
21 ಜಾ		22	●		●	23		ನಿ
	●	24 ಜಾ		●	25	ಕು	●	
	●	26	ಜ	●	27		●	

ಕೂಪನ್ ನಂ. ಪೋ. ಆ. ನಂ.

ಹೆಸರು

ವಿಳಾಸ ೯

ಎಡದಿಂದ ಬಲಕ್ಕೆ—

೧. ಶಂಕರಾಚಾರ್ಯರಿಗೆ ಈ ಶಕ್ತಿ ಇತ್ತೆಂದು ಪುರಾಣಪ್ರಸಿದ್ಧವಾಗಿದೆ. ೬. ಕಡೂರು ತಾ ಮೈಸೂರು ಡಿಸ್ಟ್ರಿಕ್ಟಿನಲ್ಲಿ ದೊಡ್ಡದಾಗಿ ಜಾತ್ರೆ ನಡೆಯುವ ಸ್ಥಳ. (ಅಕ್ಷರ ಸ್ಥಾನಭೇದ) ೧೦. ಮನುಷ್ಯನ ಮುಪ್ಪಿಗೆ ಇದೇ ಹೆಚ್ಚಾದ ಕಾರಣವೆಂದು ಹೇಳುತ್ತಾರೆ. ೧೨. ಹುಬ್ಬು. ೧೩. ಜೀವಂತರಿಗೆ ಮರಣಾನಂತರ ಯಮನ ಬಳಿ ಮಾಡತಕ್ಕ ಕೃತ್ಯಗಳನ್ನು ...... ಒಪ್ಪಿಸುವರೆಂದು ಹಲವರು ಹೇಳುತ್ತಾರೆ. (ಅಕ್ಷರಸ್ಥಾನಭೇದ) ೧೫. ಮಂತ. ೧೭. ವ್ಯಕ್ತಿ ೧೮. ತೂಕಕ್ಕೆ ಇಲ್ಲದಿರುವಿಕೆ. ೨೧. ಕನಕ, ಚಿನ್ನ. ೨೨. ಪಾಂಡವರ ವನವಾಸಕ್ಕೆ ಕಾರಣನಾದ ಒಬ್ಬ ವ್ಯಕ್ತಿ. ೨೪. ಹೆಂಡತಿ, ಪತ್ನಿ. ೨೫. ....ಮಾಡಿ ಕೆಲವರು ಪ್ರಪಂಚವನ್ನು ಕಳೆದುಕೊಳ್ಳುತ್ತಿರುತ್ತಾರೆ. ೨೬. ಪ್ರಕೃತಿ, ಸತ್ವ. ೨೭. ಶ್ರೇಷ್ಠ ಯತಿಗಳ ಪ್ರಯಾಣಕ್ಕೆ ಅರ್ಹವಾದವಷ್ಟು.

ಮೇಲಿನಿಂದ ಕೆಳಕ್ಕೆ—

೧. ಕೆಲವರು ಈ ಹಣ್ಣನ್ನು ಭಕ್ಷಿಸುವುದಿಲ್ಲ. ೨. ತುಲಾಮಾಸದಲ್ಲಿ ಈ ನದಿಯ ಸ್ನಾನವು ಅತ್ಯಂತ ಶ್ರೇಷ್ಠವಾದುದೆಂದು ಹೇಳುತ್ತಾರೆ. ೩. ಪ್ರಾತಃಕಾಲ. ೪. ಭಾಗ, ಚೂರು. ೫. ಉಪಾಯ. ೭. ಆತುರ, ಜಾಗ್ರತೆ. ೯. ಮಹಮ್ಮದೀಯರು ಈ ಸ್ಥಳವನ್ನು ಪವಿತ್ರವಾದುದೆಂದು ಭಾವಿಸುತ್ತಾರೆ. ೧೧. ವ್ಯವಸಾಯಗಾರ. ೧೪. ನಯವಿಲ್ಲದೇ ಇರತಕ್ಕವನು ೧೬. ವಿಷಮವಾದ ವಸ್ತು. ೧೭. ಸುವಾಸ. ೧೮. ಕೆಟ್ಟಬುದ್ಧಿ (ಅಕ್ಷರಸ್ಥಾನಭೇದ) ೧೯. ದೊಡ್ಡ ಕಾಡು. ೨೦. ರಾಜಪತ್ನಿ. ೨೦. ಶನಿ ......, ...ಉಂಟಾದರೆ ಸಾಮಾನ್ಯವಾಗಿ ಎಂಥವರಾದರೂ ಕೊಂಚವಾದರೂ ಕಷ್ಟ ತೊಂದರೆ ಪಡಬೇಕಾಗುತ್ತೆ. ೨೨. ಹಣ ಇರುವ ಸ್ಥಳಕ್ಕೆ ಹೀಗೆನ್ನುವರು. ೨೪. ಕೆಲವರು ಪ್ರಯಾಣ ಕಾಲದಲ್ಲಿ ಇದನ್ನು ಮುಖ್ಯವಾಗಿ ಗಮನಿಸುತ್ತಾರೆ.

ಈ ಸ್ಪರ್ಧೆಗೆ ಭಾಗವಹಿಸತಕ್ಕವರು ಬೆಂಗಳೂರಿನಲ್ಲಿ ಹೆಚ್. ಕೆ. ಮೂರ್ತಿ, ನಂ. 46, ಮರ್ಚೆಂಟ್, ಸಹೂರಾವ್ ಸ್ಟ್ರೀಟ್, ನ್ಯೂಮಾರ್ಕೆಟ್, ಇವರಲ್ಲೂ, ಮೈಸೂರಿನಲ್ಲಿ ದಿ ಸಿಟಿ ಜನರಲ್ ಏಜೆನ್ಸಿ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮತ್ತು ಪಿ. ಟಿ. ರಾಮಚಂದ್ರಶೆಟ್ಟರು, 281, ಲಕ್ಷ್ಮೀವಿಲಾಸ ಅಗ್ರಹಾರ, ಇವರಲ್ಲೂ ಮಂಡ್ಯ, ಶ್ರೀರಂಗಪಟ್ಟಣ, ಚನ್ನಪಟ್ಟಣ, ಹೊಳೇನರಸೀಪುರ, ಹಾಸನ, ಚಿಕ್ಕಮಗಳೂರು, ಈ ಸ್ಥಳಗಳಲ್ಲಿಯೂ ಮಾಮೂಲ್ ಮೇರೆ ನಮ್ಮ ಏಜೆಂಟರುಗಳಲ್ಲಿಯೂ ಉತ್ತರ ಮತ್ತು ಪ್ರವೇಶ ಧನವನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ.

ಮ್ಯಾನೇಜರ್, ಚಂದ್ರ ಕಲಾ ಸ್ಪರ್ಧೆ, ಶ್ರೀರಂಗಪಟ್ಟಣ. (ಮೈಸೂರು ಡಿಸ್ಟ್ರಿಕ್ಟ್)

ಕೊಚ್ಚಿ ರಾಜರ ಪ್ರಶಸ್ತಿಗೆ ಅಡ್ಡಿ

ಕೊಚ್ಚಿ ಸಂಸ್ಥಾನದ ರಾಜರಿಗೆ ಕಾಶಿ ವಿಶ್ವವಿದ್ಯಾಲಯದವರು ಗೌರವದ "ಡಾಕ್ಟರ್ ಆಫ್ ಲಾಸ್" ಎಂಬ ಪದವಿಯನ್ನು ಕೊಡಬೇಕೆಂದು ನಿರ್ಧರಿಸಿರುವರು. ಇಂತಹ ಗೌರವ ಪ್ರಶಸ್ತಿಗಳನ್ನು ಅನಾಗ್ರಿಗಳಿಗೆ ಆಗಾಗ ಕೊಡುವುದುಂಟು. ಆ ಪದವಿಗಳಿಂದ ವಿದ್ಯಾಲಯಕ್ಕೂ ವಿಶೇಷ ಪ್ರಯೋಜನವಾಗುವುದುಂಟು. ಕೊಚ್ಚಿ ಮಹಾರಾಜರು ಅಸ್ಪೃಶ್ಯತಾನಿವಾರಣೆಗೆ ಇನ್ನೂ ಅವಕಾಶ ಕೊಟ್ಟಿಲ್ಲ. ಇದರಿಂದ ತಿರುವಾಂಕೂರು ಸಂಸ್ಥಾನಕ್ಕೂ ಜನರಿಗೂ ಸ್ವಲ್ಪ ಘರ್ಷಣವುಂಟಾಗಿದೆ. ಮತ್ತು ಇಡೀ ದೇಶದಲ್ಲೂ ಬಹಳ ಮಟ್ಟಿಗೆ ಅಸಮಾಧಾನವುಂಟಾಗಿದೆ. ಆದ್ದರಿಂದ ಆವರಿಗೆ ಗೌರವ ಪ್ರಶಸ್ತಿ ಕೊಡಕೂಡದೆಂದು ಸೇಠ್ ಬಿರ್ಲಾರವರು ಆಕ್ಷೇಪಣೆ ಮಾಡಿದ್ದಾರೆ.

COORG LODGE.

Boarding & Kesting Home

OPP. KRISHNARAJENDRA HOSPITAL, MYSORE.

The most Popular, Desirable, Homely Lodge in MYSORE. Situated in the heart of the City. Nearest to business Centres, Hospitals, Market, Palace, Theatres Parks Etc., High Class Nicely furnished and well ventilated Rooms are available.

Accommodation for both Vegetarians and non-Vegetarians.

Reasonable monthly Rates

MANAGER.

ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಕ್ಷಿ ಎದುರಿಗೆ ಬೀಗ ಮೊಹರುಮಾಡಿ ಇಟ್ಟಿದೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲುತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ನಾಲ್ಕು ಉತ್ತರಗಳನ್ನು ಕಳುಹಿಸುವವರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಡಿಸೆಂಬರ್ 13 ಮತ್ತು 20 ನೇ ತಾರೀಖು ಕೂಪನ್ನುಗಳಲ್ಲಾಗಲಿ ಅಥವಾ ತಾಯಿನಾಡು ಪ್ರಕಟಿಸಲ್ಪಡತಕ್ಕ ಕೂಪನ್ನುಗಳಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರದಲ್ಲಿದ್ದಂತೆ ಚೆನ್ನಾಗಿ (ಶಾಯಿಯಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1937 ನೇ ಇಸವಿ ಡಿಸೆಂಬರ್ 30 ನೇ ತಾರೀಖು ಕೊನೆಯ ದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು 1938 ನೇ ಜನವರಿ 3 ನೇ ತಾರೀಖಿನ ಸಾಪ್ತಾಹಿಕ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತೆ.

ಚಿತ್ರಶಾಲಾ ಸ್ಪರ್ಧೆ ನಂ ೪೯



ಹೆಸರು ....
ವಿಳಾಸ ....
ಕೂಪನ್ ನಂ.......... ಪೋಸ್ಟಲ್ ಆರ್ಡರ್ ನಂಬರು.........

ಪೋಸ್ಟು ಮೂಲಕ ಕಳುಹಿಸುವವರು ೩೦ ನೇ ತಾರೀಖು ಕೂಡಾ ಕಳುಹಿಸಬಹುದು

ಎಲ್ಲರಿಗಿಂತಲೂ ಹೆಚ್ಚಾಗಿ ಉತ್ತರಗಳನ್ನು ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನ

೩೦ ರೂಪಾಯಿ

ಚಿತ್ರಶಾಲಾ ಸ್ಪರ್ಧೆ ನಂ. ೪೯



ಹೆಸರು..
ವಿಳಾಸ..
ಕೂಪನ್ ನಂ.................ಪೋಸ್ಟಲ್ ಆರ್ಡರ್ ನಂಬರು......

ಎಡದಿಂದ ಬಲಕ್ಕೆ

೧. ಗಾಳಿ. ೨. ಮೈಸೂರಿನಲ್ಲಿ ಕಬ್ಬಿಣದ ಕಾರ್ಖಾನೆ ಇರುವ ಸ್ಥಳ. ೩. ಇದರಿಂದ ಪ್ರಪಂಚಕ್ಕೇ ತುಂಬಾ ಪ್ರಯೋಜನವಾಗಿರುತ್ತೆ. ೭. ಅಸ್ತ್ರವಿದ್ಯಾಲಯ ಶಿಲ್ಪ. ೧೦. ಇದಕ್ಕಾಗಿ ಅನೇಕರು ತುಂಬಾ ಶ್ರಮಪಡುತ್ತಾರೆ. ೧೧. ಗದ ನಾದ ಧ್ವನಿ. ೧೪. ಇದರಲ್ಲಿ ತುಳಸಿಗಿಡಗಳನ್ನು ಬೆಳೆಸಿ ಪೂಜಿಸುತ್ತಾರೆ. ೧೭. ಎಲ್ಲರೂ. ೧೯. ವಿಷ್ಣು. ೨೧. ಸಾಧ್ಯವಾದಷ್ಟು, ಎಲ್ಲರೂ ಪ್ರಪಂಚಕ್ಕೆ.......... ಮಾಡಬೇಕು. ೨೨. ರಸಾತಲ. (ಅಕ್ಷರ ಸ್ಥಳಪಲ್ಲಟ) ೨೩. ಗುಮಾಸ್ತೆ. ೨೬...........ನಾಗಿರುವವನನ್ನು ಎದುರಿಸುವುದು ತಪ್ಪು. ೨೮. ಇಲ್ಲದವನಿಗೆ, ಮಾನ ಮತ್ತು ಕಷ್ಟಗಳ ಅರಿವೇ ಇಲ್ಲವೆಂದು ಹೇಳುತ್ತಾರೆ. ೩೦. ಕರ. ೩೨. ಕೆಲವು ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಇವನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ. ೩೪. ....ಕ್ಕೆ ಪ್ರವೇಶಮಾಡಿದ ಮೇಲೆ, ನಾಚಿಕೆ, ಸಂಕೋಚ ಭಾವನೆ ಇವುಗಳನ್ನೆಲ್ಲಾ ಬಿಡಬೇಕು. ೩೫. ಇಂತಹ ಸ್ವಭಾವದವರಿಗೆ ಸೋಲಿನ ಭಯವಿಲ್ಲ.

ಮೇಲಿನಿಂದ ಕೆಳಕ್ಕೆ

೧. ಹಿತವಾಗಿರುವ ಇದನ್ನು ಕೇಳಲು ಯಾರಿಗೂ ಬೇಸರವಾಗುವುದಿಲ್ಲ. ೪. ಸಾಧಾರಣವಾಗಿ ಅರವತ್ತರ ನಂತರ ಇವರಿಗೆ ಮಾನಸಿಕ ಶ್ರಮವೇ ಹೆಚ್ಚು (ದೇಹ ಶ್ರಮ ಕಡಿಮೆ) ೫. ......ವನವಾದ್ದರಿಂದ ಕೆಲವರು ಮುಖ್ಯ ಕಸುಬಾಗಿ ಇಟ್ಟುಕೊಂಡು ಜೀವಿಸುತ್ತಾರೆ. ೬. ಕುರುಕ್ಷೇತ್ರ ಯುದ್ಧದಲ್ಲಿ ಬಲರಾಮನು ಸಹಿತ ಇವರಿಬ್ಬರೂ ಕೌರವನ ಪಕ್ಷದಲ್ಲಿದ್ದರು. ೮. ಇಂತಹ ಅನೇಕ ಗಿಡಮರಗಳನ್ನು ಹಳ್ಳಿಗಳಲ್ಲಿ ನೋಡಬಹುದು. ೯. ಪದಕ (ಅಕ್ಷರಗಳ ಸ್ಥಳಪಲ್ಲಟ) ೧೨. ಸಮಾಧಾನಪಡಿಸು. ೧೩. ಬೇಕೋ ಬೇಡವೋ. ೧೫. ......ಇಲ್ಲದೆ, ಯಾವ ಸಂಸ್ಥೆಯೂ ನಡೆಯಲಾರದು. ೧೬. ಯೋಗ್ಯರಾದವರು ಯಾವಾಗಲೂ ಇದನ್ನು ಮಾಡಬಾರದು. ೧೮. ಬೆಟ್ಟ. ೨೦. ಸ್ತ್ರೀಯರು ಇದನ್ನು ನೋಡುತ್ತಾರೆ. ೨೪. ಕಾಂಗ್ರೆಸ್ಸಿನ ಪ್ರಧಾನ ದಿನ, ಈ ಮಂತ್ರಿ ಮಂಡಲಗಳು ಕೆಲಸಗಳಂತೆ. ೨೫. ಶಕ್ತಿ ಮೀರಿರುವ. ೨೭. ಶ್ರೇಷ್ಠವಾದ ಕವಿ. ೨೯. ಸರಸ್ವತಿ. ೩೧. ಈ ಪೌರಾಣಿಕ ಕಾಲದಿಂದ ಇದುವರೆವಿಗೂ ನಡೆಯುತ್ತಿರುವ ಕೆಲಸವನ್ನು ನಿರ್ವಹಿಸುತ್ತಾನೆ. ೩೩. ಇದನ್ನು ತಪ್ಪನ್ನು ಪ್ರಕಟಿಸುವುದರಿಂದ ಬಹಳಷ್ಟು ಕೊಡುವುದು.

ವಿಳಾಸ:— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ವಿ. ಸೂ.—ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಜೆಸ್ಟಿಕ್ ಸ್ಟ್ರೀಟ್ ನಂ...—ಇವರಿಗೂ, ಬೆಂಗಳೂರಿನಲ್ಲಿ ಭಾಗವಹಿಸುವವರು ಮಿ॥ ಹೆಚ್. ಕೆ. ಮೂರ್ತಿ, ಟ್ರೇಡಿಂಗ್ ಹೌಸ್, ಬೆಂಗಳೂರಿನ ವ್ಯಾಪಾರಿಗಳು, ನಂ॥ 46 ನ್ಯೂ ಮಾರ್ಕೆಟ್, ಚಿಕ್ಕಪೇಟೆ ಇವರಿಗೂ, ...ಸ್ಪರ್ಧೆಗೆ ಭಾಗವಹಿಸುವವರು ಮಿ॥ ಹೆಚ್. ರಾಮಚಂದ್ರಯ್ಯ, ಜನರಲ್ ಮರ್ಚೆಂಟ್ ಅಂಡ್ ನ್ಯೂಸ್ ಏಜೆಂಟ್ ಇವರಲ್ಲಿಯೂ, ...ಸ್ಪರ್ಧೆಗೆ ... ಫಲಿತಾಂಶ ಪ್ರಕಟವಾದೊಡನೆ ಮಿ॥ ... ನಂಜನಗೂಡು ನ್ಯೂಸ್ ಏಜೆನ್ಸಿ, ರೈಲ್ವೆ ಸ್ಟೇಷನ್ ಬುಕ್ ಸ್ಟಾಲ್, ಹಾಸನ ಇವರಲ್ಲಿ ಕಳುಹಿಸಬೇಕಾಗಿ ವಿನಂತಿ. ಮ್ಯಾನೇಜರ್.

Asiatic Government Security Life Assurance Co., Ltd.

HEAD OFFICE:-ASIATIC BUILDINGS, BANGALORE CITY.

THIS IS PURELY A NATIONAL CONCERN

Managed by Experts. Low Premiums and Liberal Policy Conditions.

Apply for Agency — To Mr. H. Venkataramaiah, Divl. Supdt., Asiatic Buildings, Bangalore City. Or To V. RANGASAMI Esq. B.A. B.L., F.C.I. General Manager.



ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಷಾಲಿಸಿ ಷರತ್ತುಗಳೂ ಉಳ್ಳ ಶುದ್ಧ ಸ್ವದೇಶೀ ವಿಮಾ ಸಂಸ್ಥೆ.

ಏಜನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಹೆಚ್. ವೆಂಕಟರಾಮಯ್ಯ, ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು ಸಿಟಿ.

ಅಥವಾ

ವಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ. ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

ಭಿಷಗ್ರತ್ನ ಸಾಳ್ವದ ವೆಂಕಟಾಚಲ ಪಂಡಿತ ಅಂಡ್ ಸನ್,

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1–2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತ, ಎಂತಹ ಗಟ್ಟಿಯಾದ ಆಹಾರವನ್ನಾದರೂ ಜೀರ್ಣಿಸಿ ಕೊಳಕಾದ ನೀರು ಕೆಟ್ಟಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಬಾಗಿಸೇರದ ಮಲಬದ್ಧವನ್ನೂ ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತವೆ.

ಮಕ್ಕಳ ಪಕ್ಕಸಳೆತ (ಎಳವು, ಕಾಲುಕೈ ಸೆಳೆತ ಬಾಯಲ್ಲಿ ಜೊಲ್ಲು ಸುರಿಸುವ ಶೀತವಾತ) ಮಕ್ಕಳ ಮತ್ತು ದೊಡ್ಡವರ ಶೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣದ ಭೇದಿ, ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಸಪ್ಪೆಬಾಯಿ, ಪ್ಲೇಗು, ಶೀತಭೇದಿ ಇವನ್ನು ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿರುತ್ತಾರೆ. ಈ ಮಾತ್ರೆಗಳಲ್ಲಿ ಅಫೀಮಾಗಲಿ, ವಿಷವಸ್ತುವಾಗಲಿ, ಮಾದಕ ವಸ್ತುವಾಗಲಿ ಇಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವರಾಗುತ್ತೀರಿ.

250 ರಿಂದ 300 ಮಾತ್ರೆಗಳನೊಳಗೊಂಡ ಸೀಸೆ 1 ಕ್ಕೆ 4 ಆಣೆ. ಅಂಚೆ ಖರ್ಚು ಪ್ರತ್ಯೇಕವಾದರೆ 1 ಸೀಸೆಗೆ 9 ಆಣೆ. 6 ಸೀಸೆಗೆ 1—8—0. 12 ಕ್ಕೆ 2—13—0. 25 ಕ್ಕೆ 5—8—0.

ಸಾಳ್ವದ ವೆಂಕಟಾಚಲ ಪಂಡಿತ ಅಂಡ್ ಸನ್,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಗ್ಯಾರಂಟಿಯಾದ ಸಿದ್ಧೌಷಧಗಳು.

ಬಾಲ ವಿರೇಚನಿ ಚೂರ್ಣ—ಸರ್ವಜನ್ಯವಾಗಿ ಉಂಟಾಗತಕ್ಕ ಅಜೀರ್ಣ, ಉಬ್ಬಸ ಗಡ್ಡೆ ಮತ್ತು ಹಾಲು ಗಡ್ಡೆ, ಶೀತ ಮುಂತಾದವುಗಳಿಂದ ಉಂಟಾಗುವ ವಾಯು ಉಪದ್ರವ, ಹೊಟ್ಟೆಯುಬ್ಬರ ಮುಂತಾದ ಮಕ್ಕಳ ಅಪಾಯವನ್ನು ಪರಿಹರಿಸತಕ್ಕ ಖಾತರಿಯಾದ ಔಷಧಿ. ಒಂದು ತೊಲಾ ಡಬ್ಬಿ ಒಂದಕ್ಕೆ 0—6—0.

ಬಾಲ ವಾತಘ್ನಂ—ಮಕ್ಕಳಿಗೆ ಶೀತ ವಾಯುವಿನಿಂದ ಕೈಕಾಲು ಸೆಳೆತ, ಗಂಟಲಲ್ಲಿ ಶ್ಲೇಷ್ಮ ಸುತ್ತಿಕೊಂಡು ಕಷ್ಟವಾಗುವುದು ಮುಂತಾದವುಗಳಿಗೆ ಖಾತರಿಯಾದ ಔಷಧಿ. ಕ್ರಯ 30 ಮಾತ್ರೆಯುಳ್ಳ ಸೀಸೆಗೆ 0—4—0.

ತಾಪಜ್ವರಾಂಕುಶ—100 ಮಾತ್ರೆಯುಳ್ಳ ಸೀಸೆಗೆ 0—8—0. ಅನುಪಾನಪಥ್ಯಾದಿಗಳು ಔಷಧಿಯ ಸಂಗಡ ಇರುತ್ತೆ.

ಕ್ಷಯ ಸಂಜೀವಿನಿ—ದೀರ್ಘಜ್ವರ, ಕ್ಷಯ ದೋಷದಿಂದ ಉಂಟಾಗತಕ್ಕ ಒಳಜ್ವರ ಮುಂತಾದವುಗಳಿಗೆ ಗ್ಯಾರಂಟಿಯಾದ ಔಷಧಿ.

50 ಮಾತ್ರೆಯುಳ್ಳ ಸೀಸೆ 1ಕ್ಕೆ ರೂ. 1—0—0.

ಶ್ವಾಸ ಕುಠಾರ—ದಮ್ಮು, ಉಬ್ಬಸ, ಕೆಮ್ಮಲು ಮುಂತಾದ ಶೀತವ್ಯಾಧಿಗಳಿಗೆ ಖಾತರಿಯಾದ ಔಷಧಿ. 50 ಮಾತ್ರೆಯುಳ್ಳ ಸೀಸೆ 1ಕ್ಕೆ ರೂ. 0—1—0.

ಪ್ರಸವಿಸಿದವರಿಗೆ— 10 ದಿನಗಳವರೆಗೂ ಕೊಡತಕ್ಕ ಮಾತ್ರೆಗಳು, ಅನಂತರ ಒಂದು ಮಾಸ ಪರ್ಯಂತರ ಕೊಡತಕ್ಕ ನಾರದ ಪುಡಿ, ಅನಂತರ 3 ತಿಂಗಳವರೆಗೂ ಕೊಡತಕ್ಕ ರಸಾಯನ ಸಹ ಸೇರಿ ಕ್ರಯ ರೂ. 9.

ಈ ಪ್ರಕಾರ ಕೊಡುವುದರಿಂದ ಹೆಂಗಸರಿಗೆ ಉಂಟಾಗತಕ್ಕ ಸೂತಿಕಾ ವಾಯುವೇ ಆಗಲಿ, ಉಷ್ಣವಾಯುವೇ ಆಗಲಿ, ಯಾವ ವ್ಯಾಧಿಯೂ ಅಂಟದಂತೆ ಕಾಪಾಡುತ್ತದೆ. ಇನ್ನಾವ ವ್ಯಾಧಿ ಇದ್ದರೂ ಪತ್ರಮೂಲಕ ತಿಳಿಸಿದಲ್ಲಿ ಅದಕ್ಕೆ ಸರಿಯಾದ ಔಷಧಿಯನ್ನು ಅನುಪಾನ ಸಮೇತ ಕಳುಹಿಸಲಾಗುತ್ತೆ.

ಪ್ರೊಪ್ರೈಟರ್:— ಗುಂಡ್ಲುಪೇಟೆಯವರ ಲಕ್ಷ್ಮೀನಾರಾಯಣಾಚಾರ್ಯರ ಮಕ್ಕಳು,

ಜಿ. ಶ್ರೀನಿವಾಸ ದೀಕ್ಷಿತಾಚಾರ್,

307, ಕರುಪಟ್ಟೆ ಬೀದಿ, ಮೈಸೂರು.

Edited, Printed & Published by Agaram Rangiah, B.A., at Sri Rama Press, D. Subbiah Road, Mysore.

REGD. NO. M. 3534.

HALF ANNA

SADHVI

LEADING WEEKLY

ಸಂಪಾದಕರು: ಅಗರಂ ರಂಗಯ್ಯ, ಬಿ. ಎ.

ಟಿ ೨] 27—12—37 ಮೈಸೂರು : ಸೋಮವಾರ ೨೭—೧೨—೧೯೩೭ [ಸಂಚಿಕೆ ೪೫

" ಲೀಲಾವತಿ "—ಸುಲೋಚನ.

ಜನತಾ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುವುದು.

ಶ್ರೀ ಏನೆಂದರೆ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಚಂದ್ರಕಲಾ ಸ್ಪರ್ಧೆಯು ಇನ್ನು ಮುಂದೆ ಸಾಧ್ವಿ ಪತ್ರಿಕೆಯಲ್ಲೂ ಸಹ ಪ್ರಕಟವಾಗುತ್ತೆ.



ಒಂದು ರೂ.ಗೆ ೩ ಕೂಪನ್ **ಉತ್ತರಗಳನ್ನು ಕಳುಹಿಸಲು ಕಡೆಯ ತಾರೀಖು ೧೩-೧-೩೮** ೪ ಆಣೆಗೆ ೧ ಕೂಪನ್

ಸೂಚನೆ:— ಈ ಸ್ಪರ್ಧೆಯ ಸರಿಯಾದ ಉತ್ತರವು ಶ್ರೀರಂಗಪಟ್ಟಣದ ಟರ್ವ ಬ್ಯಾಂಕ್ (ಲಿಮಿಟೆಡ್) ಆಫೀಸಿನಲ್ಲಿ ಮೊಹರು ಮಾಡಿ ಇಡಿಸಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸಂಪೂರ್ಣವಾಕ್ಕೆ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ನೀಡಲ್ಪಡುವ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಮೂರಕ್ಕಿಂತ ಕಡಿಮೆ ಉತ್ತರಗಳನ್ನು ಅಂಗೀಕರಿಸುವುದಿಲ್ಲ. ೧ ರೂ.ಗೆ ಮೂರು ಉತ್ತರಗಳನ್ನು ಕಳುಹಿಸಬಹುದು. "ಆರು ಉತ್ತರಗಳನ್ನು ಕಳುಹಿಸುವವರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು." ಪ್ರವೇಶ ಧನವನ್ನು ಪೋಸ್ಟಲ್ ಸ್ಟ್ಯಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಡಿಸೆಂಬರ್ 27 ಮತ್ತು 1938 ನೇ ಜನವರಿ 3ನೇ ತಾರೀಖು "ಸಾಧ್ವಿ" ಕೂಪನ್ನಿನಲ್ಲಾಗಲಿ ಅಥವ "ತಾಯಿನಾಡು" ಪೇಪರಿನಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚೆಕ್ ಪ್ರಕಾರ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1938 ನೇ ಇಸವಿ ಜನವರಿ 13 ನೇ ತಾರೀಖು ಕೊನೆಯ ದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು 1938 ನೇ ಜನವರಿ 17 ನೇ ತಾರೀಖಿನ ಸಾಧ್ವಿಯಲ್ಲಿ ಪ್ರಕಟಿಸಲಾಗುತ್ತೆ.



ಕೂಪನ್ ನಂ. ಪೋ. ಆ. ನಂ.

ಹೆಸರು

ವಿಳಾಸ ೧೦

ಎಡದಿಂದ ಬಲಕ್ಕೆ—

೧. ರಾಮಲಿಂಗ ಶಾಸ್ತ್ರಿ ಸ್ಥಳಕ್ಕೆ ಈ ಹೆಸರು ಬಂದಿದೆ. ೩. ನವರತ್ನಗಳಲ್ಲೊಂದು. ೬. ಸಾಮಾನ್ಯವಾಗಿ ರೋಗಿಗಳಿಗೆ ಇದನ್ನು ಉಪಯೋಗಿಸುವುದು ಹೆಚ್ಚು. ೮ ಅಶೌಚ ಅಥವ ಮೈಲಿಗೆ. ೧೦. ಸ್ತ್ರೀಯರಿಗೆ ಈ ಧರ್ಮವೇ ಭೂಷಣವೆಂದು ಹೇಳಬಹುದು. ೧೧. ಇದು ಇಲ್ಲದ ಮನೆಯಿಲ್ಲ. (ಸ್ಥಳಪಲ್ಲಟ.) ೧೩. ಯಜ್ಞಯಾಗಾದಿಗಳಲ್ಲಿ ದೇವತೆಗಳ ತೃಪ್ತಿಗೋಸ್ಕರ ಇದನ್ನು ಮಾಡುತ್ತಾರೆ. ೧೫. ಬಿಲ್ಲಿಗೆ ಕಟ್ಟುವ ಹಗ್ಗ, ತಿರು. ೧೬. ಒಂದು ದುಷ್ಟ ಪ್ರಾಣಿ. ೧೭. ಕೆರೆ. ೧೮. ಕನ್ಯಾ ಕೊಡುವುದಕ್ಕೂ ತರುವುದಕ್ಕೂ ಸಹ ಕೆಲವರು ಮುಂಚೆ ಇದನ್ನು ನೋಡುತ್ತಾರೆ. ೧೯. ಆಚಾರ ಹೀನ. ೨೦. ಇದು ಇಲ್ಲದಿದ್ದಲ್ಲಿ ವರ್ತಮಾನಗಳನ್ನು ತಿಳಿಯಲು, ತಿಳಿಸಲು ಕಷ್ಟವಾಗುತ್ತಿತ್ತು. ೨೩. ಅವಚಣೆ. ೨೪. ಮುಸಲರು ಹೀಗಾಗಬೇಕೆಂದು ನವಾತಾ ಚಿತ್ರಗಳು ಹಾಕೈಸುತ್ತಾರೆ. (ಸ್ಥಳಪಲ್ಲಟ.)

ಮೇಲಿನಿಂದ ಕೆಳಕ್ಕೆ—

೧. ಗುಂಪು. ೨. ಈತನೂ ತಂದೆಗೆ ಸಮಾನನಂತೆ ಪೂಜ್ಯನು. ೪. ಕೆಂಪು,ರಕ್ತ ೫... ...ಜ್ವಾಲೆಯನ್ನು ಸಹಿಸುವುದು ಕಷ್ಟ. ೬ ಈಗಲೂ ಕೆಲವು ಸ್ತ್ರೀಯರು ಈ ಕಾಟದಿಂದ ನರಳುತ್ತಿರುತ್ತಾರೆ. (ಸ್ಥಳಪಲ್ಲಟ.) ೭. ಬಾಲದಲ್ಲಿ ವಿಷವುಳ್ಳ ಜಂತು. (ಸ್ಥಳಪಲ್ಲಟ.) ೮. ಇಷ್ಟ. ೯. ಇನ್ನೊಂದು ವಿಧವಾದ ನೂಲು ತೆಗೆಯುವ ಯಂತ್ರ. ೧೦. ಈ ಗುಣ ಎಲ್ಲರಲ್ಲೂ ಇರುವುದಿಲ್ಲ. ೧೨. ತುತ್ತು, ತೆರೆ. ೧೪. ಇದು ಇಲ್ಲದಿದ್ದರೆ ಪ್ರಾಣಿಗಳು ಬದುಕಲಾರವು (ಸ್ಥಳಪಲ್ಲಟ.) ೨೧. ಇದರಿಂದ ತಯಾರಾದ ಸಾಮಾನುಗಳು ನೋಡಲು ಬಹು ರಮ್ಯ ಮತ್ತು ಬೆಲೆ ಹೆಚ್ಚು. ೨೨. ಹಿರಿಯರಲ್ಲಿ ಕಿರಿಯವರು ಈ ರೀತಿಯಾಗಿ ವರ್ತಿಸುವುದು ಉತ್ತಮ.

ಈ ಸ್ಪರ್ಧೆಗೆ ಭಾಗವಹಿಸತಕ್ಕವರು ಬೆಂಗಳೂರಿನಲ್ಲಿ ಹೆಚ್. ಕೆ. ಮೂರ್ತಿ, ನಂ. 46, ಮರ್ಚೆಂಟ್, ಸೀತಾರಾಮ್ ಸ್ಟ್ರೀಟ್, ನ್ಯೂಮಾರ್ಕೆಟ್, ಇವರಲ್ಲೂ, ಮೈಸೂರಿನವರು ದಿ ಸಿಟಿ ಜನರಲ್ ಏಜೆನ್ಸಿ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಮತ್ತು ಪಿ. ಪಿ. ರಾಮಚಂದ್ರ ಶೆಟ್ಟರು, 281, ಲಕ್ಷ್ಮೀವಿಲಾಸ ಅಗ್ರಹಾರ, ಇವರಲ್ಲೂ, ತುಮಕೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ಹೆಚ್. ರಾಮಚಂದ್ರಮ್ಮ, ಜನರಲ್ ಮರ್ಚೆಂಟ್ ಅಂಡ್ ನ್ಯೂಸ್ ಏಜೆಂಟ್ ಇವರಲ್ಲಿಯೂ, ಮಂಡ್ಯ, ಶ್ರೀರಂಗಪಟ್ಟಣ, ಹೊಳೇನರಸೀಪುರ, ಹಾಸನ, ಚಿಕ್ಕಮಗಳೂರು, ಈ ಸ್ಥಳಗಳಲ್ಲಿಯೂ ಮಾಮೂಲು ಮೇರೆ ನಮ್ಮ ಏಜೆಂಟರುಗಳಲ್ಲಿಯೂ ಉತ್ತರ ಮತ್ತು ಪ್ರವೇಶ ಧನವನ್ನು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ.

ಮ್ಯಾನೇಜರ್, ಚಂದ್ರಕಲಾ ಸ್ಪರ್ಧೆ, ಶ್ರೀರಂಗಪಟ್ಟಣ. (ಮೈಸೂರು ಡಿಸ್ಟ್ರಿಕ್ಟ್).

ಧನ್ವಂತರಿ ಆಯುರ್ವೇದ ವಿದ್ವಾನ್ ಜಿ. ವಿ. ಪಂಡಿತರ

- ಬಾಲಸುಧಾ -

ಮಕ್ಕಳ ಜ್ವರದ ಗೆಡ್ಡೆಯನ್ನು ಮಾತ್ರ ಗುಣಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಹೊಟ್ಟೆ ಹಿಡಿದು ಬಚ್ಚನಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. ೩೦ ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಏಳಿಗೆಗೆ ನಮ್ಮ ಬಾಲಸಂಜೀವಿನಿಯನ್ನೂ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

COORG LODGE.

Boarding & Resting Home

OPP. KRISHNARAJENDRA HOSPITAL, MYSORE.

The most Popular, Desirable, Homely Lodge in MYSORE. Situated in the heart of the City. Nearest to business Centres, Hospitals, Market, Palace, Theatres Parks Etc., High Class Nicely furnished and well ventilated Rooms are available.

Accommodation for both Vegetarians and non-Vegetarians.
Reasonable monthly Rates

For Particulars apply to,—

MANAGER.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಕೀಯ ರಾಷ್ಟ್ರೀಯ ವಾರ ಪತ್ರಿಕೆ.

ಸ್ವರ್ಗಸ್ಥರಾದ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

[ಸಂಪುಟ ೨] MYSORE : MONDAY 27—12—37 ಮೈಸೂರು ಸೋಮವಾರ ೨೭—೧೨—೩೭ [ಸಂಚಿಕೆ ೪೮

[illegible] ಹೊಸ ಗುಡ್ಡ

[illegible] ಪ್ರಾಂತದಲ್ಲಿ ಕಾಂಗ್ರೆಸ್ [illegible] ಮಂತ್ರಿಗಳ [illegible] ಪರಿಸ್ಥಿತಿ ಎಷ್ಟೋ ಬಗ್ಗೆ ಅಲ್ಲಿ [illegible] ಸರ್ಕಾರದ ನೌಕರರಾಗಿ [illegible] ಸರ್ಕಾರದ ಉತ್ತರವನ್ನು [illegible] ಇಂತಹ ಹೇಳಿಕೆಗಳನ್ನು [illegible] ಇಂತಹ ಪ್ರಸಂಗ. ಇಂತ [illegible] ಸುಳ್ಳುಗಳಿಂದ ಜನರನ್ನು [illegible] ನಡೆಸಬೇಕೇ? ಇಂತ [illegible] ಹೇಳಿಕೆಗಳನ್ನು [illegible] ಕೇವಲ ಅಪ್ರಸ್ತುತ ಪ್ರಸಂಗ. ಇಂತ [illegible] ಮೊಳಕೆಯಲ್ಲೇ [illegible] ಬೇಕು.

ಮುಖ್ಯಗೆ ಮುಖ್ಯ

[illegible] ಸಂಸ್ಥಾನದ ಶಾಸನ ಸಭೆಯ [illegible] ಶ್ರೀ [illegible] ಅಲ್ಲಿ [illegible] ಪೋಲೀಸು ನೌಕರರು. ತಮ್ಮ [illegible] ಅಧ್ಯಕ್ಷರಾಗಿ ಕರೆದರು. [illegible] ಅಲ್ಲಿ ಹೋದಾಗ [illegible] ಎಂದು ಇಂಗ್ಲಿಷ್ [illegible] ತ್ತು. ಅದನ್ನು ತೆಗೆಯಬೇಕೆಂ [illegible] ಹೇಳಿದರು. ಪೋಲೀಸರು [illegible] ಹೇಳಿ [illegible].

[illegible] ಬೆಲೆ

[illegible]

ಇಬ್ಬರು ಸದಸ್ಯರು ಒಂದು ದಿನ ಸಭೆ ದ ಘಟನೆಯಿಂದ ೭೦೦೦ ರೂಪಾಯಿಗಳು ನಷ್ಟವಾಯಿತಂತೆ. ನಮ್ಮ ಪ್ರಜಾಪ್ರತಿನಿಧಿ ಮತ್ತು ಶಾಸನ ಸಭೆಗಳ ಭಾಷಣಗಳನ್ನು ಯಾರಾದರೂ ಗಣಿತ ಶಾಸ್ತ್ರಜ್ಞರು ಲೆಕ್ಕ ಹಾಕಿ [illegible] ನಾವಿನ್ನು ಬೆಲೆ [illegible] ಗೊತ್ತುಮಾಡಬಾರದೆ?

ವೈಸರಾಯಿಯವರಿಗೆ ಅರಿಶಿನ, ಕುಂಕುಮ

ವೈಸರಾಯರ ಪತ್ನಿ ಲೇಡಿ ಲಿನ್‌ಲಿತ್‌ಗೋವರು ಕಲ್ಕತ್ತೆಯ ಒಂದು ಬ್ರಾಹ್ಮಣ [illegible] ಭೇಟಿ ಇತ್ತರು. ಆ ಸಮಯದಲ್ಲಿ [illegible] ಅವರಿಗೆ ಒಂದು ಕೆಂಪು ಸೀರೆಯನ್ನು ಸನ್ಮಾನವಾಗಿ ಕೊಟ್ಟರು. ಮತ್ತು ಹಿಂದೂ ಸಂಪ್ರದಾಯದಂತೆ ಅವರ ಹಣೆಗೆ ಕುಂಕುಮವನ್ನೂ ಹಚ್ಚಿದರು. ಇದನ್ನೆಲ್ಲ ವೈಸರಾಯಿಣಿಯವರು ಅತ್ಯಂತ ಆನಂದದಿಂದ ಸ್ವೀಕರಿಸಿದರು. ಇದರಿಂದ ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದ ಒಂದು ವಾಕ್ಯವು ನೆನಪಿಗೆ ಬರುತ್ತದೆ. "ನನ್ನ ಭಕ್ತರಾದವರು ಯಾವ ಯಾವ ವಿಧಗಳಲ್ಲಿ ನನ್ನನ್ನು ಸೇವಿಸಲು ಅಪೇಕ್ಷಿಸುತ್ತಾರೋ ಅದೇ ವಿಧಗಳಲ್ಲಿ ಅವರ ಸೇವೆಯನ್ನು ನಾನು ಸ್ವೀಕರಿಸುತ್ತೇನೆ."

ಬಾಟೀಗೂ ಪ್ರತಿಬಂಧಕ!

ಬಾಟಿ ಬಟ್ಟೆಯೂ ಅಪಾಯಕರವಲ್ಲದ ವಸ್ತುವೆಂದು [illegible] ನಾವು ತಿಳಿದಿದ್ದೆವು. ಆದರೆ ಈಗ [illegible] ದರೂ, ಬಂಗಾಳದ [illegible] ಕೋರ್ಟಿನಲ್ಲಿ ಮಾತ್ರ ಇದನ್ನು ಬಾಟಿಗೆ ಪ್ರತಿಬಂಧಕವೇ ಇದೆ. [illegible] ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳು [illegible] ಸಂಪೂರ್ಣವಾಗಿ [illegible] ಬಟ್ಟೆಯನ್ನು ಧರಿಸಿ ಒಂದು [illegible] ಕೋರ್ಟಿಗೆ ಹೋದರು. [illegible] ಧರಿಸಿಬಿಲ್ಲವೆಂದು [illegible] ಅವರನ್ನು [illegible] ಅವರಿಂದ [illegible]

ಈ ಬಡಪಾಯಿ ನಿಮಿತ್ತವಾಗಿ ಮೇಲಿನ ಕೋರ್ಟಿನಲ್ಲಿ ಒಂದು ಅಪೀಲು ದಾಖಲಾಗಿದೆ! ಇದೆಲ್ಲಾ ನಡೆಯುತ್ತಿರುವುದು ಡಾಕ್ಟರ್ [illegible] ಮಂತ್ರಿತ್ವದಲ್ಲಿ. ಇದೇ ಕಾಂಗ್ರೆಸ್ಸು ಪ್ರಾಂತವಾಗಿದ್ದರೆ?

ರಾಷ್ಟ್ರೀಯ ವ್ಯಾಯಾಮ

ಬೊಂಬಾಯಿನ ಕಾಂಗ್ರೆಸ್ ಮಂತ್ರಿ ಮಂಡಲವು ಅನೇಕ ಯೋಜನೆಗಳನ್ನು ಹಾಕಿದೆ. ಅದರ ವ್ಯಾಯಾಮವನ್ನು ರಾಷ್ಟ್ರೀಯ ಮಾರ್ಗದಲ್ಲಿ ನಡೆಸಬೇಕೆಂದು ಅವರ [illegible] ಬಹಳ ಮುಖ್ಯವಾದುದು. ವ್ಯಾಸಂಗಕ್ಕಿಂತಲೂ ವಿದ್ಯಾರ್ಥಿಗಳಿಗೆ ವ್ಯಾಯಾಮವೇ ಮುಖ್ಯವೆಂದು ಅವರು [illegible]. ಹಳ್ಳಿಯ [illegible] ವ್ಯಾಯಾಮ [illegible] ತರಬೇಕೆಂದೂ ಸಂಕಲ್ಪಿಸಿದ್ದಾರೆ. ಇದಕ್ಕಾಗಿ ಒಂದು ಕಾಲೇಜನ್ನು ಸ್ಥಾಪಿಸಲಿದ್ದಾರೆ. ಈಗಿನ ಪಾಶ್ಚಾತ್ಯ ವ್ಯಾಯಾಮ ಕ್ರಮಗಳಿಂದ ನಮ್ಮ ದೇಶಕ್ಕೆ ಆಗುತ್ತಿರುವ ಧನ ನಷ್ಟವು ಅಪಾರವಾದುದು. ಇದನ್ನು ತಪ್ಪಿಸಲು ಬೊಂಬಾಯಿ ಸರ್ಕಾರವು ಹಾಕಿರುವ ಯೋಜನೆಯು ಅನುಕರಣೀಯವಾದುದು.

ಅಪೇಕ್ಷಿಸಿದಾಗ ಮಳೆ

ಅಗ್ನಿ ಶಾಸ್ತ್ರ, ಬೇಕಾದಾಗಲೂ ಮಳೆಯನ್ನು ಬರಿಸುವ ವಿಧಾನವನ್ನು [illegible] ಇಬ್ಬರು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ. [illegible] ಮತ್ತು [illegible] ಎಂದು ಅವರ ಹೆಸರು. ತಮ್ಮ ನೂತನ ಶೋಧನೆಯನ್ನು ಅವರು ಸರ್ಕಾರದವರಿಗೆ [illegible] ಒಂದು [illegible] ಮಳೆಯನ್ನು [illegible] ಕೇವಲ [illegible] ಎಂದು ಅವರು ಹೇಳುತ್ತಾರೆ. ರೈತರು ಯಾವಾಗ ಅಪೇಕ್ಷಿಸಿದರೆ ಆವಾಗ, ಮತ್ತು ಎಷ್ಟು ಬೇಕೆಂದರೆ ಅಷ್ಟು [illegible] ಮಳೆಯನ್ನು [illegible] ಅವರು [illegible] ನಮ್ಮ ಬಡ ರೈತರಿಗೂ ಈ [illegible]

ನ್ನು ಹೇಳಿಕೊಟ್ಟರೆ ಎಷ್ಟರಮಟ್ಟಿಗೆ [illegible] ಬೇಕಾದರೂ ಕೊಡಬಹುದು.

ಪೋಲೀಸರಿಗೆ ನಮಸ್ಕಾರ

ಅಮೇರಿಕದ [illegible] ಎಂಬಲ್ಲಿ ಒಂದು ವಿಚಿತ್ರತರವಾದ ಶಿಕ್ಷೆಯು ಅಪರಾಧಿಯೊಬ್ಬನಿಗೆ ವಿಧಿಸಲ್ಪಟ್ಟಿತು. [illegible] ಎಂಬವನು ತನ್ನ ಹೆಂಡತಿಯ [illegible] ಅಪರಾಧದ ಮೇಲೆ ದಸ್ತಗಿರಿ ಮಾಡಲ್ಪಟ್ಟನು. ಆಗ ಅವನು ದಸ್ತಗಿರಿ ಮಾಡಿದ ಪೋಲೀಸಿನವನ ಮೇಲೆ [illegible] ಅವನ ಬಟ್ಟೆಬರೆಗಳನ್ನು [illegible]. ಅದಕ್ಕಾಗಿ ಕೋರ್ಟಿನ [illegible] ಅವನಿಗೆ ಕೊಟ್ಟ ಶಿಕ್ಷೆಯು ವಿಚಿತ್ರತರವಾಗಿತ್ತು. ಜುಲ್ಮಾನೆಯಲ್ಲ, ಸೆರೆಯಲ್ಲ. ಮೂರು ತಿಂಗಳ ಕಾಲ ಆತನು ಬೀದಿಯಲ್ಲಿ ಕಂಡಕಂಡ ಪೋಲೀಸರಿಗೆಲ್ಲಾ ತನ್ನ ಟೋಪಿಯನ್ನು ತೆಗೆದು ಸಲಾಮು ಮಾಡಬೇಕೆಂಬುದೇ ಶಿಕ್ಷೆ. ಯಾವ ಕಾನೂನಿನ ಪ್ರಕಾರ ನ್ಯಾಯಾಧೀಶರು ಈ ಶಿಕ್ಷೆಯನ್ನು ವಿಧಿಸಿದರೋ ಗೊತ್ತಿಲ್ಲ. ಆದರೆ ಜುಲ್ಮಾನೆ ಅಥವ ಸಜಾಕ್ಕಿಂತಲೂ ಇದು ಅವನಿಗೆ ಹೆಚ್ಚು ಕಠಿಣವಾಗಿದ್ದಿರಬೇಕು.

ಭೂಪತಿ ಚಕ್ರವರ್ತಿ

ಬರೋಡೆಯ ಗಾಯಕವಾಡ ಮಹಾರಾಜರು ಕಲ್ಕತ್ತೆಯ ಸಂಸ್ಕೃತ ಕಾಲೇಜಿಗೆ ಭೇಟಿಯಿತ್ತರು. ಆ ಸಮಯದಲ್ಲಿ ಅಲ್ಲಿನ ಪಂಡಿತರುಗಳೂ ಅಧ್ಯಾಪಕರೂ ಅವರನ್ನು ಸತ್ಕರಿಸಿ "ಭೂಪತಿ ಚಕ್ರವರ್ತಿ" ಎಂಬ ಬಿರುದನ್ನು ಕೊಟ್ಟರು. ಇದು ವಿಚಿತ್ರವಾದ [illegible] ಈ [illegible] ಅಧೀನರು. [illegible] ಚಕ್ರವರ್ತಿಗಳು ಹೇಗೆ [illegible] ಭೂಪತಿ ಚಕ್ರವರ್ತಿ [illegible]? [illegible]

ವಿದ್ಯುಚ್ಛಕ್ತಿಯ ವಿಸ್ತರಣ

ಸಿಂಹಾಸ್ತ್ರವಲ್ಲಿ ಶ್ರೀ ಪದ್ಮರಾಜರವರ ಭಾಷಣ

[illegible]

[illegible]

[illegible]

[illegible]

ಕ್ಷಾನ್ನೀಯ ಸಹಾಯವು ದಿನದಿನವೂ ಹೆಚ್ಚುತ್ತಿದೆ.

ಪ್ರಾಚೀನ ಕಾಲದಲ್ಲಿ ವಿದ್ಯುಚ್ಛಕ್ತಿಯ [illegible] ತಿಳಿದಿತ್ತೆಂ [illegible] ಇಂಥ ವಿದ್ಯುಚ್ಛಕ್ತಿಯ [illegible] ಮುಂದಿನ [illegible] ಬಂದ ಜೀವನದಲ್ಲಿ [illegible] ಇದರಿಂದ [illegible] ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಿ, ಅಲ್ಲಿಂದ ಬೇರೆ ಪ್ರದೇಶಗಳಿಗೆ ಸಾಗಿಸುವುದು [illegible] ಮತ್ತು ಪ್ರಯೋಜನಕರವಾದ ಕಾರ್ಯವೆಂಬುದು ಅನಿವಾರ್ಯವಾದುದರಿಂದ, ಅಲ್ಲಿಂದ ಕೆಲವು [illegible] ವರ್ಷಗಳ ವರೆಗೆ [illegible].

... ಸಂಬಂಧದಲ್ಲಿ ಸಾಕಷ್ಟು ಕೆಲಸವು ಆಗ [illegible] ಹಿಂದೆ ಬಂದಿದೆ. ಜಲಪಾತದಿಂದ ಉತ್ಪತ್ತಿಯಾದ [illegible] ಶಕ್ತಿಯನ್ನು [illegible] ಮೈಲಿಗಳ ದೂರದಲ್ಲಿರುವ [illegible] ಪ್ರದೇಶಕ್ಕೆ [illegible] ಅಷ್ಟು ಬಲದ ವಿದ್ಯುಚ್ಛಕ್ತಿಯನ್ನು ಅಷ್ಟು ದೂರ ಸಾಗಿಸುವ [illegible] ವ್ಯವಸ್ಥೆಯೇ ಬಹಳ [illegible] ಅಗ್ಗ ಮತ್ತೊಂದು ಇರಲಿಲ್ಲ. ಬಹಳ ಪ್ರಪಂಚದಲ್ಲಿ ಕೂಡ, ಅದಕ್ಕಿಂತ ಹೆಚ್ಚು ದೂರಕ್ಕೆ ವಿದ್ಯುಚ್ಛಕ್ತಿಯನ್ನು ಸಾಗಿಸುವ ಒಂದು ವ್ಯವಸ್ಥೆಯೋ ಅಥವಾ ಎರಡು ವ್ಯವಸ್ಥೆಗಳೋ ಮಾತ್ರವೇ ಇದ್ದುವು. ಆದಕಾರಣ, ನಮ್ಮ ಸಂಸ್ಥಾನದಲ್ಲಿ ಆಗ ವಿದ್ಯುಚ್ಛಕ್ತಿಯ ವ್ಯವಸ್ಥೆಗೆ [illegible] ನಮ್ಮ ಸರ್ಕಾರದ ಅಧಿಕಾರಿಗಳು [illegible] ಆ ವ್ಯವಸ್ಥೆಯ ಸಂಬಂಧದ [illegible] ದ್ದರು.

[illegible] ಕೆಲಸವನ್ನು ಬಿಗಿ ಬಗೆಯಾಗಿ ಮಾಡುವುದಕ್ಕೆ ಈ ಯಂತ್ರಗಳು [illegible] ಉಪಯೋಗಿಸುವ [illegible] ಅವಶ್ಯವಾಗಿದ್ದ [illegible] ಈ ಅವಿಷ್ಕಾರದ [illegible] ಈ ದಿಕ್ಕಿನಲ್ಲಿಯ ಸಂಬಂಧದಲ್ಲಿ ಅಂತಹ ಅಧಿಕಾರಿಗಳ [illegible] ಬಾಗಿಲಿಗೆ ತೆರೆದಿದೆ.

[illegible] ಶ್ರೀ [illegible] ಅಂತಹ [illegible] ಅವರ ಅನುಭವದ [illegible] ಈ ಸಂಸ್ಥಾನದ [illegible] ಉಪಯೋಗಿಸುವಲ್ಲಿ [illegible] ಗಳಲ್ಲಿ [illegible] ಕಟ್ಟಡಗಳ [illegible] ಯಂತ್ರಗಳ [illegible]

ಮಹಾಕೆಂಪರೂ ಮತ್ತು ಮಹಾಜನರೂ, ಈ ಪ್ರದೇಶದಲ್ಲಿ ತಿಳುವಳಿಕೆ ಕಡಿಮೆಯಾಗಿರುವ ಎಷ್ಟಣಕ್ಕೆ [illegible] ಎಂಬ ನಾವು [illegible] ಅನುಕೂಲ ಕೊಡಬೇಕೆಂದು ಶ್ರೀ [illegible] ರವರು ಬಿನ್ನವಿಸಿದ್ದಾರೆ. ಈ ವ್ಯವಸ್ಥೆಗೆ ಕಾರಣವಾದ [illegible] ಮತ್ತು ಅದನ್ನು ಕಾರ್ಯರೂಪಕ್ಕೆ ತರುವ [illegible] ಗಳು, ಇಲ್ಲಿ ಪ್ರತಿಷ್ಠಿಸುವ ಕೆಲಸಕ್ಕೆ [illegible] ನಾವು ಅನುಕೂಲ ಕೊಡಬೇಕೆಂದು ಅವರು ಬಿನ್ನವಿಸಿದ್ದಾರೆ. ಅದಕ್ಕೆ ಅನುಕೂಲ ಕೊಡಲು ನಾವು [illegible] ವಹಿಸುವೆವು. ಇಲ್ಲಿ ಪ್ರತಿಷ್ಠೆ [illegible] ಕೆಂದು ಕರೆದುದನ್ನು ಅವಶ್ಯಾಗಿ [illegible] ದಾಸ ಸ್ಥಾನಕ್ಕೆ ಇಳಿಸುವಕಾರ್ಯವನ್ನು ನಾವು ಅತ್ಯಂತ ಸಂತೋಷದಿಂದ ಇನ್ನ ನೆರವೇರಿಸುವೆವು. ಇಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವ ವ್ಯವಸ್ಥೆಗೆ [illegible] ಮಾಡುವ [illegible] ಶಕ್ತಿಯನ್ನೂ, ಆ ವ್ಯವಸ್ಥೆಯನ್ನು ಕಾರ್ಯರೂಪಕ್ಕೆ ತಂದವರ [illegible] ವಾದ ಪ್ರಯತ್ನವನ್ನೂ ಸ್ಮರಣೆಗೆ ತರಲು [illegible] ಇದು ಚಿರಕಾಲ [illegible] ಎಂದು ಕೃತಜ್ಞತೆಯಿಂದ ಹಾರೈಸುವೆ.

ದ್ರಾಕ್ಷಾಸವ

ಈ ದ್ರಾಕ್ಷಾಸವವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವನ್ನು [illegible] ಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ [illegible] ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ್ [illegible] ಕಣ್ಣಿನೊಳಗೆ ಉರಿಯುವ [illegible] ಶೌಚಕ್ಕೆ [illegible] ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ [illegible] ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದ್ದರೆ ಮತ್ತು ಅದಕ್ಕೆ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧಿಯ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿಯುವದು.

1 ಬಾಟ್ಲಿ ಬೆಲೆ ರೂ. [illegible], 3 ಬಾಟ್ಲಿ [illegible], 1 ಡಜ಼ ಬಾಟ್ಲಿ ಬೆಲೆ [illegible]

ಮ್ಯಾನೇಜರ್—ದ್ರಾಕ್ಷಾಸವ ಡಿಪ್ಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

ಬ್ರಾಂಚ್ [illegible] — [illegible], ಮುಂಬಾಯಿ ಆನಂದ ಭವನ. [illegible] ಚೆಂಗಳೂರು ಸಿಟಿ:—[illegible] ಅಂಡ್ ಸನ್ಸ್, [illegible] ತುಮಕೂರು—ಟಿ. ಆರ್. ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್. [illegible]—ಎಂ. ಎಲ್. ಮಂಜಪ್ಪಶೆಟ್ಟಿ. [illegible]—ಶ್ರೀ [illegible] ಮತ್ತು [illegible] ಬ್ರದರ್ಸ್. ದಾವಣಗೆರೆ—[illegible] ಮತ್ತು ಕೆ. [illegible] ಶೆಟ್ಟಿ ಅಂಡ್ ಬ್ರದರ್ಸ್.

ವಿವಿಧ ವರ್ತಮಾನ

ಶಾಸನ ಸಭೆ

ಮೈಸೂರು ಶಾಸನ ಸಭೆಗೆ 11 ಜನ ಕಾಂಗ್ರೆಸ್ ಸದಸ್ಯರು ರಾಜೀನಾಮೆ ಇತ್ತ [illegible]. ಸರ್ಕಾರದವರು ಅವರ ರಾಜೀನಾಮೆಗಳನ್ನು ಅಂಗೀಕರಿಸಿರುತ್ತಾರೆ. [illegible] ಉಪಚುನಾವಣೆಯು ಜನವರಿ 6 ನೇ [illegible] ಫಲಿತಾಂಶವು 17 ನೇ [illegible] ಹೊರಬೀಳುವುದಾಗಿ ಗೊತ್ತಾಗಿದೆ.

ಸಿ. ಎಂ. ಚೆರಿಯನ್ನನವರು

ಮೈಸೂರಿನಲ್ಲಿ ಚೀಫ್ ಎಲೆಕ್ಟ್ರಿಕಲ್ ಇಂಜಿನಿಯರಾಗಿದ್ದ ಶ್ರೀ. ಎಂ. ಸಿ. ಚೆರಿಯನ್ 1938 ನೇ ಜನವರಿಯಿಂದ ಸರ್ಕಾರದ [illegible] ಕಾರ್ಯದಲ್ಲಿ ಚೀಫ್ ಎಂಜಿನಿಯರ ಕೆಲಸವನ್ನು ಮಾಡಲಿರುವುದಾಗಿ ಗೊತ್ತಾಗಿದೆ.

ಸ್ವಾಮಿ ಶ್ರದ್ಧಾನಂದರವರು

ದಾವಣಗೆರೆ ಸ್ವಾಮಿ ಶ್ರದ್ಧಾನಂದರವರ [illegible] ಮೈಸೂರು [illegible] ವರೆಗೆ ಸಭೆ, ಭಾಷಣ, ಸಂಗೀತ, ಭಜನೆ ಇತ್ಯಾದಿ [illegible] ಗಳನ್ನು ನೆರವೇರಿಸಿದರು.

ಜನರ ಕೂಡುವೇಳೆ

ಮೈಸೂರು ಶಾಸನ ಸಭೆಗೆ ಕಾಂಗ್ರೆಸ್ಸಿನ [illegible] ಅನೇಕ ಕಾಂಗ್ರೆಸ್ ಸದಸ್ಯರು ರಾಜೀನಾಮೆಯಿತ್ತರಷ್ಟೆ. ಈ ಸಂದರ್ಭದಲ್ಲಿ [illegible] ಶ್ರೀ [illegible] ರಾಜೀನಾಮೆ ಕೊಟ್ಟಿಲ್ಲ. ಅವರು [illegible] ಕಾಂಗ್ರೆಸ್ ಬೋರ್ಡಿನವರು [illegible] ರಾಜೀನಾಮೆಯನ್ನು ಕೊಡಬೇಕೆಂದು [illegible] ಅವರನ್ನು ಕೇಳಿದ್ದಾರೆ.

"ಬೃಂದಾವನ"

ಡಿಸೆಂಬರ್ 19ನೆಯ ತಾರೀಖು ಗುರುವಾರದಿಂದ 11ನೆಯ [illegible] ಜನವರಿ [illegible] (ಎರಡು ದಿವಸಗಳೂ ಸೇರಿ) [illegible] ರಾತ್ರಿ 10 ಗಂಟೆಯವರೆಗೆ [illegible] ಬೃಂದಾವನದಲ್ಲಿ [illegible] ವಿವಿಧ [illegible] ಅಲಂಕರಿಸಿ [illegible].

[illegible]

ಹರಿಕಥೆ ದಾಸರಿಗೆ ಜುಲ್ಮಾನೆ

ಕೊಳ್ಳೇಗಾಲದಲ್ಲಿ ಪೋಲೀಸಿನವರ [illegible] ಆಪಾದನೆಯ ಮೇಲೆ ಹರಿಕಥೆ ದಾಸರಾದ ಶ್ರೀ। ಶಾಸ್ತ್ರಿ ಎಂಬುವರಿಗೆ 40 ರೂ ಗಳ ಜುಲ್ಮಾನೆಯನ್ನು ವಿಧಿಸಿರುತ್ತಾರೆ. ಅವರ ಮೇಲೆ ಪೋಲೀಸ್ ರೆಗ್ಯುಲೇಷನ್ 39 ನೇ ರೀತಿ ಚಾರ್ಜ್ ಷೀಟು ಹಾಕಲಾಗಿತ್ತೆಂದೂ ತಿಳಿದು ಬಂದಿದೆ.

ರಾಜದ್ರೋಹಕ್ಕೆ ಶಿಕ್ಷೆ

ಚಿತ್ರದುರ್ಗದ ಕಾಂಗ್ರೆಸ್ ಮುಖಂಡರಾದ ಶ್ರೀ। ನಂಜಪ್ಪ ಕೊಟ್ಟೂರಿನವರ ಮೇಲೆ ನಡೆಯುತ್ತಿದ್ದ ರಾಜದ್ರೋಹದ ಮೊಕದ್ದಮೆಯಲ್ಲಿ ಮ್ಯಾಜಿಸ್ಟ್ರೇಟರು ಅವರಿಗೆ ಒಟ್ಟು ಎರಡು ವರ್ಷ ಸಜವನ್ನು 750 ರೂಪಾಯಿ ಜುಲ್ಮಾನೆಯನ್ನು ವಿಧಿಸಿರುವರು. ಅವರ ಮೇಲೆ ಎರಡು ಆಪಾದನೆಗಳಾಗಿದ್ದವು.

ವಕೀಲರಿಗೆ ಸಸ್ಪೆಂಡು

ಬೆಂಗಳೂರಿನ ಪ್ಲೀಡರಾದ ಶ್ರೀ। ಎಸ್. ವರದಯ್ಯಂಗಾರ್ಯರವರಿಗೆ ಶ್ರೀ ನ್ಯಾಯಾಧೀಶರಾದ ಮಿ। ಫೈಲಿಯವರೂ ಮತ್ತು ಶಂಕರನಾರಾಯಣರಾಯರೂ 6 ತಿಂಗಳ ಕಾಲ ವಕೀಲಿ ಮಾಡಕೂಡದೆಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ವೃತ್ತಿಯಲ್ಲಿ ದುರ್ನಡತೆಯೇ ಇದಕ್ಕೆ ಕಾರಣವೆಂದು ಗೊತ್ತಾಗಿದೆ.

ಕರ್ಣಾಟಕ ಸಂಘ

ದೊಡ್ಡಬಳ್ಳಾಪುರದ ಕರ್ಣಾಟಕ ಸಂಘದ ಪ್ರಯುಕ್ತ ಡಿಸೆಂಬರ್ 13 ನೇ ಸೋಮವಾರ ಪ್ರಾಥಮಿಕ ಶಾಲಾ ಪ್ರಾಂಗಣದಲ್ಲಿ ದೊಡ್ಡಬಳ್ಳಾಪುರದ ವಿದ್ವಾನ್ ಕೆ. ವೆಂಕಟರಮಣಶಾಸ್ತ್ರಿಗಳವರ ಅತ್ಯಮೋಘವಾದ ಹರಿಕಥೆಯು ನಡೆಯಿತು.

ವಾರ್ಷಿಕೋತ್ಸವ

ಕಳೆದ ಗುರುವಾರ ಬೆಂಗಳೂರು ಸೆಂಟ್ರಲ್ ಕಾಲೇಜಿನ [illegible] ವಾರ್ಷಿಕೋತ್ಸವವು ಅತ್ಯಂತ ವೈಭವದಿಂದ ನಡೆಯಿತು. ಮದರಾಸಿನ ಪ್ರಧಾನ ಸಚಿವರಾದ ಶ್ರೀ। ಸಿ. ರಾಜಗೋಪಾಲಾಚಾರಿಯವರು ಅಗ್ರಾಸನವನ್ನು ವಹಿಸಿದ್ದರು. ಅನೇಕ ಜನ ಕಾಲೇಜಿನ ಹಳೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾರ್ಥಿಗಳ ಕರ್ತವ್ಯವನ್ನು ಕುರಿತು ಆಚಾರ್ಯರು ಅಮೋಘವಾದ ಭಾಷಣವನ್ನು ಮಾಡಿದರು. ಆಚಾರ್ಯರು ಮಾರನೇ ದಿನ ಮೈಸೂರಿಗೂ ಭೇಟಿಯಿತ್ತರು. ಇಲ್ಲಿನ ವಿಶ್ವವಿದ್ಯಾನಿಲಯ ನೋಡಿದರು. ವಿಶ್ವವಿದ್ಯಾನಿಲಯದ ಸಂಘದಲ್ಲಿ ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನು ಮಾಡಿ ಭಾಷಣ ಮಾಡಿದರು.

ಶ್ರೀ। ಚಂಗಲರಾಯ ರೆಡ್ಡಿಯವರಿಗೆ ಎಚ್ಚರಿಕೆ

ಕೋಲಾರದ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ। ಅಪ್ಪಾಜಿ ಗೌಡರವರು ಮೈಸೂರು ಕಾಂಗ್ರೆಸ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯ ರೆಡ್ಡಿಯವರಿಗೆ ಅವರು ಸರ್ಕಾರದ ವಿಷಯದಲ್ಲಿ ಜನರಿಗೆ ದ್ವೇಷ ಉಂಟಾಗುವಂತೆಯೂ, ಸರ್ಕಾರದಲ್ಲಿ ಮತ್ತು ಅಧಿಕಾರಿ ವರ್ಗದಲ್ಲಿ ಅಸಮಾಧಾನವಾಗುವ ಹಾಗೂ ಭಾಷಣ ಮಾಡಿರುತ್ತಾರೆಂದೂ ಮತ್ತು ಇನ್ನು ಮುಂದೆ ಈ ತರಹ ಭಾಷಣ ಮಾಡಕೂಡದೆಂದೂ ಮತ್ತು ಹಾಗೇನಾದರೂ ಮಾಡಿದಲ್ಲಿ ಕ್ರಿಮಿನಲ್ ಕ್ರಮಕ್ಕೆ ಒಳಪಡುವರೆಂದೂ ಒಂದು ಎಚ್ಚರಿಕೆಯನ್ನು ಜಾರಿಮಾಡಿದ್ದಾರೆ.

ಕಾಗದದ ಪೊಟ್ಟಣದಲ್ಲಿ ಮರಿ

ಡಿ. ವಿಲಿಯಮ್ಸ್ ಎಂಬುವಳು ಒಂದು ಬಾರಿ [illegible] ಕೋಳಿ ಮೊಟ್ಟೆಗಳನ್ನು ಒಂದು [illegible] ಸ್ಥಳದಲ್ಲಿ ಒಂದು ಕಾಗದದ ಚೀಲದಲ್ಲಿಟ್ಟಿದ್ದಳು. ಒಂದು ವಾರದನಂತರ ಆ ಚೀಲವನ್ನು ತೆಗೆದು ನೋಡಿದ್ದರಲ್ಲಿ ಹನ್ನೊಂದು ಮೊಟ್ಟೆಗಳೂ, ಒಂದು ಕೋಳಿ ಮರಿಯೂ ಇದ್ದಿತಂತೆ.

ಮಹಲ್‌ಗಳ ರಾಜ

[illegible] ನೇ ಇಸ್ವಿಯಿಂದ [illegible] ಇಸವಿಯವರೆಗೆ ಇಂಗ್ಲೆಂಡಿನಲ್ಲಿ [illegible] ಎಂಬ ದೊರೆಯು ರಾಜ್ಯಭಾರ ಮಾಡುತ್ತಿದ್ದನು. ಇವನಿಗೆ ಮಹಲ್‌ಗಳ ರಾಜನೆಂಬ ಬಿರುದು ಕೊಟ್ಟಿದ್ದರು. ಕಾರಣವೇನೆಂದರೆ ಇವನು ಪ್ರತಿವರ್ಷವೂ ತನ್ನ ದೇಶದಲ್ಲಿ ಒಂದೊಂದು ಮಹಲನ್ನು ಕಟ್ಟಿಸುತ್ತಿದ್ದನು. ಇವನು ತನ್ನ [illegible] ವರ್ಷದ ಆಡಳಿತದಲ್ಲಿ [illegible] ಮಹಲ್‌ಗಳನ್ನು ಕಟ್ಟಿಸಿದನಂತೆ!

ಕಾಂಗ್ರೆಸ್ ಪ್ರಚಾರ

ಮಂಡ್ಯದ ಸಕ್ಕರೆ ಕಾರ್ಖಾನೆಯಿಂದ ರಾಜಕೀಯ ರಂಗಕ್ಕೆ ಸೇರಿದರೆಂದು [illegible] ಮಾಡಲ್ಪಟ್ಟ ಶ್ರೀ। ಕಳಲೆ ಎಂ. ಎಸ್. ಶ್ರೀನಿವಾಸರಾಯರು ಮತ್ತು ಗಣಪತಿಶಾಸ್ತ್ರಿಗಳೊಡನೆ ಸಾಲಿಗ್ರಾಮದಲ್ಲೂ ಮತ್ತು ಹಳ್ಳಿಗಳಲ್ಲೂ ಕಾಂಗ್ರೆಸ್ ಪ್ರಚಾರ ಮಾಡಿದರು. ಇವರಿಗೆ ಬೆಂಗಾವಲು ಬಲವಾಗಿತ್ತು. ನಾಲ್ಕು ಜನ ಪೋಲೀಸರು ಇವರ ಜೊತೆಯಲ್ಲಿ ಬರುತ್ತಿದ್ದರು. ಒಬ್ಬರು ಮಾತ್ರ ಜೊತೆಯಲ್ಲಿರುತ್ತಿದ್ದರು. ಪೋಲೀಸರು ಜನಗಳನ್ನು ಸೇರಬೇಡಿ ಭಾಷಣ ಕೇಳಬೇಡಿ ಎಂದೂ ಹೇಳುತ್ತಾ ಬಂದು ಕಾಂಗ್ರೆಸ್ಸಿನ ವಿಷಯವನ್ನು ಕೇಳುತ್ತಿದ್ದರು. ಯಾವ ಕಡೆಯಲ್ಲಿಯೂ ೫೦೦ ಕ್ಕೆ ಕಮ್ಮಿ ಜನರಿರಲಿಲ್ಲ. ಮಿರ್ಲೆ, ಸಾಲಿಗ್ರಾಮ ಇವುಗಳಲ್ಲಿ ಸುಮಾರು ೫೦೦೦ ಜನರು ಸೇರಿದ್ದರು. ಈ ಪ್ರಾಂತ್ಯದಲ್ಲಿ ಪ್ರಚಾರವಾದದ್ದೇ [illegible]. ಆದರೆ ಸರ್ಕಾರದವರು ಇವರ ಮೇಲೆ [illegible]. ಸಾಲಿಗ್ರಾಮದ ಪ್ರಜೆಗಳು ಗುಂಪು ಗುಂಪಾಗಿ [illegible]. ಇವರು ಸಾಲಿಗ್ರಾಮದ ಪ್ರಾಂತ್ಯದಲ್ಲಿ 12-12-37 ರಿಂದ 21-12-37 ವರೆಗೆ ಪ್ರಚಾರ ಮಾಡಿದರೆಂದು ತಿಳಿದು ಬಂದಿದೆ.

ನಂಜನಗೂಡು ವರ್ತಮಾನ

[illegible]—ಆಮಲ್ದಾರರವರ ಪಾರ್ಟಿಯಿಂದ ಈ ಬಾರಿ ಉತ್ಸವವು ಕಳೆದ ವರ್ಷಕ್ಕಿಂತಲೂ ವೈಭವದಿಂದ ನಡೆಯಿತು. ಇವರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರವರ ಪರವಾಗಿಯೂ, ಸರ್ಕಾರದವರ ಪರವಾಗಿಯೂ, ಕಾಂಗ್ರೆಸ್ಸಿಗೆ ವಿರೋಧವಾದ ಚಳುವಳಿಯನ್ನು ಹೂಡಿದ್ದಾರೆ. ಗ್ರಾಮಾಂತರಗಳಲ್ಲಿ ತಮ್ಮಿಂದಾದಷ್ಟು [illegible] ಜನಗಳಿಗೆ ಉಪಕಾರ ಮಾಡುವ ಸ್ವಭಾವ ಉಳ್ಳವರಾದ್ದರಿಂದ ಇವರ ಮಾತಿನಲ್ಲಿ ಜನಗಳಿಗೆ ಗೌರವವಿದ್ದಂತೆ ಕಾಣುವುದು.

ಕಾಂಗ್ರೆಸ್ ಪ್ರಚಾರಕಾರ್ಯವು ಕಮ್ಮಿಯಾಗಿದೆ. ಜನರು ವಿಚಾರವಂತರಾಗಿದ್ದಾರೆ. ಈ ಪ್ರಚಾರದಿಂದ ಖಾದಿ ವ್ಯಾಪಾರಕ್ಕೆ ಬಹುಮಟ್ಟಿಗೆ ಉತ್ತೇಜನ ದೊರೆತಂತಾಗಿದೆ.

ಜನವರಿ ಮಧ್ಯಭಾಗಕ್ಕೆ ಕರ್ನಾಟಕ ಸಂಘದ ವಾರ್ಷಿಕೋತ್ಸವವು ನೆರವೇರುವುದೆಂದೂ ಕರ್ನಾಟಕ ಸಾಹಿತ್ಯೋತ್ಸವವನ್ನು ಸಹ ನೆರವೇರಿಸುವವರಾಗಿರುವರೆಂದೂ ಕೇಳುತ್ತೇವೆ. [illegible]

ಆಕ್ಷೇಪಣೆ

ಅರಕಲಗೂಡು ತಾ। ರಾಮನಾಥಪುರದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ರಥೋತ್ಸವ ನಡೆದ ಕಾಲದಲ್ಲಿ ಸರ್ಕಾರಿ ಸಂತರ್ಪಣೆ ನಡೆದ ದಿವಸ ಭೋಜನಕ್ಕಾಗಿ ಹೋಗಿದ್ದ ಕೆಲವರನ್ನು ಅಲ್ಲಿನ ನೌಕರರು ತಿರಸ್ಕಾರದಿಂದ ಕಂಡರೆಂದೂ ಅವರಿಗೆ ಭೋಜನವನ್ನು ಮಾಡಿಸಲಿಲ್ಲವೆಂದೂ [illegible] ಸೂಚಿಸಿ ಒಂದು ಫಿರ್ಯಾದು ಬಂದಿದೆ. ಇದನ್ನು ಘನಸರ್ಕಾರದವರು ವಿಚಾರಿಸಿ ತಕ್ಕ ಬಂದೋಬಸ್ತು ಮಾಡುವರೆಂದು ಕೋರಲ್ಪಟ್ಟಿದೆ.

ಆರನೆಯ ವರ್ಷಾರಂಭ

ಜನವರಿ ೧೯೩೮

ನಗುವ-ನಂದ

ಸಚಿತ್ರ ಮಾಸ ಪತ್ರಿಕೆ

"Naguva-Nanda"

Chamarajpet, Bangalore City

ಸಾಧ್ವಿ
೨೭—೧೨—೩೭ ನೇ ಸೋಮವಾರ

ಸಂಸ್ಥಾನಗಳ ಸಮಸ್ಯೆ

ಸ್ವಾಭಾವಿಕ ದೇಶೀಯ ಸಂಸ್ಥಾನಗಳ ಸಮಸ್ಯೆಯು ಪ್ರಾಮುಖ್ಯತೆಗೆ ಬಂದಿದೆ. ಈ ಸಂಸ್ಥಾನಗಳು ಭರತಖಂಡದ ಮೂರನೇ ಒಂದು ಭಾಗ ಪ್ರದೇಶವನ್ನು ಆಕ್ರಮಿಸಿವೆ. ಅವುಗಳ ಸಮಸ್ಯೆಯು ಇತ್ಯರ್ಥವಾಗದೆ ಇಡೀ ಭರತಖಂಡದ ಸಮಸ್ಯೆಯು ತೀರ್ಮಾನವಾಗುವಂತಿಲ್ಲ. ಹಿಂದೂಸ್ಥಾನಕ್ಕೆ ಪೂರ್ಣ ಸ್ವರಾಜ್ಯವು ಬರುವಂತಿಲ್ಲ.

ಐವತ್ತು ವರ್ಷಗಳ ಕಾಂಗ್ರೆಸ್ ಚಳುವಳಿಯಿಂದ ಬ್ರಿಟಿಷ್ ಇಂಡಿಯದಲ್ಲಿ ಪ್ರಾಂತಿಕ ಸ್ವಾತಂತ್ರ್ಯವು ಸ್ಥಾಪಿತವಾಗಿದೆ. ಏಳು ಪ್ರಾಂತಗಳು ಕಾಂಗ್ರೆಸ್ಸಿನ ಮಂತ್ರಿಗಳಿಂದಲೇ ಆಳಲ್ಪಡುತ್ತಿವೆ. ಅಲ್ಲಿ ಅನೇಕ ಪ್ರಜಾಹಿತಕರವಾದ ನಿರ್ಮಾಣಗಳು ಆಗುತ್ತಿವೆ. ಜನರ ಕುಂದುಕೊರತೆಗಳು ನಿವಾರಣೆಯಾಗುತ್ತಿವೆ. ಕಾಂಗ್ರೆಸ್ ಮಂತ್ರಿಗಳಿಲ್ಲದ ಇತರ ಕೆಲವು ಪ್ರಾಂತ್ಯಗಳಲ್ಲೂ ಸಹ ಪ್ರಗತಿದಾಯಕವಾದ ಬದಲಾವಣೆಗಳು ಆಗುತ್ತಿವೆ. ಒಟ್ಟಿನಲ್ಲಿ ಬ್ರಿಟಿಷ್ ಇಂಡಿಯವು ರಾಜಕೀಯ ಸೋಪಾನದಲ್ಲಿ ಮುಂದೆ ಇರುತ್ತಿದೆ.

ಆದರೆ ದೇಶೀಯ ಸಂಸ್ಥಾನಗಳಿಗೆ ಇದು ಅನ್ವಯಿಸುವುದಿಲ್ಲ. ಅಲ್ಲಿ ಯಾವ ರಾಜಕೀಯ ಸುಧಾರಣೆಗಳೂ ಕೊಡಲ್ಪಟ್ಟಿಲ್ಲ. ಕೊಡುವ ಪ್ರಸ್ತಾಪವೂ ಇಲ್ಲ. ಇಷ್ಟೇ ಅಲ್ಲದೆ ಇತ್ತೀಚೆಗೆ ಈ ಸಂಸ್ಥಾನಗಳಲ್ಲಿ ದಿನೇ ದಿನೇ ಪ್ರಜ್ಞಾವಂತಿಕೆಯ ಜ್ವಾಲೆಯು ಎಲ್ಲಿ ನೋಡಿದರೂ ಹಬ್ಬುತ್ತಿದೆ. ಕೆಲವು ಸಂಸ್ಥಾನಗಳಲ್ಲಿ ಕಾಂಗ್ರೆಸ್ಸಿನ ಸಮಿತಿಗಳು ಹುಟ್ಟಿವೆ. ಇನ್ನು ಕೆಲವು ಕಡೆ ರಾಜ್ಯ ಮುಖಂಡರಿಗೆ ಶಿಕ್ಷೆ, ಇನ್ನಿತರ ಕಡೆಗಳಲ್ಲಿ ಸಂಘ ನಿಷೇಧ, ಸಭಾ ಬಂಧನಗಳು. ಹೀಗೆ ದೇಶೀಯ ಸಂಸ್ಥಾನಗಳೆಲ್ಲವೂ ರಾಷ್ಟ್ರೀಯ ಚಳವಳಿಯನ್ನು ಪ್ರತಿಭಟಿಸಲು ಒಂದು ಒಕ್ಕೂಟವನ್ನು ಮಾಡುವವೋ ಏನೋ ಎಂದು ಭೀತಿಯುಂಟಾಗುತ್ತಿದೆ. ಇಂದಿನ ಪರಿಸ್ಥಿತಿಯಲ್ಲಿ ಸಂಸ್ಥಾನಗಳು ತಮ್ಮ ವಕ್ರಮಾರ್ಗಗಳಿಂದ ಇಡೀ ದೇಶದ ಪ್ರಗತಿಯನ್ನೇ ಅಡ್ಡಿಪಡಿಸಬಹುದು. ಇದೊಂದು ದೊಡ್ಡ ಅಪಾಯ. ಬ್ರಿಟಿಷ್ ಇಂಡಿಯದ ಮುಖಂಡರು ಬಹಳ ಕಷ್ಟಪಟ್ಟು ಗಳಿಸಿರುವ ರಾಷ್ಟ್ರೀಯ ಕಾರ್ಯಸಾಧನೆಯು ಸಂಸ್ಥಾನಗಳ ರೀತಿನೀತಿಗಳಿಂದ ಕಷ್ಟತರವಾಗಿ ಪರಿಣಮಿಸಬಹುದು. ಆ ದೃಷ್ಟಿಯಿಂದ ಎಲ್ಲರ ದೃಷ್ಟಿಯಲ್ಲಿಯೂ ಸಂಸ್ಥಾನಗಳ ಸಮಸ್ಯೆಯು ಪ್ರಾಮುಖ್ಯತೆಯನ್ನು ಪಡೆದಿದೆ. ಇದು ಒಂದು ಶುಭ ಚಿಹ್ನೆಯೆಂದೇ ಹೇಳಬಹುದು. ಏಕೆಂದರೆ ಇದುವರೆಗೆ ಭರತಖಂಡದ ಸಮಸ್ಯೆಗಳೆಂದರೆ ಬರೀ ಬ್ರಿಟಿಷ್ ಭಾರತದ ಸಮಸ್ಯೆಗಳು ಮಾತ್ರ ಆಗಿದ್ದುವು. ಇನ್ನು ಮೇಲೆ ಇಡೀ ದೇಶದ ಎಲ್ಲ ಸಮಸ್ಯೆಗಳನ್ನೂ ಒಟ್ಟಾಗಿ ಪರಿಶೀಲಿಸುವಂತಾಗಿದೆ.

ಭರತ ಖಂಡದ ಸ್ವಾತಂತ್ರ್ಯ ಸಾಧನೆಯಲ್ಲಿ ಎಲ್ಲಾ ಭಾರತೀಯರೂ ಹೇಗೆ ಒಗ್ಗಟ್ಟಿನಿಂದ ಕಾರ್ಯ ಸಾಧನೆಯನ್ನು ಮಾಡಬೇಕೋ ಹಾಗೆಯೇ ಸಂಸ್ಥಾನಗಳ ರಾಜಕೀಯ ಸ್ವಾತಂತ್ರ್ಯದಲ್ಲಿಯೂ ಸಮಸ್ತ ಭಾರತೀಯರೂ ಸಹಕರಿಸಬೇಕೆಂದು ಅರಿಯುವ ಕಾಲವು ಬಂದಿದೆ.

ಈ ಪ್ರಯತ್ನಗಳನ್ನು ತಡೆಗಟ್ಟಲು ಪ್ರಯತ್ನಿಸುವ ಅನೇಕ ಸ್ವಾರ್ಥಪರರ ಗುಂಪುಗಳು ಅಲ್ಲಲ್ಲಿ ಉದ್ಭವಿಸುತ್ತಿವೆ. ರಾಜಕೀಯ ಸುಧಾರಣೆಗಳನ್ನು ಕೊಡಲು ದೇಶೀಯ ರಾಜರುಗಳಿಗೆ ಅಧಿಕಾರವೇ ಇಲ್ಲವೆಂದು ಕೆಲವರು ವಾದಿಸುತ್ತಾರೆ. ರಾಜರುಗಳು ಬ್ರಿಟಿಷ್ ಸರ್ಕಾರದೊಡನೆ ಮಾಡಿಕೊಂಡಿರುವ ಕೌಲು ಕರಾರುಗಳಿಂದ ಅವರಿಗೆ ಈ ಅಧಿಕಾರವೇ ಇಲ್ಲವೆಂದು ಕೆಲವರ ಅಭಿಮತ. ಸ್ವದೇಶೀಯರಾದ ರಾಜರುಗಳು ಆಳುತ್ತಿರುವ ಸಂಸ್ಥಾನಗಳಿಗೆ ಸ್ವರಾಜ್ಯ ಅಥವಾ ಜವಾಬ್ದಾರಿ ಸರ್ಕಾರದ ಹಂಬಲುಗಳೇಕೆ ಎಂದು ಇನ್ನು ಕೆಲವರ ಪ್ರಶ್ನೆ. ರಾಜಕೀಯ ಸುಧಾರಣೆಗಳನ್ನು ಗಳಿಸಲು ಪರಕೀಯವಾದ ಕಾಂಗ್ರೆಸ್ಸಿನಂತಹ ಸಂಸ್ಥೆಗಳ ಸಂಪರ್ಕವೇಕೆ ಎಂದು ಇನ್ನು ಕೆಲವರ ಸಂಶಯ.

ಇವುಗಳೆಲ್ಲಾ ಫೆಡರೇಷನ್ ಎಂಬುದಾಗಿ ಬರಲಿರುವ ನೂತನ ರಾಜ್ಯಾಂಗ ಶಾಸನವೇ ಉತ್ತರ. ಈ ಶಾಸನ ಪದ್ಧತಿಯು ಜಾರಿಗೆ ಬಂದಾಗ ಬ್ರಿಟಿಷ್ ಭಾರತ ಅಥವಾ ದೇಶೀಯ ಭಾರತವೆಂಬ ಭೇದಗಳು ಉಳಿಯುವುದಿಲ್ಲ. ಎಲ್ಲರೂ ಅದಕ್ಕೆ ತಲೆಬಾಗಬೇಕು. ಆದರೆ ಸದರಿ ಫೆಡರೇಷನ್ನಿನಲ್ಲಿ ಸಂಸ್ಥಾನದ ಪ್ರಜೆಗಳಿಗೆ ಪ್ರಾತಿನಿಧ್ಯವಿರಬೇಕು. ಮತ್ತು ರಾಜರುಗಳು ಸಾಂಕರ ಪ್ರವರ್ತಕರಾಗಬೇಕು. ಸಂಸ್ಥಾನದ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರವನ್ನು ಕೊಡಬೇಕು. ಪ್ರಜೆಗಳ ಜನ್ಮಸಿದ್ಧ ಹಕ್ಕುಗಳಿಗೆ ರಕ್ಷಣೆ ಕೊಡಬೇಕು. ದೇಶದ ಭಾರಿ ಸ್ತಂಭವಾದ ರೈತರಿಗೆ ರಾಜ್ಯಾಡಳಿತದಲ್ಲಿ ಪ್ರವೇಶಿಸಲು ಅಧಿಕಾರವಿರಬೇಕು. ಹೀಗೆ ಮಾಡಿದರೆ ಸಂಸ್ಥಾನಗಳ ಸಮಸ್ಯೆಯು ಬಗೆಹರಿಯುವುದು. ಇದಕ್ಕೆ ಎಲ್ಲರೂ ಪ್ರಯತ್ನಿಸಲೆಂದು ಹಾರೈಸೋಣ.

ದೇಶಮುಖಂಡರ ಆಗಮನ

ಡಾ॥ ಪಟ್ಟಾಭಿ ಮತ್ತು ಮೊಹತಾರವರಿಗೆ ಸಂಸ್ಥಾನದ ಸ್ವಾಗತ

ಅಖಿಲ ಭಾರತ ದೇಶೀಯ ಸಂಸ್ಥಾನ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಡಾಕ್ಟರ್ ಪಟ್ಟಾಭಿ ಸೀತಾರಾಮಯ್ಯನವರೂ, ಕಾರ್ಯದರ್ಶಿಗಳಾದ ಶ್ರೀ॥ ಬಲವಂತರಾಯ್ ಮೊಹತಾರವರೂ ಕಳೆದವಾರ ನಮ್ಮ ಸಂಸ್ಥಾನದಲ್ಲೆಲ್ಲಾ ಪ್ರವಾಸ ಮಾಡಿದರು. ಇಲ್ಲಿನ ಸ್ಥಿತಿಗತಿಗಳನ್ನೆಲ್ಲಾ ಖುದ್ದಾಗಿ ಪರಿಶೀಲಿಸಿದರು. ಪ್ರಮುಖರೊಡನೆ ಮಾತುಕತೆಗಳನ್ನು ನಡೆಸಿದರು. ಎಲ್ಲಾ ಕಡೆಗಳಲ್ಲಿಯೂ ಪ್ರಚಂಡ ಸಭೆಗಳಲ್ಲಿ ಭಾಷಣಗಳನ್ನು ಮಾಡಿದರು. ಅವರ ಭಾಷಣಗಳಿಗೆ ಪ್ರತಿಯೊಂದು ಊರಿನಲ್ಲಿಯೂ ಸಹಸ್ರಾರು ಜನ ಸ್ತ್ರೀಯರೂ, ಪುರುಷರೂ, ತರುಣ ತರುಣಿಯರೂ ಬಂದು ಅವರ ಹಿತೋಪದೇಶವನ್ನು ಕೇಳಿ ಆನಂದಪಟ್ಟರು. ಅವರ ಭಾಷಣಗಳ ವೈಖರಿಯೂ, ಬೋಧನೆಗಳ ಕ್ರಮವೂ ಅತ್ಯಂತ ಅಪೂರ್ವವಾಗಿದ್ದುವು. ಇಂತಹ ಭಾರಿ ಸಭೆಗಳು ನಮ್ಮ ಸಂಸ್ಥಾನದಲ್ಲಿ ವಿಶೇಷವಾಗಿ ನಡೆದಿಲ್ಲ. ಮಹಾತ್ಮಾ ಗಾಂಧಿಯವರೂ ಪಂಡಿತ ಜವಾಹರಲಾಲರೂ ಬಂದಿದ್ದಾಗ ಮಾತ್ರ ನಡೆದಿದ್ದುವು. ಇವರ ಭಾಷಣಗಳೂ ಸಹ ಬಹಳ ದೀರ್ಘವಾಗಿಯೂ ಅನೇಕ ಕಠಿಣ ಸಮಸ್ಯೆಗಳನ್ನೊಳಗೊಂಡವುಗಳಾಗಿಯೂ ಇದ್ದುವು. ಆದರೂ ಎಳೆಯ ಮಕ್ಕಳಿಗೂ ಮನದಟ್ಟಾಗುವಂತೆ ಎಲ್ಲಾ ಅಂಶಗಳನ್ನೂ ಬಹಳ ಸ್ವಾರಸ್ಯವಾಗಿ ತಿಳಿಸುತ್ತಿದ್ದರು. ಮೊದಲಿನಿಂದ ಕಡೆಯವರೆಗೂ ಹಾಸ್ಯರಸವಾಗಿಯೂ ಉತ್ಸಾಹಕರವಾಗಿಯೂ ಭಾಷಣ ಮಾಡುತ್ತಿದ್ದರು.

ಒಂದೊಂದು ಸಭೆಯೂ ಮೂರು ನಾಲ್ಕು ಗಂಟೆಗಳ ಕಾಲ ನಡೆಯುತ್ತಿತ್ತು. ರಾತ್ರಿ ಅನೇಕ ವೇಳೆಯಾಗುವವರೆಗೆ ಜರುಗುತ್ತಿತ್ತು. ಮಧ್ಯಾಹ್ನದ ಉರಿಬಿಸಿಲಿನಲ್ಲಿ ಆಗುತ್ತಿತ್ತು. ಆದರೂ ಸಹಸ್ರಾರು ಜನರು ಕುಳಿತ ಸ್ಥಳಗಳನ್ನು ಬಿಡದೆ ಸಭೆಯು ಮುಗಿಯುವವರೆಗೂ ಸಂಪೂರ್ಣವಾದ ಗಮನದಿಂದ ಕೇಳುತ್ತಿದ್ದರು. ವರ್ತಕರು ತಮ್ಮ ಅಂಗಡಿಮುಂಗಟ್ಟುಗಳನ್ನು ಮುಚ್ಚಿಕೊಂಡು ಬಂದು ಸೇರುತ್ತಿದ್ದರು. ಸ್ತ್ರೀಯರು ಮನೆ ಕೆಲಸಗಳನ್ನು ಬೇಗನೆ ಮುಗಿಸಿಕೊಂಡು ಬಂದು ಸೇರುತ್ತಿದ್ದರು. ಮಕ್ಕಳೂ ಸಹ ಎಲ್ಲರಿಗಿಂತ ಹೆಚ್ಚಿನ ಉತ್ಸಾಹದಿಂದ ಎಲ್ಲರಿಗಿಂತಲೂ ಮುಂಚೆ ಸಭೆಗಳಲ್ಲಿ ಬಂದು ಸೇರುತ್ತಿದ್ದರು.

ಡಾ॥ ಪಟ್ಟಾಭಿಯವರ ಭಾಷಣದ ರೀತಿಯೇ ಒಂದು ವಿಚಿತ್ರ. ಮಾತೆತ್ತಿದರೆ ಒಂದು ಕತೆಯನ್ನು ಹೇಳುವುದು ಅವರ ವಾಡಿಕೆ. ಸಾಮಾನ್ಯ ಉಪಮಾನಗಳನ್ನು ಕೊಟ್ಟು ದೊಡ್ಡ ದೊಡ್ಡ ಸಮಸ್ಯೆಗಳನ್ನು ಬಿಡಿಸಿ ಹೇಳುತ್ತಿದ್ದರು. ಇಂಗ್ಲೀಷಿನಲ್ಲಾಗಲೀ ತೆಲುಗಿನಲ್ಲಾಗಲೀ, ಅವರು ಗಂಗಾ ಪ್ರವಾಹದಂತೆ ತಡೆಬಿಡದಿಲ್ಲದೆ ಮಾತನಾಡುವರು. ಸರಸ್ವತಿಯೇ ಅವರ ನಾಲಿಗೆಯಲ್ಲಿ ನಲಿಯುವಳೋ ಎಂಬಂತೆ ಭಾಸವಾಗುತ್ತಿತ್ತು.

ಡಾಕ್ಟರು ದೊಡ್ಡ ವೈದ್ಯ ವಿದ್ಯಾಪ್ರವೀಣರು. ವೈದ್ಯದಿಂದ ಅವರು ಹೇರಳವಾಗಿ ಹಣವನ್ನು ಸಂಪಾದಿಸುತ್ತಿದ್ದರು. ಆದರೆ ದೇಶಸೇವೆಯ ದೀಕ್ಷೆಯನ್ನು ವಹಿಸಿದ ಮೇಲೆ ಅವರು ತಮ್ಮ ಉದ್ಯೋಗವನ್ನು ಬಿಟ್ಟು ತಮ್ಮ ತನು ಮನ ಧನಗಳನ್ನೆಲ್ಲಾ ದೇಶಕ್ಕಾಗಿಯೇ ವಿನಿಯೋಗಿಸುತ್ತಿದ್ದಾರೆ. ಇವರ ಲೇಖನ ಶಕ್ತಿಯು ಅದ್ಭುತವಾದುದು. "ಜನ್ಮಭೂಮಿ" ಯೆಂಬ ಆಂಗ್ಲ ವಾರಪತ್ರಿಕೆಯನ್ನು ಹೊರಡಿಸಿ ಅದರ ಮೂಲಕ ಮಹಾಜನರ ಜ್ಞಾನವಿಕಾಸಕ್ಕೆ ಮಹದುಪಕಾರ ಮಾಡಿದ್ದಾರೆ. ಇವರು ಕಲಾ ಕೌಶಲ್ಯಗಳಲ್ಲಿ ಬಹಳ ಆಸಕ್ತಿಯುಳ್ಳವರು. ನಮ್ಮ ದೇಶದ ಕಲಾ ಸೌಂದರ್ಯಗಳನ್ನೆಲ್ಲಾ ಸಂಪೂರ್ಣವಾಗಿ ಗ್ರಹಿಸಿ ಅವುಗಳನ್ನು ಪುನರುಜ್ಜೀವನಗೊಳಿಸಬೇಕೆಂದು ಪ್ರಯತ್ನಿಸುತ್ತಿರುವರು. ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿ ಅನೇಕ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿರುವರು. ಈಚೆಗೆ ಕಾಂಗ್ರೆಸ್ ಮಹಾಸಭೆಯ ಸುವರ್ಣಮಹೋತ್ಸವದ ಸಮಯದಲ್ಲಿ ಕಾಂಗ್ರೆಸ್ಸಿನ ಇತಿಹಾಸವನ್ನು ಬರೆದಿರುವರು. ಕೆಲವು ದಿನಗಳಿಂದ ದೇಶೀಯ ಸಂಸ್ಥಾನದ ಪ್ರಜೆಗಳ ಅಭ್ಯುದಯಕ್ಕಾಗಿ ಪ್ರಯತ್ನಿಸುತ್ತಿರುವರು.

ಶ್ರೀ॥ ಬಲವಂತರಾಯ್ ಮೊಹತಾರವರು ಭಾವನಗರ ಸಂಸ್ಥಾನದವರು. ಒಳ್ಳೆ ವಿದ್ಯಾವಂತರು, ಸದ್ಗುಣಿಗಳು, ದೇಶಾಭಿಮಾನಿಗಳು. ದೇಶೀಯ ಸಂಸ್ಥಾನದ ಪ್ರಜೆಗಳ ಅಭಿವೃದ್ಧಿಗಾಗಿ ಬಹಳ ಹೆಣಗಾಡುತ್ತಿರುವರು. ಇವರು ಸಂಸ್ಥಾನಗಳ ಸಮಸ್ಯೆಗಳನ್ನೆಲ್ಲಾ ಬಹಳ ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ರಾಜಮಹಾರಾಜರುಗಳ ಮೂಲವನ್ನು ಜಗತ್ತಿನ ಸೃಷ್ಟಿಕಾಲದಿಂದ ಇಂದಿನವರೆಗೆ ಚೆನ್ನಾಗಿ ಅರಿತಿದ್ದಾರೆ. ಬೊಂಬಾಯಿಯಲ್ಲಿ ಸಂಸ್ಥಾನ ಪ್ರಜಾಸಮ್ಮೇಳನದ ಕಾರ್ಯದರ್ಶಿಗಳಾಗಿ ಬಹಳ ಕೆಲಸ ಮಾಡುತ್ತಿರುವರು.

ಇಂತಹ ಮಹನೀಯರುಗಳು ನಮ್ಮ ಸಂಸ್ಥಾನದಲ್ಲಿ ಬಂದು ಜನರ ಹಿತಚಿಂತನೆಯನ್ನು ಮಾಡಲು ಉದ್ಯುಕ್ತರಾದದ್ದು ನಮ್ಮ ಭಾಗ್ಯೋದಯ. ನಮ್ಮ ಸಂಸ್ಥಾನದಲ್ಲೆಲ್ಲಾ ಅವರಿಗೆ ಉಚಿತ ರೀತಿಯಲ್ಲಿ ಸನ್ಮಾನವು ಮಾಡಲ್ಪಟ್ಟಿತು. ರಾಜಧಾನಿಯಲ್ಲಿ ಸುಮಾರು ಹದಿನೈದು ಸಾವಿರ ಜನರು ಸಭೆ ಸೇರಿದ್ದರು. ಅವರಿಗೆ ಬಿನ್ನವತ್ತಳೆಯು ಅರ್ಪಿಸಲ್ಪಟ್ಟಿತು. ಅತಿಥಿಗಳು ಅಮೋಘವಾದ ಭಾಷಣಗಳನ್ನು ಮಾಡಿದರು. ಭಾಷಣದಲ್ಲಿ ರಾಜ ಪ್ರಜೆಗಳ ಸಂಬಂಧ, ದೇಶೀಯ ವಿದ್ಯೆ, ದೇಶೀಯ ಕೈಗಾರಿಕೆಗಳ ಪ್ರೋತ್ಸಾಹ, ಆತ್ಮಾವಲಂಬನೆ, ಸತ್ಯ, ಅಹಿಂಸೆಗಳ ಆವಶ್ಯಕತೆಗಳನ್ನು ಕುರಿತು ಪ್ರಮುಖವಾಗಿ ವಿವರಿಸಿದರು.

ಇಂತಹ ಭಾಷಣಗಳು ವರ್ಷಕ್ಕೊಮ್ಮೆ ಆದರೂ ಬಹಳ ಫಲಕಾರಿಯಾಗುವುವು.

ಗ್ರಾಮಾಧಿಕಾರಿಗಳೂ ಕಾಂಗ್ರೆಸ್ಸೂ

" ಅವರಿಗೂ ವ್ಯಕ್ತಿ ಸ್ವಾತಂತ್ರ್ಯವುಂಟು "

ಒಬ್ಬ ಪಟೇಲರ ಮೇಲೆ ಕಾರ್ಯಾಕ್ರಮ.

ಗೌರೀಬಿದನೂರು ತಾಲ್ಲೂಕು ಕೋಡಿ ಹಳ್ಳಿಯ ಪಟೇಲ್ ಶ್ರೀ ವೆಂಕಟಸ್ವಾಮಿ ಗೌಡರಿಗೆ ಚಿಕ್ಕಬಳ್ಳಾಪುರದ ಸಬ್ ಡಿವಿಷನ್ ಆಫೀಸರ್‌ರವರು ಒಂದು ನೋಟೀಸ್ ಕೊಡುತ್ತಾ ಕಾಂಗ್ರೆಸ್ ಕಾರ್ಯಗಳಲ್ಲಿ ಅವರು ಭಾಗವಹಿಸಿರುವುದಕ್ಕಾಗಿ ಅವರನ್ನು ವಿಚಾರಣೆ ಮಾಡಬೇಕಾಗಿದೆ ಎಂದೂ ಅದ್ದರಿಂದ ೨೬-೧೦-೩೭ ನೇ ತಾರೀಖು ಚಿಕ್ಕಬಳ್ಳಾಪುರಕ್ಕೆ ಬಂದು ತಮ್ಮ ಮುಂದೆ ವಿವರಣೆಯನ್ನು ಕೊಡಬೇಕೆಂದು ತಿಳಿಸಿದ್ದಾರೆ.

ನೋಟೀಸಿನ ಹುಕುಮಿನ ವಿವರವಿದು :—

"ಗೌರೀಬಿದನೂರು ತಾಲ್ಲೂಕು ಕೋಡಿ ಹಳ್ಳಿ ಪಟೇಲ್ ವೆಂಕಟಸ್ವಾಮಿ ಗೌಡ—ನೋಟೀಸ್.

೨೪-೧೦-೩೭ ರಲ್ಲಿ ಗೌರೀಬಿದನೂರಿನಲ್ಲಿ ಒಂದು ಮೀಟಿಂಗ್ ಏರ್ಪಡಿಸಲು ಸಹಾಯಕನಾಗಿ ನಿಂತು ಆ ಮೀಟಿಂಗ್ ನಡೆಸಿದ ಹಾಗೂ, ಶ್ರೀ ಹಂಗಲರಾಯ ರೂ ಮತ್ತು ಇತರರು ಸರಕಾರದ ಆಡಳಿತವನ್ನು ಕುರಿತು ಟೀಕಿಸಿ ಮಾತನಾಡಿದ ಹಾಗೂ ಅಲ್ಲದೆ ನೀವು ತಾ॥ ಕಾಂಗ್ರೆಸ್ ಕಮಿಟಿ ಅಧ್ಯಕ್ಷನಾಗಿ ಚುನಾಯಿತರಾಗಿರುವುದಾಗಿಯೂ ತಿಳಿದು ಬಂದಿರುತ್ತೆ. ಈ ವಿಚಾರವಾಗಿ ನಿಮ್ಮ ತನಿಖೆಯಾಗಬೇಕಾಗಿರುವುದರಿಂದ ೨೬-೧೦-೩೭ ರಲ್ಲಿ ಚಿಕ್ಕಬಳ್ಳಾಪುರದ ಮೊಕ್ಕಾಮಿನಲ್ಲಿ ಖುದ್ದಾಗಿ ಹಾಜರಾಗಬೇಕಾಗುತ್ತೆ.

ಸದರಿ ಪಟೇಲರು ಈ ಕೆಳಗೆ ಕಂಡ ಹೇಳಿಕೆಯನ್ನು ಹಾಜರುಪಡಿಸಿರುವರು :—

" ನಾನು ತಾ॥ ೨೪-೧೦-೩೭ ರಲ್ಲಿ ಗೌರೀಬಿದನೂರಲ್ಲಿ ಕಾಂಗ್ರೆಸ್ ಸಭೆ ಸೇರಿ ಕಾಂಗ್ರೆಸ್ ಚಳುವಳಿಯಲ್ಲಿ ಮುಖ್ಯ ಭಾಗವಹಿಸಿದ್ದೇನೆಂತಲೂ ಮತ್ತು ತಾಲ್ಲೂಕ್ ಕಾಂಗ್ರೆಸ್ ಕಮಿಟಿಗೆ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟಿರುವೆನೆಂತಲೂ ನನ್ನನ್ನು ಪಟೇಲಿ ಕೆಲಸದಿಂದ ಯಾತಕ್ಕೆ ವಜಾ ಮಾಡಕೂಡದೆಂಬ ಬಗ್ಗೆ ನನಗೆ ಕೊಟ್ಟಿರುವ ನೋಟೀಸ್ ಸಂಗತಿಯನ್ನು ತಿಳಿದುಕೊಂಡಿರುತ್ತೇನೆ.

ಗ್ರಾಮಾಧಿಕಾರಿಗಳು ಅಂದರೆ ಪಟೇಲ್ ಶ್ಯಾನುಭೋಗರು ಸಹಾ ಮನುಷ್ಯರು. ಅವರಿಗೆ ವ್ಯಕ್ತಿ ಸ್ವಾತಂತ್ರ್ಯವುಂಟು. ಅವರಿಗೆ ಪ್ರಜಾಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆ ಮುಂತಾದ ರಾಜಕೀಯ ಸಭೆಗಳಿಗೆ ಚುನಾಯಿತರಾಗಿ ನಿಲ್ಲುವ ಹಕ್ಕುಂಟು. ನಾನು ಪಟೇಲನಾಗಿದ್ದುಕೊಂಡೇ ೧೯೩೩ ರಲ್ಲಿ ನಮ್ಮ ತಾಲ್ಲೂಕಿನ ಕಡೆಯಿಂದ ಪ್ರಜಾಪ್ರತಿನಿಧಿ ಸಭೆಗೆ ಮೆಂಬರನ್ನಾಗಿ ಪುನಃ ೧೯೩೬ ರಲ್ಲಿ ಚುನಾಯಿತನಾದೆ.

"ಪ್ರಜಾ ಪ್ರತಿನಿಧಿ ಸಭೆಯಲ್ಲಿ ನಾನು ಕಾಂಗ್ರೆಸ್ ಪಾರ್ಟಿ ಸದಸ್ಯನಾಗಿರುತ್ತೇನೆ. ಕಾಂಗ್ರೆಸ್ಸಿನ ೪ ಆಣೆ ಸದಸ್ಯನೂ ಸಹ ಆಗಿರುತ್ತೇನೆ. ನನ್ನಂತೆ ಅನೇಕ ಗ್ರಾಮಾಧಿಕಾರಿಗಳು ಕಾಂಗ್ರೆಸ್ಸಿನ ೪ ಆಣೆ ಸದಸ್ಯರಾಗಿದ್ದಾರೆ. ಕಾಂಗ್ರೆಸ್ಸು ಯಾವ ವಿಧವಾದ ವಿನಾಶಕಾರಕ ಚಳುವಳಿಯನ್ನೂ ನಡೆಸುತ್ತಿಲ್ಲ. ಖಾದಿ ಪ್ರಚಾರ, ಗ್ರಾಮವುನರುದ್ಧಾರಕಾರ್ಯ, ಅಸ್ಪೃಶ್ಯತಾ ನಿವಾರಣೆ ಮತ್ತು ಪಾನನಿರೋಧ ಇವು ಕಾಂಗ್ರೆಸ್ಸಿನ ಮುಖ್ಯ ನೀತಿ. ನಮ್ಮ ಸರ್ಕಾರದವರು ಇವುಗಳಿಗೆ ತುಂಬಾ ಉತ್ತೇಜನ ಕೊಡುತ್ತಿದ್ದಾರೆ. ಇವುಗಳ ಜೊತೆಗೆ ನಮ್ಮ ಸ್ವಾಮಿಗಳವರ ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಕೆಲವು ಮುಖ್ಯವಾದ ರಾಜಕೀಯ ಸುಧಾರಣೆಗಳನ್ನು ಮೈಸೂರು ಕಾಂಗ್ರೆಸ್ಸು ಬೇಡುತ್ತಿದೆ. ಪ್ರಜಾ ಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳಲ್ಲಿ ನಾವು ಅನೇಕ ಇಂಥಾ ಬೇಡಿಕೆಗಳನ್ನು ಸರ್ಕಾರದಲ್ಲಿ ಬೇಡಿದ್ದೇವೆ.

" ಪಟೇಲನಾಗಿದ್ದುಕೊಂಡೇ ಪ್ರಜಾಪ್ರತಿನಿಧಿ ಸಭೆಯಲ್ಲಿ ಕಾಂಗ್ರೆಸ್ ಪಾರ್ಟಿ ಸದಸ್ಯನಾಗಿ ಸರಕಾರದ ನೀತಿಯನ್ನು ಟೀಕಿಸಬಹುದಾದರೆ ಕಾಂಗ್ರೆಸ್ ಸಭೆ ಸೇರಿಸಲು ಪ್ರಯತ್ನಪಟ್ಟದ್ದೂ ಮತ್ತು ತಾಲ್ಲೂಕ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟದ್ದೂ ತಪ್ಪೇ? ತಾಲ್ಲೂಕಿನ ಮಹಾಜನರು ನನ್ನನ್ನು ಅಸೆಂಬ್ಲಿ ಬಗ್ಗೆ ಚುನಾಯಿಸಿದರು. ಅವರೇ ನನ್ನನ್ನು ತಾಲ್ಲೂಕ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷನಾಗಿಯೂ ಚುನಾಯಿಸಿದ್ದಾರೆ.

" ನನಗೆ ಶ್ರೀಮನ್ಮಹಾರಾಜರವರಲ್ಲಿ ತುಂಬಾ ಭಕ್ತಿ ಇದೆ. ಅವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಅತಿ ವಿನಯಪೂರ್ವಕವಾಗಿ ಬೇಡುತ್ತಿದ್ದೇನೆ. ಕಾಂಗ್ರೆಸ್ಸಿನ ಮುಖ್ಯ ಧ್ಯೇಯಗಳಾದ ಸತ್ಯ, ಅಹಿಂಸಾ ತತ್ವವನ್ನೇ ಅನುಸರಿಸುತ್ತೇನೆ.

" ನಮ್ಮ, ಅಂದರೆ ಗ್ರಾಮಾಧಿಕಾರಿಗಳ ವ್ಯಕ್ತಿ ಸ್ವಾತಂತ್ರ್ಯಕ್ಕೆ ಈ ರೀತಿ ತಡೆಗಟ್ಟಬಾರದೆಂದು ನಾನು ಸರ್ಕಾರದವರಲ್ಲಿ ಅರಿಕೆ ಮಾಡುತ್ತೇನೆ. "

ಸರಕಾರಿ ಯೂನಿಫಾರಂಗೆ ಖಾದಿಯೇ ಆಗಬೇಕು

ಬಿಹಾರಿನಲ್ಲಿ ಸರಕಾರಿ ನೌಕರರಿಗೆ ಮತ್ತು ಜವಾನರುಗಳಿಗೆ ಕೊಡಲಾಗುವ ಯೂನಿಫಾರಂ ಉಡುಪುಗಳನ್ನು ಖಾದಿಯನ್ನೇ ಕೊಡಬೇಕೆಂದೂ ಅದಕ್ಕೆ ಖಾದಿಯು ಸ್ವಲ್ಪ ಜಾಸ್ತಿಯಾದರೂ ಪರವಾಗಿಲ್ಲವೆಂದೂ ಬಿಹಾರ್ ಮಂತ್ರಿ ಮಂಡಲವು ಎಲ್ಲಾ ಇಲಾಖೆಗಳ ಮುಖ್ಯಾಧಿಕಾರಿಗಳಿಗೂ ಆಜ್ಞೆ ಹೊರಡಿಸಿದೆ.

ಹೆಂಡತಿಗೆ ಬದಲು ಗಾರ್ಧಭ

ಕೈ ಹಿಡಿದ ಹೆಂಡತಿಯನ್ನು ಕೊಟ್ಟು ಕೆಲಸಕ್ಕೆ ಬಾರದ ಕತ್ತೆಯನ್ನು ಕೊಂಡುಕೊಳ್ಳುವರುಂಟೆ? ಇಂತಹ ಪ್ರಸಂಗವೂ ಒಂದು ಪ್ರಪಂಚದಲ್ಲಿ ನಡೆದಂತೆ ತಿಳಿದುಬರುತ್ತದೆ. ಈ ವಿಷಯವು ಯುಗೋಸ್ಲಾವಿಯ ಎಂಬಲ್ಲಿ ನಡೆಯಿತು. ಅಲ್ಲಿನ ಸರಕಾರದ ಪತ್ರಿಕೆಯಲ್ಲೇ ಪ್ರಕಟವಾಗಿದೆ. ಆ ದೇಶದ ಸ್ಮೆಡರ್ವಿಯೋ ಎಂಬ ಸಂತೆಯಲ್ಲಿ ಇದು ಜರುಗಿತು. ಸ್ಟೋಜಮಿರ್ ಎಂಬೊಬ್ಬ ಯುವಕ. ಅವನಲ್ಲಿ ಒಂದು ಮುದಿ ಕತ್ತೆ. ಅದನ್ನು ಅವರ ತಂದೆಯು ಕಳೆದ ಮಹಾ ಯುದ್ಧದ ಅನಂತರ ಕೊಂಡುಕೊಂಡಿದ್ದನು. ಇದಲ್ಲದೆ ಆ ಯುವಕನಲ್ಲಿ ಒಂದು ಹೆಂಡತಿಯೂ ಇತ್ತು. ಎರಡನ್ನೂ ಮಾರಲು ಅವನು ಸಂತೆಗೆ ಹೋಗಿದ್ದನು. ಅದನ್ನು ಕೊಡಲು ಅವನು ನಾಲ್ಕು ಪೌಂಡು ಬೆಲೆಯನ್ನು ಅಪೇಕ್ಷಿಸಿದನು. ಇಷ್ಟು ದುಡ್ಡನ್ನು ಯಾರೂ ಕೊಡಲು ಸಿದ್ಧರಿರಲಿಲ್ಲ. ಸಂಜೆವರೆಗೂ ಅವನ್ನು ಮಾರಲಾಗಲಿಲ್ಲ. ಕಡೆಗೆ ದಾರಿಯಲ್ಲಿ ಹೋಗುತ್ತಿದ್ದವನೊಬ್ಬನು ಕತ್ತೆಯನ್ನು ಚೆನ್ನಾಗಿ ನೋಡಿ, ಅದರ ಬೆಲೆಯೇನೆಂದು ಕೇಳಿದನು. ಆತನು ಹೇಳಿದ ಬೆಲೆಯನ್ನು ಕೊಡಲು ಅವನಿಗೆ ಸಾಧ್ಯವಿರಲಿಲ್ಲ. ಚೌಕಾಸಿ ಮಾಡಲು ಆಗಲಿಲ್ಲ. ಅವರೆ ಸ್ಟೋಜಮಿರನು ತನ್ನ ಪತ್ನಿಯ ಮೇಲೆ ಅನುರಾಗದ ದೃಷ್ಟಿಯನ್ನು ಬೀರಿರುವುದನ್ನು ಆತನು ಕಂಡನು. ಅದ್ದರಿಂದ ಆ ಕತ್ತೆಯನ್ನು ಕೊಡುವುದಾದರೆ ಅದಕ್ಕೆ ಬದಲಾಗಿ ತನ್ನ ಹೆಂಡತಿಯನ್ನು ಕೊಡುವುದಾಗಿ ತಿಳಿಸಿದನು. ತನ್ನಲ್ಲಿ ನಗದು ಹಣವಿಲ್ಲದುದರಿಂದ ಈ ರೀತಿ ಮಾಡುವುದಾಗಿ ಹೇಳಿದನು. ಈ ಬೆಲೆಯು ಅಂಗೀಕರಿಸಲ್ಪಟ್ಟಿತು. ಕತ್ತೆಗಾಗಿ ಇಷ್ಟು ಮಟ್ಟಿಗೆ ಏಕೆ ಕಾತುರಪಡುವೆ ಎಂದು ಕೇಳಲು ಆತನು, ಮಹಾ ಯುದ್ಧದಲ್ಲಿ ಸಲೋನಿಕ ಎಂಬ ರಂಗಸ್ಥಳದಲ್ಲಿ ಇದೇ ಕತ್ತೆಯು ತನ್ನ ಪ್ರಾಣವನ್ನು ಉಳಿಸಿತೆಂದೂ ಅದರ ಮೇಲೆ ಕಾದು ಗುರುತಿಗಾಗಿ ಒಂದು ಮುದ್ರೆಯನ್ನೂ ಸಹ ಹಾಕಿದ್ದನೆಂದೂ, ತನ್ನ ಪ್ರಾಣರಕ್ಷಕನಾದುದರಿಂದ ಅದರ ಮೇಲೆ ತನಗೆ ಅಷ್ಟು ವಿಶ್ವಾಸವಿರುವುದಾಗಿಯೂ ಆತನು ಹೇಳಿದನು. ಈ ಕತ್ತೆಗಾಗಿ ಅನೇಕ ವರ್ಷಗಳಿಂದ ಅವನು ಹುಡುಕುತ್ತಿದ್ದನು. ಪ್ರಕೃತದ ಕತ್ತೆಯ ಮಾಲೀಕನಿಗೂ ತನ್ನ ಹೆಂಡತಿಗೂ ಪರಸ್ಪರ ಅನುರಾಗವು ಉತ್ಪತ್ತಿಯಾಗಿದ್ದುದನ್ನು ಕಂಡು ಈ ರೀತಿ ಮಾಡಿದನೆಂದು ಹೇಳಲಾಗಿದೆ.

ಪ್ರಪಂಚದಲ್ಲಿ ಎಂತೆಂತಹ ಜನರಿದ್ದಾರೆ!

ಫಸಲಿನ ಜಪ್ತಿ ಕ್ರಮ

(ನಮ್ಮ ಜಾತ್ಯಿದಾರರಿಂದ.)

ಯಳಂದೂರು, ತಾ॥ ೨೪—೧೧—೩೭

ಈ ತಾಲ್ಲೋಕಿನಲ್ಲಿ ಕಂದಾಯ ವಸೂಲಿ ವಿಚಾರ ಬಹಳ ಶೋಚನೀಯವಾಗಿದೆ. ರೈತರು ತಮ್ಮ ಸ್ವಂತ ಮೆಹನತ್ತಿನಿಂದ ಕೆರೆಗಳಿಗೆ ನೀರು ಜಮಾಯಿಸಿಕೊಂಡು ಮಾಡಿದ ಫಸಲೂ ಸಹಾ ಸರ್ಕಾರದ ಅಪ್ಪಣೆ ಶಿವಾಯಿ ತನ್ನ ಮನೆಗೆ ತರಲು ಅವಕಾಶವಿಲ್ಲದಂತೆ ಹಿಂದಿನ ಸಾಲಿನ ಕಂದಾಯಕ್ಕೂ ಸಹಾ ಜಪ್ತಿಕ್ರಮ ಜರಗುತ್ತಿದೆ. ಇದರಿಂದ ಬಡ ಜನರಿಗೆ ತೊಂದರೆಯಾಗಿದೆ. ಈ ತಾಲ್ಲೂಕಿನ ರೈತರಿಗೆ ಮೈಸೂರು ಸೀಮೆಯ ಇತರ ತಾಲ್ಲೂಕಿನ ರೈತರುಗಳಿಗೆ ಸರ್ಕಾರದವರು ಕೊಟ್ಟಿರುವ ಸೌಕರ್ಯಗಳ್ಯಾವವೂ ಇಲ್ಲದೆಯು ದ್ದಾಗ್ಯೂ ವಸೂಲಿ ವಿಚಾರದಲ್ಲಿ ಮಾತ್ರ, ಅಲ್ಲಿಗಿಂತ ಬಹಳ ಮುಂದುವರಿದಿರುತ್ತ.

ಹುಜೂರು ಜಮಾಬಂದಿಗಾಗಿ ನಂಜನಗೂಡು ಸಬ್ ಡಿವಿಜನ್ ಆಫೀಸರವರು, ಶ್ರೀಮಂತ ಜಹಗೀರದಾರ್ರವರು ಇಲ್ಲಿಗೆ ದಯಮಾಡಿಸಿ ೨-೩ ದಿನ ಮೊಕ್ಕಾಂ ಮಾಡಿ ಕೆಲವು ಗ್ರಾಮಗಳ ಆಡಳಿತಾಯಿಂದ ಮುನಿಸಿಪಲ್ ಆಫೀಸು, ತಾಲ್ಲೋಕ್ ಆಫೀಸು ತನಿಖೆ ಮಾಡಿಕೊಂಡು ವಾಪ್ಸು ದಯಮಾಡಿದರು. ಈ ಕಾಲದಲ್ಲಿ ಇವರು ದರೂ ಈ ವಿಷಯ ಚರ್ಚೆಗೆ ತಂದಿದ್ದಲ್ಲಿ ಬಹಳ ಪ್ರಯೋಜನವಾಗುತ್ತಿತ್ತು.

ಈ ವರ್ಷದ ಜಾಸ್ತಿ ಪ್ರವಾಹದಿಂದ ಬಿಳಿಗಿರಿರಂಗಸ್ವಾಮಿಯವರ ಬೆಟ್ಟದ ರಸ್ತೆ ಹಾಳಾಗಿ... ಕೆರೆ ಬಳಿ ಸುಮಾರು ೧೦೦ ರೂ. ಮೇಲೆ ಬೆಲೆಬಾಳುವ ಒಂದು ಎತ್ತು ಈಗ್ಗೆ 5-6 ದಿನಗಳಲ್ಲಿ ಬದಿಯಲ್ಲಿ ಹೂತು ಸತ್ತುಹೋಯಿತು. ಹಾಗೆಯೇ ಬಾಬಿನಿಂದಲೂ ಹೊಳೆ ಆಚೆ ಗ್ರಾಮದಿಂದಲೂ, ಲೋಕಲ್‌ಫಂಡು ವಗೈರೆ ವಸೂಲಾಗುತ್ತಿದ್ದರೂ, ಡಿಸ್ಟ್ರಿಕ್ಟ್ ಬೋರ್ಡಿನವರಾಗಲೀ, ಜಹಗೀರ ಸರ್ಕಾರದವರಾಗಲೀ ಗಮನ ಕೊಡದೆ ಇರುವುದರಿಂದ ಈ ಪ್ರಾಂತದ ಪ್ರಜೆಗಳಿಗೂ, ಜಂಗಲಿನಿಂದ ಸೌದೆ ವಗೈರೆ ತರುವವರಿಗೂ, ಬಹಳ ತೊಂದರೆಯಾಗಿರುತ್ತೆ. ಹಾಲಿ ಇರುವ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರವರೇ ಈ ತಾಲ್ಲೋಕಿನ ಮೆಂಬರಾಗಿರುತ್ತಾರೆ. ಅವರೆ ಇವರನ್ನು ಇಲ್ಲಿನ ಪ್ರಜೆಗಳು ನೋಡಿಯೇ ಇಲ್ಲ, ಇವರು ಈ ತಾಲ್ಲೋಕಿನ ಪ್ರತಿನಿಧಿರ ಹಕ್ಕು ಬಾಧ್ಯತೆಗಳ ಮೇಲೆ ಎಷ್ಟು ಮಟ್ಟಿಗೆ ಗಮನ ಕೊಟ್ಟಿರುತ್ತಾರೆಂಬುದನ್ನು ಯೋಚಿಸಬೇಕಾಗಿದೆ.

ಸ್ವಧರ್ಮಮಣಿ ದರ್ಪಣ

ಏಜೆಂಟರು ಬೇಕು.

ಚಕ್ರಬಂಧ, ಚಿತ್ರಗಾಳಿ, ಚಿತ್ರಬಂಧ, ಚಂದ್ರಕಲಾ, ಅಂತಕಲಾ, ... ಎಲ್ಲಾ ಕನ್ನಡ ಸ್ಪರ್ಧೆಗಳಿಗೂ ಸಲಹೆಗಳನ್ನೂ, ಟಿಪ್ಪಣಿಗಳನ್ನೂ ಕೊಡತಕ್ಕ ಶ್ರೇಷ್ಠ ವರ್ಗದ ಪತ್ರಿಕೆ. ಎಲ್ಲಾ ಊರುಗಳಲ್ಲಿಯೂ ಸ್ವಧರ್ಮಮಣಿ ದರ್ಪಣ ಪತ್ರಿಕೆಗಳನ್ನು ಮಾರಲು ಏಜಂಟರುಗಳು ಬೇಕಾಗಿದ್ದಾರೆ. ಇಷ್ಟ ಇದ್ದವರು ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಿರಿ. ಕೊಳ್ಳಬಹುದು.

ಸ್ವಧರ್ಮಮಣಿ ದರ್ಪಣ ಆಫೀಸ್

1220 ದೇವರಾಜ ಮೊಹಲ್ಲಾ, ಪೋಸ್ಟಾಫೀಸು ಹಿಂದೆ, ಮೈಸೂರು.

ಹಿಟ್ಲರಿನ ಮನಸ್ಸಿನಲ್ಲಿರುವುದೇನು ?

ಜರ್ಮನಿಗೆ ಯುದ್ಧ ಸಂಗತ್ತಿಯೆಯಲು ಇಷ್ಟವಿಲ್ಲ. ಆದರೆ ಜರ್ಮನರು ಹುಟ್ಟು ಬಿಟ್ಟಗಳನ್ನು ಕಂಡು ಬರುತ್ತಿರುವ ಅನ್ಯಾಯವಾದ ಯುದ್ಧವನ್ನು ಮಾಡಿಯೇ ತೀರುತ್ತಾರೆ, ಎಂದು ಹಿಟ್ಲರನು ಘೋಷಿಸುತ್ತಿದ್ದಾನೆ.

ಪ್ರಪಂಚದಲ್ಲಿ ಹೆಚ್ಚು ಭಾಗವನ್ನು ಆಳುತ್ತಿರುವ ಬ್ರಿಟನ್, ಸಂಯುಕ್ತ ಸಂಸ್ಥಾನಗಳು ಇಂಗ್ಲೆಂಡ್ ಫ್ರಾನ್ಸ್ ದೇಶಗಳ ಸ್ಥೈರ್ಯ ಕಡಿಮೆ ಗಳು ... ಮಾತ್ರ ಹೆಚ್ಚು ಕಡಿಮೆ ಗೋಚರಿಸಿ. ಇದಕ್ಕೆ ಕಾರಣವೇನು ? ಇವರ ... ತಮ್ಮ ಸ್ವಾಧೀನ ಪಡೆದುಕೊಳ್ಳುವ ಸ್ವಭಾವವೇ ಆಗಿದೆ.

ಬ್ರಿಟಿಷ್ ವಿದೇಶಾಂಗ ಮಂತ್ರಿಯು ... ಯೂರೋಪಿನ ಸರ್ವಾಧಿಕಾರಿ ರಾಷ್ಟ್ರಗಳಾದ ಇಟಲಿ ಜರ್ಮನಿಗಳ ... ಸ್ನೇಹ ಸರ್ಕಾರವಾದ ಜಪಾನ ಒಂದಾಗಿರುವುದೇ ಪ್ರಪಂಚದ ಸಿ ... ಗೆ ಕಾರಣವಾಗಿದೆ.

ಮುಸೊಲೀನಿಯು ಭೇಟಿಯಾಗಿ ಹಿಟ್ಲರನ ಸರ್ವಾಧಿಕಾರವನ್ನು ಸ್ವೀಕರಿಸಿದ್ದು ಇಟಲಿಯು ಕ್ರಿಯಾದಲ್ಲಿ ಸಂಪೂರ್ಣವಾಗಿ ಸಹಾಯ ಮಾಡುವುದಾಗಿ ಭರವಸೆ ಇತ್ತಿರುವಂತೆ ಕಾಣುತ್ತದೆ. ಜಪಾನು ಚೀಣಯನ್ನು ನುಂಗಲು ಯತ್ನಿಸುತ್ತಿದೆ. ಬ್ರಸಲ್ಸ್ ನಲ್ಲಿ ಸಂಯುಕ್ತ ಸಂಸ್ಥಾನವೂ ಇಂಗ್ಲೆಂಡ್ ಫ್ರೆಂಚ್ ಸರ್ಕಾರಗಳ ಸ್ನೇಹ ಕೂಡಾ ಲೆಕ್ಕಿಸಿಲ್ಲವಷ್ಟು.

ಹೇಗೂ ಮಧ್ಯ ಯೂರೋಪಿನಲ್ಲಿ ಜರ್ಮನಿಯು ಆರ್ಥಿಕ ಮತ್ತು ರಾಜಕೀಯ ಪ್ರಾಬಲ್ಯವನ್ನು ಬೀರುತ್ತಿದೆ. ಆಸ್ಟ್ರಿಯಾ ಮತ್ತು ಜೆಕೋಸ್ಲೋವೇಕಿಯಾ ಇವರ ಪ್ರಥಮ ಗುರಿಗೆ. ರಾಷ್ಟ್ರ ಸಂಘದ ... ಅಲ್ಪಸಂಖ್ಯಾತರಿಗೆ ತನ್ನ ವರ್ಗದವರನ್ನು ರಕ್ಷಿಸಿಕೊಳ್ಳುವಂತೆಯೇ ಆಗಿದೆ. ... ಸ್ವತಂತ್ರವಾಗಿ ಜರ್ಮನಿ ರಾಷ್ಟ್ರ ಸಂಘವನ್ನು ಮುಂತಾದ ಮುಂದಾಳಿನಿಂದ ದೂರವಾಗಿದ್ದರೂ ಕ್ರಮೇಣ ಅಸ್ಥಿಯ ... ಸರ್ಕಾರವು ಪಶ್ಚಿಮದಲ್ಲಿ ಸಂದರ್ಭ ಬಿಟ್ಟು ... ದೇಶದ ಒಂದು ವರೆ ಕೋಟಿ ಜನ ಸಂಖ್ಯೆಯಲ್ಲಿ ನೂರು ... ಜರ್ಮನರನ್ನು ಹಿಟ್ಲರ ... ಉತ್ತೇಜಿಸಿ ಬಲಪಡಿಸುವ ಯೋಚನೆ ನಡೆಸಿದ್ದಾನೆ.

ಇಟಲಿಯೂ, ಜಪಾನೂ, ತಮ್ಮ ಬುದ್ಧಿ ... ಕಟ್ಟುವುದು ... ಹಿಂದಿನಿಂದ ... ನಡೆಸುತ್ತಿರುವುದೇ ... ಇಂಗ್ಲೆಂಡಿನ ... .

... ಕೊಡಬೇಕೆಂದು ... ವಸಾಹತುಗಳನ್ನು ... ಜರ್ಮನಿಗೆ ... ಸೌಕ

ಚಿತ್ರಶಾಲಾ ಸ್ಪರ್ಧೆ ನಂ. ೩೮ ರಲ್ಲಿ ಬಹುಮಾನ ಪಡೆದವರು.

ಸಂಪೂರ್ಣ ಉತ್ತರಗಳನ್ನು ಕಳುಹಿಸಿದ್ದ 4 ಜನರಿಗೆ ಮೊದಲನೇ ಬಹುಮಾನವಲ್ಲಿ ತಲಾ 37—8—0 ಯಂತೆ ಕೊಟ್ಟಿರುತ್ತೆ. ಶ್ರೀಮತಿ ತುಳಸಮ್ಮ C/o ನರಸಿಂಹಯ್ಯಂಗಾರ್ ರಾಘವೇಂದ್ರಾಚಾರ್ ದೀವಟಿಗೆ ಬೀದಿ, ಮೈಸೂರು. ಶ್ರೀಮತಿ ಗೌರಮ್ಮ C/o ಶಿವನಂಜಯ್ಯ ಕಿಡಿಗಾ ಎಕ್ಸ್ಟೆನ್ಷನ್, ಮೈಸೂರು ಬಿ. ಆರ್. ನಟರಾಜ್ ಅರ್ಸ್ C/o ಆರ್. ಪೀರರಾಜೇ ಅರಸ್ ಬಿ.ಎ. ಕೆ. ಟಿ. ರಾಮರಾವ್ S/o ಕೆ. ಭೀಮಸೇನರಾವ್ ಕೋಲಾರ.

ಒಂದು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 14 ಜನರಿಗೆ ಇತರ ಬಹುಮಾನದಲ್ಲಿ ತಲಾ 5—0—0 ರೂ. ನಂತೆ ಕೊಟ್ಟಿರುತ್ತೆ. ಕುಮಾರಿ ಜಿ. ಪಿ. ಪದ್ಮ ಎಂ. ಜಿ. ರಂಗಸ್ವಾಮಿ ಎಂ. ದಮೋದರ್ ... ಮೈಸೂರು. ಕೆ. ಎಲ್ ಲೀಲಾಬಾಯಿ ನಂಜನಗೂಡು. ಸಿ. ನಂಜಪ್ಪ ದೊಡ್ಡ ಕಿವ್ವಣ್ಣನಹಳ್ಳಿ. ಹೆಚ್. ಮುಳಿಯಪ್ಪ ಹರಿಯಪ್ಪ. ಜಿ. ಸುಬ್ಬಯ್ಯ ಎಸ್. ಬಾಲಕೃಷ್ಣ ಎಸ್. ಜಿ. ಸೋಮಶೇಖರಯ್ಯ ಸತೀ ಆರಾಧ್ಯ ಸಿ. ಎಸ್. ಕೃಷ್ಣಯ್ಯಂಗಾರ್ ಜಿ. ಹೆಚ್. ಎಸ್ ಶಿವಣ್ಣ ಸಿದ್ದಯ್ಯ ರಾಜಮ್ಮ ನಾಗರಾಜ ಬೆಂಗಳೂರು.

ಎರಡು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 73 ಜನರಿಗೆ ಇತರ ಬಹುಮಾನದಲ್ಲಿ ತಲಾ 1—2—0 ಯಂತೆ ಕೊಟ್ಟಿರುತ್ತೆ. ರಂಗಪ್ಪ ಎನ್. ಟಿ. ಎಸ್. ವಾಸನ್ ಎನ್. ಟಿ. ಎನ್. ಶರ್ಮ ಎನ್. ಟಿ. ಮೈ. ನಂದನ್ ಎಂ. ಯದುಗಿರಿಯಮ್ಮಾಳ್ ಎಂ. ಸಿ. ಪಾರ್ಥಸಾರಥಿ ಶ್ರೀಮತಿ ಹೆಚ್. ಜಿ. ಸುಬ್ರಮಣ್ಯರಾಜೇ ಅರಸ್ ನಟರಾಜ ಸಿ. ಕೃಷ್ಣರಾವ್ ಎಂ. ಎನ್. ನಂಜುಂಡಯ್ಯ ಸಿ. ಕೆ. ಗೋವಿಂದಸ್ವಾಮಿ ಎಲ್. ಆರ್. ಪಂಡಿತ್ ಅನಂತಸುಬ್ರಮಣ್ಯ ಎಂ. ರಾಜಶೇಖರಯ್ಯ ಮೈಸೂರು. ಎ. ಮುನಿಲಕ್ಷ್ಮಮ್ಮ ಎಂ. ಜಿ. ಜೆ. ರಾಂ ಟೈಲರ್ ಟೌನ್. ಶ್ರೀ॥ ಜಯಲಕ್ಷ್ಮಮ್ಮ (ಸೋಮನಹಳ್ಳಿ.) ಆರ್. ರಂಗಸ್ವಾಮಿ ಸಿ. ಎಸ್. ವೆಂಕಟರಾಮಯ್ಯ ಪಿ. ಶಾರದಾಂಬ ಜಿ. ಎಸ್. ವೀರಭದ್ರಪ್ಪ ಎಂ. ಎಸ್. ಗುರುಬಸವಯ್ಯ ಜಿ. ಕಮಲಮ್ಮ ಜಿ. ವಾಸು ಜಿ. ಕೆಂಪೇಗೌಡ ರಯ್ಯ ಪುಟ್ಟಮ್ಮ (ಬಿ.ಎ.) ಎಂ. ಕಮಲ ಎಂ. ಶಕುಂತಳ ಎಂ. ಪುಟ್ಟಮ್ಮ ಸಿದ್ಧಾನಂದಸ್ವಾಮಿ ಎನ್. ಅಚ್ಚಮ್ಮ ಎನ್. ನಾರಾಯಣ ಎಸ್. ರಾಘು ಎಸ್. ಶ್ರೀಧರ ಲಕ್ಷ್ಮೀದೇವಮ್ಮ (ನೆಲಮಂಗಲ.) ಎನ್. ಅನಂತನಾರಾಯಣ ಪಿ. ನಾರಾಯಣರಾವ್ ಕೆ. ಪಿ. ನಾರಾಯಣರಾವ್ ಸಿ. ಎಸ್. ಪಿ. ಶೆಟ್ಟಿ ಎಸ್. ಕೆ. ನರಸಿಂಹಮೂರ್ತಿ ಎಂ. ವೆಂಕಟಕೃಷ್ಣಮಾಚಾರ್ಯ ಪಂಡಿತ್ ಬಿ. ಪದ್ಮಾವತೀಬಾಯಿ ಪಿ. ಶಾರದಮ್ಮ ಪಿ. ವೆಂಕಮ್ಮ ಎಂ. ಸರಸ್ವತೀಬಾಯಿ (ಅಕ್ಕೂರ್.) ಬಿ. ಪಿ. ಪದ್ಮನಾಭಮೂರ್ತಿ ಬಿ. ಪಿ. ಎಸ್. ಮೂರ್ತಿ ಟಿ. ಸಿದ್ದೂ ಪಾಪ್ಪಮ್ಮ ಬಿ. ಆರ್. ವೆಂಕಟರಮಣಪ್ಪ ಸುಶೀಲ ನರಸಮ್ಮ ಪುಟ್ಟಮ್ಮ ನಾಗಮ್ಮ ಉಮಾಪತಿ ಪಿ. ಎನ್. ರಾಜಶೇಖರಯ್ಯ ಬೆಂಗಳೂರು. ಎಸ್. ಆರ್. ಭೀಮರಾವ್ ಹೆಚ್. ಶಾರದಾಂಬ ಜಿ. ಎನ್. ರಾಮಚಂದ್ರರಾವ್ ತಂಜೂರು. ಎಂ. ಲಿಂಗರಾಜ್ಯ. ಚಿತ್ರದುರ್ಗ. ಎಂ. ಕೆ. ನಂಜಪ್ಪಯ್ಯ ಬೇಲೂರು ಎಂ. ಎನ್. ಗೋಪಾಲಸ್ವಾಮಿ ಹೊಸೂರು. ಹೆಚ್. ಪಿ. ಕೃಷ್ಣರಾಜು ಚೆನ್ನಪಟ್ಟಣ. ಪಿ. ಎ. ಲಕ್ಷ್ಮೀ ಕೆ. ಆರ್. ನಗರ. ಟಿ. ಎನ್. ಗುರಪ್ಪ ಕೊಪ್ಪ. ವೆಂಕಟವರದಾಚಾರ್ ಶಿಂಗರಾಜಪುರ. ಕೆ. ಆರ್. ನರಸಮ್ಮ ನಂಜನಗೂಡು. ಕೆ. ಸ್ವಾಮೀರಾವ್ ದಾವಣಗೆರೆ. ಶ್ರೀ॥ ನಂಜಮ್ಮ ಕೋಣನೂರು. ಎಂ. ವೆಂಕೋಬರಾವ್ ಸಾಗರ. ಸಿ. ನಾಗವೇಣಿ, ಮೈ. ಸಿ. ದೇವರಾಜ ಮೈ. ಚಿಕ್ಕನಂಗಲ. ಕೆ. ಸಾ. ರಾಮಸ್ವಾಮಿ ಮೈಸೂರು.

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರಗಳನ್ನು (160) ಕಳುಹಿಸಿದ್ದ ಮ॥ ರಾ. ಹೆಚ್. ಮುಳಿಯಪ್ಪ ಹೊಸ್ಪಲ್ಲಿ ಹರಿಹಳ್ಳಿ. ಇವರಿಗೆ ಸ್ಪೆಷಲ್ ಬಹುಮಾನದ ಬಾಬ್ತು 30—0—0 ರೂ. ಕೊಟ್ಟಿರುತ್ತೆ.

ಮ್ಯಾ. ಜ.

ಯುದ್ಧವನ್ನು ಕಟ್ಟುವಮಾಡುವುದೂ ಅವಶ್ಯಕ. ಇದಕ್ಕೆ ಫ್ರಾನ್ಸ್ ಇಂಗ್ಲೆಂಡು ಎರಡು ಒಪ್ಪಲೇಕಿಲ್ಲ. ಏಕೆಂದರೆ ಜರ್ಮನಿಯು ಬಲವಾದ ರಾಷ್ಟ್ರವಾಗುತ್ತದೆ. ಫ್ರಾನ್ಸ್ ದೇಶವು ಇಂಗ್ಲೆಂಡನ್ನು ಬಹು ಸಂಶಯ ದೃಷ್ಟಿಯಿಂದ ಇಂದು ನೋಡುತ್ತಿರುವುದಾದರೂ ವಸಾಹತಗಳನ್ನೆಲ್ಲ ಕೊಟ್ಟುಬಿಡುವುದೇ ಎಂಬ ಸಂಶಯದಿಂದ.

ಜನರಲ್ ಗೌರಿಂಗನು—ನಾವು ಸ್ವಸಾಮರ್ಥ್ಯದಿಂದಲೇ ವಸಾಹತುಗಳನ್ನು ಸಾಧಿಸುತ್ತೇವೆ. ಯಾರ ಸಹಾನುಭೂತಿಯಿಂದ ಅಗ ಬೇಕಿಲ್ಲ, ಎಂದು ಘೋಷಿಸಿದ್ದಾನೆ.

ಇಂದು ಪ್ರಪಂಚದ ಮುಂದಿರುವುದೂ ಜರ್ಮನಿಯು ಬಲೆಯಿಂದ ಶಕ್ತಿಯನ್ನು ಒಂದು ದೃಢಗೊಳಿಸುವುದು ಯಾವಾಗ? ಸಂಗ್ರಾಮವೇ ನಾದೀತು? ಎಂಬ ಪ್ರಶ್ನೆ. ಇದಕ್ಕೆ ಇಂಗ್ಲೆಂಡ್, ಮತ್ತು ಫ್ರಾನ್ಸ್ ಸಹ ಉತ್ತರವನ್ನು ಹೇಳಬೇಕಾಗಿದೆ.

ANANDA SODA FACTORY

Best Aerated Water Suppliers.

Complete Requisites For Aerated Water Manufacturers Available.

ಆನಂದಾ ಸೋಡಾ ಫ್ಯಾಕ್ಟರಿ

ದೊಡ್ಡಪೇಟೆ, ಮೈಸೂರು.

ಖಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್,

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಲಿನೊಡನಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತದೆ. ಎಂಥಹ ಗಟ್ಟಿಯಾದ ಆಹಾರವನ್ನಾದರೂ ಜೀರ್ಣಿಸಿ ಕೊಳ್ಳತಕ್ಕ ಶಕ್ತಿ, ಶಟ್ಟೆಗಾಳಿಗಳ ದೋಷವನ್ನೂ, ಅಂಟುರೋಗಗಳನ್ನೂ ಬಳಿಗೆ ಸೇರಿಸದೆ ಮಲಬದ್ಧತೆಯನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ.

ಮಕ್ಕಳ ಸರ್ವ ಶೀತ (ಎಳೆಯ, ಕಾಲುಕೈ ಮತ್ತು ಬಾಯಲ್ಲಿ ಜೊಲ್ಲು ಸುರಿಸುವ ರೋಗವಾದ) ಮಕ್ಕಳ ಮತ್ತು ದೊಡ್ಡವರ ಶೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ವಾಂತಿ ಭ್ರಮೆ, ಅಜೀರ್ಣ, ಅಜೀರ್ಣದ ಭೇದಿ, ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಹಸ್ತಾದ್ಯಂಗ, ಪ್ಲೇಗು, ಶೀತಭೇದಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತನಾಶ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿರುತ್ತಾರೆ. ಈ ಮಾತ್ರೆಗಳಲ್ಲಿ ಅಫೀಮಾಗಲಿ, ಗಾಂಜಾ, ಭಂಗಿ, ಮುಂತಾದ ಮಾದಕ ವಸ್ತುಗಳಿಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ, ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವರಾಗುತ್ತೀರಿ.

250 ರಿಂದ 300 ಮಾತ್ರೆಗಳುಳ್ಳ ಸೀಸೆ 1 ಕ್ಕೆ 4 ಆಣೆ. ಟಪಾಲು ಸುಂಕವು 1 ಸೀಸೆಗೆ 5 ಆಣೆ. 6 ಸೀಸೆಗೆ 1—8—0. 12 ಕ್ಕೆ 2—13—0. 25 ಕ್ಕೆ 5—8—0.

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ತಪೋಬಲ

ಶ್ರೀ ರಮಣ ಮಹರ್ಷಿಗಳ ಆಧ್ಯಾತ್ಮಿಕ ಶಕ್ತಿ

ಲೇಖಕ:—ಪಂಡಿತ

ಶ್ರೀ ರಮಣ ಮಹರ್ಷಿಗಳ ಜಯಂತ್ಯುತ್ಸವವು ಕಳೆದ 10 ನೇ ತಾ|| ಭಾನುವಾರ ತಿರುವಣ್ಣಾಮಲೆಯಲ್ಲಿ ಅತ್ಯಂತ ವೈಭವದೊಡನೆ ಜರುಗಿತು. ಅವರ ಜೀವನದ ಒಂದು ಅಂಶವನ್ನು ಇಲ್ಲಿ ವಿವರಿಸಿದೆ:—

ಕಾವ್ಯಕಂಠ ಗಣಪತಿ ಶಾಸ್ತ್ರಿಗಳು ಚತುಶ್ಶಾಸ್ತ್ರ ಪಂಡಿತರು. ಹತ್ತಾರು ವರ್ಷಗಳು ಈಶ್ವರ ಸಾಕ್ಷಾತ್ಕಾರಕ್ಕಾಗಿ ತಪಸ್ಸು ಮಾಡಿದರು; ವಿಫಲರಾಗಿ ರಮಣ ಮಹರ್ಷಿಗಳನ್ನು ಆಶ್ರಯಿಸಿದರು. ರಾಮಕೃಷ್ಣರ ಸ್ಪರ್ಶನವು ಹಿಂದೆ ವಿವೇಕಾನಂದರ ಇಷ್ಟಾರ್ಥಗಳನ್ನು ಈಡೇರಿಸಿತು; ರಮಣಮಹರ್ಷಿಗಳ ಸಂದರ್ಶನವು ಶಾಸ್ತ್ರಿಗಳ ಇಷ್ಟಾರ್ಥವನ್ನು ಈಡೇರಿಸಿತು.

ಚತುಶ್ಶಾಸ್ತ್ರ ಪಂಡಿತರಾದ ಕಾವ್ಯಕಂಠ ಗಣಪತಿಶಾಸ್ತ್ರಿಗಳು ಒಂದು ಗುಹೆಯಲ್ಲಿ ವಾಸಮಾಡುತ್ತಿದ್ದ ಕೌಪೀನಧಾರಿಗಳಿಗೆ ದೀರ್ಘದಂಡ ಪ್ರಣಾಮವನ್ನು ಮಾಡಿ "ಗುರುಗಳೆ, ನನ್ನನ್ನು ಕಾಪಾಡಿ" ಎಂದರು. ಗುರುಗಳು ಮೌನವಾಗಿದ್ದರು. ಮಹಾದೇವನನ್ನು ಪ್ರತ್ಯಕ್ಷಮಾಡಿಕೊಳ್ಳುವುದಕ್ಕಾಗಿ ಶಾಸ್ತ್ರಿಗಳು ಮಾಡದ ಜಪವಿಲ್ಲ. ಆಚರಿಸದ ಕರ್ಮವಿಲ್ಲ, ಓದದ ಪುಸ್ತಕವಿಲ್ಲ. "ತಪೋಬಲದಿಂದಲೇ ದೇವರ ಸಾಕ್ಷ್ಯವನ್ನು ನೀಗುವೆನು" ಎಂದು ವ್ರತ ಪ್ರತಿಜ್ಞೆ ಮಾಡಿ ಹಿಡಿದೊಡನೆ ಹತ್ತಾರು ವರುಷಗಳು ಇವರು ಉಗ್ರವಾದ ತಪಸ್ಸನ್ನು ಕೈಗೊಂಡರು. ಆದರೇನು ಪ್ರಯೋಜನ? ಅವರ ವಿಧಿಯು ಶಾಸ್ತ್ರಿಗಳ ಮನೋರಥವನ್ನು ಈಡೇರಿಸಲಿಲ್ಲ. ಹೀಗಿರಲಾಗಿ ಒಂದು ದಿನ ಕೃತ್ತಿಕೋತ್ಸವದಲ್ಲಿ ತಿರುವಣ್ಣಾಮಲೆಯಲ್ಲಿ ಸ್ವಾಮಿ ದರ್ಶನವನ್ನು ಮಾಡುತ್ತಿದ್ದಾಗ ಒಂದು ಅಶರೀರ ವಾಕ್ಕು ಕೇಳಿಸಿದಂತಾಯಿತು. "ಓದಿ ಹೋದಿ ಫಲವೇನು? ಅನುಭವವನ್ನು ಪಡೆ." ತತ್‌ಕ್ಷಣವೇ ಶಾಸ್ತ್ರಿಗಳು ವಿರೂಪಾಕ್ಷ ಗುಹೆಯಲ್ಲಿ ತಪಸ್ಸು ಮಾಡುತ್ತಿದ್ದ ಓರ್ವ ತಪಸ್ವಿಗಳ ಕಡೆಗೆ ತಮ್ಮ ದೃಷ್ಟಿಯನ್ನು ತಿರುಗಿಸಿದರು.

ಶಾಸ್ತ್ರಿಗಳು ತಮ್ಮ ದೃಷ್ಟಿಯನ್ನು ತಿರುಗಿಸಿದ ಆ ತಪಸ್ವಿಯಾದರೂ ಯಾರು? ಅವರ ಮಹತ್ವವೇನು? ಅವರ ಪೂರ್ವ ಚರಿತ್ರೆ ಏನು? ಅವರ ಪಾವಿತ್ರ್ಯವು ಎಂತಹುದು? ಅವರೆಷ್ಟು ಜನರಿಗೆ ಉಪದೇಶ ಮಾಡಿದ್ದರು? ಇಂದು ತಿರುವಣ್ಣಾಮಲೆಯ ಬೆಟ್ಟದ ತಪ್ಪಲಿನಲ್ಲಿರುವ ರಮಣಾಶ್ರಮದಲ್ಲಿ ಕುಳಿತು ತಮ್ಮ ತಪಃಪ್ರಭಾವದಿಂದ ಜಗತ್ತನ್ನೇ ತನ್ನ ಕಡೆಗೆ ಸೆಳೆಯುತ್ತಿರುವ ಕೌಪೀನಧಾರಿಗಳಾಗಿ ವಿರಾಜಿಸುತ್ತಿರುವ ಮಹಾ ಮಹಿಮರೇ ಶಾಸ್ತ್ರಿಗಳ ದೃಷ್ಟಿಯನ್ನು ತಮ್ಮ ಕಡೆಗೆ ಸೆಳೆದವರು. ಅವರ ಮಹತ್ವವು ಸಮುದ್ರದರ್ಶನ. ಅವರು ತಮ್ಮ ಮೌನ ವ್ಯಾಖ್ಯಾನದಿಂದ ಜಗತ್ತಿಗೇ ಬೋಧೆ ಮಾಡುತ್ತಿದ್ದಾರೆ. ಶಾಸ್ತ್ರದ ಸಾರವೆಲ್ಲವೂ ಅವರಿಗೆ ಅನುಭವವೇದ್ಯ. ಅವರ ಪಾಂಡಿತ್ಯವು ಶಾಸ್ತ್ರಗಳ ಉಪನ್ಯಾಸದಲ್ಲಿಲ್ಲ; ಅನುಭವ ಮತ್ತು ಆಚರಣೆಗಳಲ್ಲೇ ಇದೆ.

ಕಲಿಯುಗವೆಂದರೇನು? ತಪಸ್ಸೆಂದರೇನು? ಸತಿ ದರ್ಶನವೆಂದರೇನು? ಎಲ್ಲಾ ಕೃತಯುಗದ ಮಾತು. ಪುರಾಣಗಳ ಮಾತು.—ಎಂದು ಅನೇಕರು ಆಕ್ಷೇಪಿಸಬಹುದು. ಅಂತಹ ತಪಸ್ವಿಗಳಿಗೆ ಈ ಘೋರ ಜಗತ್ತಿನಲ್ಲಿ ಸ್ಥಾನವೆಲ್ಲಿ? ನಿಜ. ಜಗತ್ತಿನ ರೀತಿಯೇ ವಿಚಿತ್ರ. ತಪಸ್ವಿಗಳನ್ನು ಹುಚ್ಚರೆಂದು ಭಾವಿಸುವವರು ಕೆಲವರು; ಪಿಶಾಚಿಗಳೆಂದು ಭಾವಿಸುವವರು ಕೆಲವರು. ಹುಡುಗರೆಂದು ಭಾವಿಸುವವರು ಕೆಲವರು. ಇವಕ್ಕೇ ಅಲ್ಲವೆ ಸಂಸ್ಕೃತದಲ್ಲಿ "ಬಾಲೋನ್ಮತ್ತ ಪಿಶಾಚವತ್" ಎಂದು ಹೇಳಿರುವುದು?

ಪಾತಾಳ ಲಿಂಗೇಶ್ವರ ದೇವಸ್ಥಾನದಲ್ಲಿ ಮಹರ್ಷಿಗಳ ಸ್ಥಿತಿಯನ್ನು ನೆನೆಸಿಕೊಂಡರೆ ಕಲ್ಲು ಹೃದಯವೂ ಕೂಡ ಕರಗಿ ನೀರಾಗುವುದು; ಕಟುಕನ ಕಣ್ಣುಗಳಲ್ಲಿಯೂ ಕೂಡ ಕಣ್ಣೀರು ಧಾರಾಧಾರೆಯಾಗಿ ಸುರಿಯುವುದು. ಅದೇನು? ಜಗತ್ತೆಲ್ಲವೂ ತಪಸ್ವಿಯ ಕಡೆ ಕಲ್ಲೆಸೆಯಬಹುದು. ಜಗದೀಶ್ವರನು ಮಾತ್ರ ತಪಸ್ವಿಯನ್ನು ಕಾಪಾಡಲು ನಡುಕಟ್ಟಿ ಸಿದ್ಧನಾಗಿರುವನು. ಮಹರ್ಷಿಗಳು ಲಿಂಗದ ಹಿಂದೆ ಸಮಾಧಿಸ್ಥರಾಗಿದ್ದರು. ಕ್ರಿಮಿಕೀಟಗಳು ಅವರ ಮೈಯನ್ನು ತಿಂದವು. ರಕ್ತವು ದೇಹದಲ್ಲಿ ಸುರಿಯುತ್ತಿತ್ತು. ಹುಡುಗರು ಹುಚ್ಚನೆಂದು ಅವರ ಕಡೆ ಕಲ್ಲನ್ನೆಸೆಯುತ್ತಿದ್ದರು. ಮುನಿಗಳು ಮಾತ್ರ ಬಹಿರ್ಮುಖರಾಗಲಿಲ್ಲ. ಅದೆಂತಹ ತಪಸ್ಸು! ಪರಮಾತ್ಮನು ಇವರ ತಪಸ್ಸನ್ನು ನೋಡಿದನು. ತನ್ನ ಭಕ್ತನಿಗಾದ ಅವಮಾನವನ್ನು ನೋಡಿದನು. ಸಹಿಸಲಾಗಲಿಲ್ಲ. ಕೂಡಲೆ ಶೇಷಾದ್ರಿ ಸ್ವಾಮಿಗಳನ್ನು ಕಳುಹಿಸಿದನು. ಸ್ವಾಮಿಗಳು ಬಾಲಕನನ್ನು ಮೇಲೆ ಸ್ಥಳಕ್ಕೆ ಕರೆದುಕೊಂಡು ಹೋದರು. ಗಾಯಗಳಿಗೆ ಮುಲಾಮನ್ನು ಹಚ್ಚಿದರು. ಮುನಿಗಳಿಗೆ ಮಾತ್ರ ದೇಹಸ್ಮೃತಿಯೇ ಇರಲಿಲ್ಲ. ಭಕ್ತರು ಅವರ ಬಾಯಿಗೆ ದಿನವೂ ಹಾಲನ್ನು ಹಾಕುತ್ತಿದ್ದರು. 45 ದಿನಗಳು ಹೀಗೆಯೇ ಆಗಿ ಹೋದವು. ಎಂತಹ ನಿರ್ವಿಕಲ್ಪ ಸಮಾಧಿ!

ಪ್ರಪಂಚ ಪರಿಚಯ

ಇಂಗ್ಲೆಂಡ್—ಜನನ ಸಂಖ್ಯೆಯನ್ನು ಹೆಚ್ಚಿಸುವ ಸಲುವಾಗಿ ಒಂದು ಕಾನೂನನ್ನು ಪಾರ್ಲಿಮೆಂಟಿನಲ್ಲಿ ತರುವವರಾಗಿರುವರು. ಯಾವ ತರಗತಿಯ ಜನರಲ್ಲಿ ಜನನ ಸಂಖ್ಯೆಯು ಹೆಚ್ಚು ಎಂಬುದನ್ನು ಕಂಡುಹಿಡಿಯಲೂ, ದಂಪತಿಗಳ ವಯಸ್ಸು, ಆರ್ಥಿಕಸ್ಥಿತಿ, ಮುಂತಾದ ಯಾವ ಸನ್ನಿವೇಶಗಳು ಜನನ ಸಂಖ್ಯೆಯು ಹೆಚ್ಚುವುದಕ್ಕೆ ಸಾಧಕವೆಂಬುದನ್ನು ಕಂಡುಹಿಡಿಯಲೂ, ಈ ಕಾನೂನು ಬರಲಿದೆ. ಇದನ್ನು ಜಾರಿಗೆ ತಂದರೆ ಹಲವು ರಹಸ್ಯಗಳನ್ನು ಹೊರಗೆಡಹಬೇಕಾಗುವುದೆಂದೂ, ಇದು ಕೂಡದೆಂದೂ ಹಲವರ ಅಭಿಮತ. ಮುಂದಿನ ವರ್ಷ ನಡೆಯುವ ಚುನಾವಣೆಗಳ ಉಮೇದುವಾರಿಕೆಗಳೂ ಸಿದ್ಧತೆಗಳೂ ಪ್ರಾರಂಭವಾಗಿವೆ. ಹದಿನೈದು ಲಕ್ಷ ಮಂದಿ ನಿರುದ್ಯೋಗಿಗಳು ಮಾತ್ರವಿರುವರಂತೆ.

ಚೀಣ—ಇಲ್ಲಿನ ಸಮುದ್ರವ್ಯಾಪಾರದ ತೆರಿಗೆಯ ಉತ್ಪತ್ತಿಯು ಒಂದು ವರ್ಷಕ್ಕೆ ಒಂದು ಕೋಟಿ ಹತ್ತು ಲಕ್ಷ ಪೌಂಡುಗಳು. ಇಂಗ್ಲೆಂಡಿನ ನಾಲ್ಕು ಕೋಟಿ ಇಪ್ಪತ್ತು ಲಕ್ಷ ಪೌಂಡುಗಳು. ಸಂಯುಕ್ತ ಸಂಸ್ಥಾನಗಳ ಒಂದು ಕೋಟಿ ಪೌಂಡುಗಳು. ಇಷ್ಟು ಕಾಲಕ್ಕೂ ಈ ಉತ್ಪತ್ತಿಯು ಆಧಾರವಾಗಿತ್ತು. ಇದರ ಅರ್ಧ ಉತ್ಪತ್ತಿಯು ಷಾಂಘೈ ಪಟ್ಟಣದ್ದು. ಆ ಪಟ್ಟಣವನ್ನು ಈಗ ಜಪಾನರು ಹಿಡಿದುಕೊಂಡಿದ್ದಾರೆ. ಈ ಉತ್ಪತ್ತಿಯನ್ನೂ ತಮ್ಮ ವಶಪಡಿಸಿಕೊಂಡಿದ್ದಾರೆ. ಹದಿನೆಂಟು ಕೋಟಿ ಪೌಂಡುಗಳನ್ನು ಬಂಡವಾಳವನ್ನು ಅಲ್ಲಿ ವಿನಿಯೋಗಿಸಿರುವ ಇಂಗ್ಲೆಂಡಿಗೆ ಈಗ ತೀರ ಕಳವಳಕ್ಕೆ ಆರಂಭವಾಗಿದೆ. ಚೀಣೆಯು ಕೊನೆಯುಸಿರಿಗೂ ಹೋರಾಡುವ ನಿಶ್ಚಯದಲ್ಲಿದೆ. ಸದ್ಯಕ್ಕೆ ಸಂಪೂರ್ಣವಾಗಿ ಸೋಲುವಂತಿಲ್ಲ.

ಜಪಾನ್—ಪರರಾಜ್ಯಗಳ ಹಡಗುಗಳನ್ನು ಉದ್ದೇಶಪೂರ್ವಕವಾಗಿಯೇ ಮುಳುಗಿಸಿದರೆಂಬ ರುಜುವಾತುಗಳು ಬರುತ್ತಿರುವಂತೆ ಕಾಣುವುದು. ಒಂಭತ್ತು ದೇಶಗಳೊಡನೆ ಚೀಣೆಯು ವಿಷಯವಾಗಿ ಮಾಡಿಕೊಂಡಿರುವ ಕರಾರುಗಳನ್ನು ತಿದ್ದುಗೆಯ ಕಾರ್ಯದಲ್ಲಿದೆ.

ತುರ್ಕಿ—ಪುನಃ ಅಲೆಕ್ಸಾಂಡ್ರೆಟ್ಟದ ತಕರಾರಿನ ಧ್ವನಿಯು ಪ್ರಸ್ತಿ. ಈ ಬಾರಿ ಫ್ರಾನ್ಸನ್ನು ಸ್ವಲ್ಪ ಕಟುವಾಗಿಯೇ ತುರ್ಕಿಯು ಕೇಳಿದೆ.

ಸ್ಪೇಯಿನ್—ಅಂತರ್ಯುದ್ಧವು ಇನ್ನೂ ನಿಂತಿಲ್ಲ. ದಂಗೆಕೋರರ ಕಾಟವು ಸರ್ಕಾರದ ಪಕ್ಷಕ್ಕೆ ಆಹಾರಗಳೂ, ಯುದ್ಧಸಾಮಗ್ರಿಗಳೂ ಸಮುದ್ರ ಮಾರ್ಗವಾಗಿ ಬರದಂತೆ ತಡೆಗಟ್ಟಲು ಯತ್ನಿಸುತ್ತಿದ್ದಾರೆ.

ಇಂಡಿಯ—ಕಾಂಗ್ರೆಸ್ಸಿನ ಸಿದ್ಧತೆಗಳು ನಡೆಯುತ್ತಾ ಬಂದಿವೆ. ವೈಸರಾಯರು ಹೈದರಾಬಾದು ಮುಂತಾದ ಕಡೆಗಳಿಗೆ ಬರುವವರಾಗಿದ್ದಾರೆ. ಕಾಂಗ್ರೆಸ್ಸು ಸರಕಾರಗಳು ತಮ್ಮ ಪ್ರೋಗ್ರಾಮಿನಂತೆ ಕೊಂಚ ಕೊಂಚವಾಗಿ ಮುಂದುವರಿಯುತ್ತಿದೆ.

ಮೈಸೂರು—ಹಲವು ಪಕ್ಷಗಳು ತಲೆದೋರಬಹುದಾದರೂ ಮುಖ್ಯವಾದುವು ಕಾಂಗ್ರೆಸ್ ಮತ್ತು ಸರ್ಕಾರ ಎರಡೇ ಪಕ್ಷಗಳು. ಸರ್ಕಾರದ ಪಕ್ಷವನ್ನು ಹಿಡಿದು ಸಾಧಿಸುವೆವೆಂದು ಹೇಳುತ್ತಾ ಕೆಲವರು ಸಾಮ್ರಾಜ್ಯ ಸರ್ಕಾರದ ಮತ್ತು ಮೈಸೂರು ದರ್ಬಾರಿನ ಸೂಕ್ಷ್ಮ ಸಂಬಂಧಗಳನ್ನು ಎತ್ತಿ ಆಡುವುದರ ಮೂಲಕ ಮೈಸೂರಿನ ನಿಸ್ಸತ್ವಪರಾಧೀನತೆಯನ್ನೂ ದೌರ್ಬಲ್ಯವನ್ನೂ ತೋರಿಸುತ್ತಿರುವುದು ತೀರಾ ವಿಷಾದಕರವು.

DON'T SAY
"CAN'T AFFORD"

Who carries risk on your life? If you are not insured, your wife and children carry it. And if you die without insurance your family has to bear the loss. Would you like to let them carry the risk any longer? And above all, who would like to leave them for some one else to support?

May we suggest you to call on any of our nearest representatives or write to us for necessary advice?

National Insurance Co., Ltd.,
(Head Office — Calcutta)
Sub-Office —
DEVANGA BANK BUILDINGS,
KEMPEGOWDA ROAD, - BANGALORE CITY.

ವಿದ್ಯಾರ್ಥಿಗಳ ಸಭೆ

ರಾಜಧಾನಿಗೆ ಆಗಮಿಸಿದ್ದ [illegible] ಮತ್ತು ಶ್ರೀ|| [illegible] ಅವರುಗಳನ್ನು [illegible] ಮೈಸೂರು ಸ್ಟೂಡೆಂಟ್ಸ್ [illegible]. ಕಳೆದ [illegible] ಅವರು ಶ್ರೀ ಕೃಷ್ಣ [illegible] ವಿದ್ಯಾರ್ಥಿಗಳ ಪ್ರತಿನಿಧಿಗಳನ್ನೂ [illegible] ಸಂತೋಷ [illegible]. ಅನಂತರ ಟೌನ್ ಹಾಲಿನಲ್ಲಿ ಬಹಿರಂಗ ಸಭೆ ನಡೆಯಿತು. [illegible] ಜನರು ಸೇರಿದ್ದರು. ಶಿವಮೊಗ್ಗೆಯ ಶ್ರೀ|| [illegible] ಕೃಷ್ಣಮೂರ್ತಿಯವರು ಅಗ್ರಾಸನವನ್ನು ವಹಿಸಿದ್ದರು. ಪ್ರಾರ್ಥನೆಯಾದ ನಂತರ [illegible]. [illegible] ವಿದ್ಯಾರ್ಥಿಗಳ [illegible] ಭಾಷಣವನ್ನು ಮಾಡಿದರು. [illegible] ಸಭೆ ಮುಗಿಯಿತು.

ಜಾಮೀನು ಕೇಳಿದ್ದಾರೆ

ಮಂಡ್ಯದ ಸತ್ಯಾಗ್ರಹ ಕಾರ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದ [illegible] ಮಿ|| ಎಂ. ಎಸ್. ಶ್ರೀನಿವಾಸಾಚಾರ್ [illegible] ಮೈಸೂರು [illegible]. [illegible] ಜಾಮೀನು ಕೊಡದಿದ್ದರೆ ಬಂಧಿಸುವರೆಂದು ಹೇಳಿದ್ದಾರೆ. [illegible] ಮೈಸೂರು ಜೈಲನ್ನು ಪ್ರವೇಶಿಸಿದ್ದಾರೆ.

ಗೀತಾಜಯಂತಿ

ಕಳೆದ ಹದಿನೈದು ದಿನಗಳಿಂದಲೂ ರಾಜಧಾನಿಯ ದೊಡ್ಡ ಪೇಟೆಯ [illegible] ಛತ್ರದಲ್ಲಿ ನಡೆಯುತ್ತಿದ್ದ ಗೀತಾಜಯಂತ್ಯುತ್ಸವವು ನೆನ್ನೆ ದಿನ ಪರಿಸಮಾಪ್ತವಾಯಿತು. ಪ್ರತಿ ದಿನವೂ ಅತ್ಯಂತ ಉಪಯೋಗವಾದ ಉಪನ್ಯಾಸಗಳು ನಡೆಯುತ್ತಿದ್ದುವು. ನೂರಾರು ಜನ ಸ್ತ್ರೀಪುರುಷರು ಬಂದು ಕೇಳಿ ಆನಂದಪಡುತ್ತಿದ್ದರು.

ರೈತಸಮ್ಮೇಳನ ಮುಂದಿದ್ದನು

ಕಾಂಗ್ರೆಸ್ ಪ್ರಚಾರಕ್ಕಾಗಿ ಶ್ರೀ|| [illegible] ಟಿ. ಎಸ್. [illegible] ಮೊದಲಾದವರು [illegible] ಕಾಂಗ್ರೆಸ್ [illegible] ತಿಳಿದುಬಂದಿದೆ.

೧೪೪ನೇ ಸೆಕ್ಷನ್ ಆಜ್ಞೆ ಹೊರಡಿಸಲು ಅಧಿಕಾರ

ಕ್ರಿ. ಪ್ರೊ: ಕೋಡಿನ ೧೪೪ ನೇ ಸೆಕ್ಷನ್ ಪ್ರಕಾರ ಆಜ್ಞೆಗಳನ್ನು ಹೊರಡಿಸಲು ಕೋಲಾರ ಜಿಲ್ಲೆಯ ಕೋಲಾರ, ಬೌರಿಂಗ್ ಪೇಟೆ, ಶ್ರೀನಿವಾಸಪುರ, ಮಾಲೂರು, ಮುಳಬಾಗಿಲು, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗೌರಿಬಿದನೂರು, ತಾಲ್ಲೂಕುಗಳಲ್ಲಿಯೂ ಗುಡಿಬಂಡಾ ಸಬ್ ತಾಲ್ಲೂಕುಗಳಲ್ಲಿಯೂ ಅಮಲ್ದಾರರುಗಳಿಗೆ ಕೋಲಾರದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅಧಿಕಾರವಿತ್ತಿದ್ದಾರೆ.

ತುಮಕೂರು ಜಿಲ್ಲಾ ಮ್ಯಾಜಿಸ್ಟ್ರೇಟರವರು ತುಮಕೂರು, ಮಧುಗಿರಿ, ಗುಬ್ಬಿ, ತಿಪಟೂರು, ತುರುವೇಕೆರೆ, ಕುಣಿಗಲ್, ಪಾವಗಡ, ಚಿಕ್ಕನಾಯಕನಹಳ್ಳಿ, ಕೊರಟಗೆರೆ ಮತ್ತು ಸಿರಾ ಇಲ್ಲಿನ ಅಮಲ್ದಾರ್ ಮ್ಯಾಜಿಸ್ಟ್ರೇಟರುಗಳಿಗೆ ೧೪೪ನೇ ಸೆಕ್ಷನಿನ ಪ್ರಕಾರ ಆಜ್ಞೆ ಹೊರಡಿಸಲು ಅಧಿಕಾರ ಕೊಟ್ಟಿದ್ದಾರೆ.

ಹಾಸನ, ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ, ಅರಕಲಗೂಡು, ಮಂಜರಾಬಾದು, ಬೇಲೂರು, ಆಲೂರು ಸಬ್ ತಾಲ್ಲೂಕಿನ ಅಮಲ್ದಾರ್ ಮ್ಯಾಜಿಸ್ಟ್ರೇಟರುಗಳಿಗೂ ಹಾಸನದ ಜಿಲ್ಲಾ ಮ್ಯಾಜಿಸ್ಟ್ರೇಟರು ಈ ಅಧಿಕಾರವನ್ನು ಕೊಟ್ಟಿದ್ದಾರೆ.

ಧ್ವಜಾರೋಹಣಕ್ಕೆ ಅಡ್ಡಿ

ರಾಷ್ಟ್ರೀಯ ಧ್ವಜವನ್ನು ಬಹಿರಂಗ ಪ್ರದೇಶದಲ್ಲಿ ಎತ್ತಿ ಕಟ್ಟಕೂಡದೆಂದೂ ಇದರಿಂದ ಶ್ರೀಮನ್ಮಹಾರಾಜರವರ ಗೌರವಕ್ಕೆ ಕುಂದುಕವುಂಟಾಗಬಹುದೆಂದೂ ಶಾಂತಿ ಭಂಗವಾಗಬಹುದೆಂದೂ ವಗೈರೆ ಸೂಚಿಸಿ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದಕ್ಕೆ ಆರು ತಿಂಗಳ ಅವಧಿ ಹಾಕಿದ್ದಾರೆ.

ವಿದ್ಯಾರ್ಥಿಗಳು ಬೀಜದ ಕಾಳುಗಳು

ಸೆಂಟ್ರಲ್ ಕಾಲೇಜಿನಲ್ಲಿ ಶ್ರೀ|| ರಾಜಾಜಿ ಭಾಷಣ ಮಾಡಿದರು. ಯುವಕರು ಬೀಜದ ಕಾಳಿನಂತೆ ಇರುವರು. ಮುಂದಿನ ಪ್ರಜೆಗಳೆಂಬ ಬೆಳೆಗೆ ವಿನಾಸಲಾಗಿ ಇರಬೇಕಾದವರು. ಅವರನ್ನು ಪ್ರಕೃತ ರಾಜಕೀಯಕ್ಕೆ ಎಳೆದುಕೊಳ್ಳುವುದು ಅವಿವೇಕ. ಕೇವಲ ರಾಜಕೀಯರಂಗದಲ್ಲಿ ಸೇರಕ್ಕಾಮ ಒದಗಿದಾಗ ಮಾತ್ರ—ಬೀಜವನ್ನಾದರೂ ತಿಂದುಕೊಂಡು ಬದುಕಬೇಕಾದ ಕೃತಕದಂತೆ ಯುವಕರನ್ನು ರಾಜಕೀಯ ರಂಗಕ್ಕೆ ಇಳಿಸಲು ಒಪ್ಪಬೇಕಾಗುತ್ತದೆ. ಈಗ ಕಾರ್ಯರಂಗಕ್ಕೆ ಇಳಿಯಬೇಕಾದವರು ಮುದುಕರು ಮತ್ತು ವಯಸ್ಸು ಮೀರಿದವರು—ಎಂಬ ಅಭಿಪ್ರಾಯವನ್ನು ಸೂಚಿಸಿದರು.

ಮೈಸೂರು ಸ್ಟೇಟ್ ರೈಲ್ವೆಗಳು

1938ನೆಯ ಇಸವಿ ಜನವರಿ ಒಂದನೆಯ ತಾರೀಖಿನಿಂದ ಮೈಸೂರು ರೈಲ್ವೆಗಳು ಇಂಡಿಯಾದೇಶದಲ್ಲಿರುವ ಮೊದಲನೆಯ ವರ್ಗದ ರೈಲ್ವೆಗಳಿಗೆ ಸರಿಸಮಾನತೆಯನ್ನು ಪಡೆಯುವುವು. ಈ ಸ್ಟೇಟ್ ರೈಲ್ವೆಯವರ ಆಡಳಿತದಲ್ಲಿ ಒಟ್ಟು 732 ಮೈಲಿಗಳ ಉದ್ದದ ರೈಲಿನಲ್ಲಿ ರೈಲು ಸಂಚಾರವು ನಡೆಯುತ್ತಿರುವಂತಾಗುವುದು. ಮೈಸೂರು ಸರ್ಕಾರದವರ ಪರವಾಗಿ ಮದ್ರಾಸು ಮತ್ತು ಸದರ್ನ ಮರಾಟಾ ರೈಲ್ವೆ ಕಂಪೆನಿಯವರು ಬೆಂಗಳೂರು ಹರಿಹರ ಮತ್ತು ಯಶವಂತಪುರ—ಹಿಂದೂಪುರ ಸೆಕ್ಷನುಗಳ ಆಡಳಿತವನ್ನು ಇಪ್ಪತ್ತು ವರ್ಷಗಳ ಕಾಲದಿಂದಲೂ ನಡೆಸುತ್ತಿದ್ದರಷ್ಟೆ; 1938 ನೆಯ ಇಸವಿ ಜನವರಿ ಒಂದನೆಯ ತಾರೀಖಿನಿಂದ ಆ ಲೈನುಗಳ ಆಡಳಿತವನ್ನು ಮೈಸೂರು ಸರ್ಕಾರದವರು ಪುನಃ ವಾಪಸು ಪಡೆಸಿಕೊಳ್ಳುವರು.

ಅದೇ ತಾರೀಖಿನ ದಿನ ಮೈಸೂರು ಸ್ಟೇಟ್ ರೈಲ್ವೆಗಳವರು ಮದ್ರಾಸು ಮತ್ತು ಸದರ್ನ ಮರಾಟಾ ರೈಲ್ವೆ ಕಂಪೆನಿಯವರಿಂದ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನನ್ನೂ ತಮ್ಮ ಆಡಳಿತಕ್ಕೆ ವಹಿಸಿಕೊಳ್ಳುವರು. ಅವರ ಬ್ರಾಡ್‌ಗೇಜ್ ಗುಡ್ಸ್ ಷೆಡ್ ಮತ್ತು ಬ್ರಾಡ್‌ಗೇಜ್ ರೈಲ್ವೆ ಲೈನು—ಇವುಗಳ ಆಡಳಿತವನ್ನು ಕಂಪೆನಿಗೆ ಬಿಟ್ಟಿರುವರು.

ಬೆಂಗಳೂರು—ಹರಿಹರ ಮತ್ತು ಯಶವಂತಪುರ—ಹಿಂದೂಪುರ ಈ ಲೈನುಗಳಲ್ಲಿ ಬಸ್ಸುಗಳ ಪೈಪೋಟಿಯು ಬಹಳ ಜಾಸ್ತಿಯಾಗಿರುವುದರಿಂದ ಅದನ್ನು ತಡೆಯಲು 1938ನೆಯ ಇಸವಿ ಜನವರಿ ಒಂದನೆಯ ತಾರೀಖಿನಿಂದ ಮೂರನೆಯ ತರಗತಿಯ ಪ್ರಯಾಣಿಕರ ಟಿಕೇಟು ದರಗಳನ್ನು ಕಡಮೆ ಮಾಡಲಾಗುವುದು.

ಹಾಸನಾದಾಂ! ಆನಂದಪಡಿಂ!
ಹೆಚ್ಚು ಸುವಾಸನೆಯೂ, ರುಚಿಕರವೂ
ಹಿಂದಿನ್ನವ್ವೂ ಆದ
ಬ್ಲೂ ಬರ್ಡ್ ಬ್ರಾಂಡ್
ಟೀ
ಯನ್ನೇ ಉಪಯೋಗಿಸಿರಿ!
ಇದು ನೀಲಗಿರಿಯಲ್ಲಿ ಬೆಳೆದ ಟೀ.
ಇದು ಭಾರತೀಯರಿಗೆ ಯೋಗ್ಯವಾದ ಟೀ.
ಎಲ್ಲೆಲ್ಲಿಯೂ ದೊರೆಯುತ್ತೆ
ಮೈಸೂರಿನ ಸೋಲ್ ಏಜೆಂಟರು:—
ಬಾರಿ ಮತ್ತು ಪ್ರಕಾಶ್
ಪ್ಯಾಲೇಸ್ ರೋಡು, ಮೈಸೂರು

ಮುಫತ್ತು | ಇನಾಂ | ಮುಫತ್ತು
ಜೀವನ ನೌಕಾ
ಮನುಷ್ಯರ ಜೀವನ
ಯಾತ್ರೆಯನ್ನು ಸುಖವಾಗಿ
ದಿಂದ ಜರಗಿಸುವುದಕ್ಕೆ ದಾರಿ
ಯನ್ನು ತೋರಿಸುವ
ಪುಸ್ತಕವು
ಪಿ. ಬಿ. ಇಲ್ಲ : ಕ್ರಯವಿಲ್ಲ
ಮದನಮಂಜರಿ ಫಾರ್ಮಸಿ
1104 ಕೈನಾ ಬಜಾರ್, ಮದರಾಸು.

1938 Calendars 1938
OF
A M R U T A N J A N LTD.

(Gandhij, Javaharlal, Lady, God Krishna, varieties,) Rs. 8/- per 100.

N.B.—A limited quantity (not less than lots of 25) available for sale. Mention nearest Rly. Station and send M.O. to avoid V.P. Charges.



ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲತಕ್ಕ ಸ್ಪರ್ಧೆಗೆ ಮೊದ ಬಹುಮಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರ ವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ನಾಲ್ಕು ಉತ್ತರಗಳನ್ನು ಕಳುಹುವವರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟಲ್ ಸ್ಟ್ಯಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು ಉತ್ತರಗಳನ್ನು ಬರೆಯತಕ್ಕವರು ಡಿಸೆಂಬರ್ 27 ಮತ್ತು ಜನವರಿ 3 ನೇ ಸಾಧ್ವಿ ಕೂಪನ್ನಿನಲ್ಲಾಗಲಿ ಅಥವ ತಾಯಿನಾಡು ಪೇಪರಿನಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬರಿಯ ಕಾಗದದಲ್ಲಾಗಲಿ ಚಿತ್ರಿಸಿದಂತೆ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1938 ನೇ ಇಸವಿ ಜನವರಿ ೫ ನೇ ತಾರೀಖು ಕೊನೆಯದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು 1938 ನೇ ಜನವರಿ 17 ನೇ ತಾರೀಖಿನ ಸಾಧ್ವಿ ಯಲ್ಲಿ ಪ್ರಕಟಿಸಲಾಗುತ್ತೆ.

ಚಿತ್ರಶಾಲಾ ಸ್ಪರ್ಧೆ ನಂ ೪೦



ನೆಸರು..

ವಿಳಾಸ..

ಕೂಪನ್ ನಂ. .... ಪೋಸ್ಟಲ್ ಆರ್ಡರ್ ನಂಬರು........

ಪೋಸ್ಟು ಮೂಲಕ ಕಳುಹಿಸು ವವರು ಜನವರಿ ೧೨ ನೇ ತಾರೀಖು ಕೊನೆ ಕಳುಹಿಸಬಹುದು.

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರಗಳನ್ನು ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನ

೫೦ ರೂಪಾಯಿ

ಚಿತ್ರಶಾಲಾ ಸ್ಪರ್ಧೆ ನಂ. ೪೦



ಹೆಸರು..

ವಿಳಾಸ..

ಕೂಪನ್ ನಂ.................ಪೋಸ್ಟಲ್ ಆರ್ಡರ್ ನಂಬರು......

ಎಡದಿಂದ ಬಲಕ್ಕೆ

೧ ವಿಘ್ನ. ೩ ಬರುವಿಕೆ. ೬ ಬೃಹಸ್ಪತಿ, ಬ್ರಹ್ಮ. ೮ ಇಂತಹ ಹೆಂಗಸನ್ನು ನೋಡುವವರೇ ಹೆಚ್ಚು. ೯ ಓಡಾಡುವ, ಆಟವಾಡುವ. ೧೦ ಯಾವ ಕೆಲಸಕ್ಕೂ ಮೊದಲೇ ಅದರ ಫಲವನ್ನು ನೋಡಲು ಸಾಧ್ಯ. ೧೧ ಇದಕ್ಕೆ ಅಧಿಪತಿಯಾಗಿ ಪ್ರಜಾನುರಾಗಿಯಾಗಿರಬೇಕು. ೧೪ ಉತ್ತಮವಾದ. ೧೯ ಚಂದ್ರ, ಕಳ್ಳ, ... ೨೦ ಪರಿಹರಿಸು. ೨೧ ರಣರಂಗದಲ್ಲಿ ಇವನ್ನು ಕೇಳಬಹುದು. ೨೨ ... ೨೪ ಇದರ ಸಹಾಯದಿಂದ ಯಾರೂ ಈ ಪ್ರಪಂಚದಲ್ಲಿ ಧೈರ್ಯವಾಗಿ ನಿಲ್ಲ ಬಹುದು. ೨೬ ....ಮಾಡಬೇಕಾದ ಸಂದರ್ಭ ಬಂದರೂ, ಆಗಲೂ ನ್ಯಾಯ ವಿರುದ್ಧವಾಗದಂತೆ ಮಾಡಬೇಕು. ೩೦ ಬಾಗಿಲು. ೩೩ ಒಬ್ಬ ರಾಕ್ಷಸ. ೩೪ ರಾಕ್ಷಸ. ಹನುಮಂತ. ೩೬ ಹಟ, ಪ್ರಮಾಣ.

ಮೇಲಿನಿಂದ ಕೆಳಕ್ಕೆ

೧. ನಿಜವಾಗಿ. (ಅಕ್ಷರಗಳು ಕೆಳಗಿನಿಂದ) ೨. ... ೪. ಮಾರಾಂಗನೆ. ೫. ಈತ ನಿಗೆ ಕಣ್ಣಿದ್ದರೂ ಕಾಣಿಸುವುದಿಲ್ಲ. ೬. ಓದುವುದು. ೭. ನೂರು, ... ೧೨. ಈತನು ಇದ್ದದ್ದರಲ್ಲಿ ತೃಪ್ತಿಗೊಂಡಿರಲಾರನು. ೧೩. ರಾಜಿ ಬರುವುದು. ೧೫. ಇದು ಒಳ್ಳೆಯದಾಗಿದ್ದರೆ ಜನರು ಕೆಡುವುದಿಲ್ಲ. ೧೬. ಇವರು ವೇದ ಶಾಸ್ತ್ರಗಳನ್ನು ನಂಬುವುದಿಲ್ಲ. ೧೭. ......ಯಾದಮೇಲೆ ಬದುಕಿ ಪ್ರಯೋಜನವೇನು? ೧೮. ಕೆಲವರಿಗೆ ಕೋಪವು ಇಲ್ಲೇ ಇರುತ್ತದೆ. ೨೦. ಬಂದ ಸಂಪತ್ತನ್ನು ......ವುದ ಕ್ಕೂ ಒಂದು ರೀತಿ ಬೇಕು. ೨೩. ತನ್ನ.......ವು ಕೈಗೂಡಲಿಲ್ಲವೆಂದು ಅನೇಕರು ಆತ್ಮಹತ್ಯ ಮಾಡಿಕೊಳ್ಳುತ್ತಾರೆ. ೨೫. ಕಾವಲುಗಾರ. ೨೭. ಸನ್ಯಾಸಿ. ೨೮. ರುದ್ರನಾದ. ೩೧. ಎಂತಹ ಅನುಭವಿಯೂ ಧೈರ್ಯಶಾಲಿಯೂ ಆದ ವೈಮಾನಿಕ ನಾದರೂ ಇದಿಲ್ಲದಿದ್ದರೆ ಪ್ರಯಾಣ ಮಾಡಲಾರನು.

ವಿಳಾಸ:— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ವಿ. ಸೂ.—ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಟೇಟ್ ಮಾರ್ಟ್—ಇವರಿಗೂ, ಬೆಂಗಳೂರಿನಲ್ಲಿ ಭಾಗ ವಹಿಸುವವರು ಪಿ. ಕೆ. ಮೂರ್ತಿ, ಸ್ಟೇಷನರಿ ಷಾಪ್, ಕಿಂಗಿನ ಸ್ಟೇಶನರಿ ವ್ಯಾಪಾರಿಗಳು, ನಂ 46 ನ್ಯೂ ಮಾರ್ಕೆಟ್, ಸೀತಾರಾಂಪ ಬೀದಿ. ಇವರಿಗೂ, ತುಮಕೂರಿನಲ್ಲಿ ಸ್ಪರ್ಧೆಗೆ ಭಾಗ ವಹಿಸುವವರು ಹೆಚ್. ರಾಮಚಂದ್ರಯ್ಯ, ಜನರಲ್ ಮರ್ಚೆಂಟ್ ಅಂಡ್ ನ್ಯೂಸ್ ಏಜೆಂಟ್ ಇವರಲ್ಲಿಯೂ, ಹಾಸನದಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಪ್ರವೇಶ ಧನದೊಡನೆ ಮೆಸರ್ಸ್—ನಂಜನಗೂಡು ನ್ಯೂಸ್ ಏಜೆನ್ಸಿ, ರೈಲ್ವೆ ಸ್ಟೇಷನ್ ಬುಕ್ ಸ್ಟಾಲ್, ಹಾಸನ ಇವರಲ್ಲಿ ಹಾಜರುಮಾಡಬೇಕಾಗಿ ವಿನಂತಿ, ಮ್ಯಾ. ಚಿ.

ಚಕ್ರಬಂಧ ಸ್ಪರ್ಧೆ ನಂ. ೧೨

೨೦೦ ರೂಪಾಯಿ ಬಹುಮಾನ

ಕಡೆಯ ತಾ|| ೧೨-೧-೩೮

ಮೂರನೆಯ ಬಹುಮಾನ ೧೦೦-೦-೦

ಇತರ ಬಹುಮಾನ ೧೦೦

[illegible] ಹೆಚ್ಚಿಗೆ ಕೂಪನ್ನುಗಳನ್ನು ಕಳುಹಿಸಿದವರಿಗೆ ಒಂದು ರಿಸ್ಟ್‌ವಾಚ್ [illegible] ಸ್ತ್ರೀಯರ ಉತ್ತರಗಳ ಪೈಕಿ ಉತ್ತಮವಾದುದಕ್ಕೆ ಒಂದು [illegible] ವಿದ್ಯಾರ್ಥಿಗಳ ಉತ್ತರಗಳಲ್ಲಿ ಉತ್ತಮವಾದದ್ದಕ್ಕೆ ಒಂದು [illegible] ಐದು ಮತ್ತು ಹೆಚ್ಚಿಗೆ ಕೂಪನ್ನುಗಳನ್ನು ಕಳುಹಿಸಿದ ಪ್ರತಿಯೊಬ್ಬರಿಗೂ ವಿಶೇಷ ಬಹುಮಾನವುಂಟು.

ಉತ್ತರ ಕಳುಹಿಸಿದ ಪ್ರತಿಯೊಬ್ಬರಿಗೂ ಒಂದು ಉತ್ತಮವಾದ ಕ್ಯಾಲೆಂಡರು ಕೊಡಲಾಗುತ್ತೆ.



ಹೆಸರು ....

ವಿಳಾಸ ....

ಕೂಪನ್ ನಂಬರು ...

ಪೋಸ್ಟಲ್ ಆರ್ಡರ್ ನಂ. ....

ಎಡದಿಂದ ಬಲಕ್ಕೆ :—೧. ಹೂವು ೫. ಇದರಿಂದ ಮೈಸೂರು ಸರ್ಕಾರಕ್ಕೆ ಬಹಳ ಆದಾಯವಿದೆ [illegible] ವಿಷಯಗಳನ್ನು ಚೆನ್ನಾಗಿ........ ಮಾಡಿ ನಿರ್ಧರಿಸುವುದು ಉತ್ತಮ [illegible] ೧೧. ಮುಂಡ ೧೩. ಇದರಿಂದ [illegible] ಕಡೆಗಳಲ್ಲೂ [illegible] ೧೭. ಆತುರ ದೊಡ್ಡದು, ಇದು ಸಂಭವಿಸಲು [illegible] ೨೦. [illegible] ಸಾಮಾನ್ಯವಾಗಿ [illegible]

ಮೇಲಿನಿಂದ ಕೆಳಕ್ಕೆ :—[illegible] ಸ್ವರಾಜ್ಯ [illegible] ೧೯. ಬಗೆ, ರೀತಿ ೧೬. [illegible] ಉತ್ತಮವಾದ.

ನಿಯಮಗಳು :—೧. ಮೊಹರಾದ ಉತ್ತರವು [illegible] ಬ್ಯಾಂಕಿಂಗ್ ಸಿಂಡಿಕೇಟ್‌ನಲ್ಲಿಟ್ಟಿರುತ್ತೆ. [illegible] ಸರಿಯಾದ ಉತ್ತರ. ಪ್ರತಿ ಪದವೂ ಒಂದೊಂದು ತಪ್ಪಾಗಿ [illegible] ೨. ಪ್ರತಿ ಉತ್ತರಕ್ಕೂ ಪ್ರವೇಶಧನ [illegible] ಉತ್ತರಗಳನ್ನು ಸ್ವೀಕರಿಸುವುದಿಲ್ಲ. [illegible] ೩. ಉತ್ತರಗಳನ್ನು [illegible] ಕಳುಹಿಸಬೇಕು. ೪. ಸ್ಪರ್ಧೆಯ ಉತ್ತರವು 1938 ನೇ ಜನವರಿ 10 ನೇ [illegible] ಪತ್ರಿಕೆಯಲ್ಲೂ [illegible] 1938 ನೇ ಜನವರಿ ತಾರೀಖು 31 ನೇ "ಸಾಧ್ವಿ"ಯಲ್ಲೂ ಪ್ರಕಟಿಸಲಾಗುತ್ತೆ. [illegible] ಸ್ಪರ್ಧೆಯ [illegible] ಪತ್ರ ವ್ಯವಹಾರಗಳಿಗೆ ಅವಕಾಶವಿರುವುದಿಲ್ಲ. ಉತ್ತರವನ್ನು ಕಳುಹಿಸುವವರೆಲ್ಲರೂ ಈ ನಿಬಂಧನೆಗಳಿಗೆ ಒಪ್ಪಿ ಕಳುಹಿಸಿರುವಂತೆ [illegible] ಈ ಸ್ಪರ್ಧೆಯ ಉತ್ತರ ಮತ್ತು ಮುಂದಿನ ಕೂಪನ್ನು [illegible] ಸರಿಯಾದ ಉತ್ತರ [illegible] ಪತ್ರಿಕೆಗಳಲ್ಲಿಯೂ ತಿಳಿಸುತ್ತೆ.

ನಿಜಂಟರುಗಳು :—[illegible] ಗರ್ಲ್ಸ್ ಸ್ಕೂಲ್ ಎದುರು, ಚಿಕ್ಕಪೇಟೆ, ಬೆಂಗಳೂರು ಸಿಟಿ. [illegible] C/o ಸಿ. ವಿ. ರಂಗನಾಥಶೆಟ್ಟಿ ಮರ್ಚೆಂಟ್, ಚಿಕ್ಕಮಗಳೂರು. [illegible] ಸ್ಕೂಲ್ ಮಾಸ್ಟರ್, ಚಿತ್ರದುರ್ಗ [illegible] ಮ್ಯಾನೇಜರ್ : ಚಕ್ರಬಂಧ ಸ್ಪರ್ಧೆ, [illegible], ತುಮಕೂರು.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇದರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ನಡೆಯುತ್ತದೆ.

[illegible] ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿ [illegible] ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ [illegible] ಮಾಡಲ್ಪಡುತ್ತದೆ.

ಸ್ವದೇಶದ [illegible] ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ



ಅತ್ಯುತ್ತಮವಾದ

ರಾಯಿಪುಡಿ

ಮೈಸೂರು ಕೌಸಲ್ಯ ಸ್ಟೋರ್‌ನಲ್ಲಿ ದೊರೆಯುತ್ತದೆ.

ಎಲ್ಲಾ ಕಡೆಯಲ್ಲಿಯೂ ಏಜೆಂಟರು ಬೇಕಾಗಿದ್ದಾರೆ.

ಹಿಂದೂಸ್ಥಾನಕ್ಕೆ

ಅಚ್ಚುಮೆಚ್ಚಿಗೆಯಾದ ಸ್ನಾನದ ಸಾಬೂನು



ಸುವಾಸನೆಯಿಂದ ಕೂಡಿ ಉಲ್ಲಾಸವನ್ನುಂಟುಮಾಡುವ ಈ ಸಾಬೂನು [illegible] ಮೆಚ್ಚುಗೆಯಾಗಿದೆ.

ನಿಮಗೆ ಬೇಕಾಗಿರುವುದು

ಮೈಸೂರು ಗಂಧದ ಸಾಬೂನು

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಗೌರ್ನಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು.

Edited, Printed & Published by Agaram Rangiah, B.A., at Sri Rama Press, D. Subbiah Road, Mysore.

REGD. NO. M. 3534.

HAL)

ಸಾಧ್ವಿ

SADHVI LEADING WEEKLY

ಸಂಪಾದಕರು: ಆಗರಂ ರಂಗಯ್ಯ, ಬಿ.ಎ.

ಸಂಪುಟ ೩ | 3—1—38 ಮೈಸೂರು: ಸೋಮವಾರ ೩—೧—೧೯೩೮ [ಸಂಚಿಕೆ ೪೬

"ಸಿಂಹಳದ್ವೀಪದ ರಾಣಿ"

" ಗೋಹರ್ ಕರ್ನಾಟಕಿ "

ಶೀಘ್ರದಲ್ಲಿಯೇ ಚಲಿಸುವ ಟಾಕೀಸಿಗೆ ಬರುತ್ತದೆ.

ಈಗ ದಿನಚರಿ ತಾಯಿನಾಡು ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಚಂದ್ರಕಲಾ ಸ್ಪರ್ಧೆಯು ಇನ್ನು ಮುಂದೆ **ಸಾಧ್ವಿ** ಪತ್ರಿಕೆಯಲ್ಲೂ ಸಹ ಪ್ರಕಟವಾಗುತ್ತೆ.



ಒಂದು ರೂ ಗೆ ೭ ಕೂಪನ್ — **ಉತ್ತರಗಳನ್ನು ಕಳುಹಿಸಲು ಕಡೆಯ ತಾರೀಖು ೧೩-೧-೩೮** — ೮ ಆಣೆಗೆ ೩ ಕೂಪನ್

ಸೂಚನೆ. ಈ ಸ್ಪರ್ಧೆಯ ಸರಿಯಾದ ಉತ್ತರವನ್ನು ಶ್ರೀರಂಗಪಟ್ಟಣದ ಟೌನ್ ಬ್ಯಾಂಕ್ (ಲಿಮಿಟೆಡ್) ಆಫೀಸಿನಲ್ಲಿ ಮೊಹರು ಮಾಡಿ ಇರಿಸಿರುತ್ತೆ. ಆದಕ್ಕೆ ಪ್ರತಿ ಅಕ್ಷರವೂ ಸರಿಹೋಲುವಕ್ಕೆ ಸ್ಪರ್ಧೆಗೆ ಮೊದಲನೇ ಬಹುಮಾನವನ್ನೂ, ಒಂದು ಮತ್ತು ಎರಡು ತಪ್ಪಿರುವವರುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಮೂರಕ್ಕಿಂತ ಕಡಿಮೆ ಉತ್ತರಗಳನ್ನು ಅಂಗೀಕರಿಸುವುದಿಲ್ಲ. ೮ ಆಣೆಗೆ ಮೂರು ಉತ್ತರಗಳನ್ನು ಕಳುಹಿಸಬಹುದು. "ಆರು ಉತ್ತರಗಳನ್ನು ಕಳುಹಿಸುವವರು ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು." ಪ್ರವೇಶಧನವನ್ನು ಪೋಸ್ಟಲ್ ಸ್ಟಾಂಪು ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಡಿಸೆಂಬರ್ 27 ಮತ್ತು 1938 ನೇ ಜನವರಿ 3ನೇ ತಾರೀಖು "ಸಾಧ್ವಿ" ಕೂಪನ್ನುಗಳಲ್ಲಾಗಲಿ ಅಥವ "ತಾಯಿನಾಡು" ಪೇಪರಿನಲ್ಲಿರತಕ್ಕ ಕೂಪನ್ನುಗಳಲ್ಲಾಗಲಿ ಅಥವಾ ಬಿಳಿಯ ಕಾಗದದಲಾಗಲಿ ಚಿತ್ರದಂತೆ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1938 ನೇ ಇಸವಿ ಜನವರಿ 13 ನೇ ತಾರೀಖು ಕೊನೆಯದಿನ. ಅಂಚೆ ಕೂಲಿ ಕಡಿಮೆಯಿರುವ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು 1938 ನೇ ಜನವರಿ 17 ನೇ ತಾರೀಖಿನ ಸಾಧ್ವಿಯಲ್ಲಿ ಪ್ರಕಟಿಸಲಾಗುತ್ತೆ.

ಕಪ್ಪಗೆ ಮಾಡಿದ ಪ್ರೊಪೆಸರು ಚೌಕಗಳನ್ನು ಬಿಡಿಸಿದ ಸ್ವೀಕರಿಸುವುದಿಲ್ಲ



ಕೂಪನ್ ನಂ. ಪ್ರೊ. ಆ. ನಂ.
ಹೆಸರು
ವಿಳಾಸ
೧೦

ಎಡದಿಂದ ಬಲಕ್ಕೆ—

೧. ರಾಮಲಿಂಗ ಇರುವ ಸ್ಥಳಕ್ಕೆ ಈ ಹೆಸರು ಬಂದಿದೆ. ೩. ನವರತ್ನಗಳಲ್ಲೊಂದು. ೬. ಸಾಮಾನ್ಯವಾಗಿ ಹೆಂಗಳಿಗೇ ಇದನ್ನು ಉಪಯೋಗಿಸುವುದು ಹೆಚ್ಚು. ೮. ಆರೋಚ ಅಥವ ಪ್ಯಾಲಿಸ್. ೧೦. ಸ್ತ್ರೀಯರಿಗೆ ಈ ಧರ್ಮವೇ ಭೂಷಣವೆಂದು ಹೇಳಬಹುದು. ೧೧. ಇದು ಇಲ್ಲದ ಮನೆಯಿಲ್ಲ. (ಸ್ಥಳಪಲ್ಲಟ.) ೧೩. ಯಜ್ಞಯಾಗಾದಿಗಳಲ್ಲಿ ದೇವತೆಗಳ ತೃಪ್ತಿಗೋಸ್ಕರ ಇದನ್ನು ಮಾಡುತ್ತಾರೆ. ೧೫. ಬಿಲ್ಲಿಗೆ ಕಟ್ಟುವ ಹಗ್ಗ, ೩೮. ೧೭. ಒಂದು ದುಷ್ಟಪ್ರಾಣಿ. ೧೮. ಕೋಟೆ. ೧೯. ಕನ್ಯಾ ಕೊಡುವುದಕ್ಕೂ ತರುವುದಕ್ಕೂ ಸಹ ಕೆಲವರು ಮುಂಚೆ ಇದನ್ನು ನೋಡುತ್ತಾರೆ. ೧೧. ಆಟಾರ ಬೀಸ. ೨೦. ಇದು ಇಲ್ಲದಿದ್ದಲ್ಲಿ ವರ್ತಮಾನಗಳನ್ನು ತಿಳಿಯಲು, ತಿಳಿಸಲು ಕಷ್ಟವಾಗುತ್ತಿತ್ತು. ೨೩. ಆದಚಣೆ. ೨೪. ಸುತರು ಹೀಗಾಗಬೇಕೆಂದು ಮಾತಾ ಪಿತೃಗಳು ಹಾರೈಸುತ್ತಾರೆ. (ಸ್ಥಳಪಲ್ಲಟ.)

ಮೇಲಿನಿಂದ ಕೆಳಕ್ಕೆ—

೧. ಗುಂಪು. ೨. ಈತನೂ ತಂದೆಗೆ ಸಮಾನನೆಂದೆ ಪೂಜ್ಯನು. ೪. ಕೆಂಪು,ಡೀ } ೫... ...ಜ್ವಾಲೆಯನ್ನು ಸಹಿಸುವುದು ಕಷ್ಟ. ೬. ಈಗಲೂ ಕೆಲವು ಸ್ತ್ರೀಯರು ಈ ಕಾಟದಿಂದ ನರಳುತ್ತಲಿರುತ್ತಾರೆ. (ಸ್ಥಳಪಲ್ಲಟ.) ೭. ಬಾಲದಲ್ಲಿ ವಿಷವುಳ್ಳ ಜಂತು. (ಸ್ಥಳಪಲ್ಲಟ.) ೮. ಇಷ್ಟ. ೯. ಇದೊಂದು ವಿಧವಾದ ನೂಲು ತೆಗೆಯುವ ಯಂತ್ರ. ೧೦. ಈ ಗುಣ ಎಲ್ಲರಲ್ಲೂ ಇರುವುದಿಲ್ಲ. ೧೬. ಮುತ್ತು, ತೆರೆ. ೧೭. ಇದು ಇಲ್ಲದಿದ್ದರೆ ಪ್ರಾಣಿಗಳು ಬದುಕಲಾರವು (ಸ್ಥಳಪಲ್ಲಟ) ೨೧. ಇದರಿಂದ ತಯಾರಾದ ಸಾಮಾನುಗಳು ನೋಡಲು ಬಹು ರಮ್ಯ ಮತ್ತು ಬೆಲೆ ಹೆಚ್ಚು. ೨೨. ಹಿರಿಯವರಲ್ಲಿ ಕಿರಿಯವರು ಈ ರೀತಿಯಿಂದ ವರ್ತಿಸುವುದು ಉತ್ತಮ.

ಬೆಂಗಳೂರಿನವರು—ಹೆಚ್. ಕೆ. ಮೂರ್ತಿ, ನಂ. 46, ಮರ್ಚೆಂಟ್, ಸೀತಾರಾವ್ ಸ್ಟ್ರೀಟ್, ನ್ಯೂ ಮಾರ್ಕೆಟ್, ಮೈಸೂರಿನವರು—ದಿ ಸಿಟಿ ಜನರಲ್ ಏಜೆನ್ಸಿ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಅಥವಾ ಪಿ. ಟಿ. ರಾಮಚಂದ್ರ ಶೆಟ್ಟರು, 231, ಚಿಕ್ಕ ಗಡಿಯಾರ ಅಗ್ರಹಾರ, ತುಮಕೂರಿನವರು—ಹೆಚ್. ರಾಮಚಂದ್ರಯ್ಯ, ಜನರಲ್ ಮರ್ಚೆಂಟ್ ಅಂಡ್ ನ್ಯೂಸ್ ಏಜೆಂಟ್ ಹಾಸನದವರು—ಎ. ಎಸ್. ವಿಶ್ವೇಶ್ವರಯ್ಯ, ಹಾಸನ ಸಿಟಿ, ತಿಪಟೂರಿನವರು—ಸಿ. ಎಲ್. ರಾಮಣ್ಣ, ಎಲ್. ಎಂ. ಸಿ., ಅಥವಾ ಎಸ್. ಶಂಕರಪ್ಪ, ಎಲೆಕ್ಟ್ರಿಕ್ ಸ್ಟೋರ್ಸ್, ಚಿಕ್ಕಬ್ಯಾಂಕ್ ಕಾರ್ನರ್, ಚಿತ್ರದುರ್ಗದವರು ಸಾರ್ವಜನಿಕ ಪ್ರೆಸ್ ಬಳಿ. ದಾವಣಗೆರೆಯವರು—ಸಿ. ಎಸ್ ದೀಕ್ಷಿತ್ ಅಂಡ್ ಬ್ರದರ್ಸ್. ಮಂಡ್ಯ, ಶ್ರೀರಂಗಪಟ್ಟಣ, ಹೊಳೇನರಸೀಪುರ, ಚಿಕ್ಕಮಗಳೂರುಗಳವರು ಸಮೀಪದ ಏಜೆಂಟರುಗಳಲ್ಲಿಯೂ ಉತ್ತರ ಮತ್ತು ಪ್ರವೇಶ ಧನವನ್ನು ಆಯಾಯ ಊರಿನವರು ಪಾವತಿಮಾಡಿ ರಶೀತಿ ಪಡೆಯಬೇಕಾಗಿ ವಿನಂತಿ.

ಮ್ಯಾನೇಜರ್, ಚಂದ್ರಕಲಾ ಸ್ಪರ್ಧೆ, ಶ್ರೀರಂಗಪಟ್ಟಣ. (ಮೈಸೂರು ಡಿಸ್ಟ್ರಿಕ್ಟ್).

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಿಸುಧಾ —

ಮಕ್ಕಳ ಸ್ವಾಸ್ಥ್ಯ ಗಡ್ಡೆಯನ್ನು ಖಾತರಿ ಗುಣಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪವಾಗಿ ಕಣ್ಣು ಬಿಳಿಚಿ ಬಿಳಿಚಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 25 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಶೋಷೆಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಿಸುಧಾ ಸೀ 1 ರೂ. ಬಾಲಸಂಜೀವಿನಿ 4 ಆ.

ಮೈಸೂರು ಬೆಂಗಳೂರು, ಮುಂತಾದುಗಳಲ್ಲಿ ನಮ್ಮ ಏಜೆಂಟರಿದ್ದಾರೆ

ಸದ್ವೈದ್ಯಶಾಲಾ, ನಂಜನಗೂಡು.

COORG LODGE.

Boarding & Resting Home

OPP. KRISHNARAJENDRA HOSPITAL, MYSORE.

The most Popular, Desirable, Homely Lodge in MYSORE. Situated in the heart of the City. Nearest to business Centres, Hospitals, Market, Palace, Theatres Parks Etc., High Class Nicely furnished and well ventilated Rooms are available.

Accommodation for both Vegetarians and non-Vegetarians.
Reasonable monthly Rates

For Particulars apply to,—

MANAGER.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪುಟ ೨] MYSORE : MONDAY 3—1—38 ಮೈಸೂರು ಸೋಮವಾರ ೩—೧—೩೮ [ಸಂಚಿಕೆ ೪೬

ಪುತ್ರಾದಿಚ್ಛೇತ್ಪರಾಜಯಂ

ಸರ್ ಮಿರ್ಜಾ ಇಸ್ಮಾಯಿಲರವರ ಮಕ್ಕಳು - ಮಿ॥ ಹುಮಾಯೂನ್ ಮಿರ್ಜಾರವರು ನಮ್ಮ ಸಂಸ್ಥಾನದ ಅಸಿಸ್ಟೆಂಟ್ ಕಮಿಷನರ್ ಗಿರಿಯಿಂದ ಬಂಗಲೆಪಲ್ಲಿ ಸಂಸ್ಥಾನದ ದಿವಾನಗಿರಿಗೆ ಏರಿದರಷ್ಟೆ. ಅಲ್ಲಿಗೆ ಹೋದ ಸ್ವಲ್ಪ ದಿವಸಗಳಲ್ಲಿಯೇ ಸರ್ಕಾರ್ ರಿಯನ್ನೂ ಸಹ ವಹಿಸಿದರು. ಇದಲ್ಲದೆ ನಮ್ಮ ಏಳುನೂರು ರೂಪಾಯಿ ಸಂಬಳದ ಕೈ ಬೀಳದ ಇನ್ಸ್ಪತ್ತರವನ್ನು ಜೋಪಾನ ಮಾಡಿಕೊಳ್ಳಲು ತಾನೇ ಬುದ್ಧಿಗ ಸಮ್ಮತಿಸಿರುವರಂತೆ. ಇದನ್ನು ಕಂಡು ಮದರಾಸಿನ ಒಂದು ಪತ್ರಿಕೆಯು ಸಂತೋಷಿಸುತ್ತದೆ. ಏಕೆಂದರೆ ಕೇವಲ ನೂರು ಲಕ್ಷ ಉತ್ಪತ್ತಿಯುಳ್ಳ ಆ ಸಂಸ್ಥಾನಕ್ಕೆ ಸಂಸ್ಥಾನದ ಒಟ್ಟು ಉತ್ಪತ್ತಿಯಲ್ಲಿ ಕೇವಲ ಇಷ್ಟು ಸಂಬಳವನ್ನು ದಿವಾನರೊಬ್ಬರೇ ತೆಗೆದುಕೊಳ್ಳುವುದು ಉಚಿತವಲ್ಲವೆಂದೂ ಸಹ ಹೇಳುತ್ತದೆ. ಆದರೂ ಬಿರೀ ಕೈಗೆ ಹಿಡಿತ್ತಿಳ ಕಡನ ಬೇಕು. ಇದು ಒಳ್ಳೆಯ ಪೇಲ್ಪಂಗ್ಸ್. ಈ ಕೆಲಸ ಇನ್ಸ್ಪತ್ತರವರ ಮೋಡಾ ಪೇಲ್ಪಂಗ್ಸ್ಯನ್ನು ಮಿ॥ ಹುಮಾಯೂನರವರ ತಂದೆಯವರೂ ಅನುಸರಿಸುವರೇ ಎಂದೂ ಆ ಪತ್ರಿಕೆಯು ಪ್ರಶ್ನಿಸಿದೆ. ಉತ್ತರವನ್ನು ನಿರೀಕ್ಷಿಸೋಣವೆ?

ಗಿರಿಮಾಜಿಯವರ ವರಸೆ

ಶಾಸನ ಸಭೆಯ ಕಾಂಗ್ರೆಸ್ ಸದಸ್ಯರಿನ್ನೂ ರಾಜೀನಾಮೆ ಕೊಟ್ಟರಷ್ಟೆ. ಕೋಲಾರದ ಮಿ॥ ಗಿರಿಮಾಜಿಯವರು ಮಾತ್ರ ಕೊಡಲಿಲ್ಲ. ಕೊಡಲು ಅಪ್ಪಣೆಯೂ ಇಲ್ಲ. ಇಷ್ಟೇ ಅಲ್ಲದೆ ಕಾಂಗ್ರೆಸ್ ಜೋಡಿನ ಅಧಿಕಾರವನ್ನೇ ಪ್ರಶ್ನಿಸಿದ್ದಾರೆ.

ರಾಜಕೀಯದಲ್ಲಿ ಶಾಸನ ನಭಿವತ್ತು ವರ್ಷದ ಅನುಭವವಿರುವುದಾಗಿಯೂ, ಬುದ್ಧಿ ಇರುವುದಾಗಿಯೂ, ತಮ್ಮ ಬುದ್ಧಿಯನ್ನು ಉಪಯೋಗಿಸಲು ಕಾಂಗ್ರೆಸ್ ಜೋಡಿನವರು ಅವಕಾಶ ಕೊಡಬೇಕೆಂದೂ ವಾದಿಸಿದ್ದಾರೆ. ಕಾಂಗ್ರೆಸ್ ಧ್ಯೇಯಕ್ಕೆ ಹಾನಿ ವಿರೋಧವಾಗಿ ನಡೆದುಕೊಂಡರೆ ಅಥವ ಅದರ ಮತ್ತು ಕ್ರಮವನ್ನು ಅತಿಕ್ರಮಿಸಿ

ದರೆ ತಮ್ಮ ಮೇಲೆ ಯಾವ ಕ್ರಮವನ್ನಾದರೂ ನಡೆಸಬಹುದೆಂದು ಒಪ್ಪಿಕೊಂಡು, ಹಾಗಿಲ್ಲದೆ ಅವರನ್ನು ಕಾಂಗ್ರೆಸ್ ಜೋಡಿನವರು ತಮ್ಮ ಕೈಯ್ಯಿನ ಸೂತ್ರದ ಬೊಂಬೆಯಂತೆ ಎಂದಿಗೂ ಎಣಿಸಕೂಡದೆಂದು ತಿಳಿಸಿದ್ದಾರೆ. ರಾಜಕೀಯ ಪ್ರಪಂಚದಲ್ಲಿ ನನ್ನ ಬುದ್ಧಿಯೂ ಅನುಭವವೂ ಇವೆ ಯೆಂದು ನಾವೂ ಒಪ್ಪಿಕೊಳ್ಳುತ್ತೇನೆ. ಆದರೆ ಕಾಂಗ್ರೆಸ್ ಜೋಡಿನವರು ಯಾವಾಗ ರಾಜೀನಾಮೆಯನ್ನು ಕೊಡಬೇಕೆಂದು ತೀರ್ಮಾನಿಸುವರೋ ಆಗ ಕಾಂಗ್ರೆಸ್ ಉಮೇದುವಾರರೆಲ್ಲರೂ ಎರಡನೇ ಮಾತನಾಡದೆ ರಾಜೀನಾಮೆ ಕೊಡಬೇಕೆಂಬುದು. ಉಮೇದುವಾರರು ಪ್ರತಿಜ್ಞೆಗಳಲ್ಲೊಂದು ಬುದ್ಧಿ ಪಕ್ಷ ಗಿರಿ ಇದಲ್ಲದೆ ತಮ್ಮ ಪ್ರತಿಜ್ಞೆಯನ್ನೇ ಮಾಡಿರುವವರು ಯಾವ ಹಿನ್ನ ಮನ್ನ ಪ್ರಮಾಣಗಳಿಗೆ ಬದ್ಧರು? ರಾಯರ ಬುದ್ಧಿಗೆ ನರುದ ಅನುಭವ ಈ ಪಕ್ಷದ ಬಂಧವನ್ನು ಏಕೆ ಅಲ್ಲವೆ? ಇನ್ನಾದರೂ ಅವರು ಶಿಸ್ತನ್ನು ಪಾಲಿಸುವರೆ?

ಗಳಿಗೆ ಕಾನೂನಿನ ವಿಚಿತ್ರ ಪ್ರಯೋಗ

ಕಾಂಗ್ರೆಸ್ಸಿನ ಸಾಮೂಹಿಕ ಕಾರ್ಯಕ್ರಮಗಳಿಗೆ ದಾಷ್ಟ ಅಡ್ಡಿ ಬರುವುದಿಲ್ಲವೆಂದು, ನಮ್ಮ ಸರ್ಕಾರದವರು ಏದಿ ಬಹವ ಹೇಳುತ್ತಲೇ ಇರುವರು. ಆದರೂ ಅಲ್ಲಲ್ಲಿ ಕಾಂಗ್ರೆಸ್ಸಿನ ಪ್ರಚಾರಗಳಿಗೂ ಇತರ ಕಾರ್ಯಕ್ರಮಗಳಿಗೂ ಅಡ್ಡಿಗಳು ಬರುತ್ತಲೇ ಇವೆ. ಅನೇಕ ಕಡೆ ಸಭಾ ಬಂಧನಗಳೂ, ಧ್ವಜ ಬಂಧನಗಳೂ ಬರುತ್ತಿವೆ. ಇವರ ಮೊನ್ನೆ ಕಾನಕನಹಳ್ಳಿಯ ಮ್ಯಾಜಿಸ್ಟ್ರೇಟರು ಹೊರಡಿಸಿದ ಆಜ್ಞೆಯು ಎಲ್ಲವನ್ನು ಮೀರಿಸುತ್ತಿದೆ. ಅದು ಕನಕಪುರ ಕಾಂಗ್ರೆಸ್ ಕಾರ್ಯಕರ್ತರಿಗೆ ಅವರು ಒಂದೇ ಸಿಟಿನಲ್ಲಿ ನಿಷೇಧಿಸಿದರು. ಜವಾಬ್ದಾರಿ ಸರ್ಕಾರ, ಧ್ವಜ ವಂದನೆ, ನೆಂಬರಿಗೆ ಪ್ರಚಾರದ ಎಲ್ಲವನ್ನೂ ನಿಷೇಧಿಸಿದ್ದಾರೆ. ಮತ್ತು ಪಡಿ ತಮ್ಮ ಅಪ್ಪಣೆಯನ್ನು ಪಡೆಯದೆ ಇಂತಹ ಕಾರ್ಯಕ್ರಮಗಳು ಎರಡು, ತಿಂಗಳವರೆಗೆ ನಡೆಯಕೂಡದೆಂದು ನಿರ್ಬಂಧಿಸಿದ್ದಾರೆ.

ದೂ ಕೇಳುತ್ತೇವೆ. ಇದು ನಿಜವಾಗಿದ್ದರೆ 144ನೇ ಕಲಮಿನ ವಿಪರೀತದ ಪ್ರಯೋಗವೆಂಬ ಪ್ರಸಂಗವಿದೆಂದು ನಾವು ಹೇಳಬೇಕಾಗಿದೆ. ಇಲ್ಲದೆ ಜವಾಬ್ದಾರಿ ಸರ್ಕಾರದ ಅಪ್ಪಣೆಯಿಲ್ಲ ಯಾವ ಕಾರ್ಯಕ್ರಮಗಳೂ ನಡೆಯಕೂಡದೆಂದೂ ಸಹ ಆಜ್ಞೆಯಲ್ಲಿ ಸೇರಿಸಿರುವುದು ಗೊತ್ತಾಗಿದೆ. ಯಾವುದಾದರೂ ಸಂಸ್ಥೆಗಳ ಅಥವ ವ್ಯಕ್ತಿಗಳ ಅಭಿಪ್ರಾಯವನ್ನು ಬಹಿರಂಗಪಡಿಸುವುದನ್ನು ಕೇಳಿದ್ದೇವೆ. ಜವಾಬ್ದಾರಿ ಸರ್ಕಾರವೆಂಬ ನಿರ್ಣಯದ ಪ್ರಯೋಜನವಾದ ಅಭಿಪ್ರಾಯವು ಪ್ರಚಾರವಾಗುವ ಜವಾಬ್ದಾರಿಗಳು ತಾನೆ ನಡೆಯುತ್ತವೆ? ಅಲ್ಲದೆ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ಮಾಡುವುದು ಒಂದು ಅಪರಾಧವೆಂದು ಇದ್ದರೆ ಏನಾದರೂ ಹೇಳಬಹುದು. ಕಾಂಗ್ರೆಸ್ ಚಳುವಳಿಯ ಮೇಲೆ ಯಾವ ಯಾವ ವಿಧದ ಪ್ರಚಾರ ನಡೆಯುತ್ತಿದೆಯೆಂಬುದಕ್ಕೆ ಈ ಮ್ಯಾಜಿಸ್ಟ್ರೇಟರ ಆಜ್ಞೆಯೂ ಒಂದು. ಜವಾಬ್ದಾರಿ ಸರ್ಕಾರದ ವಿವರಣೆಯಾಗಿದೆ. ಇದಕ್ಕೆ ಈ ಅಪ್ಪಣೆಯನ್ನು ಹಿಂತೆಗೆದುಕೊಂಡಿರುವರಂತೆ ವರ್ತಮಾನ. ಹಾಗಿದ್ದರೆ ಅದಕ್ಕಾಗಿ ನಮ್ಮ ಅಭಿನಂದನೆಗಳು.

ಇನ್ನಿಗೂ ಚಿಂತೆ.

ನಮ್ಮ ಸಂಸ್ಥಾನದಲ್ಲಿ ಬಹಳ ದಿವಸಗಳವರೆಗೆ ಹಿಂದೂ ಮುಸಲ್ಮಾನ ಭೇದ ಭಾವನೆಗಳಿರಲಿಲ್ಲ. ಕಾಲಾಂತರಗಳಿಂದ ಕೆಲವು ವರ್ಷಗಳ ಹಿಂದೆ ಬಂತು. ಅದು ಕೇವಲ ನಾನಾಬಗೆ ರೀತಿಯಲ್ಲಿ ಮೂಲ ಹುಟ್ಟಿ ಹಾಗೆಯೇ ತಪ್ಪಿಹೋಯಿತು. ಈಗ ಆ ಪ್ರಶ್ನೆ ಬಗೆಯು ಸ್ವರೂಪವನ್ನು ಪಡೆಯುತ್ತಿದೆ. ಬ್ರಿಟಿಷ್ ಇಂಡಿಯ ದಲ್ಲಿರುವ ಮುಸ್ಲಿಂ ಲೀಗಿನ ಮಾದರಿಯ ಸಂಸ್ಥೆಯೊಂದು ನಮ್ಮಲ್ಲಿಯೂ ಒಂದು ಸಂಸ್ಥೆ ಸ್ಥಾಪನೆಯಾಗುತ್ತಿರುವಂತಿದೆ. ಅದರ ಉದ್ದೇಶವಾದ ಮುಸಲ್ಮಾನರ ಹಕ್ಕು ಬಾಧ್ಯತೆಗಳನ್ನು ರಕ್ಷಿಸುವುದು ಎಂದು ಸಂಸ್ಥೆಯ ಪತ್ರಿಕೆ ಹೇಳಿದೆ. ಮತ, ಸಂಸ್ಕೃತಿ, ಭಾಷೆ ಮತ್ತು ಸರ್ಕಾರಿ ಉದ್ಯೋಗಗಳಲ್ಲಿ ಮುಸಲ್ಮಾನರ ಹಿತವ

ನ್ನು ರಕ್ಷಿಸುವುದು, ಶಾಸನ ಸಭೆಗಳಲ್ಲಿ ಮುಸಲ್ಮಾನರಿಗೆ ಪ್ರಾತಿನಿಧ್ಯವನ್ನು ಕೊಡಿಸುವುದು, ಇತ್ಯಾದಿ. ಬ್ರಿಟಿಷ್ ಇಂಡಿಯಾದಲ್ಲಿ ಈ ಸಂಸ್ಥೆಯು ರಾಷ್ಟ್ರೀಯ ಮಹಾ ಸಭೆಗೆ ತಂದೊಡ್ಡಿರುವ ತೊಡಕುಗಳು ಎಲ್ಲರಿಗೂ ಗೊತ್ತೇ ಇವೆ. ಇನ್ನು ಮೈಸೂರಿನಲ್ಲಿ ಏನೇನು ಗೊಂದಲಗಳಾಗಬೇಕೋ ತಿಳಿಯದು. ಆದರೆ ಕಾಂಗ್ರೆಸ್ಸಿನ ತ್ಯಾಗವೂ, ತೇಜಸ್ಸೂ ಎಂತಹ ಆತಂಕಗಳನ್ನಾದರೂ ಜಯಿಸಬಲ್ಲವು.

ಪಟಾಕಿ ವರ್ತಕರ ಅಹವಾಲು

ರಾಜಧಾನಿಯಲ್ಲಿ ಕಳೆದ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಪೋಲೀಸಿನವರು ಹಲವು ಪಟಾಕಿ ವರ್ತಕರುಗಳ ಅಂಗಡಿಗಳಿಗೆ ನುಗ್ಗಿ ಪಟಾಕಿಗಳನ್ನು ಅವಸಾನಕ್ಕು ಪಡಿಸಿಕೊಂಡು ಅವರುಗಳ ಮೇಲೆ ಮೊಕದ್ದಮೆ ನಡೆಸಿ ಜುಲ್ಮಾನೆ ಹಾಕಿಸಿದ ಅಂಶವು ಎಲ್ಲರಿಗೂ ಗೊತ್ತೇ ಇದೆ. ಈ ಸಂಬಂಧವಾಗಿ ನಗರ ವರ್ತಕರು ದಿವಾನ್ ಸಾಹೇಬರಿಗೆ ಒಂದು ದೀರ್ಘವಾದ ಅಹವಾಲ್ ಅರ್ಜಿಯನ್ನು ಬರೆದುಕೊಂಡಿರುವರು. ಅವರ ಒಂದು ಪ್ರತಿಯನ್ನು ಮುದ್ರಣಕ್ಕಾಗಿ ನಮಗೆ ಕಳುಹಿಸಿರುವರು. ಅದರಲ್ಲಿ ಮೈಸೂರು ಸಿಟಿ ಪೋಲೀಸ್ ನೌಕರರ ಮೇಲೆ ತೀವ್ರವಾದ ಆಪಾದನೆಗಳಿವೆ. ಸಬ್ಬರೂ ಗಬ್ಬರೂ ಬಡ ಈ ವರ್ತಕರಿಗೆ ಕಿರುಕುಳಗಳು ಕೊಡಲ್ಪಡುತ್ತಿವೆಯೆಂದು ಸೂಚಿಸಲ್ಪಟ್ಟಿದೆ. ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಸಲಹೆಯೂ ಪಾಲಿಸದೆ ಬರದೆ ಅವರುಗಳ ಮೇಲೆ ಮೊಕದ್ದಮೆ ಹಾಗಿ ಭಾರಿ ಜುಲ್ಮಾನೆಗಳು ವಿಧಿಸಲ್ಪಟ್ಟವೆಂದು ಹೇಳಲಾಗಿದೆ. ಮತ್ತು ಪೋಲೀಸ್ ಅಧಿಕಾರಿಗಳು ಅವರುಗಳ ಮೇಲೆ "ದ್ವೇಷವನ್ನಿಟ್ಟುಕೊಂಡು ನಾನೊಂದಿಯೂ ತೊಂದರೆ ಕೊಡಬೇಕೆಂದು ಸಂಕಲ್ಪ ಮಾಡಿರುವುದಾಗಿ ತಿಳಿದು ಬರುತ್ತದೆ. ಇದರಿಂದ ಪ್ರತಿ ನಿಮಿಷವೂ ಏನು ಕೇಡುಂಟಾಗುತ್ತದೋ ಎಂಬ ಭಯವುಂಟಾಗಿದ್ದೆ" ಎಂದು ಮುಂತಾಗಿ ನಮೂದಾಗಿದೆ. ದಿವಾನರವರು ಇದಕ್ಕೆ ಸರಿಯಾದ ಗಮನಕೊಡುವರೆಂದು ನಂಬುತ್ತೇವೆ.

ಈ ವಾರದ ಕಥೆ

ಮದುವೆಗೆ ಬರಬೇಕು

ಲೇಖಕರು:— ಶ್ರೀ ಎಸ್. ಕೃಷ್ಣಮೂರ್ತಿ, ಗುಂಡ್ಲುಪೇಟೆ.

ಕೇಶವನು ಒಂಟಿಯಾಗಿ ರೂಮಿನಲ್ಲಿ ಕುಳಿತಿದ್ದನು. ಅವನ ಎದುರಿನಲ್ಲಿ ಎರಡು ಕುರ್ಚಿಗಳು ಹಾಕಿದ್ದವು. ಕೇಶವನು ಮೇಜಿನ ಮೇಲಿದ್ದ ಒಂದು ಕಾಗದವನ್ನು ಪದೇ ಪದೇ ಕೈಯಲ್ಲಿ ತೆಗೆದು ನೋಡುತ್ತಿದ್ದನು. ಆ ಕಾಗದವು ಅವನ ಲಗ್ನಪತ್ರಿಕೆ ಕಾಗದವೇ ಆಗಿತ್ತು.

ಕೇಶವನಿಗೆ ತಂದೆ ಇರಲಿಲ್ಲ. ಅವನ ತಾಯಿ ಕಾವೇರಮ್ಮನನ್ನು ಬಿಟ್ಟರೆ ಮತ್ತೆ ಯಾರೂ ಹತ್ತಿರದ ಸಂಬಂಧಿಗಳು ಇರಲಿಲ್ಲ. ಅವನಿಗೆ ಟೋಬರ್ ಸೆಕೆಂಡರಿ ಪಾಸಾಗಿತ್ತು.

ಕೇಶವನು ತನ್ನ ತಾಯಿಯನ್ನು ಕರೆದುಕೊಂಡು ಬಂದು ಮದ್ರಾಸಿನಲ್ಲಿದ್ದನು. ಒಂದು ದಿನ ಸಂಜೆ ಸಮಯದಲ್ಲಿ ಅವನು ಕೆಲಸದಿಂದ ಬಂದು ಕುಳಿತಿದ್ದನು. ಗಂಟೆ ಐದು ಆಗುತ್ತಾ ಬಂದಿತ್ತು. ಅಷ್ಟರಲ್ಲಿಯೇ ಗಡಿಯಾರವು ಐದು ಸಲ ಢಣ್, ಢಣ್, ಎಂದು ಶಬ್ದ ಮಾಡಿತು. ಸ್ವಲ್ಪ ಹೊತ್ತಿನಲ್ಲಿಯೇ, ಹೊರಗಡೆ ಬಾಗಿಲು ತಟ್ಟಿದ ಶಬ್ದ ಕೇಳಿಬಂದಿತು. ಕೇಶವನು ಬಾಗಿಲನ್ನು ತೆರೆದು, ಅವರನ್ನೇ ಎದುರು ನೋಡುತ್ತಿದ್ದನು. ನಮ್ಮ ಶ್ರೀಮಾನ್ ರಾಮಚಂದ್ರಯ್ಯನವರು ಕೋಲನ್ನು ಹಿಡಿದುಕೊಂಡು ಒಳಗೆ ಬಂದರು. ಬಂದವರು ಒಂದು ಕುರ್ಚಿಯ ಮೇಲೆ ಕುಳಿತು, ಐದು ನಿಮಿಷ ಸ್ವಲ್ಪ ದಣಿವಾರಿಸಿಕೊಂಡು, ಕ್ಷೇಮದ ಬಗ್ಗೆ ಕೇಳಿದರು. ಅಷ್ಟರಲ್ಲಿಯೇ ಕೇಶವನ ತಾಯಿ ಕಾವೇರಮ್ಮನೂ, ಅಲ್ಲಿಗೆ ಬಂದು ಪರಸ್ಪರ ಕೂಡ ಕುಶಲ ಪ್ರಶ್ನೆ ಮಾಡಿದರು. ನಮಸ್ಕರಿಸಲು ಅವರು ಬಂದಿದ್ದರು.

ಕಾವೇರಮ್ಮ—ನೀವು ರಾಮಚಂದ್ರಯ್ಯನವರೇ, ನಿಮ್ಮ ಊರಿನಲ್ಲಿ ಸರ್ವರೂ ಕ್ಷೇಮವೇ? ನಿಮ್ಮ ಮಗಳು ಸುಂದರಿಗೆ ಎಲ್ಲಾದರೂ ವರ ಸಿಕ್ಕಿದನೇ? ಇಲ್ಲಿ ಬಂದ ಸಮಾಚಾರವೇನು?

ರಾಮಚಂದ್ರಯ್ಯನವರು—ನಿಮ್ಮ ಮಗ ಕೇಶವನಿಗಾಗಿ ಬೇರೆ ವರನನ್ನು ಹುಡುಕುವ ಪ್ರಸಂಗ ಬರಲಿಲ್ಲ. ಇವನನ್ನು ಎಂಟು ದಿನದಲ್ಲಿಯೇ ಲಗ್ನ ಮಾಡಲೇಬೇಕು.

ಕಾ—ನಿಮ್ಮ ಮಗಳಿಗೆ ನಮ್ಮ ಕೇಶವನನ್ನು ಕೊಡುವಂತೆ ಬಂದಿರುವುದು ನಿಜವಿದ್ದರೆ ಅಳಿಯನಿಗೆ ಏನೇನು ಕೊಡುತ್ತೀರಿ, ಎಷ್ಟು ವರದಕ್ಷಿಣೆಯನ್ನು ಕೊಡಲು ಮನಸ್ಸು ಮಾಡಿರುವಿರಿ ತಿಳಿಸುವಿರಾ?

ರಾ—ನಿಮ್ಮ ಹೇಳಿಕೆಯಂತೆ ನಮಗೆ ಏನು ಬೇಕಾದರೂ ಕೊಡುತ್ತೇವೆ ಎಂದು ನಾನು ಕೇಳಿದ್ದೇನೆ. ನೀವು ಏನು ಕೇಳುತ್ತೀರಿ ಎಂದು ಹೇಳಿ.

ಕಾ ಹೇಳಿದರು. ಅವರ ಬೆಂಗಳೂರಿನ ಹೆಣ್ಣುಮಕ್ಕಳ ಲಗ್ನ ಮಂಗಳವಾರಕ್ಕೆ ನನ್ನನ್ನು ಕೇಶವನಿಗೆ ಕೊಡಲಿಲ್ಲ. ನನಗೂ ಕೂಡ ನಿಮ್ಮ ತಾಯಿ ತಿಳಿಸಿದ್ದರು. ಮಗಳಿಗೆ ಬೆಂಗಳೂರಿನ ಶ್ರೀನಿವಾಸರಾವ್ ಕುಲಕರ್ಣಿಯವರ ಮಗನನ್ನು ಗೊತ್ತು ಮಾಡಿ ಬಂದಿದ್ದೇನೆ. ಅವರು ಈ ವಿಷಯ ಬರೆದಿದ್ದಾರೆ. ಅವರು ಅವರ ಮಗಳ ಲಗ್ನವನ್ನು ಮಾಡುತ್ತಿದ್ದರು. ಗುರುತವಿದ್ದವರು ಕಾವೇರಮ್ಮನಿಗೆ ಹೇಳಿದ್ದರು.

ಅನಂತಭಟ್ಟರು—ಅವನನ್ನು ಏನು ಮಾಡುವುದು? ಶ್ರೀನಿವಾಸರಾವ್ ಅವರಿಗೆ ಬರೆದಿದ್ದೇನೆ, ನನಗೂ ಸ್ವಲ್ಪ ಹೇಳಿ.

ರಾಮಚಂದ್ರಯ್ಯನವರು ಶ್ರೀರಂಗಪಟ್ಟಣದ ಶ್ರೀಮಂತ ರಾಮಚಂದ್ರರಾಯರು, ನನ್ನ ಕೇಶವನಿಗೆ ಹೆಣ್ಣು ಕೊಡಲು ಬಂದಿದ್ದಾರೆ.

ಕಾ—ನೀವು ನನ್ನನ್ನು ನಿನ್ನೆ ದಿವಸ ನಾನು ಬಂದು ಮಗುವಿನ ಹೆಸರನ್ನು ನಿಶ್ಚಯ ಮಾಡಿ ಕೊಟ್ಟು ಹೋಗಿದ್ದೇನೆ. ವರದಕ್ಷಿಣೆ ನಾನೇ ರೂಪಾಯಿಗಳನ್ನು ಈವಾಗಲೇ ತಂದು ಕೊಡುತ್ತೇನೆ.

ರಾಮಚಂದ್ರಯ್ಯನವರು—ನಾನು ಈ ವಾಗಳಾಗಲೇ ಮಾತನಾಡಿದ್ದೇನೆ. ಮುಗಿಸಿದ್ದೇನೆ. ಈವಾಗ ನೀವು ಬಂದು ಗಲಾಟೆ ಮಾಡುತ್ತೀರಲ್ಲ.

ಅ—ಹೌದು ಸ್ವಾಮಿ? ಈ ಮದುವೆ ನೋಡುವ ಸಹಸ್ರಾರು ರೂಪಾಯಿ ಖರ್ಚಾದರೂ ಸರಿಯೆ, ನಮ್ಮ ಹುಡುಗಿಯನ್ನೇ ಕೇಶವನಿಗೆ ಕೊಡಬೇಕು.

ರಾ—ಈ ಮದುವೆಗಾಗಿ ಲಕ್ಷಾಂತರ ರೂಪಾಯಿ ವೆಚ್ಚವಾದರೂ ಸರಿಯೆ. ನಮ್ಮ ಸುಂದರಿಯನ್ನೇ ಕೇಶವನಿಗೆ ಕೊಟ್ಟು ಇನ್ನು ಎಂಟು ದಿವಸದ ಒಳಗೆ ಲಗ್ನ ಮಾಡುತ್ತೇನೆ.

ಅ—ಇವತ್ತಿನ ಈ ಕಾಲದಲ್ಲಿ ಯಾರ ಸ್ವಲ್ಪ ಹಣವಿದ್ದರೂ ಅಪ್ಪನೆಂಬುವವರ ನಂಬಬಾರದು ಎನ್ನುವರು. ನಾನು ಮಾತಾಡಿದ್ದ ವರನಿಗೆ ನೀವು ಬಂದು ಅಡ್ಡ ಬಿದ್ದಿರಿ. ನನ್ನ ಹುಡುಗಿಗೆ ಎಲ್ಲಾ ವರ ಸಿಕ್ಕುತ್ತಾನೆ. ಬ್ರಹ್ಮಸಂಕಲ್ಪ ಇದ್ದ ಹಾಗೆ ಆಗಲಿ, ನಾನು ಹೋಗುತ್ತೇನೆ.

ನಮ್ಮ ಮಾತನಾಡಿ ಅನಂತಭಟ್ಟರು ಬಾಗಿಲನ್ನು ಧಢಾರೆಂದು ತೆರೆದು ಹೊರಟು ಹೋದರು. ಹೋದವರು ಎಲ್ಲಿಯೂ ಹೋಗಲಿಲ್ಲ. ಅಲ್ಲಿಯೇ ಒಂದು ಕಡೆ ಅಡಗಿಕೊಂಡಿದ್ದರು.

ರಾಮಚಂದ್ರಯ್ಯನವರು ಕೇಶವನ ಲಗ್ನಪತ್ರ ಕಾಗದವನ್ನು ಕಳುಹಿಸಿಕೊಂಡು ಐನೂರು ರೂಪಾಯಿಗಳನ್ನು ಮೇಜಿನ ಮೇಲೆ ಇರಿಸಿ ಸಾವಿರ ರೂಪಾಯಿಯನ್ನು ಊರಿಗೆ ತಲುಪಿದ ತಕ್ಷಣ ಕಳುಹಿಸುತ್ತೇನೆಂದು ಹೇಳಿ ಶ್ರೀರಂಗಪಟ್ಟಣದ ಕಡೆಗೆ ಪ್ರಯಾಣ ಬೆಳಸಿದರು. ಇಷ್ಟೆಲ್ಲಾ ಆದ ನಂತರ ತಕ್ಷಣ ಅನಂತಭಟ್ಟರು ಮನೆ ಹೊಕ್ಕು ಬಂದು ಕಾವೇರಮ್ಮ, ಕೇಶವ ಮದನ, ಮತ್ತು ಸುಂದರಿ. ನಾನು ಹಣಕ್ಕೆ ಬಂದು ಅಂಥ ಮಾತನಾಡಲಿಲ್ಲ, ನಿಮ್ಮ ಅಭಿಪ್ರಾಯ ಏನೆಂದು ತಿಳಿಯುವುದಕ್ಕೆ ಹೀಗೆ ಮಾಡಿದೆ. ಈ ರೂಪಾಯಿಗಳನ್ನು!

ಹೌದು ಭಟ್ಟರೇ, ಇದು ಹಣ ಕೊಡುವ ಮನುಷ್ಯ. ನಿಮ್ಮ ಮಾತಿನಂತೆ ಆಯಿತಲ್ಲ, ಇದೊ ನಿಮ್ಮ ಪ್ರಸಾದ ಇದೋ ತೆಗೆದುಕೊಳ್ಳಿ, ನಿಮ್ಮ ಇನಾಮ್, ಐವತ್ತು ರೂಪಾಯಿ, ಎಂದಿತ್ತ, ಐನೂರು ರೂಪಾಯಿಗಳನ್ನು ಭಟ್ಟರ ಕೈಗೆ ಕೊಟ್ಟರು.

ಭಟ್ಟರು ಬಹಳ ಸಂತೋಷದಿಂದ ಹೋದರು.

ಇದಾದ ಎರಡು ದಿವಸ ತರುವಾಯ ಕೇಶವನಿಗೆ ಟಪಾಲಿನವನು ಒಂದು ಕವರನ್ನು ತಂದು ಕೊಟ್ಟನು. ಅದರ ನಾಲ್ಕು ಮೂಲೆಗೂ ಅರಿಸಿನ ಹಚ್ಚಿತ್ತು. ಕೇಶವನು ಲಗ್ನದ ಕಾಗದವೆಂದು ಸಂತೋಷದಿಂದ ಅದರನ್ನು ಆತುರದಿಂದ ಒಡೆದು ನೋಡಿದನು. ಆವಾಗ ಕೇಶವನ ಮುಖ ನೋಡಲು ಜಿಗುಪ್ಸೆಯಾದ ಕಾಣಿತು.

ಕಾಗದದ ಒಕ್ಕಣೆ ಹೀಗಿತ್ತು:—

ಕೇಶವನಿಗೆ, ನಾನು ನಿಮ್ಮ ಲಗ್ನಪತ್ರದ ಕಾಗದವನ್ನು ತೆಗೆದುಕೊಂಡು ಊರಿಗೆ ಬಂದದ್ದು ಸರಿಯಷ್ಟೆ. ಇಲ್ಲಿ ನಿಮ್ಮ ಲಗ್ನಪತ್ರ ಕಾಗದವು ನಮ್ಮ ಸುಂದರಿಗೆ ಸರಿ ಹೋಗಲಿಲ್ಲವಾದ್ದರಿಂದ ಬೇರೆ ವರನನ್ನು ನಿಶ್ಚಯ ಮಾಡಿದ್ದೇನೆ. ಮದುವೆ, ಬರುವ ವೈಶಾಖ ಶುದ್ಧ ದಶಮಿ ದಿವಸ ನೆರವೇರುತ್ತದೆ. ನೀವು ನಿಮ್ಮ ತಾಯಿಯ ಸಂಗಡ ಸಕಾಲಕ್ಕೆ ಮದುವೆಗೆ ಬರಬೇಕು.

ರಾಮಚಂದ್ರಯ್ಯ.

ದೇವಾಸ್ ಮಹಾರಾಜರು

ದೇವಾಸ್ ಸಂಸ್ಥಾನದ ದೊಡ್ಡ ಮಹಾರಾಜರು ಪಾಂಡಿಚೆರಿಯಿಂದಲೂ ಇತರ ಹಲವು ಕಾರಣಗಳಿಂದಲೂ ಈಚೆಗೆ ಫ್ರೆಂಚ್ ಪಾಂಡಿಚೆರಿಯಲ್ಲಿ ಬಂದು ವಾಸಿಸುತ್ತಿದ್ದರು. ಇವರು ಈಚೆಗೆ ಸ್ವರ್ಗಸ್ಥರಾದರು. ವ್ಯವಸ್ಥೆ ಮಾಡಿ ಬೇರೆ ವಿಧವಾದ ಅದು ಬರುವದನ್ನು ಇಟ್ಟುಕೊಳ್ಳಕೂಡದೆಂದೂ ಅವರಿಗೆ ಕೊಳ್ಳಿಗೆ ತಮ್ಮ ಮೃತ ಶರೀರವನ್ನು ಎಸೆದುಬಿಡಬೇಕೆಂದೂ ಮೊದಲೇ ಸೂಚಿಸಿದ್ದರು. ಆದರೆ ಕಾನೂನಿನ ತೊಡಕುಗಳಿಂದ ಇದು ಸಾಧ್ಯವಾಗಲಿಲ್ಲ. ಶವ ಸಂಸ್ಕಾರವು ಸರಳ ರೀತಿಯಿಂದ ನಡೆಯಿತು.

ವಿಜಯಸಾರಥಿಯವರು ದೆಹಲಿಗೆ

ಬೆಂಗಳೂರಿನ ಸೆಂಟ್ರಲ್ ಕಾಲೇಜು ಅಧ್ಯಾಪಕರಾದ ಶ್ರೀ ಎಂ. ಜಿ. ವಿಜಯಸಾರಥಿಯವರು ಈ ವಾರ ದೆಹಲಿಯಲ್ಲಿ ನಡೆಯಲಿರುವ ವ್ಯಾಯಾಮ ಶಿಕ್ಷಕರ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಲಿರುವರು.

ಮುಫತ್ತು | ಇನಾಂ | ಮುಫತ್ತು

ಜೀವನನೌಕಾ

ಮನುಷ್ಯರ ಜೀವನ ಯಾತ್ರೆಯನ್ನು ಸುಖಸೌಖ್ಯದಿಂದ ಜರಗಿಸುವದಕ್ಕೆ ದಾರಿಯನ್ನು ತೋರಿಸುವ ಪುಸ್ತಕವು

ಟ. ಖರ್ಚು ಇಲ್ಲಾ : ಕ್ರಯವಿಲ್ಲಾ

ಮದನಮಂಜರಿ ಫಾರ್ಮಸಿ

119-1 ಚೈನಾ ಬಜಾರ್, ಮದರಾಸು.

ಚಂದ್ರಕಲಾ ಸ್ಪರ್ಧೆ ನಂ. ೯ ರ ಉತ್ತರ



ಬಹುಮಾನದ ಪಡೆದವರ ಹೆಸರನ್ನು ಮುಂದಿನ ವಾರ ಪ್ರಕಟಿಸಲಾಗುತ್ತ.

ನೂತನ ವರ್ಷ ಶುಭಾಶಯ

ಲಾಲಾ ಲಜಪತರಾಯರ ಜೀವನ ಧ್ಯೇಯ

ಲೇಖಕಿ:—ಸೌಭಾಗ್ಯವತಿ ಟಿ. ಎಸ್. ಇಂದಿರಮ್ಮ, ಮೈಸೂರು.

ಹೊಸ ವರ್ಷಾರಂಭದಲ್ಲಿ ಶುಭವಾದ ವನ್ನು ಬಯಸಿ ಆಪ್ತೇಷ್ಟರ ಸೇ ಮವನ್ನು ಕೋರುವುದು ಸಾಮಾನ್ಯವಾಗಿ ನಡೆದಿರುವುದಷ್ಟೆ. ಹೀಗೆ ಕೋರುವ ಶುಭಾ ಶಯವು ಅವರವರ ಆಲೋಚನೆ ಅಭಿಪ್ರಾ ಯ ಇವನ್ನು ಅನುಸರಿಸಿ ವ್ಯಕ್ತಿಗೆ ಮಾತ್ರ ಅನ್ವಯಿಸತಕ್ಕದಾಗಿರುತ್ತದೆ. ಇದು ಲೋಕ ರೂಢಿಯಾದದ್ದು. ಆದರೆ ವಿಶ್ವಕುಟುಂ ಬಿಯ ರೀತಿಯು ಬೇರೆಯಾಗಿರುತ್ತದೆ. ವ್ಯ ಕ್ತಿಗೆ ಮಾತ್ರ ಅನ್ವಯಿಸುವ ವಿಚಾರವೇ ಅವನ ಮನಸ್ಸಿಗೆ ಬರುವುದಿಲ್ಲ.

ಭಾರತ ಮಾತಾ ಸೇವಾಧುರೀಣರಾದ, ಪಂಜಾಬಿನ ಸಿಂಹ, ಲಾಲಾ ಲಜಪತರಾ ಯರು ನಮ್ಮ ದೇಶವಾದೀ ಭರತಖಂಡ ದಿಂದ ಬಯ್ಯಲ್ಪಟ್ಟು ದೂರದ ಅಮೇರಿಕಾ ದೇಶದಲ್ಲಿ ನಿರ್ಗಂಧದಲ್ಲಿರುವಾಗ್ಯೆ, ಅಲ್ಲಿ ಯೂ ಮಾತೃ ಭೂಮಿಗೆ ಬರವಣಿಗೆ ಮೂಲಕ ಸೇವೆಯನ್ನು ಸಲ್ಲಿಸುತ್ತಿದ್ದಾಗ ತಾವು ನಡೆಸುತ್ತಿದ್ದ "ತರುಣ ಭಾರತ" ಎಂಬ ಪತ್ರಿಕೆಯಲ್ಲಿ ಸಣ್ಣ ಹೆಸರನ್ನು ಕೊ ಟ್ಟು "ಮಾತೃ ಭೂಮಿಯ ಜನರು ಮಿ ದವರಲ್ಲಿ" ಭಾರತೀಯರು ಪುತ್ರ " ಶೋಧ್ಯ ವ " ಪ್ರೀತಿಯ " ಎಂಬ ಶುಭಾಶಯವನ್ನು ನೂತನ ವರ್ಷದ ಕಾಣಿಕೆಯಾಗಿ ಸಮರ್ಪಿಸಿದರು.

ಅವರು ಭಾರತ ಭೂ ಮಾತೆಗೆ ಕಳು ಹಿಸಿದ ಶುಭಾಶಯವು ಹೀಗಿದೆ:—

ಜನನೀ:—

ನಾನು ನಿನಗೆ ಏನರ್ಪಿಸಲಿ? ಯೋಗ್ಯ ವಾದ್ದು ನನ್ನಲ್ಲಿ ಏನೂ ಇಲ್ಲ. ನಾನ ಪರಿಶೀಲಿಸಿದರೂ ಏನೂ ಬರದು. ಆದಾ ಗ್ಯೂ ನಿನ್ನ ಚರಣ ಕಮಲದಲ್ಲಿ ಎಂದಿಗೂ ನಮಿಸುವ ಮತ್ತು ಅರ್ಪಿಸುವ ಒಂದನ್ನು ಅರ್ಪಿಸಬಲ್ಲೆ. ಅದಾವುದೆಂದರೆ ಪ್ರೀತಿ. ನಿನ್ನಲ್ಲಿ ನನಗೆ ಭಕ್ತಿಯಿದೆ. ನಿನ್ನನ್ನು ನಾ ನು ಪೂಜಿಸುತ್ತೇನೆ, ನಿನ್ನ ನಾಮಕ್ಕೆ ನಮ ಸ್ಕರಿಸುತ್ತೇನೆ, ಎಂದು ಹೇಳಿದರೆ ನನ್ನನ್ನು ಮನ್ನಿಸುವಿಯಷ್ಟೆ! ಹೀಗೆ ಹೇಳಿದರೆ ಇದು ಬರೀ ಭಾವನೆ ಮತ್ತು ಕೇವಲ ಅಲ್ಪವಾದ ದ್ದೆಂದು ಅಭಿಪ್ರಾಯ ಬರುವುದು ನಿಜ. ಆದರೆ ಇದು ನಿಜವೋ ಅಲ್ಲವೋ ನನ್ನ ಹೃ ದಯಾಧಿದೇವತೆಯಾದ ನೀನೇ ಬಲ್ಲೆ. ಇ ದು ನಿಜವಾಗಿದ್ದರೆ ಈ ನನ್ನ ಅರ್ಪಣೆಯ ನ್ನು ನಿರಾಕರಿಸುವುದಿಲ್ಲವೆಂದು ನಾನು ಪ್ರ ಥಮವಾಗಿ ನಂಬಿದ್ದೇನೆ.

ಪೂಜ್ಯಮಾತೆಯೇ! ನಿನ್ನನ್ನು ನಾನು ಪ್ರೀತಿಸುತ್ತೇನೆಂದು ಹೇಳುವುದು ಹುಚ್ಚು ತನವೇ ಸರಿ. "ಪ್ರೀತಿ" ಎನ್ನುವ ಮಾ ತು ಸರ್ವ ಸಾಧಾರಣವಾಗಿದೆ. ಆದರ ತ ತ್ವವು ಹಾಗಲ್ಲ. ಜನರಿಗೆ ಹೆಚ್ಚು ಅನು ಕೂಲವಿರುವುದನ್ನೇ ಜನರು ಪ್ರೀತಿಸುತ್ತಾರೆ. ಅವರು ಪುಸ್ತಕಗಳನ್ನೋ, ಹೂಗಳನ್ನೋ ಚಿತ್ರಗಳನ್ನೋ ಮಿಠಾಯಿಗಳನ್ನೋ ಪ್ರೀತಿಸು ತ್ತಾರೆ. ತರುಣ ತರುಣಿಯರು, ಪರಸ್ಪರ ಪ್ರೀತಿಸುತ್ತಾರೆ. ರಾಜ ಪ್ರಜೆಗಳು ಪರಸ್ಪ ರನ್ನು ಅಧಿಕಾರವನ್ನು ಪ್ರೀತಿಸುತ್ತಾರೆ.

ನಾನು ನಿನ್ನನ್ನು ಪ್ರೀತಿಸುತ್ತೇನೆಂಬು ದು ಕೇವಲ ಸಾಧಾರಣವಾಗಿ ಬಂದುದಲ್ಲ ದೇ, ನಾನು ನಿನ್ನನ್ನು ಆತ್ಮೀಯವಾಗಿ ಪ್ರೀತಿಸುತ್ತೇನೆ. ಹಿಂದೂ ಯೋಗಿಗಳು, ಮುಸಲ್ಮಾನ ಸೂಫಿಯು, ಕ್ರೈಸ್ತ ಧರ್ಮ ಶಿಷ್ಯ ಇವರು ತಮ್ಮ ತಮ್ಮ ದೇವರನ್ನು ಪ್ರೀತಿಸುವುದಕ್ಕಿಂತಲೂ, ಮತ್ತು ನಾನೇ ನನ್ನ ದೇವರನ್ನು ಪ್ರೀತಿಸುವುದಕ್ಕಿಂತಲೂ ಸೂಕ್ಷ್ಮವಾಗಿ, ಸಾವಿರ ಮಡಿಯಾಗಿ ನಿನ್ನನ್ನು ಪ್ರೀತಿಸುವಂತೆ ನನಗೆ ಎಷ್ಟೋ ವೇಳೆ ಮ ನಸ್ಸಿನಲ್ಲಿ ಭಾವನೆಯಾಗುತ್ತದೆ.

ಆದರೆ ನೀನು ದೇವರೇ ಹೊರತು ದೇ ವನಲ್ಲ. ಈ ದ್ವೈತ ಸೃಷ್ಟಿಯಲ್ಲಿ, ಸೌಂದ ರ್ಯದಲ್ಲಿಯೂ ಮನೋಜ್ಞತೆಯಲ್ಲಿಯೂ ಸ್ತ್ರೀ ಯನ್ನು ಮೀರಿಸುವ ಬೇರೆ ಯಾವ ಸೃಷ್ಟಿ ಯೂ ಇಲ್ಲ. ಆದಳನ್ನು ಬಯಸಿ ಪ್ರೀತಿ ಸುವ ಯೋಗ್ಯತೆಯು ಇವೆಲ್ಲಾ ಜೀ ವನ ಶಕ್ತಿಗಳನ್ನು ಜಯಿಸುತ್ತದೆ. ಸ್ತ್ರೀ ಯು ಈ ಸೃಷ್ಟಿಯಲ್ಲಿ ಶಕ್ತಿ ಸ್ವರೂಪಿಣಿ ... ಯೆಂದರ ... ಯನ್ನು ನ್ಯಾಯವನ್ನು...

ನೀನೇ ಈ ಜಗತ್ತು

ಹೇ ತಾಯಿ! ನಿನ್ನನ್ನು ನಾನು ಎಲ್ಲೆಲ್ಲಿಯೂ ನೋಡುತ್ತೇನೆ ಹೇಳಿ ನಮಿಸುವುದರಿಂ ದ, ಜೀವನದ ನನ್ನಲ್ಲಿ ದೃಢವೆಯೆಂದು ಹೇ ಳುತ್ತಾರೆ. ನಿನ್ನನ್ನೇ ಹೆಚ್ಚೆಂದು ಭಾವಿಸು ವುದರಿಂದ ನಮ್ಮ ಭೂತದಯೆಯು ಸಂ ಕುಚಿತವಾಗಿ ಜನಾಂಗ ದ್ವೇಷವುಂಟಾಗಲು ಕಾರಣವಾಗುತ್ತದೆಂದು ಅವರು ಹೇಳು ತ್ತಾರೆ. ಈ ವಿಚಾರದಲ್ಲಿ ಏನೂ ಗೊತ್ತಿಲ್ಲದ ಅವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ.

ನಿನ್ನಲ್ಲಿಯೇ ಮತ್ತು ನಿನ್ನ ಮೂಲಕವೇ ಭೂತದಯೆ ಯೋಗ್ಯೆಂಬುದನ್ನು ಕಾಣು ತ್ತೇನೆ. ನಿನಗೋಸ್ಕರವೇ ನಾನು ಎಲ್ಲಾ ಪ್ರಾಣಿಗಳನ್ನೂ ಪ್ರೀತಿಸುತ್ತೇನೆ. ನಿನ್ನ ಮೂಲಕವೇ ನಾನು ಈ ಜಗತ್ತಿಗೆ ನನ್ನ ಸೇವೆಯನ್ನು ಸಲ್ಲಿಸಬೇಕಾದ್ದರಿಂದ ನಿನ್ನಲ್ಲಿ ರುವ ನನ್ನ ಶ್ರದ್ಧೆ ವಿಶ್ವಾಸವೆಂದಿಗೂ ಸಂ ಕುಚಿತವಾಗಲಾರದು. ನಿನ್ನ ಹೃದಯವು ಈ ಜಗತ್ತಿನ ಬಡ ಪ್ರಾಣಿಯಾಗಿ ಯಾವಾ ಗಲೂ ಇದ್ದು ಜಗತ್ತಿನ ಕಲ್ಯಾಣದ ವಿ ಚಾರವಾಗಿ ಯೋಚಿಸುತ್ತಿರುತ್ತದೆ.

ಸ್ವಾಮಿ ಪರಮನೇ ನಿನ್ನ ಸಂಸಾರ ಸಾಗರದ ದಡದಲ್ಲಿ ನಿನ್ನ ಮಕ್ಕಳು, ಮಾ ನವ ಜಾತಿಗಳೆಲ್ಲ ನಿನ್ನ ಮಕ್ಕಳಾದ ಧರ್ಮಗಳು ಮತ್ತು ಧರ್ಮವೂ ಸ್ತ್ರೀ ದರ್ಶನ ... , ... , ಯೋಚಿಸಿ, ಅನೇಕ ... , ... , ಕೊನೆಗೆ ನಿರ್ವಾಣ ಹೊಂದಲಿಲ್ಲವೇ? ಅವರು ಆ ಪದ ಈ ಜನ



ಶ್ರೀಮಾನ್ ಡಾ. ಸಿ. ರಾಜ್ವಸ್ಥರವರ ಕುಮಾರರು. ಇವರಲ್ಲಿ ದೇಶಾಭಿಮಾನದ ಕಲೆಯಾಗಿ ಉರಿದ ಸಂತುಷ್ಟ ಸ್ತ್ರೀ.

ಸುಂದರವಾದ ಜೀವ ಭಾವನೆಯನ್ನು ತೋರಿಸುವರೆ? ಓ ಜನನಿ! ಹೀಗೆ ನೀನು ಈ ಪ್ರಪಂಚದ ಭೂತದಯೆ, ಪ್ರೀತಿ, ಮತ್ತು ಆತ್ಮ ಐಕ್ಯಗಳಿಗೆ ಮೂಲಾಧಾರವಾಗಿರುವೆ. ನಿನ್ನನ್ನು ಪ್ರೀತಿಸಿ ನಿನ್ನ ಮೂಲಕವೇ ಈ ಪ್ರಪಂಚದ ಪ್ರಾಣಿಗಳನ್ನೆಲ್ಲಾ ಪ್ರೀತಿಸಿ ಅವರ ಸೌಖ್ಯಕ್ಕಾಗಿ ಶ್ರಮಿಸುತ್ತೇನೆಂದರೆ ನಾನು ತಪ್ಪುಮಾಡುತ್ತಿದ್ದೇನೆಯೆ?

ನಿನ್ನಲ್ಲಿರುವುದನ್ನೆಲ್ಲಾ ಪ್ರೀತಿಸುತ್ತೇನೆ

ನಿನಗೆ ಸಂಬಂಧಪಟ್ಟದ್ದನ್ನೆಲ್ಲಾ ಪ್ರೀತಿಸುತ್ತೇನೆ. ನಿನ್ನ ಬೆಟ್ಟ ಗುಡ್ಡಗಳ ನ್ನು, ಕಣಿವೆಗಳನ್ನು, ತೋಟಗಳನ್ನು, ಸಣ್ಣ ಕಾಲುವೆಗಳನ್ನು ಬಯಲು ಪ್ರದೇಶ ಗಳನ್ನು, ಗಿರಮಂಗಳನ್ನು, ಹೂ ಹಣ್ಣು ಗಳನ್ನು ಊಸರ ಪ್ರದೇಶಗಳನ್ನು ಸಹ ಪ್ರೀತಿಸುತ್ತೇನೆ. ನಿನ್ನಲ್ಲಿರುವ ಪ್ರಕೃತಿ ಸೌಂದರ್ಯವು ಪ್ರಪಂಚದ ಮತ್ತಿನ್ನಾವ ಭಾಗದಲ್ಲಿರುವುದು? ನಿನ್ನ ಮಕ್ಕಳನ್ನೆಲ್ಲಾ ಪ್ರೀತಿಸುತ್ತೇನೆ. ನಿನ್ನ ಮಕ್ಕಳು ಕಪ್ಪು ವ ರ್ಣದವರೆಂದೂ, ಜೀವಾಭಿಮಾನ ರಹಿತ ರೆಂದೂ, ಐಕಮತ್ಯ ವಿಲ್ಲದವರೆಂದೂ, ಮೂಢ ನಂಬಿಕೆಯುಳ್ಳವರೆಂದೂ ಇವೇ ಮೊದಲಾಗಿ ಇನ್ನೂ ಅನೇಕ ವಿಧವಾದ ಹೆಸರಿನಿಂದ, ಇತರರಿಂದ ಹೇಳಲ್ಪಟ್ಟವರಾ ಗಿದ್ದಾರೆ. ಕೋಪ ಮತ್ತು ನಿರಾಶೆಗಳು ನನ್ನಲ್ಲಿ ಉಂಟಾದಾಗ್ಯೂ ನಾನೂ ಸಹ ಹಾ ಗೆಯೇ ಭಾವಿಸಿಕೊಂಡರೂ ಕ್ಷಣಕಾಲ ಮಾತ್ರ ಆ ಭಾವನೆಯು ನನ್ನಲ್ಲಿರುತ್ತದೆ. ನಿನ್ನನ್ನು ಎರಡು ಸಲಿಯುವುದನ್ನು ನೋ ಡಿ ನಾನು ಅವರ ವಿಚಾರದಲ್ಲಿ ಕೋಪಗೊ ಳ್ಳುತ್ತೇನೆ ಆ ಭಾವನೆಗೆ ಕಾರಣ. ಕೆಲವು ಸಲ ಅವರು ನನ್ನನ್ನು ನಿಂದಿಸು ತ್ತಾರೆ. ಅವರು ಸೋಲುವುದು ಅವರಿಗೇ ತಿಳಿಯದ ಕಾರಣದಿಂದ ಅವರು ನನ್ನನ್ನು ನೃತ್ಯದವೂ ಸಹ ನಾನು ಮನಸ್ಸಿಗೆ ಹಚ್ಚಿ ಕೊಳ್ಳುವುದಿಲ್ಲ.

ಅವರು ನಿನ್ನ ಮಕ್ಕಳಾದ್ದರಿಂದಲೂ, ನನ್ನಲ್ಲಿರುವಂತಹ ರಕ್ತವೇ ಅವರ ಧಮನಿ ಗಳಲ್ಲಿ ಪ್ರವಹಿಸುತ್ತಿರುವುದರಿಂದಲೂ, ನಾ ನು ಅವರನ್ನು ಪ್ರೀತಿಸುತ್ತೇನೆ. ಅವರನ್ನು ನಾನೆಂದಿಗೂ ನಿಂದಿಸುವುದಿಲ್ಲ. ಅವರಿಗೆ ಕೆಡಕನ್ನು ಬಯಸುವುದಿಲ್ಲ. ಅವರನ್ನು ನಾ ನೆಂದಿಗೂ ಕೈ ಬಿಡುವುದಿಲ್ಲ. 'ನನ್ನ ತನು ಮನಧನಗಳೆಲ್ಲವೂ ಅವರವಾಗಿವೆ. ಇದೇ ನಾನು ನಿನಗೆ ನೂತನ ವರ್ಷದ ಕಾಣಿಕೆ ಯಾಗಿ ಕಳುಹಿಸುವ ಶುಭಾಶಯ. ಜಯಾಪ್ರಣೀತವಾದ ಮತ್ತು ಪೂಜ್ಯ ಳಾದ ಮಾತೆಯೇ, ದಯವಿಟ್ಟು ಸ್ವೀಕ ರಿಸು.

ANANDA SODA FACTORY

Best Aerated Water Suppliers.
Complete Requisites For Aerated Water Manufacturers Available.

ಆನಂದಾ ಸೋಡಾ ಫ್ಯಾಕ್ಟರಿ
ದೊಡ್ಡ ಪೇಟೆ. ಮೈಸೂರು.

ಸಾಧ್ವಿ

೩—೧—೩೮ ನೇ ಸೋಮವಾರ

ಹೊಸ ವರ್ಷ.

ಏಸು ಕ್ರಿಸ್ತನ ಜನನದಿಂದ ಕಳೆಯುತ್ತಿದ್ದ ಮುತ್ತಿನ ಹಳೆಯ ವರ್ಷವು ಕಳೆಯಿತು. ಹೊಸ ವರ್ಷವು ಬಂತು. ಈ ಹೊಸ ವರ್ಷದಲ್ಲಿ ಪ್ರಪಂಚವು ಆ ಮಹಾತ್ಮನಾದ ಕ್ರಿಸ್ತನು ಹಾಕಿಕೊಟ್ಟ ಸತ್ಯ, ಅಹಿಂಸೆ, ಶಾಂತಿಯ ಮಾರ್ಗ್ಗವನ್ನು ಅನುಸರಿಸಿ ಪ್ರಜಾ ಹಿತವನ್ನು ಬಯಸಲೆಂದು ಎಲ್ಲರೂ ಹಾರೈಸೋಣ.

ಕಳೆದ ವರ್ಷದಲ್ಲಿ ಪ್ರಪಂಚದ ಶಾಂತಿ ಸೌಹಾರ್ದಗಳು ಎಷ್ಟು ಮಟ್ಟಿಗೆ ಇದ್ದುವೆಂದು ಎಲ್ಲರೂ ಬಲ್ಲರು. ಪರಸ್ಪರ ಕಲಹ ಕದಿವಾಟಗಳಲ್ಲಿಯೂ, ಅಪಾಬ್ರಹ್ಮತ್ವದಲ್ಲಿಯೂ ಪ್ರಮುಖ ಕ್ರೈಸ್ತ ಜನಾಂಗಗಳೇ ಅತ್ಯುತ್ಸಾಹದಿಂದ ತೊಡಗಿದ್ದುವು. ಅಬಿಸೀನಿಯದ ಅಧಃಪತನವೂ ಸ್ಪೈನಿನ ಅಂತಯುದ್ಧವೂ ಇದಕ್ಕೆ ಸಾಕ್ಷಿಗಳು.

ಇತ್ತ ಪೂರ್ವಖಂಡದಲ್ಲಿಯೂ ಜಪಾನ್ ಚೀನಾ ವೈಮನಸ್ಯವು ಮಾನವನ ಅನಾಗರಿಕ ಪರಿಸ್ಥಿತಿಯನ್ನೇ ವ್ಯಕ್ತಗೊಳಿಸುತ್ತಿದೆ. ಭರತಖಂಡದಲ್ಲಿ ಸಹ ನಿರಂಕುಶ ಪ್ರವರ್ತಕರು ತಮ್ಮ ಕಠಿಣ ದಬ್ಬಾಳಿಕೆಯನ್ನೇ ನಿರಾತಂಕವಾಗಿ ನಡೆಸುತ್ತಿದ್ದಾರೆ.

ನಮ್ಮ ಸಂಸ್ಥಾನದಲ್ಲಿಯೂ ಸಹ ಸಾರ್ವಜನಿಕ ಜೀವನವು ಹಿತಕರವಾಗಿಲ್ಲ. ಅಧಿಕಾರಿಗಳಿಗೂ ಪ್ರಜಾವರ್ಗದವರಿಗೂ ತೀವ್ರವಾದ ಭಿನ್ನಾಭಿಪ್ರಾಯಗಳುಂಟಾಗಿವೆ. ಅನೇಕರು ಕಾರಾಗೃಹಗಳನ್ನು ಸೇರಿದ್ದಾರೆ. ಬಂಧನಗಳಿಗೆ ಒಳಗಾಗಿದ್ದಾರೆ. ಇದನ್ನು ಬಿಕ್ಕಟ್ಟಿನ ಸ್ಥಿತಿಯೇ ಬಲಿಷ್ಠವಾದ ಸೂಚನೆಗಳಿವೆ. ನಮ್ಮ ಪ್ರಜೆಗಳ ಹಿತದಲ್ಲಿಯೂ ಆಸಕ್ತರಾದ ಮಹಾಸ್ವಾಮಿಯವರು ಪ್ರವೇಶಿಸಿ ಈ ತೊಡಕನ್ನು ಬಿಡಿಸದಿದ್ದರೆ ಪರಿಸ್ಥಿತಿಯು ಅನರ್ಥಕಾರಿಯಾಗಿ ಪರಿಣಮಿಸಬಹುದು.

ಹೊಸ ವರ್ಷದಲ್ಲಿ ಪ್ರಪಂಚದ ವಿವಿಧ ದೇಶಗಳಲ್ಲಿಯೂ ಪರಸ್ಪರ ಪ್ರೇಮ ಅನುರಾಗಗಳು ವೃದ್ಧಿಯಾಗಲೆಂದೂ ಜನಾಂಗದ ಐಕಮತ್ಯವು ಬೆಳೆಯಲೆಂದೂ ಭಗವಂತನನ್ನು ಪ್ರಾರ್ಥಿಸೋಣ.

ಮಂಡ್ಯದ ರೈತರ ಅತೃಪ್ತಿ

ಸಭಾ ಪಂಕ್ತಿಗ

ಮಂಡ್ಯದ ತಾಲ್ಲೂಕು ಕೋಡಿಹಳ್ಳಿಯಲ್ಲಿ ರೈತರ ದಿನಾಚರಣೆಯನ್ನು ನಡೆಸಲು ಸಕ್ಕರೆ ಕಾರ್ಖಾನೆಯವರು ಏರ್ಪಡಿಸಿದ್ದರು. ದಿವಾನ್ ಸರ್ ಮಿರ್ಜಾ ಇಸ್ಮೈಲರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಾವಿರಾರು ಜನರು ಸೇರಿದ್ದರು. ಅಧಿಕಾರಿ ವರ್ಗದವರೂ, ಖಾಸಗಿ ದೊಡ್ಡ ಮನುಷ್ಯರೂ ಬಂದಿದ್ದರು. ಸಕ್ಕರೆಗೆ ಬಂದಿರುವ ಪೈಪೋಟಿ ವಿಷಯವನ್ನು ವ್ಯವಸಾಯ ಇಲಾಖಾಧಿಕಾರಿಗಳಾದ ಶ್ರೀ॥ ಟಿ. ಜಿ. ರಾಮಯ್ಯನವರು ವಿವರಿಸಿದರು. ಇಂಡಿಯಾ ದೇಶದಲ್ಲಿ ಮೊದಲು ೩೦ ಸಕ್ಕರೆ ಗಿರಣಿಗಳಿದ್ದುವು ಈಗ ೧೫೭ ಆಗಿವೆ. ಹಿಂದೆ ಐದು ಲಕ್ಷ ಟನ್ ಸಕ್ಕರೆ ತಯಾರಾಗುತ್ತಿತ್ತು. ಈಗ ಹನ್ನೊಂದು ಲಕ್ಷ ಆಗುತ್ತಿದೆ. ನಾವು ಈಗ ಮಾಡುತ್ತಿರುವ ಸಕ್ಕರೆ ಹೆಚ್ಚಾಗಿ ಹೋಗಿದೆ. ಪೈಪೋಟಿ ಹೆಚ್ಚುತ್ತಿದೆ. ಪೈಪೋಟಿಯಲ್ಲಿ ನಾವೂ ಭಾಗವಹಿಸದಿದ್ದರೆ ಸಕ್ಕರೆ ವ್ಯಾಪಾರವು ನಡೆಯುವಂತಿಲ್ಲ. ಯೋಜನೆಯಲ್ಲಿ ಪ್ರಯೋಜನ ಮಾಡುವವರೂ, ನಾವಿಕರೂ ಹೇಗೆ ಅನ್ಯೋನ್ಯವಾಗಿರಬೇಕೋ ಹಾಗೆಯೇ ಗಿರಣಿಯವರೂ, ಕಬ್ಬು ಬೆಳೆಯುವವರೂ ಇರಬೇಕು. ರೈತರು ಕಬ್ಬನ್ನು ಕಮ್ಮಿ ಬೆಲೆಯಲ್ಲಿ ಕೊಡಬೇಕು. ಬೆಳೆದ ಕಬ್ಬನ್ನೆಲ್ಲಾ ಗಿರಣಿಯು ತೆಗೆದುಕೊಳ್ಳಲಾರದು. ರೈತರು ಕಬ್ಬು ಬೆಳೆಯುವ ಪ್ರದೇಶವನ್ನು ಕಮ್ಮಿ ಮಾಡಿ ಹತ್ತಿ, ಕಡಲೇಕಾಯಿ, ಬಾಳೆ, ಹೊಗೆ ಸೊಪ್ಪು, ಮೆಣಸಿನಕಾಯಿ, ಅನಾನಸ್— ಇವುಗಳನ್ನು ಬೆಳೆಯಬೇಕು,—ಎಂದಿವೇ ಮುಂತಾಗಿ ಹೇಳಿದರು.

ಮಂಡ್ಯದ ಡಾ॥ ನಲ್ಲಿ ಇರ್ವಿನ್ ನಾಲೆಯ ಬಂದು ರೈತರು ಕಬ್ಬನ್ನು ಬೆಳೆದು ಸಕ್ಕರೆ ಕಾರ್ಖಾನೆಗೆ ಕೊಟ್ಟು ತಮ್ಮ ಮನೆ ಮಠಗಳನ್ನು ಉದ್ಧಾರಮಾಡಿಕೊಳ್ಳಬಹುದೆಂದು ತಿಳಿದಿದ್ದರು. ಅಂತಹವರಿಗೆ ಇದು ಕಠಾರ ಪ್ರಾಯವಾಗಿ ಪರಿಣಮಿಸಿತು. ಹೊಟ್ಟೆಗೆ ಒಡ್ಡೆ ಬಟ್ಟೆ ಬತ್ತೆಂದು ಅನೇಕರು ಭಾವಿಸಿದರು.

ಸಭೆಯಲ್ಲಿ ರೈತರೆಲ್ಲರೂ ಅತೃಪ್ತಿಯನ್ನು ಸೂಚಿಸಿ ಎದ್ದು ಬಿಟ್ಟರು. ಎಲ್ಲೆಲ್ಲೂ ಅಶಾಂತಿ, ಅಸಮಾಧಾನಗಳು ತುಂಬಿ ತುಳುಕಾಡುತ್ತಿದ್ದುವು.

ಅನಂತರ ದಿವಾನರು ಮಾತಾಡಿದರೂ ಆಹವಾಲು ಹೇಳುವುದಾದರೆ ಹೇಳಬಹುದೆಂದರು. ಶಿವಳ್ಳಿ ಬೋರೇಗೌಡರೆಂಬುವರು ಈ ರೀತಿ ಹೇಳಿದರು:—

"ಸ್ವಾಮಿ, ನಮ್ಮ ಕಷ್ಟಗಳು ಬಹಳವಾಗಿವೆ. ದಿನೇ ದಿನೇ ನಮ್ಮ ಮೇಲೆ ಹೊಸ ಹೊಸ ಭಾರಗಳು ಬೀಳುತ್ತಿವೆ. ನಮಗೆ ಕೊಡಬೇಕಾದ ಹಣದಲ್ಲಿ ನಮ್ಮಿಂದ ಸಲ್ಲಬೇಕಾದ ತೆರಿಗೆಗಳನ್ನೆಲ್ಲಾ ಹಿಡಿದು ಕೊಳ್ಳುತ್ತಾರೆ. ನಾವು ಮನೆಗೆ ಹೋಗುವಾಗ ಬರಿಗೈಯಾಗುತ್ತದೆ. ಕಬ್ಬಿನ ಬೆಳೆಯನ್ನು ಕಡಿಮೆ ಮಾಡುವುದಿಲ್ಲವೆಂದು ದಿವಾನ್ ಸಾಹೇಬರು ಡಾ॥ ಕೋಲ್ಮನವರು ಹೇಳಿದ್ದರು. ಈಗ ಕಡಿಮೆ ಮಾಡಿದರೆ ನಾವೇನು ಮಾಡಬೇಕು?" ಎಂದು ಮುಂತಾಗಿ ಹೇಳಿದರು.

ಸಭೆಯು ಅನಂತರ ಮುಕ್ತಾಯವಾಯಿತು.

ದೇಶೀಯ ಕ್ರೈಸ್ತರ ಸಮ್ಮೇಳನ

ಭಾರತೀಯರಿಂದ ದೇಶೀಯ ಕ್ರೈಸ್ತರು ತಮ್ಮ ಆಚಾರ ವಿಚಾರಗಳಿಗೆ ಸಂಬಂಧಪಟ್ಟ ಸಂಸ್ಥೆಗಳನ್ನೂ ವ್ಯವಹಾರಗಳನ್ನೂ ತಮ್ಮ ಸಮಾಜದ ಮುಖಂಡರ ಅಧೀನಕ್ಕೆ ಒಳಪಡಿಸಬೇಕೆಂದೂ ಪರಕೀಯರಾಗಿ ಸಾವಿರಾರು ಮೈಲಿಗಳ ದೂರದಿಂದ ಬಂದಿರುವ ಪಾದ್ರಿಗಳಿಗೆ ಒಪ್ಪಿಸಲೊಡದೆಂದೂ ಉದ್ರೇಕದಿಂದ ಸಾಕಷ್ಟು ವರ್ಷಗಳಿಂದ ಪ್ರಬಲವಾದ ಪ್ರಯತ್ನಗಳನ್ನು ಮಾಡುತ್ತಿರುವರು. ನಮ್ಮ ಮೈಸೂರು ಸಂಸ್ಥಾನದ ಕ್ರೈಸ್ತ ಸಹೋದರರು ಮೂರು ವರ್ಷಗಳ ಹಿಂದೆ ಒಂದು ಸಮ್ಮೇಳನವನ್ನು ಆರಂಭಿಸಿದರು. ಕಾರಣಾಂತರಗಳಿಂದ ಅದು ಕಳೆದ ಎರಡು ವರ್ಷಗಳು ನಡೆಯಲಿಲ್ಲ. ಈ ಸಾರಿ ಕ್ರಿಸ್‌ಮಸ್ ರಜಾದಲ್ಲಿ ಎರಡನೇ ಸಮ್ಮೇಳನವು ಮೈಸೂರು ಟೌನ್‌ಹಾಲಿನಲ್ಲಿ ವೈಭವದಿಂದ ನಡೆಯಿತು. ನೀಲಗಿರಿಯ ಡಾ॥ ಇ. ಪ್ರಿಷ್ಟನರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಾವಿರಾರು ಜನ ಮಹನೀಯರೂ ಮಹಿಳೆಯರೂ ಸಭೆಗೆ ಬಂದಿದ್ದರು. ಸಮ್ಮೇಳನವು ಮೂರು ದಿನಗಳು ನಡೆಯಿತು. ಕ್ರೈಸ್ತರಲ್ಲದೆ ಹಿಂದೂ ಸಮಾಜದ ಪ್ರಮುಖ ದೊಡ್ಡ ಮನುಷ್ಯರೂ ಭಾಗಿಗಳಾಗಿ, ಭಾಷಣಗಳನ್ನು ಮಾಡಿ ತಮ್ಮ ಸಹಾನುಭೂತಿಯನ್ನು ತೋರಿಸಿದರು. ರೋಮನ್ ಕ್ಯಾಥೋಲಿಕ್ ಮತ್ತು ಪ್ರಾಟೆಸ್ಟೆಂಟ್ ಎಂಬ ಎರಡು ಪಂಗಡದ ಕ್ರೈಸ್ತರೂ ಸೇರಿದ್ದರು. ಎಲ್ಲರೂ ಅನ್ಯೋನ್ಯದಿಂದಲೂ ಸೌಹಾರ್ದದಿಂದಲೂ ತಮ್ಮ ಇಡೀ ಸಮಾಜದ ಅಭ್ಯುದಯವನ್ನು ಪಡೆಯಲು ಪ್ರಯತ್ನಿಸಿದರು. ದೇಶೀಯ ಕ್ರೈಸ್ತರ ಇಂದಿನ ಶೋಚನೀಯ ಸ್ಥಿತಿಗತಿಗಳಿಗಾಗಿ ಎಲ್ಲರೂ ಪರಿತಾಪ ಪಟ್ಟರು. ಅವರ ಬಂಧವಿಮೋಚನೆಗಾಗಿ ಸಕಲರೂ ಸಹಕರಿಸಬೇಕೆಂದು ಸಂಕಲ್ಪಿಸಿದರು.

ಅಧ್ಯಕ್ಷಸ್ಥಾನದಿಂದ ಡಾ॥ ಪ್ರಿಷ್ಟನರು ಮಾಡಿದ ಭಾಷಣವು ಮನೋಜ್ಞವಾಗಿದ್ದಿತು. ಅನೇಕ ಉಪಯುಕ್ತವಾದ ಅಂಶಗಳು ಚರ್ಚಿಸಲ್ಪಟ್ಟುವು. ಒಟ್ಟಿನಲ್ಲಿ ದೇಶೀಯ ಕ್ರೈಸ್ತರು ವಿದೇಶೀಯ ಪಾದ್ರಿಗಳ ಬಂಧನದಿಂದ ಬಿಡಿಸಿಕೊಂಡು ಸ್ವತಂತ್ರವಾದ ಪೂಜಾ ಸಂಸ್ಥೆಗಳನ್ನೂ ಧರ್ಮಾಚಾರ ವ್ಯವಸ್ಥೆಗಳನ್ನೂ ಮಾಡಿಕೊಳ್ಳಬೇಕೆಂದು ಅಭಿಪ್ರಾಯವು ವ್ಯಕ್ತಪಡಿಸಲ್ಪಟ್ಟಿತು. ಈ ಸಮ್ಮೇಳನವು ದಿನೇ ದಿನೇ ಅಭಿವೃದ್ಧಿ ಹೊಂದಿ ಸಮಾಜದ ಹಿತಸಾಧನೆಯನ್ನು ಮಾಡಲೆಂದು ಎಲ್ಲರೂ ಹಾರೈಸಿದರು.

ಆಯುರ್ವೇದ ಸಮ್ಮೇಳನ

ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ ಮತ್ತು ಅದರ ಅಂಗವಾದ ಇತರ ಅನೇಕ ಸಮಾರಂಭಗಳು ರಾಯಚೂರಿನಲ್ಲಿ ಕಳೆದ ಡಿಸೆಂಬರ್ ಅಂತ್ಯದಲ್ಲಿ ಅತ್ಯಂತ ವೈಭವದಿಂದ ಜರುಗಿದುವು. ಕನ್ನಡನಾಡಿನ ಅನೇಕ ಭಾಗಗಳಿಂದ ಸುಪ್ರಸಿದ್ಧ ವೈದ್ಯರುಗಳು ಬಂದಿದ್ದರು. ಆಯುರ್ವೇದ ವೈದ್ಯದ ಪ್ರಚಾರಕ್ಕಾಗಿ ಅನೇಕ ಉಪಯುಕ್ತ ವಿಚಾರಗಳು ಪರಿಶೀಲಿಸಲ್ಪಟ್ಟುವು.

ಮೈಸೂರು ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜಿನ ಪ್ರಿನ್ಸಿಪಾಲರಾದ ಭಿಷಕ್ಚೂಡಾಮಣಿ ಆಯುರ್ವೇದ ವಿದ್ವಾನ್ ಡಾಕ್ಟರ್ ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಒಂದು ಉತ್ತಮವಾದ ಭಾಷಣವನ್ನು ಮಾಡಿ ಆಯುರ್ವೇದದ ಮಹತ್ವವನ್ನೂ ಅದು ಜನತಾ ಸೇವೆಯಲ್ಲಿ ಮಾಡುವ ಮಹದುಪಕಾರವನ್ನೂ ವರ್ಣಿಸಿದರು. ಮುಂದೆ ಈ ಶಾಸ್ತ್ರವು ಯಾವ ರೀತಿ ಜನರ ಉಪಯೋಗಕ್ಕಾಗಿ ನೆರವಾಗಬೇಕೆಂಬುದನ್ನು ತಿಳಿಸಿದರು.

ಇದೇ ಸಮಯದಲ್ಲಿ ಆಯುರ್ವೇದ ವಸ್ತು ಪ್ರದರ್ಶನವೊಂದು ಸಹ ನಡೆಯಿತು. ತುಂಗಭದ್ರೆಯ ಪ್ರೇಮಾ ಮೆಡಿಕಲ್ ಸರ್ವಿಸ್ಸಿನ ವೈದ್ಯ ಗುರು ಡಾ॥ ಆರ್. ಕೆ. ಪಾಳೇಕರ್ ಇವರು ಅದರ ಆರಂಭೋತ್ಸವವನ್ನು ನಡೆಸಿದರು. ಪ್ರದರ್ಶನದಲ್ಲಿ ಆಯುರ್ವೇದ ಚಿಕಿತ್ಸೆಗಳಿಗೆ ಸಂಬಂಧಪಟ್ಟ ಅನೇಕ ಮೂಲಿಕೆಗಳೂ, ರಸಾಯನ ಪದಾರ್ಥಗಳೂ ಸಿದ್ಧೌಷಧಗಳೂ ಇದ್ದುವು. ಇದರಿಂದ ಆಯುರ್ವೇದದ ಮಹತ್ವವು ಪ್ರೇಕ್ಷಕರಿಗೆ ಬಹಳ ಚೆನ್ನಾಗಿ ಗೋಚರವಾಗುತ್ತಿದ್ದಿತು.

ತದ್ವಿದ್ಯಾ ಸಂಭಾಷಾ ಪರಿಷತ್ತಿನ ಅಧ್ಯಕ್ಷತೆಯನ್ನು ಆಯುರ್ವೇದ ತೀರ್ಥ ವೈದ್ಯ ಅನಂತಾಚಾರ್ಯರು ವಹಿಸಿದ್ದರು. ಆಯುರ್ವೇದದ ವೈಶಿಷ್ಟ್ಯವೂ ಜೀವಾಳವೂ ಆದ ತ್ರಿದೋಷ ವಿಷಯವನ್ನು ಕುರಿತು, ಅವರು ಪ್ರಸ್ತಾಪಿಸಿ ಇವು ಶರೀರದ ಉತ್ಪತ್ತಿ ಸ್ಥಿತಿ ಲಯಗಳಿಗೆ ಹೇಗೆ ಕಾರಣವೆಂಬುದನ್ನು ತಿಳಿಸಿದರು. ತ್ರಿದೋಷಗಳ ಚಿಕಿತ್ಸೆಯನ್ನೂ ಸಹ ಸೂಚಿಸಿದರು.

ಸಮ್ಮೇಳನವೂ ಇತರ ಸಮಾರಂಭಗಳೂ ಬಹಳ ಯಶಸ್ವಿಯಾಗಿ ಜರುಗಿದುವು. ಸಾವಿರಾರು ಜನರು ಬಂದು ಭಾಗಿಗಳಾಗಿ ಅದರ ಪ್ರಯೋಜನವನ್ನು ಹೊಂದಿದರು.

ಸೈನ್ಯಶಿಕ್ಷಣದ ಆವಶ್ಯಕತೆ

ಶ್ರೀ॥ ಸಾವರ್‌ಕರ್‌ರವರು ಬಂಡಾರಾ ಎಂಬಲ್ಲಿಯ ಯುಹಿಲಾ ಸಮಾಜ ಮತ್ತು ರಾಷ್ಟ್ರೀಯ ಸೇವಕ ಸಮಿತಿಯಲ್ಲಿ ಭಾಷಣ ಮಾಡುತ್ತಾ ಮಹಿಳೆಯರು ಸ್ವದೇಶ ಮನೋಭಾವನೆಯನ್ನು ಹೊಂದಿರಬೇಕೆಂದೂ ಸೈನಿಕ ಶಿಕ್ಷಣ ಹೊಂದಬೇಕೆಂದೂ, ಟೆನ್ನಿಸ್, ಫ್ರಿಡ್ಡ್, ಕ್ಲಬ್ಬುಗಳಿಗೆ ಬದಲು ರೈಫಲ್ ಕ್ಲಬ್‌ಗಳನ್ನು ಪ್ರಾರಂಭಿಸಿ ಹೆಂಗಸರನ್ನು ಅಭ್ಯಾಸ ಮಾಡಬೇಕೆಂದೂ ಹೇಳಿದರು.

ಜನವರಿ ೯ ನೇ ತಾರೀಖು ಚೀನಾ ದಿನಾಚರಣೆ

ಕಾಂಗ್ರೆಸ್ ಅಧ್ಯಕ್ಷರ ಮನವಿ.

ಪಂಡಿತ ಜವಹರಲಾಲರು ಈ ಕೆಳಗೆ ಕಂಡ ಹೇಳಿಕೆಯನ್ನು ಹೊರಡಿಸಿದ್ದಾರೆ:— ಜಪಾನ್ ಚೀನದಲ್ಲಿ ನಡೆಸುತ್ತಿರುವ ದಬ್ಬಾಳಿಕೆಯಿಂದ ಎಂಥ ಮಹೋಗ್ರವಾದ ವಾತಾವರಣವು ಚೀನಾ ದೇಶದಲ್ಲಿ ಉಂಟಾಗಿದೆಯೆಂಬ ವಿಷಯದ ಬಗ್ಗೆ ನಾನೀಗಾಗಲೇ ಭಾರತೀಯರ ಗಮನವನ್ನು ಸೆಳೆದಿದ್ದೇನೆ. ಇಂಥಾ ಹೃದಯ ವಿದ್ರಾವಕವಾದ ಪರಿಸ್ಥಿತಿಯಲ್ಲಿ ದುಃಖಕ್ಕೀಡಾಗಿರುವ ಚೀಣೀಯರಿಗೆ ವೈದ್ಯಕೀಯ ಸಹಾಯಗಳನ್ನು ನೀಡಬೇಕೆಂದೂ ನಾನು ಭಾರತೀಯರಲ್ಲಿ ಪ್ರಾರ್ಥಿಸಿಕೊಂಡಿದ್ದೇನೆ.

ಚೀನಾ ದೇಶದ ಪ್ರಮುಖ ಸೇನಾಪತಿಗಳಲ್ಲೊಬ್ಬರಾದ ಜನರಲ್ ಚೂತೇರವರು ಸಹಾಯವನ್ನು ಬೇಡಿ ನನಗೊಂದು ಪತ್ರ ಬರೆದಿದ್ದಾರೆ. ಅವರ ಕಾಗದವು ಚೀನಾ ಭಾಷೆಯಲ್ಲಿದೆ.

ಜನರಲ್ ಚೂತೇರವರು ಸಾಮಾನ್ಯರಲ್ಲ. ಅತಿ ದುಸ್ಸಹವಾದ ಕಷ್ಟಗಳು ಬಂದರೂ ಎದೆಗುಂದದೆ, ಹಿಮ್ಮೆಟ್ಟದೆ ಎಂಭತ್ತು ಸಾವಿರ ಮೈಲಿದೂರ ತಮ್ಮ ಸೇನೆಯನ್ನು ಈಗ್ಗೆ ಕೆಲವು ವರ್ಷಗಳ ಹಿಂದೆ ನಡೆಸಿಕೊಂಡು ಹೋದ ಸೇನಾಗ್ರಣಿಗಳವರು.

ಜನರಲ್ ಚೂತೇರವರು ಆಗ ಮಾಡಿದ ಆ ಅದ್ಭುತ ಸಾಹಸವು ಚೀನಾ ದೇಶದ ಮಿಲಿಟರಿ ಇತಿಹಾಸದಲ್ಲಿ ಅದ್ವಿತೀಯವಾಗಿ ನಿಂತಿದೆ

ಇದೇ ೧೯೩೮ ನೇ ಇಸವಿ ಜನವರಿ ೯ ನೇ ತಾರೀಖು ಭಾರತದಾದ್ಯಂತವೂ ಚೀನಾ ದಿನಾಚರಣೆಯು ನೆರವೇರಿಸಲ್ಪಡಬೇಕು. ಆ ದಿನದ ಭಾರತದಲ್ಲೆಲ್ಲಿದ್ದರೂ, ಎಲ್ಲೆಲ್ಲಿಯೂ ಸಭೆ ಸಮ್ಮೇಳನಗಳನ್ನು ನಡೆಸಬೇಕು.

ಚೀನಾ ದೇಶದ ಬಗ್ಗೆ ಸಹಾನುಭೂತಿ ತೋರಿಸಿ, ಹಣಕಾಸುಗಳನ್ನು ಸಂಗ್ರಹಿಸಿ, ಚೀನಾಕ್ಕೆ ವೈದ್ಯಕೀಯ ಸಹಾಯ ಸಾಮಗ್ರಿಗಳನ್ನು ಕಳುಹಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಈ ರೀತಿ ಸಂಗ್ರಹವಾದ ದ್ರವ್ಯವನ್ನು ಅಲಹಾಬಾದ್ "ಸ್ವರಾಜ್ಯ ಭವನಕ್ಕೆ" ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವಿದೇಶಾಂಗ ಶಾಖೆಗೆ ಕಳುಹಿಸಬೇಕಾಗಿ ಪ್ರಾರ್ಥನೆ.

೧೪೪ ನೇ ಕಲಮಿನ ವಿಚಿತ್ರ ಪ್ರಯೋಗ

ಎಲ್ಲಾ ಕಾಂಗ್ರೆಸ್ ಕಾರ್ಯಗಳಿಗೂ ಅಡ್ಡಿ

ತೀರ್ಥಹಳ್ಳಿಯ ಅಮಲ್ದಾರ್ ಮ್ಯಾಜಿಸ್ಟ್ರೇಟರು ೧೪೪ ನೇ ಸೆಕ್ಷನ್ನಿನ ಪ್ರಕಾರ ಒಂದು ಆಜ್ಞೆ ಹೊರಡಿಸಿ ಕಾಂಗ್ರೆಸ್ ಧ್ವಜದ ಮೆರವಣಿಗೆ, ಕಾಂಗ್ರೆಸ್ ಜಯಕಾರ ಮತ್ತು ಗೀತೆಗಳ ಉಚ್ಚಾರಣೆ, ಜವಾಬ್ದಾರಿ ಸರಕಾರವನ್ನು ಗಳಿಸಿಕೊಳ್ಳಬೇಕೆಂಬ ಭಾವನೆಯಿಂದ ನಡೆಸುವ ಚಳವಳಿ, ಸಾರ್ವಜನಿಕ ಸಭೆ ಮತ್ತು ಭಾಷಣ ಮುಂತಾದುವುಗಳು ನಡೆಯಕೂಡದೆಂದು ನಿಷೇಧಿಸಿರುತ್ತಾರೆ.

ಈ ರೀತಿಯ ಕಾಂಗ್ರೆಸ್ ಕಾರ್ಯಗಳು ಜನರನ್ನು ಉದ್ರೇಕಿಸುವುವೆಂದು ಅಮಲ್ದಾರ್ ಮ್ಯಾಜಿಸ್ಟ್ರೇಟರು ಆಜ್ಞೆಯಲ್ಲಿ ಎಲ ಸಿ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇನ್ನೆರಡು ತಿಂಗಳವರೆಗೆ ಈ ಆಜ್ಞೆ ಜಾರಿಯಲ್ಲಿರಬೇಕೆಂದು ತಿಳಿಸಿರುತ್ತಾರೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಕಾಂಗ್ರೆಸ್ ಚಳವಳಿಯು ಶಾಸನ ಮತ್ತು ಶಿಸ್ತುಗಳನ್ನು ಅತಿಕ್ರಮಿಸಲಾಗಿರುವುದರಿಂದಲೂ ಈ ಚಳವಳಿಯು ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರಕ್ಕೆ ವಿರೋಧವುಳ್ಳದ್ದಾಗಿರುವುದರಿಂದಲೂ ಈ ಆಜ್ಞೆಯನ್ನು ಹೊರಡಿಸಲಾಗಿದೆಯೆಂದೂ ಅಮಲ್ದಾರ್ ಮ್ಯಾಜಿಸ್ಟ್ರೇಟರು ಆಜ್ಞೆಯಲ್ಲಿ ತಿಳಿಸಿದ್ದಾರೆ.

ಡಾ|| ಪಟ್ಟಾಭಿಯವರೂ ಶ್ರೀ ಬಲವಂತರಾಯ್ ಮೆಹತಾರವರೂ ತೀರ್ಥಹಳ್ಳಿಗೆ ಬಂದಾಗ ಈ ಆಜ್ಞೆಯನ್ನು ಜಾರಿಮಾಡಲಾಯಿತು.

ಭಾಷಣ ಕೇಳಲು ನೆರೆದಿದ್ದ ಸಹಸ್ರಾರು ಮಂದಿಯನ್ನು ನಿರಾಶೆಗೊಳಿಸಲು ಇಷ್ಟಪಡದೆ ಡಾ|| ಪಟ್ಟಾಭಿ ಮತ್ತು ಮೆಹತಾರವರು ಖಾದೀ ಮತ್ತು ಗ್ರಾಮಾಭಿವೃದ್ಧಿ ವಿಷಯವಾಗಿ ಮಾತ್ರ ಭಾಷಣ ಮಾಡಿದರು. ಈಚೆಗೆ ಈ ಆಜ್ಞೆಯನ್ನು ವಾಪಸು ತೆಗೆದುಕೊಂಡಿರುವುದಾಗಿ ಕೇಳುತ್ತೇವೆ.

ಹೊಸ ವರ್ಷದ ಅಭಿನಂದನೆ

ನಮ್ಮ ಪಾಲಿಸಿ ಹೋಲ್ಡರುಗಳಿಗೂ,

ಪ್ರತಿನಿಧಿಗಳಿಗೂ, ಎಲ್ಲ ಹಿತಚಿಂತಕರಿಗೂ

ಮೆ|| ಗವಾಂಕರ್ ಅಂಡ್ ಸನ್ಸ್

ಚೀಫ್ ಏಜಂಟರುಗಳು:

ಕಾಮನ್‌ವೆಲ್ತ್ ಅಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಪೂನಾ ಸಿಟಿ.

ಮುದ್ರೆ ಬಸವಗಳಿಗೆ ಮೂಗುದಾರವೆ?

ಪುರನಿವಾಸಿಗಳ ಕೋರಿಕೆ.

ಮುದ್ರೆ ಒತ್ತಿದ ಬಸವಗಳನ್ನೂ ಮತ್ತು ದೇವರ ಹೆಸರಿನಲ್ಲಿ ಬಿಟ್ಟಿರುವ ವೃಷಭಗಳನ್ನೂ ಮೈಸೂರು ಪೌರಸಭೆಯವರು ಹಿಡಿದು ಅವುಗಳನ್ನು ಹಿತ ಮಾಡಿಸಿ ಮೂಗುದಾರ ಹಾಕಿಸಿ ಊರಿನ ಕಸ್ಮಲವನ್ನು ಸಾಗಿಸುವ ಗಾಡಿಗಳಿಗೆ ಕಟ್ಟಿ ಉಪಯೋಗಿಸುತ್ತಿರುವರೆಂದೂ ಇದನ್ನು ತಪ್ಪಿಸಬೇಕೆಂದೂ ವಗೈರೆ ಅಭಿಪ್ರಾಯಗಳನ್ನೊಳಗೊಂಡ ಒಂದು ಅರ್ಜಿಯನ್ನು ರಾಜಧಾನಿಯ ಹಲವು ನಿವಾಸಿಗಳು ಪೌರಸಭಾಧ್ಯಕ್ಷರಿಗೂ ಪೌರಸಭಾ ಸದಸ್ಯರಿಗೂ ಕೊಟ್ಟಿರುತ್ತಾರೆ. ಈ ವಿಷಯವು ಅನೂಚಾನವಾಗಿ ಬಂದ ಆಚಾರ ವಿಚಾರಗಳಿಗೂ, ಧರ್ಮಭಾವನೆಗೂ ಸಂಬಂಧಪಟ್ಟಿದ್ದು. ಮತ್ತು ಬಹಳ ಗಹನವಾದದ್ದು. ಆಧುನಿಕ ನಾಗರೀಕತೆ ಮತ್ತು ಪೌರ ನೀತಿಗಳ ಬಿಕ್ಕಟ್ಟಿನಲ್ಲಿ ಸಿಕ್ಕಿರುವ ನಮ್ಮ ಪ್ರಮುಖರು ಈ ಸೂಕ್ಷ್ಮ ವಿಚಾರವನ್ನು ಸಾವಧಾನವಾಗಿ ಪರಿಶೀಲಿಸಿ ಬಗೆಹರಿಸುವರೆಂದು ನಾವು ನಂಬಿದ್ದೇವೆ.

ಅರ್ಜಿಯಲ್ಲಿ ಈ ಕೆಳಗೆ ಕಂಡ ಅಂಶಗಳು ನಮೂದಿಸಲ್ಪಟ್ಟಿವೆ:—ದೇವರ ಹೆಸರಿನಲ್ಲಿಯೂ, ಮತ್ತು ಶಾಸ್ತ್ರ ಪದ್ಧತಿಗನುಸಾರವಾಗಿಯೂ ಹಿಂದೂಗಳು ಬಸವಣ್ಣಗಳನ್ನು ಮುದ್ರೆ ಒತ್ತಿ ಬಿಡುವ ವಾಡಿಕೆ ಇದೆ. ಇವುಗಳನ್ನು ಎಲ್ಲರೂ ಗೌರವಿಸಬೇಕೇ ವಿನಹ ಇತರ ರೀತಿಗಳಲ್ಲಿ ಉಪಯೋಗಿಸಕೂಡದು. ಇವುಗಳಿಗೆ ಯಾವಾಗಲೂ ಮೂಗುದಾರ ಹಾಕಕೂಡದು ಮತ್ತು ಹಿತ ಮಾಡಕೂಡದು. ಯಾವ ಕೆಲಸಗಳಿಗೂ ಇವುಗಳನ್ನು ಉಪಯೋಗಿಸಕೂಡದು. ನಮ್ಮ ಶ್ರೀಮನ್ಮಹಾರಾಜರವರೂ ಸಹ ಇಂತಹ ಬಸವಣ್ಣಗಳನ್ನು ನಂಜನಗೂಡು ಮತ್ತು ಚಾಮರಾಜನಗರದ ದೇವಸ್ಥಾನಗಳಿಗೆ ಬಿಟ್ಟಿದ್ದಾರೆ. ಈ ಎಲ್ಲಾ ಬಸವಣ್ಣಗಳನ್ನು ಜನರು ಒಂದೇ ವಿಧದ ಭಕ್ತಿಭಾವದಿಂದ ಕಾಣುತ್ತಾರೆ. ಈ ಬಸವಣ್ಣಗಳನ್ನು ಈಗ ಮುನಿಸಿಪಾಲಿಟಿಯವರು ಹಿಡಿಸುತ್ತಿದ್ದಾರೆ. ದೊಡ್ಡಿಗೆ ಸೇರಿಸುತ್ತಿದ್ದಾರೆ. ಮತ್ತು ಆರೋಗ್ಯ ಶಾಖೆಯ ಕಚರಾ ಗಾಡಿಗೆ ಉಪಯೋಗಿಸುತ್ತಾರೆ. ಕೆಲವು ಇಂತಹ ಎತ್ತುಗಳಿಗೆ ಮೂಗುದಾರ ಹಾಕಿ ಹಿತ ಮಾಡಿಸಿ ಕೆಲಸಕ್ಕೆ ಉಪಯೋಗಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಇದು ಹಿಂದೂ ಜನರಿಗೆ ಅಸಮಾಧಾನವನ್ನುಂಟುಮಾಡಿರುತ್ತದೆ.

ತಮ್ಮ ಪ್ರಜೆಗಳ ಧಾರ್ಮಿಕ ಆಚಾರ ವಿಚಾರಗಳಲ್ಲಿ ಪ್ರವೇಶಿಸುವುದಿಲ್ಲವೆಂದು ವಿಕ್ಟೋರಿಯಾ ಮಹಾರಾಣಿಯವರೇ ವ್ಯಕ್ತಪಡಿಸಿದ್ದರು. ನಮ್ಮ ಶ್ರೀಮನ್ಮಹಾರಾಜರವರೂ ಸಹ ಇದಕ್ಕೆ ವಿರುದ್ಧವಾಗಿ ಹೋಗುವುದಿಲ್ಲ. ಯಾರೂ ಕೂಡ ಇದಕ್ಕೆ ವಿರೋಧವಾಗಿ ನಡೆಸಬಾರದು.

ಆದ್ದರಿಂದ ಪೌರಸಭಾಧ್ಯಕ್ಷರೂ, ಸಭಾ ಸದಸ್ಯರೂ ಈ ವಿಷಯವನ್ನು ಕೂಡಲೇ ಪರಿಶೀಲಿಸಿ ತಕ್ಕ ಏರ್ಪಾಡು ಮಾಡುವರೆಂದು ನಂಬುತ್ತೇವೆ.

—ಎಂಬುದಾಗಿ ಸದರಿ ಅರ್ಜಿಯಲ್ಲಿ ನಮೂದಿಸಲ್ಪಟ್ಟಿದೆ

ಡಾ|| ಪಟ್ಟಾಭಿ ಮತ್ತು ಸರ್ ಮಿರ್ಜಾರವರ ಭೇಟಿ

ಮೈಸೂರಿನಲ್ಲಿ ಜಾರಿ ನಡೆಯುತ್ತಿರುವ ರಾಜಕೀಯ ಚಳುವಳಿಯ ವಿಷಯದಲ್ಲಿ ಕಳೆದ 27 ನೇ ತಾರೀಖು ಬೆಂಗಳೂರು ಕಾರ್ಲ್‌ಟನ್ ಭವನದಲ್ಲಿ ಡಾ|| ಪಟ್ಟಾಭಿಯವರಿಗೂ ಸರ್ ಮಿರ್ಜಾರವರಿಗೂ ಭೇಟಿ ನಡೆಯಿತು. ಸುಮಾರು 1¼ ಘಂಟೆ ಗಳ ಕಾಲ ಚರ್ಚಿಸಿದರು. ಚೀಫ್ ಸೆಕ್ರೆಟರಿಯವರು ಈಗಿನ ಚಳುವಳಿಯನ್ನು ವಿವರಿಸಿದರು. ಮತ್ತು ಸ್ಥಳೀಯ ಮುಖಂಡರು ಸರ್ಕಾರದವರನ್ನು ನಿಂದಿಸುತ್ತಿರುವ ಬಗೆಯನ್ನು ತಿಳಿಸಿ ಶ್ರೀ ಮನ್ಮಹಾರಾಜರವರು ಹಿಂದೆ ಕೊಟ್ಟಂತೆಯೇ ಉಚಿತ ಕಾಲದಲ್ಲಿ ಸುಧಾರಣೆಗಳನ್ನು ಕೊಡುವರೆಂದೂ ಹೇಳಿದರು. ಕಾಂಗ್ರೆಸ್ ಜನರು ಶಾಂತಿಯಿಂದ ತಮ್ಮ ಕೆಲಸವನ್ನು ನಡೆಸಬಹುದೆಂದೂ, ಸರ್ಕಾರದವರನ್ನು ದೂರದೇ ಇದ್ದರೆ ಅವರ ಕಾರ್ಯಕ್ರಮಗಳಿಗೆ ತಮ್ಮ ಅಭ್ಯಂತರ ಏನೂ ಇಲ್ಲವೆಂದು ವಗೈರೆ ತಿಳಿಸಿದರೆಂದೂ ಗೊತ್ತಾಗಿದೆ.

ಅದಕ್ಕೆ ಡಾ|| ಪಟ್ಟಾಭಿಯವರು ಮೈಸೂರು ಕಾಂಗ್ರೆಸ್ಸಿನವರು ನಡೆಸುತ್ತಿರುವ ಚಳುವಳಿಯು ಸಾಧುವಾಗಿದೆಯೆಂದೂ, ಅದನ್ನು ತಡೆಯಲು ಸರ್ಕಾರದವರು ತಮ್ಮ ಶಕ್ತಿಯನ್ನು ಉಪಯೋಗಿಸುವುದು ಒಳ್ಳೆಯ ಪರಿಣಾಮಕಾರಿಯಲ್ಲವೆಂದು ಹೇಳಿದರೆಂದೂ ಗೊತ್ತಾಗಿದೆ.

ಕಥಾ ಕುಂಜ

ಬೆಳಗಾಂವಿನಲ್ಲಿ ಶ್ರೀ|| ವ್ಯಾಟಿ ಶ್ಯಾಮರಾಯರ ಸಂಪಾದಕತ್ವದಲ್ಲಿ ನಡೆಯುತ್ತಲಿರುವ "ಕಥಾ ಕುಂಜ" ಎಂಬ ಮಾಸ ಪತ್ರಿಕೆಯ ಒಂದು ಪ್ರತಿಯು ನಮ್ಮ ಹಸ್ತಗತವಾಗಿದೆ. ಅದರ ಸಂಪಾದಕ ಮಂಡಳಿಯವರು ಜಮಖಂಡಿಯ ಸಾಹಿತ್ಯ ಸಮ್ಮೇಳನಕ್ಕೆ ಹೋಗಲಿರುವುದರಿಂದ ಜನವರಿ ಸಂಚಿಕೆಯು ಫೆಬ್ರವರಿ ತಿಂಗಳಲ್ಲಿ ಹೊರಡುವುದು. ಕರ್ನಾಟಕ ಏಕೀಕರಣ ಸಮಸ್ಯೆಯ ವಿಷಯದಲ್ಲಿ ಈ ಪತ್ರಿಕೆಯು ಬಹಳ ಮುತುವರ್ಜಿ ವಹಿಸಿದೆ. ಇದು ಕನ್ನಡಿಗರೆಲ್ಲರಿಗೂ ಆದರ್ಶಪ್ರಾಯವಾಗಿದೆ. ಇನ್ನು ಮುಂದೆ ಪತ್ರಿಕೆಯು ಮತ್ತಷ್ಟು ಪರಿಷ್ಕೃತವಾಗಿ ಹೊರಡುವುದು. ಸಂಪಾದಕ ಮಂಡಳಿಯಲ್ಲಿ ಅನೇಕ ಪ್ರಖ್ಯಾತ ಲೇಖಕರು ಸೇರಿರುವರು. ಈ ಪತ್ರಿಕೆಗೆ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ. ವಾರ್ಷಿಕ ಚಂದಾ ೧—೪—೦ ಮಾತ್ರ. ಬೆಳಗಾಂವಿಯಲ್ಲಿ ಪ್ರಕಟವಾಗುವುದು.

ಸ್ತ್ರೀಯು ಮನೆತನದ ಸಿರಿಯು

ಒಬ್ಬ ಕರ್ನಾಟಕ ರಾಜಪುತ್ರಿಯ ಉದ್ದಾಮ ಭಾಷಣ

25—12—37 ರಲ್ಲಿ ರಾಯಚೂರಿನಲ್ಲಿ ನಡೆದ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದ ಒಂಬತ್ತನೇ ಅಧಿವೇಶನದ ಸ್ತ್ರೀ ಸಭೆಯ ಅಧ್ಯಕ್ಷರಾದ ಎಚ್. ಎಚ್. ಮಹಾರಾಣಿ ಆಫ್ ಸೌಂಡೂರು ಇವರ ಪುತ್ರಿಯರು ಶ್ರೀಮಂತ ರಾಜಾ ಅಮರೇಶ್ವರ ರಾವ್ ಸಂಸ್ಥಾನ [illegible] ಪತ್ನಿಯರು ಆದ ಶ್ರೀಮತಿ ರಾಜೇಶ್ವರಿ ದೇವಿಯವರ ಭಾಷಣದ ಸಾರಾಂಶ—

ಮಾನ್ಯರಾದ ಪ್ರಿಯ ಭಗಿನಿಯರೇ!

ಅತಿ ಪ್ರಾಚೀನ ಕಾಲದಿಂದಲೂ, ಈ ನಮ್ಮ ಭರತಖಂಡದಲ್ಲಿ ಅಸಂಖ್ಯ ಸ್ತ್ರೀಯರು ಪಾತಿವ್ರತ್ಯ, ವಿದ್ಯೆ, ರಾಜಕಾರ್ಯ, ಗೃಹಕಾರ್ಯ ಮೊದಲಾದವುಗಳಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿರುವ, ಅನಸೂಯಾ, ಗಾರ್ಗಿ, ಮೈತ್ರೇಯಿ, [illegible] ಬಾಯಿ, ಮಹಾದೇವಿಯಕ್ಕ, [illegible] ಜೀಜಾಬಾಯಿ [illegible] ಕೊಟ್ಟ ಮಾರ್ಗವನ್ನು ಹಿಡಿದು ಪ್ರತಿಯೊಬ್ಬ ನಾರಿಯೂ ತನ್ನ ಗೌರವವನ್ನು ಕಾಪಾಡಿಕೊಳ್ಳುತ್ತ ಬರಬೇಕು.

ಸ್ತ್ರೀಯರೇ ಜನಾಂಗದ ಜನನಿಯರು. ಅವರು ಸುಶಿಕ್ಷಿತರಾಗಿದ್ದರೆ ಜನಾಂಗವು ಸುಖ, ಶಾಂತಿಗಳಿಂದ ಜೀವಿಸುವದು. ಆದಕಾರಣ ನಮ್ಮ ರಾಷ್ಟ್ರವು ಏಳಿಗೆ ಹೊಂದಬೇಕಾದರೆ ಈ ಸಮಾಜದಲ್ಲಿ ಸ್ತ್ರೀ ಶಿಕ್ಷಣಕ್ಕಾಗಿ ಹೆಚ್ಚು ಪ್ರಯತ್ನಿಸುವದು ಮುಖ್ಯ ಕೆಲಸವಾಗಿದೆ. ನಮ್ಮಲ್ಲಿ ಪ್ರತಿಯೊಬ್ಬಳೂ ಸ್ತ್ರೀಧರ್ಮದ ಗುಟ್ಟನ್ನರಿತುಕೊಂಡು ನಮ್ಮ ಜೀವನವನ್ನು ಬೆಳಗಬೇಕು.

ನಮ್ಮ ಲಗ್ನವಾದಮೇಲೆ ನಾವು ಗಂಡನ ಮನೆಯಲ್ಲಿರಬೇಕಾಗುವದು. ಅಗ ಪತಿಯೇ ನಮಗೆ ಮುಖ್ಯ ಬಾಂಧವನಾಗುವನು. ದೇಹದ ನೆರಳು ಹ್ಯಾಗೆ ದೇಹವನ್ನೇ ಹಿಂಬಾಲಿಸುತ್ತದೆಯೋ ಹಾಗೆಯೇ ಪತಿಯನ್ನನುಸರಿಸಿ ನಡೆಯುತ್ತ ಹೋಗುವದು ನಮ್ಮ ಕರ್ತವ್ಯವಾಗಿದೆ. ಪತಿಯು ಕ್ಷೇಮವೇ ನಮ್ಮ ಕ್ಷೇಮವು. ಪತಿಯು ದುಡಿದು ತಂದು ಹಾಕಿದರೆ ಅವನ ಜವಾಬ್ದಾರಿಯು ತೀರಿಹೋಯಿತು. ಆತನ ಜೀವನವೆಲ್ಲ ಸೌಖ್ಯದಾಯಕವಾಗಬೇಕಾದರೆ, ಸ್ತ್ರೀಯರ ಚಾತುರ್ಯದಿಂದ, ಅವಳ ವಿದ್ವತ್ತೆಯಿಂದ, ಅವಳ ಆದರೋಪಚಾರಗಳಿಂದ, ಅವಳ ಅಂತಃಕರಣ ಶುದ್ಧತೆಯಿಂದ ಪತಿಯು ಮನೆಯನ್ನು ಕೈಕೊಳ್ಳಬೇಕಾಗುತ್ತದೆ. ಹೀಗಿದ್ದು ಗೃಹಿಣಿಯೆನಿಸಿಕೊಂಡ ನಾವು ನಮ್ಮ ಮೇಲಿರುವ ಹೊರೆಯನ್ನು ಯಾವ ಬಗೆ ನಿರ್ವಹಿಸಿಕೊಳ್ಳಬೇಕೆಂಬುದು ನನ್ನ ಇಂದಿನ ವಿನಂತಿ.

ಮುಖ್ಯವಾಗಿ ಪತಿಭಕ್ತಿಯೇ ನಮಗೆ ಭೂಷಣವು. ಸ್ತ್ರೀಯರು ಜಗತ್ತಿನ ಯಾತ್ರೆ ಸ್ವಾಮಿಯ [illegible] ವಿಚಾರದೊಡನೆ ಜಗತ್ತಿಗೇನೆ ಮನ್ನಣೆ [illegible] ಜಗನ್ಮಾತೆಯ ಅವತಾರವನ್ನು [illegible] ಜಗದ್ಗುರುಗಳೆನಿಸುವ ಶಂಕರಾಚಾರ್ಯ, ಮಾಧ್ವ, ಬಸವೇಶ್ವರ,

ಮೊದಲಾದ ಆಚಾರ್ಯ ಪುರುಷರನ್ನು, ಪುಲಕೇಶಿ, ವಿಕ್ರಮಾರ್ಕ, ಚಂದ್ರಗುಪ್ತ ಮೊದಲಾದ ವೀರರತ್ನಗಳನ್ನು, ಕಾಳಿದಾಸ, ಭವಭೂತಿ ಅದಿ ಕಂಠ ಮೊದಲಾದ ಕವಿಕೋವಿದರನ್ನು ಹೆತ್ತ ಮಾತೆಯರೆಂಬುದನ್ನು ಮರೆಯಲಾಗದು. ಯಾವ ಗರ್ಭದಲ್ಲಿ ಯಾವ ಮಹನ್ಮೂರ್ತಿಯೇ ಜನಿಸುವರೋ ಯಾರಿಗೆ ಗೊತ್ತು? ಆ ಹೆತ್ತ ತಾಯಿ ಸ್ತ್ರೀರತ್ನವಾಗದೆ ಹೋಗಬಹುದೇ? [illegible] ಗಾಗಬಾರದೇಕೆ ಸ್ತ್ರೀರತ್ನ [illegible] ಸೇವಿಸುವ [illegible] ಹೊಂದಿದ ಮಹಿಮೆಯನ್ನು ಹೆತ್ತವರಾತ್ಮಕ್ಕೆ ಅಗಲಿಲ್ಲ. ಅವನ್ನು ಎಲ್ಲ ಎಚ್ಚರದಿಂದ ಸಂರಕ್ಷಿಸಿ ಜಗತ್ತಿನ ಸೇವೆಗೆ ಮೀಸಲಾಗುವಂತೆ ಮಾಡುವದು ನಮ್ಮ ಮೇಲಿರುವ ಹೊಣೆಯಲ್ಲವೇ? ಇದು ನಮಗೆ ಹೆತ್ತವರ ಜವಾಬ್ದಾರಿಯು. ಕಲಿಸದಾಗಿನ ಎಚ್ಚರ ತಪ್ಪಿ ಅತಿಚಿಂತೆ [illegible] ನಮ್ಮ ಮಕ್ಕಳಿಗೆ ಶ್ರೇಯಸ್ಕರವಾಗುತ್ತವೆ.

ಹಿಂದೂಸ್ಥಾನದ ಜನಾಂಗವನ್ನಾಳಿಗೊಂಡ ಪ್ರತಿಯೊಂದು ಮನೆತನವು, ಪ್ರತಿಯೊಬ್ಬ ಹೆಣ್ಣು ಸುಧಾರಿಸುವ ಅಗತ್ಯವಾದದ್ದು. ಇಂತಹ ಸುಧಾರಣೆಯು ಆಗಬೇಕಾದರೆ ಮನೆಗೆ ಮಾತೃಸ್ವರೂಪರಾದ ನಾವು ಸುಧಾರಿಸಬೇಕು. ಆಗ "ಗೃಹಿಣೀ ಗೃಹಮುಚ್ಯತೆ" ಎಂದು ಹೇಳುವದು ವ್ಯರ್ಥವಾದ ಮಾತಲ್ಲ. ಸ್ತ್ರೀಯು ಮನೆತನದ ಸಿರಿ ಎಂಬ ಅರ್ಥವಾದದು ಸಿದ್ಧ. ಹೀಗಿರುವ ಸಿರಿ ನಾರಿಯು ತನ್ನ ಕೌಶಲ್ಯದಿಂದ ತನ್ನ ಗರ್ಭದಲ್ಲಿ ಜನಿಸಿದ ಶಿಶುವನ್ನು, ತಾನು ಕೈಹಿಡಿದ ಗಂಡನನ್ನು, ತಾನು ಹುಟ್ಟಿ ಬೆಳೆದ ಮನೆಯನ್ನು, ತಾನು ಜನ್ಮವೆತ್ತಿದ ಭೂಮಿಯನ್ನು, ಸೃಷ್ಟಿಕಾರಕನಾದ ಪರಮಾತ್ಮನನ್ನು ಬಗೆಬಗೆಯಿಂದ ಸೇವಿಸಿ, ಜೀವನದ ಒಂದು ಜ್ಯೋತಿಯೆನಿಸಿಕೊಳ್ಳಬೇಕು.

ನಾವು ಹೆಚ್ಚು ಹೆಚ್ಚು ಬೆಲೆಯ ತರತರದ ರೀತಿ ಉಡುಪುಗಳನ್ನು ಎಂದೂ ಅಪೇಕ್ಷಿಸಬಾರದು. ನಮ್ಮ ದೇಶದಲ್ಲಿ ಕೈನೂಲಿನಿಂದಾಗುವ ಬಟ್ಟೆಗಳನ್ನು ಉಪಯೋಗಿಸಬೇಕು. ಸಾದಾ ಬಟ್ಟೆಗಳನ್ನು ಉಪಯೋಗಿಸಿ ಅವುಗಳನ್ನು ಆಗಾಗ್ಗೆ ತೊಳೆದು ಥಳಥಳವಾಗಿಟ್ಟುಕೊಂಡರೆ ಅವೇ ಚಂದ ಕಾಣುತ್ತವೆ. ಆಭರಣಗಳಿಗಾದರೂ ಆಶೆ ಮಾಡಬಾರದು. ಪತಿಭಕ್ತಿ, ದಯೆ, ವಿನಯ ಮೊದಲಾದ ಸುಗುಣಗಳೇ ಅಚ್ಚಳಿಯದ ಆಭರಣಗಳು ನಮಗೆ ಮಂಗಳಕರವಾಗಿಯೂ, ಆನಂದವಾಗಿಯೂ ತೋರುವವು.

ಈ ಕಾಲದಲ್ಲಿ ನಾಟಕ, ಸಿನೇಮಾಗಳನ್ನು ನೋಡಲಿಕ್ಕೆ ನಾವು ಎಂದೂ ಹೋಗಬಾರದು. ಅವುಗಳಿಂದ ಕೇಡಾಗುವದೇ ಹೆಚ್ಚು. ಕಾರಣ ಮನೆಯಲ್ಲಿಯೇ ಮಹಾತ್ಮರ ಮತ್ತು ಪತಿವ್ರತಾಶಿರೋಮಣಿಯರ ಚರಿತ್ರೆಗಳನ್ನು ಓದುತ್ತಿರಬೇಕು, ಪುರಾಣ ಪುಣ್ಯಕಥೆಗಳನ್ನು ಉಪನ್ಯಾಸಗಳನ್ನು ಕೇಳುತ್ತಿರಬೇಕು.

ನಾವು ಗರ್ಭಿಣಿಯರಿದ್ದಾಗ ಸಕಾಲಕ್ಕೆ ಊಟ ನಿದ್ರೆಗಳನ್ನು ಮಾಡಬೇಕು. ಹೆಚ್ಚು ದಣಿಯುವ ಕೆಲಸವನ್ನು ಮಾಡಬಾರದು. ಸಂತೋಷವುಳ್ಳವರಾಗಿ ಯಾವಾಗಲೂ ಒಳ್ಳೆಯ ಯೋಚನೆಯಲ್ಲಿಯೇ ಮಗ್ನರಾಗಿರಬೇಕು. ಹೆದರಿಕೆಯಾಗುವಂತಹ ಯಾವ ನೋಟಗಳನ್ನೂ ನೋಡಬಾರದು. ಪುಣ್ಯಸ್ತ್ರೀಪುರುಷರ ಚರಿತ್ರೆಗಳನ್ನು ಓದುತ್ತಿರಬೇಕು. ಯಾಕೆಂದರೆ, ಆ ಕಾಲದಲ್ಲಿ ನಮ್ಮ ಮನಸ್ಸಿನಮೇಲೆ ಆಗುವ ಪರಿಣಾಮಗಳೇ ನಮ್ಮ ಹೊಟ್ಟೆಯಲ್ಲಿರುವ ಶಿಶುವಿನ ಮೇಲೆಯೂ ಉಂಟಾಗಿ [illegible] ಆಗುತ್ತಿರುತ್ತವೆ. ನಾವು ಗರ್ಭಿಣಿಯರಿದ್ದಾಗ ನಮ್ಮಲ್ಲಿರುವ ಗುಣಸ್ವಭಾವಗಳ ಪರಿಣಾಮಗಳು ನಮ್ಮ ಮಕ್ಕಳಲ್ಲಿಯೇ ನೆಲೆಗೊಳ್ಳುತ್ತವೆ. ಉದಾಹರಣಾರ್ಥವಾಗಿ [illegible] ಗರ್ಭಿಣಿ ಇದ್ದಾಗ ನಾರದರ ಆಶ್ರಮದಲ್ಲಿದ್ದದರಿಂದ ಅವಳ ಗರ್ಭದಲ್ಲಿ ಆಗಾಗ ಕೇಳುತ್ತಿದ್ದ ಪ್ರಹ್ಲಾದನ [illegible] ಉಂಟಾಗಿ ಮುಂದೆ ಪರಮ ಭಕ್ತನೆನಿಸಿಕೊಂಡನು ಅಭಿಮನ್ಯು ತಾಯಿಯ ಗರ್ಭದಲ್ಲಿದ್ದಾಗಲೇ ಶ್ರೀ ಕೃಷ್ಣನ ಮುಖದಿಂದ ಪದ್ಮವ್ಯೂಹದ ಪ್ರವೇಶವನ್ನು ಕಲಿತನಂತೆ. ಇದರಂತೆ ಶಿವಾಜಿ, ಬಸವೇಶ್ವರ, ಮುಂತಾದ ಎಷ್ಟೋ ದೃಷ್ಟಾಂತಗಳೇ ಸಾಕ್ಷಿಯಾಗಿವೆ. ಶಿಶು ಜನನವಾದನಂತರ ಶಿಶು ಪೋಷಣೆಯು ಹೆಚ್ಚಾಗಿ ತಾಯಿಯನ್ನೇ ಅವಲಂಬಿಸಿರುತ್ತದೆ. ಸರಿಯಾದ ಆಹಾರವನ್ನು ಕೊಡುವದು, ಅವಯವಗಳನ್ನು ಸ್ವಚ್ಛವಾಗಿರಿಸುವದು, ಉಡಿಸುವುದು, ತೊಡಿಸುವುದು ಮೊದಲಾದ ಜವಾಬ್ದಾರಿಯೂ ತಾಯಿಯ ಮೇಲಿದೆ [illegible] ಮಕ್ಕಳಿಗೆ ಹಿತವಾಗಬೇಕಾದರೆ ತಾಯಿಯು ತಾನು ಆರೋಗ್ಯವಾಗಿರಬೇಕು. ಮತ್ತು ಅವಳ ನಡತೆಯು ಒಳ್ಳೆಯದಾಗಿರಬೇಕು. ಮಕ್ಕಳು ತಾಯಿಯನ್ನನುಸರಿಸುವವು. ತಾಯಿಯು ಕಲಿತವಳಾಗಿದ್ದರೆ ಮಕ್ಕಳಿಗೆ ಅಭ್ಯಾಸ ಮಾಡಿಸಲಿಕ್ಕೆ ಅನುಕೂಲವಾಗುತ್ತದೆ. ಇದೇ ರೀತಿ ಮಾತೆಯ ಮಕ್ಕಳ ಸಂಬಂಧವು ಪೂಜ್ಯವಾದದ್ದು, ಉಚಿತವಾದದ್ದು ಆಗುತ್ತದೆ.

ಕೆಲವು ಹೆಣ್ಣುಮಕ್ಕಳು ಮನೆಯ ಕೆಲಸಗಳನ್ನು ಮಾಡುವದು ಬಹು ಕೀಳವೆಂದು ತಿಳಿದು ಆಳುಗಳಿಗೆ ವಹಿಸುತ್ತಾರೆ. ಇದರಿಂದ ಅವರಿಗೆ ವ್ಯಾಯಾಮ ಇಲ್ಲದಂತೆ ಆಗ ರೋಗವು ಬೆನ್ನು ಹತ್ತಿ ಪರಿಪರಿಯಿಂದ ಕಾಡುವುದು. ಕಾರಣ ಕುಟ್ಟುವುದು, ಬೀಸುವದು ಮುಂತಾದ ಸರ್ವ ಮನೆಗೆಲಸಗಳನ್ನು ನಾವೇ ಕೈಮುಟ್ಟಿ ಮಾಡಬೇಕು.

ಚಿಕ್ಕ ಮಕ್ಕಳಿಗೆ ರೋಗಗಳು ಬಹುಶಃ ತಾಯಿಯ ದಡ್ಡತನದಿಂದಲೇ ಉತ್ಪನ್ನವಾಗುತ್ತವೆ, ಮಕ್ಕಳಿಗೆ ಜಾಡ್ಯವಾದಕೂಡಲೇ ಒಳ್ಳೆಯ ಔಷಧ ಉಪಚಾರಗಳಿಂದ ಗುಣಪಡಿಸಬೇಕು. ಅದಕ್ಕಾಗಿ ಅನುಭವಪಟ್ಟರಿಂದ ರೋಗದ ಔಷಧಿಗಳನ್ನು ತಿಳಿದು ಕೊಳ್ಳುವದು ಮುಖ್ಯ ಕರ್ತವ್ಯವಾಗಿದೆ. ದೇವರು ಪ್ರಕೃತಿಯನ್ನು ಹುಟ್ಟಿಸಿದ್ದಾನೆ. ಇದೇ ನಮ್ಮ ದೇಶದಲ್ಲಿ ಬೆಳೆಯುವ ವನಸ್ಪತಿ ಇಂದಲೆ ಅನೇಕ ತರದ ಔಷಧಿಗಳನ್ನು ತಯಾರಿಸಿ ಎಷ್ಟೋ ಮಹತ್ತರವಾದ ರೋಗಗಳನ್ನು ಗುಣಪಡಿಸುವ ವೈದ್ಯರು ಅನೇಕ ಉಂಟು. ನಾವು ಇದರ ಮಹತ್ವವನ್ನರಿಯದೆ ಮನೆಗುಡ್ಡ ಸುಣ್ಣಗೆ, ಎಂಬಂತೆ ನಮಗೆ ಅಪರಿಚಿತವಾದ ಪರದೇಶದ ಔಷಧಗಳನ್ನು ಸೇವಿಸಿ ವ್ಯರ್ಥ ಹಣಖರ್ಚು ಮಾಡಿಕೊಂಡು ರೋಗವು ಗುಣವಾಗದೆ ಮರಣಕ್ಕೆ ಗುರಿಯಾಗುತ್ತೇವೆ.

ಜಗಲಿರಳು ಎಡೆಬಿಡದೆ ಒಡನೆ ಇದ್ದು ತೋರಿಕೊಳ್ಳದೆ ಪ್ರಪಂಚವನ್ನು ರಕ್ಷಿಸುತ್ತಿರುವ ಆ ಪರಮಾತ್ಮನು ನಿಮ್ಮೆಲ್ಲರಿಗೂ ಧೈರ್ಯ, ಸಾಹಸಗಳನ್ನಿತ್ತು ನಿಮ್ಮಿಂದ ದೇಶೋದ್ಧಾರಕ ವೀರಮಾತೆಯರನ್ನಾಗಿ ಮಾಡಲೆಂದು ಪ್ರಾರ್ಥಿಸಿ ಈ ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

DON'T SAY

"CAN'T AFFORD"

Who carries risk on your life? If you are not insured, your wife and children carry it. And if you die without insurance your family has to bear the loss. Would you like to let them carry the risk any longer? And above all, who would like to leave them for some one else to support?

May we suggest you to call on any of our nearest representatives or write to us for necessary advice?

National Insurance Co., Ltd.,

(Head Office — Calcutta)

Sub-Office :—

DEVANGA BANK BUILDINGS,

KEMPEGOWDA ROAD, — BANGALORE CITY.

ದೇವರ ಉತ್ಸವದಲ್ಲಿ ದುಂಡಿ

ಯಾರಿಗೂ ಅಪಾಯವಾಗಲಿಲ್ಲ.

[illegible]

ಪತ್ರದ ರಣಭೇರಿ

[illegible]

ಗಿರಿಧರ ಸಂಗೀತ ನಾಟಕ ಮಂಡಲಿ

[illegible]

ನಂಜನಗೂಡು ಮುನಿಸಿಪಲ್ ತೆರಿಗೆ

[illegible]

[illegible]

[illegible]

[illegible]

ಬಿಕ್ಷು.

ರಾಜಕುಗಳ ಅಂತರ್ವಿವಾಹ

[illegible]

ಪೌರ ಸ್ವಾತಂತ್ರ್ಯ ಸಂಘ

ಮೈಸೂರಿನ ಸ್ಥಿತಿಯ ಬಗ್ಗೆ ಪ್ರಕಟಣೆ

[illegible]

[illegible]

ಬಹಾನಿನಲ್ಲಿ ಧನಾಧಾನ

[illegible]

ವಿಶ್ವಶಾಂತಿ

[illegible]

ಮುಸ್ಸಲ್ಮಾನರಿಗೆ ಸ್ವಾತಂತ್ರ್ಯ

[illegible]

Drink

Blue Bird Brand

TEA

The world-renowned Tea for its consistent quality and Flavour.

It is a pure High Grown Nilgiri unblended with inferior Teas.

SOLD EVERYWHERE.

Sole Agents for Mysore:

Chari & Prakash

447, Viceroy Road,

MYSORE.

ಸ್ನಾನಕ್ಕೆ

ಅಚ್ಚುಮೆಚ್ಚಿನ ಸ್ನಾನದ ಸಾಬೂನು



ನಿಮಗೆ ಬೇಕಾಗಿರುವುದು?

ಮೈಸೂರು

ಗಂಧದ

ಸಾಬೂನು

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಗೌರ್ನ್ಮೆಂಟ್ ಸಾಬೂನು ಕಾರ್ಖಾನೆ, ಬೆಂಗಳೂರು.

ಮೈಸೂರು ರಾಷ್ಟ್ರೀಯ ಪಕ್ಷ

ಬೆಂಗಳೂರು ಮುಸ್ಲಿಂ ಹಾಲಿನಲ್ಲಿ ಮೈಸೂರು ರಾಷ್ಟ್ರೀಯ ಪಕ್ಷದ ಒಂದು ಸಭೆಯು ನಡೆದು ಶ್ರೀ॥ ರಂಗರಲಿಂಗೇಗೌಡರು ಮತ್ತು ಖಾನ್ ಬಹದ್ದೂರ್ ಅಬ್ಬಾಸ್ ಖಾನರವರೂ ಮೈಸೂರು ಸರ್ಕಾರದಿಂದ ಉಂಟಾಗಿರುವ ಪ್ರಯೋಜನಗಳನ್ನು ಕುರಿತ, ಭಾಷಣ ಮಾಡಿದರು. ಸಭೆಗೆ ಮೂವತ್ತು ಜನರು ಬಂದಿದ್ದರೆಂದು ಗೊತ್ತಾಗಿದೆ.

ಪಂ। ತಾರಾನಾಥರ ಮೇಲಿನ ಪ್ರತಿಬಂಧಕ

ನಿಜಾಂ ರಾಜ್ಯಕ್ಕೆ ಬರಕೂಡದೆಂದು ಪಂಡಿತ ತಾರಾನಾಥರ ಮೇಲೆ ನಿಜಾಂ ಶಾಸನಿಯಲ್ಲಿ ನಿಜಾಂ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದರು. ಅದು ಕಳೆದ ೨೪ ನೇ ತಾರೀಖು ರದ್ದಾಯಿತು. ಮತ್ತು ಅವರು ರಾಯಚೂರಿನಲ್ಲಿ ನಡೆವ ಆಯುರ್ವೇದ ಪರಿಷತ್ತಿಗೆ ಹೋಗಲು ಅವಕಾಶ ದೊರೆಕಿತು.

ಸರಳಾರೋಗ್ಯ ಪಾಠ

ಹೊನ್ನವಳ್ಳಿ ಬಾಲಯೋಗಿ ಆಯಿಸಿನ ಮು॥ ನರಸಿಮ್ಮ ಪುರಾಣಿಕರು ರಚಿಸಿ ಕಳುಹಿಸಿಕೊಟ್ಟಿರುವ ಮೇಲ್ಕಂಡ ಚಿಕ್ಕ ಪುಸ್ತಕವನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಜನರ ಬೆಲೆ ಒಂದಾಣೆ ಮಾತ್ರ. ಜನಸಾಮಾನ್ಯರ ಆರೋಗ್ಯ ಸಂಬಂಧ ವಷ್ಟು ಎಲ್ಲಾ ಮುಖ್ಯ ವಿಷಯಗಳು ಪ್ರಶ್ನೋತ್ತರ ರೂಪದಲ್ಲಿ ಕೊಡಲ್ಪಟ್ಟಿವೆ. ಮುಖ್ಯವಾಗಿ ನಮ್ಮ ಮಕ್ಕಳು ತಮ್ಮ ತಮ್ಮ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ಈ ಪುಸ್ತಕವು ಬಹಳ ಸಹಕಾರಿಯಾಗಿದೆ. ಇದನ್ನು ಎಲ್ಲಾ ಮಕ್ಕಳಿಗೂ ತಂದೆ ತಾಯಿಗಳು ತೆಗೆದುಕೊಟ್ಟು ಅವರ ಆರೋಗ್ಯ ರಕ್ಷಣೆಗೆ ಸಹಕರಿಸಬೇಕೆಂದು ಕೋರುತ್ತೇವೆ.

ವಂದೇ ಮಾತರಂ ಅಪರಾಧವೆ ?

ವಂದೇ ಮಾತರಂ, ಭಾರತ ಮಾತಾ ಕೀ ಜೈ—ಎಂದು ಕೂಗಿದ್ದಕ್ಕೋಸ್ಕರ ಆ ಪರಾಧಿಗಳೆಂದು ಅಪಾದಿಸಿ ಮಾಡಿ ಪೊಲೀಸರವರು ಕೆಲವು ಕಾಂಗ್ರೆಸ್ ಸ್ವಯಂಸೇವಕರ ಮೇಲೆ ಮೊಕದ್ದಮೆ ಹೂಡಿರುವುದಾಗಿ ತಿಳಿಯುಬಂದಿದೆ. ಈ ಘೋಷಣೆ ಮಾಡುವುದಕ್ಕಾಗಿ ಇಬ್ಬರು ಜನರು ಜೈಲಿಗೆ ಹೋಗಿದ್ದಾರೆ. ಇದಕ್ಕಾಗಿ ಹವಬರದ ಕಷ್ಟಗಳನ್ನೆಲ್ಲಾ ಪಟ್ಟಿದ್ದಾರೆ. ಇಂಡಿಯಾ ಬ್ರಿಟಿಷ್ ಇಂಡಿಯಾದ ಅನೇಕ ಪ್ರಾಂತಗಳ ಶಾಸನ ಸಭೆಗಳಲ್ಲಿ "ವಂದೇ ಮಾತರಂ" ಗೀತವು ಹಾಡಲ್ಪಡುತ್ತಿದೆ. ಅದು ಭರತಖಂಡದಲ್ಲೆಲ್ಲಾ ಸ್ವಾತಂತ್ರ್ಯದ ಸೂಚನೆಯ ಮುಖ್ಯ ಗುರುತಾಗಿದೆ. ನಮ್ಮ ಸಂಸ್ಥಾನದಲ್ಲಿ ಮಾತ್ರ ಇದಕ್ಕೆ ಅಡ್ಡಿ ಬರಬಹುದೆ?

○ ○ ○

ಅಮೆರಿಕದ ಸಂಯುಕ್ತ ಸಂಸ್ಥಾನದಲ್ಲಿ ಎರಡು ಸಾವಿರದ ಮುನ್ನೂರು ಮಂದಿ ಪತ್ರಿಕಾ ಪ್ರತಿನಿಧಿಗಳು ನೇರದಲ್ಲೆಲ್ಲಾ ವ್ಯಾಪಿಸಿಕೊಂಡು ಮುಂದಿನ ರಾಜಾಧ್ಯಕ್ಷರನ್ನು ಈಗಿರುವ ರೂಸ್‌ವೆಲ್ಟರನ್ನೇ ನಾನೇ ಮಾಡುವನೆಂದು ಸಾರುತ್ತಿರುವರು. ಇದು ಅಲ್ಲಿನ ಪತ್ರಿಕಾ ಲೇಖಕರ ಸಾಮರ್ಥ್ಯ. ಇಲ್ಲಿ?

ಆಕಾಶವಾಣಿ

೩ ಸೋಮವಾರ—7-30 ರಿಂದ 9-45, ಚಲನಚಿತ್ರ ತರಂಗ; ಐರೋಪ್ಯ ಸಂಗೀತ ೪ ಮಂಗಳವಾರ 6-30 ರಿಂದ 8-45, ಕರ್ನಾಟಕ ವಾದ್ಯ ಸಂಗೀತ; ಶ್ರೀಮತಿ ನಾಗಮ್ಮನವರಿಂದ ಹಾಸ್ಯ ಪಠನ. ೫ ಬುಧವಾರ 7 ರಿಂದ 9-30 ಪ್ರವಚನ ಮತ್ತು ಸಂಗೀತ ಆಕಾಶವಾಣಿ ಸಂಗೀತ. 6 ಗುರುವಾರ 6-30 ರಿಂದ 8-30 ಅಥವಾ ಸಂಗೀತ! ಬ್ಯಾಂಡ್ ವಿದ್ವಾನ್, "ಮನುಷ್ಯ ಮತ್ತು ಜನ್ಮ" ಕನ್ನಡ ನಾಟಕ 7 ಶುಕ್ರವಾರ 7 ರಿಂದ 9-30 ಸರ್ ಜಾರ್ ಪಿಟ್ಟನ್ನರ ಕೌಶಲ್ಯ. ಮಿ॥ ಎಸ್. ಕೃಷ್ಣಮೂರ್ತಿಯವರಿಂದ. ಹಿಂದೂಸ್ಥಾನಿ ಸಂಗೀತ. 8 ಶನಿವಾರ ರಜಾ.

ಬೇಕಾಗಿದೆ

ನಮ್ಮ ಫ್ಯಾಕ್ಟರಿಯಲ್ಲಿ ತಯಾರಾಗುವ ಬೆಂಕಿ ಪೆಟ್ಟಿಗೆಗೆ ಗಿರಾಕಿಗಳನ್ನೊದಗಿಸಲು ಇಡೀ ಕರ್ನಾಟಕದಲ್ಲಿಯೂ ಡಿಸ್ಟ್ರಿಬ್ಯೂಟರೂ, ಏಜೆಂಟರೂ ಬೇಕಾಗಿದೆ. ಇಷ್ಟಪಟ್ಟವರು ೨ ಆಣೆ ಪೋಸ್ಟೇಜ್ ಸ್ಟಾಂಪ್ ನೊಡನೆ ಕೂಡಲೆ ಬರೆದುಕೊಳ್ಳಿರಿ.

ಶ್ರೀ ಸಂಜೀವಿನಿ ವರ್ಕ್ಸ್,
ಸೋಲ್ ಏಜೆಂಟ್ಸ್.
ಚೆನ್ನಾಂಬಿಕೆ ಅಂಡ್ ಬಸವಲಿಂಗು
ಮ್ಯಾಚ್ ವರ್ಕ್ಸ್,
2330 ಹಳ್ಳದಕೇರಿ, ಮೈಸೂರು.

ಟೆಂಡರ್ ನೋಟೀಸ್

ಮೈಸೂರು ಅರಮನೆಗೆ 1938-39ನೇ ಸಾಲಿಗೆ ಸಪ್ಲೈ ಮಾಡಬೇಕಾದ ದಿನಸಿ ಪಗೈರೆ ಸಾಮಾನುಗಳಿಗಾಗಿ ನೋಟಿಸ್ ಮಾಡಲ್ಪಟ್ಟ ಟೆಂಡರುಗಳು ಈ ಕೆಳಗೆ ರುಜು ಮಾಡಿರುವವರಿಂದ ೫—೨—೧೯೩೮ ನೇ ಶನಿವಾರ ತೆಗೆದುಕೊಳ್ಳಲ್ಪಡುತ್ತವೆ.

ಮೋಟೀಯಾನೆ ಮುನ್ನೀರಿನಿಂದ ಹೆಚ್ಚು ವಿವರಗಳನ್ನು ತಿಳಿದುಕೊಳ್ಳಬಹುದು.

ಮೈಸೂರು, ಟಿ. ತಂಬೂಚೆಟ್ಟಿ,
23—12—37. ಹುಜೂರ್ ಸೆಕ್ರೆಟರಿಯವರು.

ಸ್ಪರ್ಧಾಮಣಿ ದರ್ಪಣ

ಏಜೆಂಟರು ಬೇಕು.

ಚಕ್ರಬಂಧ, ಚಿತ್ರಶಾಲಾ, ಚಿತ್ರಬಂಧ, ಪಂಚಕಲ್, ಲಲಿತಕಲಾ, ಮುಂತಾದ ಎಲ್ಲಾ ಕನ್ನಡ ಸ್ಪರ್ಧೆಗಳಿಗೂ ಸಲಹೆಗಳನ್ನೂ, ಟಿಪ್ಪಣಿಗಳನ್ನೂ ಕೊಡತಕ್ಕ ಶ್ರೇಷ್ಠ ವರ್ಗದ ಕೈಪಿಡಿ. ಎಲ್ಲಾ ಊರುಗಳಲ್ಲಿಯೂ ಸ್ಪರ್ಧಾಮಣಿ ದರ್ಪಣದ ಪ್ರತಿಗಳನ್ನು ಮಾರಲು ಏಜೆಂಟರುಗಳು ಬೇಕಾಗಿದ್ದಾರೆ. ಇಷ್ಟಪಟ್ಟವರು ಕೆಳಗಿನ ವಿಳಾಸಕ್ಕೆ ಬರೆದು ತಿಳಿದು ಕೊಳ್ಳಬಹುದು.

ಸ್ಪರ್ಧಾಮಣಿ ದರ್ಪಣ, ಆಫೀಸ್
1326 ದೇವರಾಜ ಮೊಹಲ್ಲಾ, ಪೋಸ್ಟಾಫೀಸು ಹಿಂಭಾಗ, ಮೈಸೂರು.

ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ನಡೆಯಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

ಅತ್ಯುತ್ತಮವಾದ
ವಾಯು ಪ್ರಿಪಿ
ಶ್ರೀ ಕೌಸಲ್ಯ ಸ್ಟೋರ್ಸ್‌ನಲ್ಲಿ ದೊರೆಯುತ್ತದೆ.
ಎಲ್ಲಾ ಅಂಗಡಿಗಳಲ್ಲಿಯೂ ಏಜೆಂಟರು ಬೇಕಾಗಿದ್ದಾರೆ.

ಚಿತ್ರಶಾಲಾ ಸ್ಪರ್ಧೆ ನಂ. ೩೯ ರ ಉತ್ತರ



ಬಹುಮಾನ ಪಡೆದವರ ಹೆಸರನ್ನು ಮುಂದಿನ ವಾರ ಪ್ರಕಟಿಸಲಾಗುವುದು.

ಪ್ರಪಂಚ ಪರಿಚಯ.

ಸಂಯುಕ್ತ ಸಂಸ್ಥಾನ—ಇಲ್ಲಿನ ರಾಷ್ಟ್ರಾಧ್ಯಕ್ಷರು ಜನಾಸಿನವರು ಶಿಪಾಯಿ, ನವಾ ಘಾನವನ್ನು ಒಪ್ಪಿಕೊಳ್ಳುವ ಬಾಗ್ಯೆ, ಹಡಗಿನ ಪ್ರಕರಣವನ್ನು ಪ್ರಯಿಟ್ಟರು. ಪಾಶ್ಚಿಮ್ಯದ್ವೀಪಗಳಲ್ಲಿ ಪ್ರಚಂಡವಾದ ಯುದ್ಧ ಸನ್ನಾಹಗಳನ್ನು ಮಾಡುತ್ತಿರುವರು. ಇದು ಜಪಾನ್ ರಕ್ಷಣೆಗಂತೆ.

ಇಂಗ್ಲೆಂಡ್—ಯುದ್ಧಖಾತೆಯ ಪುನರ್ವ್ಯವಸ್ಥೆಯು ಬಲು ಜೋರಾಗಿದೆ. ಭೂ, ಜಲ, ವಿಮಾನ ಸೈನ್ಯಗಳಿಗೆ ಹೊಸ ತರುಣ ಮುಖ್ಯಸ್ಥರುಗಳು. ಇಂಗ್ಲೆಂಡಿನ ಯುದ್ಧ ಮಂತ್ರಿಯಾದ ಲಾರ್ಡ್ ಬಾರ್ಜರು ಹೊಸ ಸಾಲುದಲ್ಲಿ ತರುಣರಂತೆ ಯುದ್ಧಕ್ಕಾಗಿ ಸಜ್ಜುಗೊಳಿಸುತ್ತಿದ್ದಾರೆ. ಸಂಯುಕ್ತ ಸಂಸ್ಥಾನಗಳ ಜಪಾನಿನ ಕ್ಷಮಾಪಣೆಯನ್ನು ಸಮ್ಮತಿಸಿದುದು ನಿರಾಶೆಯನ್ನುಂಟುಮಾಡಿದೆ. ಮುಂದಿನ ವರುಷ ನಡೆಯುವ ಚುನಾವಣೆಯ ಸರ್ವಾಧಿಕಾರಿಗಳ ಸಂಬಂಧವನ್ನು ಬಿಡಿಸಿ ನಿರ್ಧರವಾಗಿ ತಿಳಿಸಬೇಕಾಗಿದೆ. ಈಗಿರುವ ಸರ್ಕಾರವು ಮೌನ ಮತ್ತು ಸಂಧಾನ ಇಷ್ಟೆ ಮಾತ್ರ.

ಆಸ್ಟ್ರೇಲಿಯ—ಇಲ್ಲಿನ ಜನರು ಹೊಸ್ತ ಬಟ್ಟೆ ಹೊಲಿದು ಜೊತೆಗೆ ಜಂದು ನೇಲಿಸಿ ಮೆಲ್ಲಮೆಲ್ಲನೆ ಒಂದೊಂದು ಸೂಸ್, ಘಾಮಿಗಳನ್ನು ಪಡೆದು ನಿವಾಸಿಗಳೇ ಆಗಿ ಹೊಸ ಕೊನೆಗೆ ಅಲ್ಲಿನ ಕೈಗಾರಿಕೆಗಳನ್ನೇ ಆಕ್ರಮಿಸುತ್ತಿರುವರಂತೆ. ಇದಕ್ಕೆಲ್ಲಾ ಸಿಸಾರ್ ಮತಸ್ಥರ ಸಹಾಯವು ಇದೆಯಂತೆ.

ಜುಗೋಸ್ಲೇವಿಯ—ಇಲ್ಲಿ ಹಿರಿಯ ಬರಹಗಳನ್ನು ಕಲಿಸುವುದೇ ಒಂದು ದೊಡ್ಡ ಉದ್ಯೋಗವಾಗಿಬಿಟ್ಟಿದೆ. ಹಳೆ ಐವತ್ತರಷ್ಟು ಅನಕ್ಷರಸ್ಥರಾದ ಇಲ್ಲಿನವರಿಗೆ ಓದು ಬರಹಗಳನ್ನು ಕಲಿಸುವವರಿಗೆ ಸರ್ಕಾರವು ಉದಾರವಾಗಿ ಸಹಾಯಮಾಡುತ್ತಿದೆ. ಇದೇ ಬಹುಜನರಿಗೆ ಜೀವನವಾಗಿ ಪರಿಣಮಿಸಿದೆ.

ಜರ್ಮನಿ—ಇಲ್ಲಿ ಆಹಾರ ಸಾಮಗ್ರಿಗಳ ಬೆಳೆ, ವ್ಯಾಪಾರ ಮುಂತಾದುವನ್ನು ಕುರಿತ, ನವ ಯುಗದ ನಿರ್ಣಯಗಳಾಗುತ್ತಿವೆ. ಬಹುಬೇಗ ಮಾಂಸದ ಪದಾರ್ಥಗಳಿಗೆ ಇದಕ್ಕಾಗಿ ಒಂದು ಮಹಾ ಸಭೆಯ ಪ್ರಯತ್ನದಲ್ಲಿ ನೇರವಾದ ನಿರೀಕ್ಷೆಯಿದೆ.

ಬ್ರೆಜಿಲ್—ಜೇನುವು ಸಂದೇಹದ ನಾಣ್ಯಗಳ ವಿನಿಮಯ ವನ್ನು ನಿಷೇಧಿಸಿದೆ.

ಜಪಾನ್—ಗೆದ್ದಿರುವ ಚೀನಾ ಪ್ರಾಂತಗಳಲ್ಲಿ ಜಪಾನ್ ಹೊಸ ಸರ್ಕಾರವನ್ನು ಸ್ಥಾಪಿಸಿ ತನ್ನ ಅಧಿಕಾರವನ್ನು ಭದ್ರಪಡಿಸಲು ಹವಣಿಸುತ್ತಿದೆ. ಚೀನದ ಕೈಗಾರಿಕೆಗಳೆಲ್ಲವನ್ನು ವಶ ಪಡಿಸಿಕೊಳ್ಳಲು ಜಪಾನ್ ಪ್ರಯತ್ನಿಸುತ್ತಲಿದೆ. ಇದನ್ನು ಚೀಣದಲ್ಲಿ ಇರುವ ವಿದೇಶೀಯರು ವಿರೋಧಿಸುತ್ತಿದ್ದಾರೆ. ಬ್ರಿಟನ್ ಮತ್ತು ಅಮೆರಿಕ ದೇಶಗಳನ್ನು ಚೀನದಿಂದ ಓಡಿಸುವ ಸೂಚನೆ ತೋರುತ್ತಿದೆ.

ಇಟಲಿಯ—ಮೈಕೆಲ್ಯಾಂಜೆಲೋ ಸಾಮ್ಯವು ಲೀಗೂ, ರಾಷ್ಟ್ರ ಸಂಘದೊಡನೆ ಆರಿಸಿದ ಸಂಯುಕ್ತ ಯೋಜನೆ ವ್ಯವಸ್ಥೆಯನ್ನು ಸ್ಥಾಪಿಸಲು ಭಾರತೀಯರ ಬೆಂಬಲವನ್ನು ಸಂಪಾದಿಸುವುದಕ್ಕಾಗಿ ಬಂದಿರುವರೆಂದು ವರ್ತಮಾನವಿದೆ. ಹೀಗೂ ಕಾಂಗ್ರೆಸ್ ಅಧ್ಯಕ್ಷರಾದವರೂ, ಮುಂತಾದವರೂ ಸಹ ಸಂಬಂಧ ಬೆಳೆಸುತ್ತಿದ್ದಾರೆ.

ಮೈಸೂರು—ಸರ್ಕಾರವು ಇಲ್ಲಿನ ಪ್ರಜಾ ಪ್ರತಿನಿಧಿಗಳನ್ನು ನಿಷೇಧಿಸಿದಂತೆ ನಿರ್ಧರಿಸಿತು ಎಂದು ಡಾಕ್ಟರ್ ಸುಬ್ಬರಾಯರು ಹೇಳಿದರು. ಶ್ರೀ ರಾಜಾರಾಮಯ್ಯನವರ ಹೇಳಿಕೆಗಳು ಎಲ್ಲರಿಗೂ ಮನವರಿಕೆಯಾಗುವುದಿಲ್ಲ. ಈ ವಿಷಯದ ಬಗ್ಗೆ ಪ್ರಜಾ ಪ್ರತಿನಿಧಿಗಳೂ ಸಹ ಪ್ರತಿಭಟನೆಯನ್ನು ವ್ಯಕ್ತಪಡಿಸಬೇಕಾದ ಕಾಲವು ಸನ್ನಿಹಿತವಾಗಿದೆ ಎಂದು ಅಭಿಪ್ರಾಯಪಡಲಾಗುತ್ತಿದೆ.

— —

ಹೀರಕ್ಷೈಕ ಸನ್ಮಾನ

ಮೈಸೂರು ಜಿಲ್ಲಾ ಪ್ರಸ್ಟೈಕರ ಸಮಿತಿಯವರು ಶ್ರೀ ಬಿ. ಎಸ್. ಕೃಷ್ಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಚಾಮರಾಜನಗರದ ತಾಲ್ಲೂಕು ಮಹಿಳಾ ಸಭೆ ನಡೆದಿತು. ಮೈಸೂರಿನ ಕಾಂಗ್ರೆಸ್ಸಿನ ಕ್ರಮವನ್ನು ವಿರೋಧಿಸುವ ಠರಾವು ಪಾಸು ಮಾಡಿತು. ದಿವಾನ್ ಸರ್ ಮಿರ್ಜಾರವರ ಆಡಳಿತವನ್ನು ಹೊಗಳಿ ಸಿದುದರ ಪ್ರಯುಕ್ತ ರಾಜಭಕ್ತಿ ಪೂರ್ವಕವಾಗಿ ಶ್ರೀಮನ್ಮಹಾರಾಜರವರಿಗೆ ವಂದನೆಗಳನ್ನು ಅರ್ಪಿಸಲಾಯಿತು. ಬಸವೇಶ್ವರನ ಭಕ್ತರು ದೇವರ ಮೇಲಿರುವ ನಿಜವಾದ ಭಕ್ತಿಯನ್ನು ಇಟ್ಟುಕೊಂಡು ತಿಳಿಸಿ ಅಧ್ಯಕ್ಷರು ಭಾಷಣ ಮಾಡಿದರು.

ಡಾ|| ಪಟ್ಟಾಭಿ ಸೀತಾ ರಾಮಯ್ಯನವರ ಸಂದೇಶ

“ಕಳೆದ ಒಂದು ವಾರದಿಂದ ನಿಮ್ಮ ಸಂಸ್ಥಾನದ ಎಲ್ಲ ಕಡೆ ಗಳಲ್ಲಿಯೂ ನಾವು ಪ್ರವಾಸ ಮಾಡಿದೆವೆಂದು ಇಂದು ಇಲ್ಲಿಗೆ ಬಂದಿದ್ದೇನೆ. ನನ್ನ ಈ ಪ್ರವಾಸದ ಪರಿಣಾಮವು ವಿವಿಧ ಸಿದ್ಧಾಂತಮಯವಾಗಿದೆ. ಮೈಸೂರಿನವರಲ್ಲಿ ಒಂದು ಯೋಗ್ಯತೆ, ಒಂದು ರಾಷ್ಟ್ರೀಯ ಜಾಗೃತಿ, ಮತ್ತು ಜೀವವು ಹಿಮಗಿರಿ ಗೋಚರವಾಗಿದೆ. ಈ ಉತ್ಸಾಹದ, ಈ ಜಾಗೃತಿಯ ಸನ್ನಿವೇಶದಲ್ಲಿ ಗವರ್ನ್ಮೆಂಟಿನ ಧೋರಣೆಯನ್ನು ನಮಗೆಲ್ಲ ಪ್ರಕೃತಿ ಬೀರದೆ ಇರುವುದಿಲ್ಲ.

“ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಗೆ ಸರಿಯಾದ ಸಮಯವಾಗಿದೆ. ಅಲ್ಲದೆ ಇದು ಕೇವಲ ಸ್ಥಾಪಿಸಿದ್ದಾ ನ್ಯಾಯ್ಯ ಆದ ಕಾರ್ಯವಾಗಿದೆ. ಮೈಸೂರಿನ ಜನರು ಬ್ರಿಟಿಷ್ ಇಂಡಿಯಾದ ಪ್ರಜೆಗಳಿಗೆ ದೊರೆತ ಜವಾಬ್ದಾರಿ ಸರಕಾರವನ್ನು ಕೊಡಲು ಕಾರಣ ಯಾವುದು ಅಡ್ಡಿ ಬರುವುದಿಲ್ಲವೆ? ಎಂದು ಕೇಳಿದರೆ ಪ್ರಶ್ನೆಯನ್ನು ಉತ್ತರಿಸಲು ಅದೇ ಕಾರಣವು ಇಲ್ಲ. ನಾವೆಲ್ಲಾ ಒಂದು ಬೆಳೆದಿಲ್ಲವೆಂದು ನನ್ನ ಭಾವನೆ.

“ಶ್ರೀಮನ್ಮಹಾರಾಜರವರು ಮನಸ್ಸು ಮಾಡಿದರೆ ಜವಾಬ್ದಾರಿ ಸರಕಾರವನ್ನು ಕೊಡುವುದು ಹೆಚ್ಚಿನ ವಿಷಯವಲ್ಲ. ಅದರ ಹಾಗೆ ಕೊಡಲು ಅವರಿಗೆ ಅಧಿಕಾರವೂ ಇದೆ. ಒಂದು ವ್ಯಕ್ತಿಯಿಂದ ನೋಡಿದರ ತಿರುವಾಂಕೂರು, ಕೊಚ್ಚಿ, ಮೈಸೂರು ಸಂಸ್ಥಾನಗಳಲ್ಲಿನ ಪರಿಸ್ಥಿತಿ ನಾವು ಕಂಡಂ ತೆ ಒಂದೇ ಬಗೆಯಾಗಿದೆ. ಆದರೆ ಮೈಸೂರು ಒಂದು ದೃಷ್ಟಿಯಿಂದ ಪ್ರಾಥಮಿಕಯವಾದ ಸ್ಥಾನದಲ್ಲಿದೆ. ಅದೇನೆಂದರೆ ಕೊಚ್ಚಿ, ತಿರುವಾಂಕೂರುಗಳಲ್ಲಿರುವಂತೆ ಇಲ್ಲಿ ಕೋಮುವಾರು ಭಾವನೆಯನ್ನು ಜನರು ಗೆದ್ದಿದ್ದಾರೆ.

“ಇಲ್ಲಿಯ ಜನರ ಮಹೋತ್ಸಾಹ ಮಹತ್ತರವಾಗಿದೆ; ಪ್ರಜಾಸತ್ತಾತ್ಮಕವಾದ ಜವಾಬ್ದಾರಿ ಸರಕಾರಕ್ಕೆ ಅಗತ್ಯವಾದ ವಾತಾವರಣವು ಇಲ್ಲಿಗ ಕಲ್ಪಿತವಾಗಿದೆ. ಕಾಂಗ್ರೆಸ್ ಚಳುವಳಿಯು ಬಹುಬೇಗನಾಗಿ ಇಲ್ಲಿ ಹರಡುತ್ತಿದ್ದು ಇದು ನ್ಯಾಯವಾದ ಬೆಳವಣಿಗೆಯಾಗಿದೆ.

ಮೈಸೂರಿಗೆ ಸರ್ ಕೆ. ಶೇಷಾದ್ರಿ ಅಯ್ಯರ್‌ರವರು ವಿದ್ಯುಚ್ಛಕ್ತಿಯನ್ನು ತಂದು ಮೈಸೂರನ್ನು ಸ್ವಿಟ್ಜರ್ಲೆಂಡನ್ನಾಗಿ ಮಾಡಿದರು. ಸರ್ ಎಂ. ಕಾಂತರಾಜೇ ಅರಸಿನವರು ಇಲ್ಲಿಯ ಕೈಗಾರಿಕೆಯನ್ನು ಸ್ಥಾಪಿಸಿ ಮೈಸೂರನ್ನು ಜಪಾನ್ ದೇಶವನ್ನಾಗಿ ಮಾಡಿದರು. ಸರ್ ಎಂ. ವಿಶ್ವೇಶ್ವರಯ್ಯನವರು ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಿ ಮೈಸೂರನ್ನು ಬರ್ಮಿಂಗ್ಹಾಂ ನಗರದಂತೆ ಮಾಡಿದರು. ಸರ್ ಮಿರ್ಜಾರವರು ಸಕ್ಕರೆಯ ಕೈಗಾರಿಕೆಗೆ ಉತ್ತೇಜನ ಕೊಟ್ಟು ಮೈಸೂರನ್ನು ಜಾವವನ್ನಾಗಿ ಮಾಡಿದರು!

“ಆದರೆ ಸರ್ ಮಿರ್ಜಾರವರು ಮುಂದೆ ಮಹತ್ತರವಾದ ಒಂದು ಆದರ್ಶವನ್ನು ಸಾಧಿಸಬೇಕಾಗಿದೆ. ಅದೇನೆಂದರೆ ಮೈಸೂರಿನಲ್ಲಿ ಪ್ರಜಾಸತ್ತಾತ್ಮಕವಾದ ಜವಾಬ್ದಾರಿ ಸರಕಾರ ಸ್ಥಾಪನೆಗೆ ಅವರು ನೆರವಾಗಿ [illegible]ಬೇಕು.”

ಆರನೆಯ ವರ್ಷಾರಂಭ

ಜನವರಿ ೧೯೩೮

1938 Calendars 1938

OF

AMRUTANJAN LTD.

(Gandhiji, Javaharlal, Lady, God Krishna, varieties,) Rs. 8/- per 100.

N.B.—A limited quantity (not less than lots of 25) available for sale. Mention nearest Rly. Station and send M.O. to avoid V.P. Charges.

— ವಿ ಚಾ ರ ವಾ ಣಿ —

ವಿದ್ಯಾಭ್ಯಾಸದ ಆದರ್ಶ

ಮಧ್ಯ ಪ್ರಾಂತದಲ್ಲಿ ಒಂದು ವಿದ್ಯಾಶಾಲೆಯು ಪ್ರಯೋಗಾರ್ಥವಾಗಿ ಏರ್ಪಡಿಸಲ್ಪಟ್ಟಿದೆ. ವಿದ್ಯಾಭ್ಯಾಸ ವಿಧಾನಗಳನ್ನೆಲ್ಲಾ ಪ್ರವರ್ತಿಸಿದ್ದಾರೆ. ಪ್ರಾಚೀನ ಕಾಲದಿಂದ ಈಗಿನವರೆಗಿನ ವಿದ್ಯಾಭ್ಯಾಸ ವಿಧಾನಗಳನ್ನು ಇಂಗ್ಲೆಂಡು ಈಗ ಬದಲಾಯಿಸುತ್ತಾ ಬರುತ್ತಿರುವುದು ಜೀವನಕ್ಕೆ ಅವಶ್ಯಕವಾಗಿ ವಿಚಾರಿಸಿದ್ದಾರೆ. ಇಂಗ್ಲೆಂಡಿನಲ್ಲಿ ಮಕ್ಕಳಿಗೆ "ಕಲಿಸುವುದಕ್ಕಿಂತ" 'ಕಲಿಯುವುದಕ್ಕೆ' ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಾ ಬಂದಿದ್ದಾರೆ ಎಂಬುದು ತಿಳಿದುಬಂದಿದೆ. ಇದರಿಂದ ... ನಾನಾ ಮಕ್ಕಳು ಅನುಭವ ಪಡೆಯುವಂತೆ ... ಇವರ ಮೇಲೆ ... ಪ್ರಶ್ನೆ ಬಿದ್ದಿದೆ ಎಂದೂ ತಿಳಿದುಬಂದಿದೆ.

° ° °

ಯುವಕರ ಸ್ವಾತಂತ್ರ್ಯ

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮಾಡಿದ ಉಪನ್ಯಾಸದಲ್ಲಿ ... ಆದಿದ ಮಾಡಿದ ... ಯುವಕರಿಗೆ ತಮಗೆ ಸ್ವೇಚ್ಛಾಪ್ರವೃತ್ತಿಗೆ ಅವಕಾಶವಿಲ್ಲದ್ದು ... ಅವರ ... ಸಿ. ... ತನ್ನ ಎಲ್ಲ ನಡತೆಗಳಲ್ಲೂ ಉಚಿತವಿಟ್ಟುಕೊಳ್ಳಲೇ ಬೇಕು —ಎಂದು ಬೇರೆ ಒತ್ತಿ ಹೇಳಿದ್ದಾರೆ.

° ° °

ಸ್ತ್ರೀ ವಿದ್ಯೆಯ ಪರಿಮಿತಿ

ಒಂದು ಬ್ರಹ್ಮಸಮಾಜ ಸ್ತ್ರೀ ಶಾಲೆಯನ್ನು ಪ್ರೆಸಿಡೆಂಟ್ ಶ್ರೀ ಎಂ. ... ಆರಂಭಿಸಿದರು. ಈ ಸಂದರ್ಭದಲ್ಲಿ ಅಕ್ಕ, ಹೆಣ್ಣುಮಕ್ಕಳಿಗೆ ವ್ಯವಹಾರಕ್ಕೆ ಬೇಕಾದಷ್ಟು ವಿದ್ಯಾಭ್ಯಾಸ ಸಾಕು. ಅವರು ಅಕ್ಷರಾಭ್ಯಾಸಕ್ಕಿಂತ ಮನೆಗೆಲಸ ಮಾತೃಕರ್ತವ್ಯಗಳಿಗೆ ಹೆಚ್ಚು ಗಮನ ಕೊಟ್ಟರೆ ಮೇಲು—ಎಂದು ಹೇಳಿದ್ದಾರೆ.

° ° °

ದೇವರನ್ನೂ ಮತವನ್ನೂ ಮರೆಯಬೇಡಿ

ದೀನ ಬಂಧು ಆಂಡ್ರ್ಯೂಸರು ಲಂಡನ್ ನಗರದಲ್ಲಿ ಒಂದು ಹಿಂದೂ ದೇವಾಲಯವನ್ನು ಸ್ಥಾಪಿಸಿದ ಸಂದರ್ಭದಲ್ಲಿ ಭಾಷಣ ಮಾಡಿ ದೇವರನ್ನೂ, ಮತವನ್ನೂ ಭಾರತೀಯರು ವಿದೇಶಕ್ಕೆ ಬಂದೊಡನೆ ಮರೆಯುವುದು ವಾಡಿಕೆ. ಇದು ತಪ್ಪಲ್ಲ ಈ ದೇವಾಲಯ ನೆರವಾಗಲಿ —ಎಂದರು.

° ° °

ಗಾಳಿ ಗಿರಣಿ

ಒಂದು ಭಾರತದಲ್ಲಿ ರೈತನಿಗೆ ಚಿಕ್ಕದಾಗಿ ... ಮಯಸೂರು ... ವಾಯುವಿನಲ್ಲಿ ಆಗತ್ಯವಾದ ... ಯಂತ್ರಗಳಿಂದ ಹುಟ್ಟಿಸಿಕೊಳ್ಳುವ ಚೈತನ್ಯವಿಲ್ಲ. ಇದಕ್ಕಾಗಿ ಗಾಳಿಗಿರಣಿಗಳನ್ನು ಉತ್ತಮರೀತಿಯಲ್ಲಿ ತಯಾರಿಸಿ ಅವರ ಉಪಯೋಗಕ್ಕೆ ಒಟ್ಟಿಸಲು ಯೋಚನೆಗಳಾಗಿವೆ. ಇದು ಕಾಂಗ್ರೆಸ್ ಮಂತ್ರಿಗಳ ಮುಂದೆ ಇಡಲ್ಪಟ್ಟಿದೆಯೆಂದು ತಿಳಿದು ಬಂದಿದೆ.

° ° °

ಸಮಯಕ್ಕಾದ ನೆಂಟ ಗಾಂಧಿ

ಕವಿವರ್ಯ ಟಾಗೋರರು ವಿಶ್ವಭಾರತಿಯಲ್ಲಿ ಗಾಂಧಿ ಪ್ರಶಂಸೆ ಮಾಡುತ್ತಾ ಒಂದು ಲೇಖನ ಬರೆದಿದ್ದಾರೆ. ಅದರಲ್ಲಿ ಅವರು ಹೇಳಿರುವುದಿಷ್ಟು. ಪ್ರಪಂಚವೆಲ್ಲಾ ಉತ್ಪಾತ ಮಾರ್ಗಗಳಲ್ಲೇ ಮುಳುಗಿ ತೇಲುತ್ತಿದೆ. ಇದಕ್ಕೆಲ್ಲಾ ಪಾಶ್ಚಾತ್ಯರ ಅಮೋಘ ಜ್ಞಾನವನ್ನು ಅಪಾಯಮಾರ್ಗಗಳಲ್ಲಿ ಪ್ರಯೋಗಿಸುತ್ತಿರುವುದೇ ಕಾರಣ. ಈ ಪರ್ವಕಾಲದಲ್ಲಿ ಆ ನಾಗರಿಕತೆಗೆ ಬಲಿಯಾಗುತ್ತಿರುವ ಭಾರತೀಯರನ್ನು ಉದ್ಧಾರ ಮಾಡಲು ಬಂದ ಬಡವರ ಬಂಧು ಶಾಂತಮೂರ್ತಿ ಗಾಂಧಿಜಿ ಎಂದು ಬರೆದಿದ್ದಾರೆ.

° ° °

ಮೈಸೂರು ವಾತಾವರಣ

ಡಾ|| ಪಟ್ಟಾಭಿ ಪ್ರವಾಸ ಕಾಲದಲ್ಲಿ ನಾನಾ ವಿಚಿತ್ರಗಳು. ಸರಕಾರದಿಂದ ಒಂದೆಡೆ ಮಾತಾಡಬಾರದೆಂದು ಅನುಯಾಯಿಗಳಿಗೆ ಬಂಧನ. ಮತ್ತೊಂದೆಡೆ ಧ್ವಜ ಹಾರಿಸಬಾರದೆಂದರು. ಮಗದೊಂದು ಕಡೆ ಆರ್ಥಿಕ ವಿಚಾರ ಮಾತ್ರ ಮಾತನಾಡಿರೆಂದರು. ಮತ್ತೆ ಕೆಲವೆಡೆ ಏನೂ ಇಲ್ಲ. ಅಂತು ಕಡೆಗಾಗಿ ಬೆಂಗಳೂರು ಡಿ|| ಮ್ಯಾ|| ರಿಗೆ ಖಚಿತವಾಗಿ ಕಾಂಗ್ರೆಸ್ ಧ್ವಜವನ್ನಿಸಿಕೊಳ್ಳುವ ಧ್ವಜವು ಸಾರ್ವಜನಿಕ ಸ್ಥಳಗಳಲ್ಲಿ ಹಾರಿದೊಡನೆ ಶಾಂತಿಭಂಗವಾಗುವುದೆಂದು ತಿಳಿದುಬಂದಿಕಾಗಿ ಹಾಗೆ ಮಾಡಕೂಡದೆಂತ ಪ್ರೊ| ರೆ ಷ ರ ಆಜ್ಞೆ ಬೆಂಗಳೂರು ಮತ್ತು ಸುತ್ತಲು ಹೊರಡಿಸಿದ್ದಾರೆ. ಮೇಲಿಂದ ಮೇಲೆ ಇಂಥಾ ಅಧಿಕಾರಿಗಳನ್ನು ಹೇಳಿ ಕೇಳಿ ಬಹಿಷ್ಕಾರ ಆಜ್ಞೆಗಳನ್ನು ಹೊರಡಿಸುವುದು ಕಷ್ಟ, ಆದಕ್ಕಾಗಿ ಕೆಳಗಿನ ಅಧಿಕಾರಿಗಳಿಗೇ ಆ ಸ್ವಾತಂತ್ರ್ಯವನ್ನೂ ಕೊಟ್ಟಿದ್ದಾರೆ.

° ° °

ಲೋಥಿಯನ್ ಅಭಿಮತ

ಲಾರ್ಡ್ ಲೋಥಿಯನ್ನರನ್ನು ಚೀನಾ ಜಪಾನುಗಳಲ್ಲಿ ಗೆಲ್ಲುವರು ಯಾರು ಎಂದು ಪ್ರಶ್ನಿಸಿದರು. ಅದಕ್ಕವರು ಚೀನಾರು ಉದ್ದಕ್ಕೂ ಕಿರುಕುಳ ಯುದ್ಧವೇ ಮಾಡಿದರೆ ಮಾತ್ರ ಖಂಡಿತ ಗೆಲ್ಲುವರು ಎಂದಿದ್ದಾರೆ.

ಖಾದೀ ವಸ್ತುಪ್ರದರ್ಶನಕ್ಕೆ ಗೌವರ್ನರ ಭೇಟಿ

ಮದ್ರಾಸು ಗೌರ್ನರವರು ತಮಿಳುನಾಡು ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಅಖಿಲ ಭಾರತ ... ಮತ್ತು ಸ್ವದೇಶಿ ವಸ್ತುಪ್ರದರ್ಶನಕ್ಕೆ ... ಯಿತ್ತರು. ಈ ರೀತಿ ಗೌರ್ನರವರು ಖಾದೀ ಪ್ರದರ್ಶನಕ್ಕೆ ಭೇಟಿ ಕೊಟ್ಟಿರುವುದು ಇದೇ ಮೊದಲನೆಯ ಬಾರಿಯೆಂದು ಗೊತ್ತಾಗಿದೆ.

ದ್ರಾಕ್ಷಾರಿಷ್ಟ

ಈ ದ್ರಾಕ್ಷಾರಿಷ್ಟವು ಸಪ್ತಧಾತು ವರ್ಧಕವಲ್ಲದೆ ಅನೇಕ ... ರಸಾಯನಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಾವು (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರುಪು ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧೆಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟವಂತರಾಗುವರು ಹೆಂಗಸರಿಗೂ ... ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ... ಆಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ... ತಿಳಿದೀತು.

1 ಬಾಟ್ಲಿ ಬೆಲೆ ... 3 ಬಾಟ್ಲಿ ... 1 ಡಜನ ಬಾಟ್ಲಿ ಬೆಲೆ ...
ಮ್ಯಾನೇಜರ್—... ಕೃತ ಔಷಧಿ, ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.
ಮೈಸೂರ ... ಟಿ. ಸಿ. ... , ಬೋರಿಬಾಯಿ ಆನಂದ ಭವನ, ... ರೋಡ್. ಬೆಂಗಳೂರು ಸಿಟಿ:—ಸಿ.ವಿ. ... ಅಂಡ್ ಸನ್ಸ್. ... ಟಿ. ಆರ್. ಗುರು, ಚನ್ನಬಸಪ್ಪ ಅಂಡ್ ಬ್ರದರ್ಸ್ ... ಎಂ. ಎಲ್. ಮಂಜಯ್ಯಶೆಟ್ಟಿ. ಶಿವಮೊಗ್ಗ ಶ್ರೀಕೃಷ್ಣ ಸ್ಟೋರ್ಸ್ ... ಮತ್ತು ... ಬ್ರದರ್ಸ್. ದಾವಣಗೆರೆ - ... ಅಂಡ್ ಬ್ರದರ್ಸ್.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್,
ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತಾ ಎಂತಹ ಗಡುಸಾದ ಆಹಾರವನ್ನಾದರೂ ಜೀರ್ಣೀಕರಿಸಿ ಕೊಳಕಾದ ನೀರು, ಕೆಟ್ಟಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಬಳಿಗೆ ಸೇರಿಸದೆ ಮಲಬದ್ಧವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ.

ಮಕ್ಕಳ ಪಕ್ಕಸಳಿತ (ಎಳವು, ಕಾಲುಕೈ ವದರಿ ಬಾಯಲ್ಲಿ ಜೊಲ್ಲು ಸುರಿಸುವ ಸೀತವಾತ) ಮಕ್ಕಳ ಮತ್ತು ದೊಡ್ಡವರ ಸೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣದ ಭೇದಿ, ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಇನ್‌ಫ್ಲುಯಂಜಾ, ಪ್ಲೇಗು, ಶೀತಭೇದಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿರುತ್ತಾರೆ. ಈ ಮಾತ್ರೆಗಳಲ್ಲಿ ಅಫೀಮಾಗಲಿ, ವಿಷವಸ್ತುವಾಗಲಿ, ಖಂಡಿತವಾಗಿ ಸೇರಿಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ, ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವರಾಗುತ್ತೀರಿ.

250 ರಿಂದ 300 ಮಾತ್ರೆಗಳವರಿವಿಗಿರುವ ಸೀಸೆ 1 ಕ್ಕೆ 4 ಆಣೆ. ಟಪಾಲು ಮೂಲಕವಾದರೆ 1 ಸೀಸೆಗೆ 9 ಆಣೆ. 6 ಸೀಸೆಗೆ 1—8—0. 12 ಕ್ಕೆ 2—13—0. 25 ಕ್ಕೆ 5—3—0.

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಥ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲತಕ್ಕ ಸ್ಪರ್ಧೆಗೆ ಮೊದ ನಾನವೂ, ಒಂದು ಮತ್ತು ಎರಡು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿ ...ದ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರ ...ಗೂ ಅವಕಾಶವಿಲ್ಲಾ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲಾ. ನಾಲ್ಕು ಉತ್ತರಗಳನ್ನು ಕಳು ...ಇನ್ನೊಂದು ಉತ್ತರವನ್ನು ಮುಫತ್ತಾಗಿ ಕಳುಹಿಸಬಹುದು. ಪ್ರವೇಶ ಧನವನ್ನು ಪೋಸ್ಟೇಜ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡ ...ರ ರವಾನಿಸಬಹುದು ಉತ್ತರಗಳನ್ನು ಬರೆಯತಕ್ಕವರು ಡಿಸೆಂಬರ್ 27 ಮತ್ತು ಜನವರಿ 3 ನೇ ಸಾಥ್ವಿ ಕೂಪನ್ನಿನಲ್ಲಾಗಲಿ ಅಥವ ತಾಯಿನಾಡು ಪೇಪರಿನಲ್ಲಿರತಕ್ಕ ...ಗಲಿ ಅಥವಾ ಬಿಳುಪು ಕಾಗದದಲ್ಲಾಗಲಿ ಚಿತ್ತಿಲ್ಲದಂತೆ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1938 ನೇ ಇಸವಿ ಜನವರಿ ...ಯು ಕೊನೆಯದಿನ. ನಂತರ ಕಳುಹಿಸುವ ಉತ್ತರಗಳನ್ನು ಸ್ವೀಕರಿಸುವುದಿಲ್ಲಾ. ಸರಿಯಾದ ಉತ್ತರವನ್ನು 1938 ನೇ ಜನವರಿ 17 ನೇ ತಾರೀಖಿನ ಸಾಥ್ವಿ ...ಸಲಾಗುತ್ತೆ

...ತ್ರ ಶಾ ಲಾ ಸ್ಪ ರ್ಧೆ ನಂ. ೪೦



ಪೋಸ್ಟು ಮೂಲಕ ಕಳುಹಿಸು ವವರು ಜನವರಿ ೧೨ ನೇ ತಾರೀಖು ಕೂಡಾ ಕಳುಹಿಸಬಹುದು.

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರಗಳನ್ನು ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನ

೨೦ ರೂಪಾಯಿ

ಚಿ ತ್ರ ಶಾ ಲಾ ಸ್ಪ ರ್ಧೆ ನಂ. ೪೦



....

....

ನಂ............ ಪೋಸ್ಟಲ್ ಆರ್ಡರ್ ನಂಬರು........

ಹೆಸರು ....

ವಿಳಾಸ.......................................

ಕೂಪನ್ ನಂ................ಪೋಸ್ಟಲ್ ಆರ್ಡರ್ ನಂಬರು......

ಎಡದಿಂದ ಬಲಕ್ಕೆ

...೩. ಬರುಪಿಕೆ. ೬. ಬೃಹಸ್ಪತಿ, ಬ್ರಹ್ಮ. ೮ ಇಂತಹ ಹೆಂಗಸನ್ನು ...ನರೇ ಹೆಚ್ಚು. ೯ ಓಡಾಡುವ, ಅಲುಗಾಡುವ. ೧೦ ಯಾವ ಕೆಲಸಕ್ಕೂ ...ಅದರ ಫಲವನ್ನು ನೋಡಲು ಸಾಧ್ಯ. ೧೧ ಇದಕ್ಕೆ ಅಧಿಪತಿಯಾಗ ...ಜಾನುರಾಗಿಯಾಗಿರಬೇಕು. ೧೪ ಉತ್ತಮವಾದ. ೧೭ ಚಂದ್ರ, ಕಳ್ಳ. ...ಹರಿಹರಿಸು. ೨೨ ರಣರಂಗದಲ್ಲಿ ಇವನ್ನು ಕೇಳಬಹುದು. ೨೩ ...ಇದರ ಮುಂದೆ ಯಾರೂ ಈ ಪ್ರಪಂಚದಲ್ಲಿ ಧೈರ್ಯವಾಗಿ ನಿಲ್ಲ ....ಮಾಡಬೇಕಾದ ಸಂದರ್ಭಬಂದರೂ, ಆಗಲೂ ನ್ಯಾಯ ...ಮಾಡಬೇಕು. ೩೨ ಒರಿಗೆ. ೩೩ ಒಬ್ಬ ರಾಕ್ಷಸ. ೩೪ ರಾಕ್ಷಸ. ...೩೬ ಪಟ, ಪ್ರಮಾಣ.

ಮೇಲಿನಿಂದ ಕೆಳಕ್ಕೆ

೧. ನಿಜವಾದ (ಅಕ್ಷರಸ್ಥಳಪಲ್ಲಟ) ೨. ರಾಜ. ೪ ವಾರಾಂಗನೆ. ೫. ಈತ ನಿಗೆ ಕಣ್ಣಿದ್ದರೂ ಕಾಣಿಸುವುದಿಲ್ಲಾ. ೬. ಓಡುವುದು. ೭. ನೂರು ವರುಷ. ೧೨. ಈತನು ಇದ್ದದ್ದರಲ್ಲಿ ತೃಪ್ತಿಗೊಂಡಿರಲಾರನು. ೧೩. ಕಾಣಿಸುವುದು. ೧೫. ಇದು ಒಳ್ಳೆಯದಾಗಿದ್ದರೆ ಜನರು ಕೆಡುವುದಿಲ್ಲಾ. ೧೬. ಇವರು ವೇದ ಶಾಸ್ತ್ರಗಳನ್ನು ನಂಬುವುದಿಲ್ಲಾ. ೧೭......ಯಾವಾಗಲೋ ಬದುಕಿ ಪ್ರಯೋಜನವೇನು ? ೧೮. ಕೆಲವರಿಗೆ ಕೋಪವು ಇಲ್ಲೇ ಇರುತ್ತದೆ. ೨೦. ಬಂದ ನೆಂಟರಿಸ್ಟರನ್ನು......ವುದ ಕ್ಕೂ ಒಂದು ರೀತಿ ಬೇಕು. ೨೧. ತನ್ನ......ವು ಕೈಗೂಡಲಿಲ್ಲವೆಂದು ಅನೇಕರು ಆತ್ಮಹತ್ಯ ಮಾಡಿಕೊಂಡದ್ದುಂಟು. ೨೪. ಕಾವಲುಗಾರ. ೨೫. ಸನ್ಯಾಸಿ. ೨೬. ಶುದ್ಧವಾದ ೩೦. ಎಂತಹ ಅನುಭವಿಯೂ ಧೈರ್ಯಶಾಲಿಯೂ ಆದ ಸೈನಿಕನ ನಾದರೂ ಇದಿಲ್ಲದಿದ್ದರೆ ಪ್ರಯಾಣ ಮಾಡಲಾರನು.

ವಿಳಾಸ:— ಮ್ಯಾನೇಜರ್, ಚಿತ್ರಶಾಲಾ ಸ್ಪರ್ಧೆ, ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ಸೂ.—ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಟಿಚ್ ಮಾರ್ಕ್ಸ್—ಇವರಿಗೂ, ಬೆಂಗಳೂರಿನಲ್ಲಿ ಭಾಗ ವಹಿಸುವವರು ವ. ...ಆರ್, ಟೈಲರಿಂಗ್ ಶಾಪ್, ತೆಂಗಿನಕಾಯಿ ವ್ಯಾಪಾರಿಗಳು, ನಂ 46 ನ್ಯೂ ಮಾರ್ಕೆಟ್, ಸೀತಾರಾಮ್ ಬೀದಿ, ಇವರಿಗೂ, ತುಮಕೂರಿನಲ್ಲಿ ಸ್ಪರ್ಧೆಗೆ ಭಾಗ ವಹಿಸುವ ...ರ್, ರಾಮಚಂದ್ರಪ್ಪ, ಜನರಲ್ ಮರ್ಚೆಂಟ್ ಅಂಡ್ ನ್ಯೂಸ್ ಏಜೆಂಟ್ ಇವರಲ್ಲಿಯೂ, ಹಾಸನದಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸ ...ರ್ಸ್ ನಂಜನಗೂಡು ನ್ಯೂಸ್ ಏಜೆನ್ಸಿ, ಕೈಟ್ಸ್ ಸ್ಟೇಷನ್ ಬುಕ್ ಸ್ಟಾಲ್, ಹಾಸನ ಇವರಲ್ಲಿ ದಾಖಲುಮಾಡಬೇಕಾಗಿ ವಿನಂತಿ. ಮ್ಯಾನೇಜರ್.



ಒಂದು ರೂ ಗೆ ೭ ಕೂಪನ್ ಉತ್ತರಗಳನ್ನು ಕಳುಹಿಸಲು ಕಡೆಯ ತಾರೀಖು ೨೭-೧-೩೮ ೪ ಆಣೆಗೆ ೩ ಕೂಪನ್

... ಶ್ರೀರಂಗಪಟ್ಟಣದ ... ಬ್ಯಾಂಕ್ (ಲಿ.ಟೆಡ್) ಆಫೀಸಿನಲ್ಲಿ ಡಿಪಾಜಿಟ್ ಮಾಡಿ ಇರಿಸಿರುತ್ತೆ. ಅದಕ್ಕೆ ಸ್ಪರ್ಧೆ ... ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ ... ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರ್ ... ಸ್ಪರ್ಧೆಗಳ ಪ್ರವೇಶಧನ ... ಮೂರಕ್ಕಿಂತ ಕಡಿಮೆ ಉತ್ತರಗಳನ್ನು ಅಂಗೀಕರಿಸ ... ಉತ್ತರವನ್ನು ಮುಖತಃ ಕಳುಹಿಸಬಹುದು." ಪ್ರವೇಶ ಧನವನ್ನು ... ಉತ್ತರಗಳನ್ನು ಬರೆಯತಕ್ಕವರು 1938 ನೇ ಇಸವಿ ... ಜನವರಿ 27 ನೇ ತಾರೀಖು ಕೊನೆಯ ದಿನ. ನಂತರ ... 1938 ನೇ ಜನವರಿ 31 ನೇ ... ಪ್ರಕಟಿಸಲಾಗುತ್ತೆ.

ಕ್ರಾಸ್ ವರ್ಡ್ ಪಜ಼ಲ್ ...



ಕೂಪನ್ ನಂ.	ಶ್ರೀ ...
ಹೆಸರು	
ವಿಳಾಸ	೧೧

ಎಡದಿಂದ ಬಲಕ್ಕೆ

... ೩. ಸಾಮಾನ್ಯವಾಗಿ ಇದನ್ನು ... ೭. ಇವರಿಂದ ... ೧೧. ಒಂದು ... ೧೨. ಧನಿಕರಾದಿ ... ೧೪. ಇದನ್ನು ... ೧೮. ಈ ... (ಸ್ವಲ್ಪ...)

ಮೇಲಿನಿಂದ ಕೆಳಕ್ಕೆ—

... ೨. ... ೬. ... ೧೦. ... ೧೩. ... ೧೯. ... ಪ್ರಯಾಣವು ಈಗಿನ ಕಾಲದಲ್ಲಿ ಬಹ... (ಸ್ವಲ್ಪ...)

ಏಜೆಂಟರುಗಳು — ... ಸ್ಟ್ರೀಟ್, ... ಮೈಸೂರಿನವರು— ... ಜನರಲ್ ... ಜನರಲ್ ಮರ್ಚೆಂಟ್ ... ಮತ್ತು ಶ್ರೀರಂಗಪಟ್ಟಣ, ... ಉತ್ತರ ಮತ್ತು ಪ್ರವೇಶ ಧನವನ್ನು ... ಕಳುಹಿಸಬಹುದು.

ಮ್ಯಾನೇಜರ್, ಚಂದ್ರಕಲಾ ಸ್ಪರ್ಧೆ, ಶ್ರೀರಂಗಪಟ್ಟಣ. (ಮೈಸೂರು ಡಿಸ್ಟ್ರಿಕ್ಟ್.)

ಆಯುರ್ವೇದ ... ಪಂಡಿತರ

- ಬಾಲಿಸುಧಾ -

ಮಕ್ಕಳ ... ಮಕ್ಕಳ ... ಉಪಯೋಗಿಸಿರಿ.

...

... ಬೆಂಗಳೂರು.

ಟೆಂಡರ್ ನೋಟೀಸ್

ಮೈಸೂರು ಜಿಲ್ಲೆಗೆ 1938-39ನೇ ಸಾಲಿಗೆ ... ಟೆಂಡರುಗಳು ಈ ಕೆಳಗೆ ... ೧೯೩೮ ನೇ ... ತೆಗೆದುಕೊಳ್ಳಲ್ಪಡುತ್ತವೆ.

ಮೇಲ್ಕಂಡ ... ವಿಷಯಗಳನ್ನು ತಿಳಿದುಕೊಳ್ಳಬಹುದು.

ಮೈಸೂರು, ಟಿ. ತಂಬೂಚೆಟ್ಟಿ,

22-12-37. ಹುಜೂರ್ ಸೆಕ್ರೆಟರಿಯವರು

ಕೊಚಿನಿನಲ್ಲಿ ಜವಾಬ್ದಾರಿ ಸರಕಾರ

ರಾಷ್ಟ್ರನಿರ್ಮಾಣ ಇಲಾಖೆಗೆ ಚುನಾಯಿತ ಮಂತ್ರಿ

ಮೈಸೂರು ಗ್ರಾಮ ಕೈಗಾರಿಕೆಗಳ ಪುನರುಜ್ಜೀವನ

ಸಾರ್ವಜನಿಕರ ಬೆಂಬಲದ ಆವಶ್ಯಕತೆ

ಲೇಖಕ:—ಜಿ. ನಾಗರಾಜರಾವ್, ಶಿವಮೊಗ್ಗ.

(ಕಳೆದವಾರದ ಶೇಷ)

ಒಂದು ಕಾಲದಲ್ಲಿ ಅಭಿವೃದ್ಧಿಸ್ಥಿತಿಯಲ್ಲಿದ್ದು, ಅವನತಿಯನ್ನು ಹೊಂದುತ್ತಿರುವ, ಇಲ್ಲವೆ ಸಾಕಷ್ಟು ಪ್ರಚಾರವಿಲ್ಲದೆ ಕೇವಲ ಪ್ರದರ್ಶನ ಮಂದಿರದ ವಸ್ತುಗಳಾಗಿರುವ ಮೈಸೂರಿನ ಗ್ರಾಮ ಕೈಗಾರಿಕೆಯ ಭಾಗ್ಯವನ್ನು ಕೊಂಚ ಮಟ್ಟಿಗೆ ಪರಿಶೀಲಿಸುವುದುತ್ತಮ.

ಮೈಸೂರು ಜಿಲ್ಲೆಯ ಮಂಡ್ಯ ತಾಲ್ಲೂಕಿನಲ್ಲಿ ಕಂಬಳಿಗಳು ತಯಾರಾಗುತ್ತವೆ. ಆದರೆ ಈ ಉದ್ಯಮಕ್ಕೆ ಸಾಕಷ್ಟು ಉತ್ತೇಜನವಿಲ್ಲ. ಆ ಕೆಲಸವನ್ನು ಬಿಟ್ಟು ಬಿಟ್ಟು ಗ್ರಾಮಸ್ಥರು ಹೆಚ್ಚಾಗಿ ಕೂಲಿ ಕೆಲಸಕ್ಕಾರಂಭಿಸಿದ್ದಾರೆ. ನಾಗಮಂಗಲದ ಲೋಹದ ಪಾತ್ರೆಗಳ ತಯಾರಿಕೆಯು ಅಷ್ಟಾಗಿ ನಡೆಯುತ್ತಿಲ್ಲ. ಕೇವಲ ಹೆಸರಿನಲ್ಲಿಯೇ ನಿಂತಿದೆ. ಮಳವಳ್ಳಿ ತಾಲ್ಲೂಕಿನಲ್ಲಿ ರೇಷ್ಮೆ ವ್ಯವಸಾಯವಿದ್ದು ಕೆಲವರು ರೇಷ್ಮೆ ನೂಲನ್ನು ತೆಗೆದು ಜೀವಿಸುತ್ತಿದ್ದಾರೆ. ಇಡಕೊಳದ ಚಾಪೆಯನ್ನು ಯಾರೂ ಮರೆಯುವಂತಿಲ್ಲ. ಹಾಸನ ಡಿಸ್ಟ್ರಿಕ್ಟಿನ ಶ್ರವಣಬೆಳಗೊಳದಲ್ಲಿ ಹಿತ್ತಾಳೆ ಪಾತ್ರೆಗಳು ತಯಾರಾಗುತ್ತವೆ. ಹಾಸನ ಟೋಪಿಗಳು ಹೆಸರುವಾಸಿಯಾಗಿದ್ದವು. ಬೇಲೂರು ಹಳೇಬಿಡುಗಳಲ್ಲಿನ ಹೊಯಿಸಳರ ಕಾಲದ ದೇವಸ್ಥಾನಗಳನ್ನು ನೋಡಿದರೆ ಒಂದೆ ಕಲ್ಲಿನಲ್ಲಿ ಕೆತ್ತನೆಯ ಕೆಲಸ ಮಾಡುವ ಎಂತೆಂತಹ ಕಲಾವಿದರಿದ್ದರೆಂಬುದು ತಿಳಿಯಬರುತ್ತೆ. ಆದರೆ ಈಗ ಆ ಜಿಲ್ಲೆಯಲ್ಲಿ ಹೆಸರಿಗೆ ಒಬ್ಬನಾದರೂ ಶಿಲ್ಪ ಕಲಾವಿದನು ಸಿಗುವುದು ಕಷ್ಟ. ಅಂದಿನ ಕೃತಿಯ ವೈಭವದ ಮೇಲೆಯೇ ನಮ್ಮ ಕೀರ್ತಿಧ್ವಜವನ್ನು ಎತ್ತಿ ಹಿಡಿಯಬೇಕಾಗಿದೆಯೇ ವಿನಃ ನಮ್ಮ ಕೃತ್ಯಗಳಿಗೆ ಸಾಕಷ್ಟು ಉತ್ತೇಜನವನ್ನು ಕೊಡದೆ ಆ ಅಮೋಘವಾದ ಕಲೆಯನ್ನೇ ಕಳೆದುಕೊಂಡಿದ್ದೇವೆ. ಕಡೂರು ಜಿಲ್ಲೆಯಲ್ಲಿ ಕೈ ಮಗ್ಗದ ಬಟ್ಟೆಗಳು ತಯಾರಾಗುವುದಲ್ಲದೆ ಕೆಲವು ಕಡೆ ಗಾಜಿನ ಬಳೆಗಳು ತಯಾರಾಗುತ್ತವೆ. ಗಾಜಿನ ಬಳೆಗಳ ತಯಾರಿಕೆಯಿಂದ ಹೊಟ್ಟೆ ತುಂಬದೆ ಜನಗಳು ಈಚೆಗೆ ಕಾಫಿ ತೋಟಗಳಲ್ಲಿ ಕೂಲಿಗಳಾಗಿದ್ದಾರೆ. ಶಿವಮೊಗ್ಗಾ ಜಿಲ್ಲೆಯ ಗಂಧದ ಗುಡಿಗಾರರ ಕೆಲಸವೂ ದಂತದ ಕೆತ್ತನೆಯ ಕೆಲಸವೂ ಶ್ರೇಷ್ಠವಾದುವು. ಇವು ಹಲವು ಕಡೆ ಮಾನ್ಯತೆಯನ್ನು ಪಡೆದಿವೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಚಿತ್ರದ ಕೆಲಸವೂ ಶಿವಮೊಗ್ಗೆಯ ಬಳೆ ಗಾಜಿನ ಬಳೆ ಕೈಗಾರಿಕೆಯೂ ಅಲ್ಲಲ್ಲಿ ಉಪಕಾರಿಯಾಗಿವೆ. ದಾವಣಗೆರೆಯ ಕಂಬಳಿಗಳನ್ನೂ ಮೊಳಕಾಲ್ಮುರುವಿನ ರೇಷ್ಮೆ ಬಟ್ಟೆಗಳನ್ನೂ ಯಾರೂ ಮರೆಯಲಾರರು. ಈ ಜಿಲ್ಲೆಯಲ್ಲಿ ಅನೇಕರು ಈ ವೃತ್ತಿಯಿಂದಲೇ ಜೀವಿಸುತ್ತಿದ್ದಾರೆ. ಇಲ್ಲಿ ಹತ್ತಿಯು ಹೇರಳವಾಗಿ ಬೆಳೆಯುವುದರಿಂದ ಖಾದಿ ಕೇಂದ್ರಗಳನ್ನು ಸ್ಥಾಪಿಸಬಹುದಾಗಿರುತ್ತೆ. ತುಮಕೂರು ಜಿಲ್ಲೆಯು ಚಿಕ್ಕ ಪುಟ್ಟ ಕೈಗಾರಿಕೆಯಲ್ಲಿ ಮುಖ್ಯವಾದುದು. ಪ್ರಯಾಣ ಮಾಡುವಾಗ ರೈಲ್ವೆ ನಿಲ್ದಾಣದಲ್ಲಿಯೇ ಅಲ್ಲಿನ ಶ್ರೇಷ್ಠ ಬಾಚಣಿಗೆಯನ್ನು ನೋಡಬಹುದು. ಇತರ ಮರದ ಸಾಮಾನುಗಳು, ಗಾಜಿನ ಬಳೆಗಳು, ಚಾಪೆ, ಹಿತ್ತಾಳೆ ಪಾತ್ರೆಗಳು, ರೇಷ್ಮೆ ವ್ಯವಸಾಯ, ಕಂಬಳಿ ದುಪಟಿಗಳು, ಬಳೆ ಇವೇ ಅಲ್ಲಿನ ಮುಖ್ಯ ಗ್ರಾಮ ಕೈಗಾರಿಕೆಗಳು. ಬೆಂಗಳೂರು ಜಿಲ್ಲೆಗೆ ಬಂದರೆ, ಚೆನ್ನಪಟ್ಟಣದ ಆಟದ ಸಾಮಾನುಗಳು, ದೊಡ್ಡಬಳ್ಳಾಪುರದ ಸೀರೆಗಳು, ಬೆಂಗಳೂರಿನ ಜಮಖಾನೆಗಳು ಮತ್ತು ರೇಷ್ಮೆ ಇವು ನಮ್ಮ ಗಮನವನ್ನು ಸೆಳೆಯದಿರವು. ದೇವನಹಳ್ಳಿಯಲ್ಲಿ ಕನ್ನಡಿ ವಿಗ್ರಹಗಳು ತಯಾರಾಗುತ್ತವೆ. ಕೋಲಾರ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೈ ಮಗ್ಗಗಳಿವೆ. ಅನೇಕರು ಈ ವೃತ್ತಿಯಿಂದಲೇ ಜೀವಿಸುತ್ತಾರೆ. ಕಂಬಳಿ ದುಪಟಿ ಮುಂತಾದವುಗಳು ವಿಶೇಷವಾಗಿ ತಯಾರಾಗುತ್ತವೆ.

ಸಮಗ್ರವಾಗಿ ನೋಡಿದಲ್ಲಿ ಗ್ರಾಮ ಕೈಗಾರಿಕೆಯಲ್ಲಿ ಮೈಸೂರು ಯಾವ ದೇಶಕ್ಕೂ ಹಿಂದಿಲ್ಲ. ಈ ಕ್ಷೇತ್ರದಲ್ಲಿ ಚೆನ್ನಪಟ್ಟಣದಲ್ಲಿ ಬಣ್ಣದ ಸಾಮಾನುಗಳು, ಸೊರಬದ ಗುಡಿಗಾರರ ಕೆತ್ತನೆ. ಕೆಲಸಗಳು ಇವೆರಡೇ ಮೈಸೂರಿಗೆ ಕೀರ್ತಿಯನ್ನು ತರುತ್ತವೆಂದು ಧಾರಾಳವಾಗಿ ಹೇಳಬಹುದು. ದೇಶದ ಸಂಪದಭಿವೃದ್ಧಿಗೆ ದೊಡ್ಡ ದೊಡ್ಡ ಕೈಗಾರಿಕೆಗಳೊಂದರಿಂದಲೇ ಅಲ್ಲದೆ ಅದರ ಹಿನ್ನಡೆಯಲ್ಲಿ ಗ್ರಾಮ ಕೈಗಾರಿಕೆಗಳಿಂದಲೂ ಸಹ ಹೆಚ್ಚು ಸಹಾಯವಾಗುತ್ತದೆ.

ತುಲನಾತ್ಮಕ ದೃಷ್ಟಿಯಿಂದ ಮೈಸೂರಿನ ಸ್ಥಿತಿಯನ್ನು ಪ್ರಕೃತದ ಸ್ಥಿತಿಯಲ್ಲಿ ಪರಿಶೀಲಿಸಿದಲ್ಲಿ ಎದ್ದು ಕಾಣುವುದು ನಾಡಿನ ಬಡತನ. ಕೃಷಿಯೊಂದರಿಂದಲೇ ಜನತೆಯ ಹಸಿವು ಅಡಗುವಂತಿಲ್ಲ. ದೊಡ್ಡ ದೊಡ್ಡ ಕೈಗಾರಿಕೆಯಿಂದ ಕೆಲವು ಕೂಲಿಗಾರರಿಗೆ ಅರೆ ಹೊಟ್ಟೆ ತುಂಬಬಹುದು. ಉಳಿದ ಬಹು ಸಂಖ್ಯಾತರು ಕೂಳಿಲ್ಲದೆ ಕೊರಗುತ್ತಿದ್ದಾರೆ. ಅವರ ಹಸಿವನ್ನು ಅಡಗಿಸಿ, ಬಡತನವನ್ನು ಹೋಗಲಾಡಿಸುವುದು ಸರ್ಕಾರದ ಕೆಲಸ ಒಂದೇ ಅಲ್ಲದೆ ಸಾರ್ವಜನಿಕರ ಮತ್ತು ನಾಡಹಿತೈಷಿಗಳ ಕರ್ತವ್ಯವಾಗಿರುತ್ತದೆ. ಗ್ರಾಮ ಕೈಗಾರಿಕೆಗೆ ಉತ್ತೇಜನ ಕೊಟ್ಟು ಅಭಿವೃದ್ಧಿ ಹೊಂದಿಸಿದರೆ ಬಡ ಗ್ರಾಮಸ್ಥರ ನಿರುದ್ಯೋಗಿಗಳು ಆ ಉದ್ಯಮದಲ್ಲಿ ತೊಡಗಿ ತಮ್ಮ ಜೀವನ ರಥವನ್ನು ಸುಗಮವಾಗಿ ಸಾಗಿಸಲನುಕೂಲವಾಗುತ್ತೆ. ನಾಡಬೆಂಬಲದ ಆಶ್ರಯದಲ್ಲಿ ಜನತೆಯ ಏಳಿಗೆಯು ಬಹುತರವಾಗಿ ವೃದ್ಧಿಗೊಂಡು ಮುಂದುವರಿದ ದೇಶಗಳಿಗೆ ಸಮನಾಗಿ ಸ್ವತಂತ್ರವಾಗಿ ನಿಲ್ಲಲನುವಾಗುತ್ತವೆ.

ಮೈಸೂರಿನಲ್ಲಿ ಇದುವರೆವಿಗೂ ಕೈಗಾರಿಕಾಭಿವೃದ್ಧಿಗೆ ಬೆಂಬಲಕೊಟ್ಟಿರುವುದು ಸರ್ಕಾರವೇ. ಸಂಸ್ಥಾನದ ಏಳಿಗೆಯಲ್ಲಿ ಪ್ರತಿಯೊಂದು ಕಾರ್ಯ ಕ್ಷೇತ್ರದಲ್ಲಿಯೂ ಕೇವಲ ಸರ್ಕಾರದ ಬೆಂಬಲವನ್ನೇ ಅಪೇಕ್ಷಿಸುವುದು ಸರಿಯೂ ಅಲ್ಲ ಮತ್ತು ಕ್ರಮಬದ್ಧವೂ ಅಲ್ಲ. ಆ ಹೊಣೆ ಅಷ್ಟೇ ಸಮನಾಗಿ ಸಾರ್ವಜನಿಕರ ಮೇಲೆಯೂ ಇದೆ ಎನ್ನಬಹುದು. ಸರ್ಕಾರದವರು ಗ್ರಾಮ ಕೈಗಾರಿಕೆಯ ವಿಷಯದಲ್ಲಿ ವೃತ್ತಿಶಿಕ್ಷಣವನ್ನು ಕೊಡುತ್ತಿದ್ದಾರೆ. ಸರ್ಕಾರದ ನೆರವಿಗೆ ಶಾಲೆಯಲ್ಲಿಯೂ, ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್ ಮುಂತಾದ ಶಿಕ್ಷಣ ಶಾಲೆಗಳಲ್ಲಿಯೂ ಶಿಕ್ಷಣ ಕಾರ್ಯಕ್ರಮವು ನಡೆಯುತ್ತಿದೆ. ಬಟ್ಟೆ ನೇಯುವುದನ್ನು ಕಲಿಸುವ ಶಾಲೆ ಮುಂತಾದ ಇತರ ಶಾಲೆಗಳನ್ನು ಅಲ್ಲಲ್ಲಿ ತೆರೆದಿದ್ದಾರೆ. ಇಂಡಸ್ಟ್ರಿಯಲ್ ಸ್ಕೂಲುಗಳಲ್ಲಿಯೂ ಸಹ ಚಿತ್ರದ ಕೆಲಸ ಮರದ ಕೆಲಸ ಮುಂತಾದ ವೃತ್ತಿಯಲ್ಲಿ ಶಿಕ್ಷಣವನ್ನು ಕೊಡುತ್ತಿದ್ದಾರೆ. ಮೈಸೂರಿನ ಗ್ರಾಮ ಕೈಗಾರಿಕೆಗಳ ಏಳಿಗೆಗೆ ಇಷ್ಟು ಸಾಲದು. ಇದಕ್ಕೂ ಮಿಗಿಲಾದ ಶಿಕ್ಷಣವೂ ಪ್ರೋತ್ಸಾಹಕ ಸಂಘಗಳು ಆವಶ್ಯಕ. ಅಲ್ಲದೆ ತಯಾರಾದ ಸಾಮಾನುಗಳ ಉಪಯೋಗವನ್ನು ಜನತೆಯಲ್ಲಿ ಹರಡಿ ವ್ಯಾಪಾರ ದೃಷ್ಟಿಯಿಂದ ಪ್ರಚಾರ ಕಾರ್ಯವನ್ನು ಕೈಗೊಳ್ಳುವುದೂ ಸಹ ಅವಶ್ಯಕವಾಗಿದೆ. ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಸಿಕ್ಕಿ ಅವು ಅಭಿವೃದ್ಧಿ ಹೊಂದಬಹುದು. ಅದರ ತಯಾರಾದ ಸಾಮಾನುಗಳು ಹೊರಗಡೆ ಮಾರಾಟವಾಗಬೇಕು. ಹೀಗೆ ಮಾರಾಟವಾಗುವುದರಿಂದ ಕಸುಬಿಗರಿಗೆ ದೊರಕುವ ಉತ್ತೇಜನ ಮುಖ್ಯವಾದುದು. ಇವುಗಳನ್ನು ಒಂದು ಶಿಸ್ತಿಗೆ ಅಧೀನವಾಗಿ ಸಾಧಿಸುವುದು ಸಾರ್ವಜನಿಕರ ಕರ್ತವ್ಯ. ಮೇಧಾವಿಗಳ ಸಮಿತಿಯೊಂದು ರಚನೆಯಾಗಿ, ಅವರು ಇದಕ್ಕೆ ಗಮನ ಕೊಡುವುದರ ಮೂಲಕವಾಗಿ ತಮ್ಮ ಸಹಕಾರವನ್ನೀಯಬೇಕಾಗಿದೆ. ಆ ಸಮಿತಿಯು ಈ ಕ್ಷೇತ್ರದಲ್ಲಿ ವೃತ್ತಿ ಶಿಕ್ಷಣ, ಉದ್ಯಮದ ಬೆಳವಣಿಗೆ, ಹೊಸ ಹೊಸ ಕ್ರಮಗಳ ಅನ್ವೇಷಣ, ಮುಖ್ಯವಾಗಿ ಪ್ರಚಾರ ಕಾರ್ಯ ಮತ್ತು ವ್ಯಾಪಾರೋದ್ಯಮ ಈ ಕೆಲಸಗಳನ್ನು ಕೈಗೊಳ್ಳಬೇಕು. ಇದರ ನೆರವಿಗೆ ಸಾರ್ವಜನಿಕರು ಬರಬೇಕು.

ಈ ಮೂಲ ತತ್ವವನ್ನಿಟ್ಟುಕೊಂಡೇ ಅಖಿಲ ಭಾರತ ಗ್ರಾಮ ಕೈಗಾರಿಕೆಗಳ ಸಂಘವು ಕೆಲಸಮಾಡುತ್ತಿದೆ. ಇದು ಜನತೆಯ ಆರ್ಥಿಕ ಏಳಿಗೆಯ ಹಿತದಿಂದ, ನಾಡ ಸಂಪದಭಿವೃದ್ಧಿಯ ದೃಷ್ಟಿಯಿಂದ ಎಲ್ಲದರಿಂದಲೂ ಮುಖ್ಯವಾಗಿ ಬಂಡವಾಳಗಾರರಿಂದ ಸಂರಕ್ಷಿಸಲ್ಪಡಬೇಕು. ಇದರಿಂದ ಆರ್ಥಿಕ ತತ್ವಾನುಸಾರ ನಮ್ಮ ಹಣ ನಮ್ಮಲ್ಲೇ ಉಳಿಯುವುದಲ್ಲದೆ ನಮ್ಮ ಗ್ರಾಮಗಳ ಜನತೆಯನ್ನು ಹೀಗೆ ನಾಡು ಅಭಿವೃದ್ಧಿ ಹೊಂದುತ್ತದೆ; ನಶಿಸಿಹೋಗುತ್ತಿರುವ ಕೈಗಾರಿಕೆಯು ಬೆಳೆದು ನಮ್ಮ ಕೀರ್ತಿಯು ಪುನಃ ಮೆರೆಯುವುದು; ಪ್ರದರ್ಶನ ಶಾಲೆಗಳಲ್ಲಿ ಹುದುಗಿದ್ದ ವಸ್ತುಗಳು ಮನೆ ಮನೆಯ ಉಪಕರಣಗಳಾಗುವುವು. ಇವೆಲ್ಲವು ನಾಡ ಮಕ್ಕಳ ಉದಾರ ಮತ್ತು ಸಂಪೂರ್ಣ ಬೆಂಬಲದ ಆಶೆಯ ಮೇಲೆಯೇ ನಿಂತಿರುತ್ತದೆ. ಈ ಜಾಗೃತಿ ಅವರಲ್ಲಿ ಮೂಡಿ ಹೆಚ್ಚಿನ ಉತ್ಪತ್ತಿಯಾಗಬೇಕು.

ಹರಿಜನರಿಗೆ ದೇವಾಲಯ ಪ್ರವೇಶ

ಇಂದೂರು ಮಹಾರಾಜರ ಘೋಷಣೆ

ಇಂದೂರ್ ಮಹಾರಾಜರು ಒಂದು ಘೋಷಣೆ ಹೊರಡಿಸಿ ಸಂಸ್ಥಾನದಲ್ಲಿ ಸರ್ವ ದೇವಾಲಯಗಳನ್ನೂ (ಸರ್ಕಾರದ ದೇವಸ್ಥಾನಗಳು) ಹರಿಜನರ ಪ್ರವೇಶಕ್ಕೆ ತೆರೆಯಬೇಕೆಂಬುದಾಗಿ ಆಜ್ಞೆ ಮಾಡಿರುವರು. ಅಲ್ಲದೆ ಸಾರ್ವಜನಿಕ ಬಾವಿಗಳು, ಸಾರ್ವಜನಿಕ ಸ್ಥಳಗಳು, ರೆಸ್ಟೋರೆಂಟುಗಳು, ವಾಹನಗಳು—ಇವುಗಳನ್ನು ಹರಿಜನರು ಯಾವ ನಿರ್ಬಂಧವೂ ಇಲ್ಲದೆ ಉಪಯೋಗಿಸಬಹುದೆಂದೂ ಆಜ್ಞೆ ಮಾಡಿರುವರು. ಎಲ್ಲಿ ಬೇಕಾದರೂ ಹರಿಜನರು ಮನೆಗಳನ್ನು ಕಟ್ಟಿಸಿಕೊಳ್ಳಬಹುದು.

"ಮಹಾರಾಜ ಹೋಳ್ಕರರಿಗೆ ಹಿಂದೂ ಜನಾಂಗದ ಒಂದು ದೊಡ್ಡ ಭಾಗವನ್ನು ಮತದ ಹೆಸರಿನಲ್ಲಿ ಕೀಳು ಜನರೆಂದು ಕರೆಯುತ್ತಿರುವುದು ಒಪ್ಪುವುದಿಲ್ಲ. ಇದು ಧಾರ್ಮಿಕವಾಗಿ ಸರಿಯಲ್ಲ ನೈತಿಕವಾಗಿಯಂತೂ ಇದು ಸರಿಯಾದುದೇ ಅಲ್ಲ."

ವೇದಾವತಿ ನದಿಗೆ ಸೇತುವೆ

ಚಿತ್ರದುರ್ಗ ಡಿಸ್ಟ್ರಿಕ್ಟಿನ ಉತ್ತರ ಭಾಗ ವೇದಾವತಿ ನದಿಯ ಮೇಲೆ ಸೇತುವೆಯನ್ನು ಹಾಕಲು ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡಿನವರು ಸರಕಾರದ ಒಪ್ಪಿಗೆ ಮೇರೆಗೆ ಕಾರ್ಯವನ್ನು ಆರಂಭ ಮಾಡಿದ್ದಾರೆ. ಈ ಸೇತುವೆಯನ್ನು ಕಟ್ಟಲು ೩ ಲಕ್ಷ ರೂಗಳು ವೆಚ್ಚವಾಗುವುದು. ಸೇತುವೆಯ ನಿರ್ಮಾಣದಿಂದ ಮೈಸೂರು ಸಂಸ್ಥಾನದ ಉತ್ತರ ಭಾಗಕ್ಕೂ ಮದರಾಸ್ ಪ್ರಾಂತದ ಉತ್ತರ ಭಾಗಕ್ಕೂ ನೇರವಾದ ಮತ್ತು ಸಂಚಾರಕ್ಕೆ ಅನುಕೂಲವಾದ ರಸ್ತೆ ಹಾಕಲು ಅನುಕೂಲವಾಗುವುದು.

ಮೈಸೂರು ಸೀನಿಯರ್ ಸರ್ಜನ್

ಮೈಸೂರು ಸರ್ಕಾರದ ಸೀನಿಯರ್ ಸರ್ಜನ್ನರಾಗಿರುವ ಶಸ್ತ್ರವೈದ್ಯ ಪ್ರವೀಣ ಡಾ|| ಎಸ್. ಸುಬ್ಬರಾಯರು ಸದ್ಯದಲ್ಲಿಯೇ ನಿವೃತ್ತರಾಗುವರು. ಅವರ ಸ್ಥಾನಕ್ಕೆ ರಾಜಸೇವಾಸಕ್ತ ಡಾ|| ಬಿ. ಕೆ. ನಾರಾಯಣರಾಯರನ್ನು ಸರ್ಕಾರದವರು ನೇಮಕ ಮಾಡುವರು.

ಸಾಧ್ವಿ

೭—೩—೩೮ ನೇ ಸೋಮವಾರ

ಕೃತಜ್ಞತೆ

ಕಳೆದ ವರ್ಷ ... ... ಉದ್ಭವಿಸಿದ ... ... ಸಹಾನುಭೂತಿಯನ್ನು ... ... ಪೂರ್ವಕವಾಗಿ ... ... ಸ್ಮರಿಸು ವೆವು.

ಸಾಧ್ವಿಯ ... ... ಅನೇಕ ವಿಧವಾದ ... ... ಕಾರ್ಯಗಳಲ್ಲಿ ಸಹ ... ... ಪತ್ರಿಕೆ ... ... ನಮ್ಮ ... ... ಬೇಕಾಗಿ ಬೇಡುತ್ತೇವೆ.

... ... ಪತ್ರಿಕೆಗಳ ... ... ಸಲ್ಲಿಸುತ್ತೇವೆ.

ರಾಜೀನಾಮಾ ತರಂಗ

ಇದು ರಾಜೀನಾಮೆಗಳ ಕಾಲ. ಇಷ್ಟು ದಿವಸ ಅಸೆಂಬ್ಲಿಗಳಲ್ಲಿಯೂ ಕೌನ್ಸಿಲ್ಲುಗಳ ಲ್ಲಿಯೂ ಹೋಗಿ ಕುಳಿತುಕೊಳ್ಳುವುದೇ ಒಂದು ಭೂಷಣವಾಗಿತ್ತು. ಅದಕ್ಕಾಗಿ ಎಷ್ಟೆಷ್ಟೋ ಕಷ್ಟನಷ್ಟಗಳನ್ನು ಜನರು ಅನುಭವಿಸುತ್ತಿದ್ದರು. ಈಗ ಅದೆಲ್ಲಾ ಹೋಯಿತು. ಹಾಗೆ ಹೋಗಲು ಕಾರಣ ... ... ಆತ್ಮಗೌರವವನ್ನು ... ... ಬಿಡುವುದಿಲ್ಲವೆಂದೂ ತಿಳಿಯುವ ಕಾಲ ಒದಗಿ ಬಂದಿದೆ. ಇನ್ನೇ ... ... ತಮ್ಮ ಆತ್ಮಗೌರವಕ್ಕೂ ಸ್ವಾತಂತ್ರ್ಯಕ್ಕೂ ಧಕ್ಕೆ ಬರುವುದೆಂದು ತಿಳಿದೊಡನೆ ತಮ್ಮ ಸ್ಥಾನ ಮಾನಗಳಿಗೆ ರಾಜೀನಾಮೆ ಕೊಡುವುದು ಇಂದಿನ ಹೊಸ ಪದ್ಧತಿಯಾಗಿದೆ. ಇದು ನಮ್ಮ ರಾಜಕೀಯ ಜೀವನದಲ್ಲಿ ... ...

ಈ ದೃಷ್ಟಿಯಿಂದ ನೋಡಿದ್ದೇ ... ... ಜನರ ಪ್ರತಿನಿಧಿಗಳು ನಡೆಸಬಹುದಾದ ಅಧಿಕಾರವಾದರೂ ಯಾವುದು?

ಪ್ರಜಾ ಸ್ವಾತಂತ್ರ್ಯಕ್ಕೆ ಬಂದಕ್ಕೆ ಅಡ್ಡಿ ಆತಂಕಗಳನ್ನೂ ಈ ರೀತಿಗಳಲ್ಲಿ ಸ್ವಲ್ಪ ಭಟಿಸುವುದರಿಂದಲೇ ರಾಜಕೀಯ ಪ್ರಗತಿ ಯು ಬೆಳೆಯುವುದು.

'ಚಿತ್ರ ಸಮಾಚಾರ'

"ಚಿತ್ರ ಸಮಾಚಾರ" ಎಂಬ ಮಾಸ ಪತ್ರಿಕೆಯ ಮೊದಲನೇ ಸಂಪುಟದ ಮೊದಲನೇ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಇದರ ಸಂಪಾದಕರು ಶ್ರೀ ಹೆಚ್. ಆರ್. ಕೃಷ್ಣಮೂರ್ತಿಯವರು. ವಾರ್ಷಿಕ ಚಂದಾ ರೂ.೧ ಮತ್ತು ಬಿಡಿಪತ್ರಿಕೆ ೨ ಆ.

ಕರ್ನಾಟಕ, ದಕ್ಷಿಣ ಭಾರತ, ಅಖಿಲ ಭಾರತ, ವಿದೇಶಿ ಚಲನ ಚಿತ್ರಗಳ ಸುದ್ದಿಯನ್ನೂ, ಅದಕ್ಕೆ ಸಿಕ್ಕಿರುವ ಸಂಬಂಧವನ್ನು ಪರಿಚಯಿಸುವ ಸಂಗತಿಯನ್ನೂ, ಚಲನ ಚಿತ್ರ ಕೈಗಾರಿಕೆಗೆ ಸಂಬಂಧಿಸಿದ ಲೇಖನಗಳನ್ನೂ, ಕತೆಗಳನ್ನೂ, ಇನ್ನೂ ಇತರ ಉಪಯೋಗಕರವಾದ ವಿಷಯಗಳನ್ನು ಒಳಗೊಂಡು ಸುಂದರವಾದ ಚಿತ್ರಗಳೊಡನೆ ಚಿತ್ರ ಸಮಾಚಾರವನ್ನು ಪ್ರಕಟಿಸಿರು ವುದು ಸಂತೋಷಕರ ಆಗಿದೆ.

ಈ ಪತ್ರಿಕೆಗೆ ಕನ್ನಡಿಗರೆಲ್ಲರೂ ಪ್ರೋತ್ಸಾಹವನ್ನು ನೀಡಬೇಕೆಂದು ...

ಸಾಧ್ವಿ

ದ್ವಿತೀಯ ವಾರ್ಷಿಕೋತ್ಸವ

"ಸಾಧ್ವಿ"ಯ ಎರಡನೆಯ ವಾರ್ಷಿಕೋತ್ಸವದ ಪ್ರಯುಕ್ತ ೩—೩—೩೮ ನೇ ಗುರುವಾರ ಸಾಯಂಕಾಲ ಪ್ಯಾಲೇಸ್ ಟೌನ್ ಹಾಲಿನಲ್ಲಿ ದೊಡ್ಡ ಬಹಿರಂಗ ಸಭೆ ನಡೆಯಿತು. ಸಾವಿರಾರು ಜನ ಮಹಿಳೆಯರೂ, ಮಹನೀಯರೂ ನೆರೆದಿದ್ದರು. ಡೆಪ್ಯುಟಿ ಎಜ್ಯುಕೇಷನ್ ಕಮೀಷನರಾದ ಶ್ರೀ ಆಂಬಳೆ ಸುಬ್ರಹ್ಮಣ್ಯ ಅಯ್ಯರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಕುಮಾರಿ ... ... ಪ್ರಾರ್ಥನೆಯೊಡನೆ ಸಭಾಕಾರ್ಯಕ್ರಮವು ಆರಂಭವಾಯಿತು. ಆಸ್ಥಾನ ಪಂಡಿತರಾದ ಶ್ರೀಮಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಂದ ರಚಿತವಾದ ಮಂಗಳ ಪದ್ಯ ಮಾಲೆಯನ್ನು ಶ್ರೀ ... ... ಸುಶ್ರಾವ್ಯವಾಗಿ ಹಾಡಿದರು.

ಸಂಪಾದಕರಾದ ಶ್ರೀ ರಂಗಯ್ಯನವರು ಸಾಧ್ವಿಯ ... ... ಕೊಡಬೇಕೆಂದು ಕೋರಿದರು.

ಧನ್ಯವಾದದ ... ... ಶ್ರೀ ... ... ಕೃಷ್ಣರಾಯರು "ಕರ್ನಾಟಕ ಪತ್ರಿಕೋದ್ಯಮ" ಎಂಬ ವಿಷಯವಾಗಿ ಸ್ವಾರಸ್ಯವಾದ ಭಾಷಣವನ್ನಿತ್ತರು. ಪತ್ರಿಕೆಗಳನ್ನು ನಡೆಸುವುದು ಎಷ್ಟು ಕಷ್ಟತರವಾದ ಕೆಲಸವೆಂಬುವನ್ನು ವಿವರಿಸಿದರು. ಬುದ್ಧಿಶಕ್ತಿಯ ಮೇಲೆ ನಡೆವಂತೆಯೂ, ಮನುಷ್ಯಹಾಸಿಗೆಯ ಮೇಲೆ ಮಲಗುವಂತೆಯೂ ಶಕ್ತಿಕಾಪ್ತಿಯ ಇದೆ ಪುದೆಂದು ತಿಳಿಸಿದರು. ಬಹಳ ಹಿಂದಿನ ಕಾಲದಿಂದ ಇಂದಿನವರೆಗೆ ಕರ್ನಾಟಕದಲ್ಲಿ ಪತ್ರಿಕಾ ಚಾಲನವು ಹೇಗೆ ಬೆಳೆಯುತ್ತ ಬಂದಿದೆಯೆಂ ಬುದನ್ನು ವರ್ಣಿಸಿದರು. ಅವರ ಭಾಷಣದ ವಿವರವನ್ನು ಮುಂದೆ ಕೊಡುವೆವು.

ಅಧ್ಯಕ್ಷರು ಭಾಷಣ ಮಾಡಿ ಸಾಧ್ವಿಗೆ ಯಶಸ್ಸನ್ನು ಕೋರಿದರು. "ಅನಂತರ ಆಸ್ಥಾನ ವಿದ್ವಾನ್ ಎಸ್. ರಾಮರಾಯರಿಂದ ಆಮೋಘವಾದ ಸಂಗೀತವು ನಡೆಯಿತು. ಅದರಲ್ಲಿ ವಿದ್ವಾನ್ ಹೆಚ್. ಎಂ. ರಾಮರಾಯರ ಪಿಟೀಲು, ಆಸ್ಥಾನ ವಿದ್ವಾನ್ ಬಿ. ಶೇಷಪ್ಪನವರ ತಬಲಾ, ... ಸಂಗೀತದ ಕಳೆಯನ್ನು ಇಮ್ಮಡಿ ಮಾಡಿದವು.

... ... ಸಭೆಯು ಮುಕ್ತಾಯವಾಯಿತು.

ಇದೇ ಸಂಬಂಧವಾಗಿ ೪ನೇ ಶುಕ್ರವಾರ ಸಾಯಂಕಾಲ ಶ್ರೀ ಕೃಷ್ಣಭವನದಲ್ಲಿ ಒಂದು ಸಂತೋಷ ಕೂಟವು ನಡೆಯಿತು. ಅನೇಕ ಜನ ಮಾನ್ಯ ಮಹನೀಯರುಗಳೂ, ಮಹಿಳೆಯರೂ ಬಂದಿದ್ದರು. ಫಲಹಾರ

॥ ಶುಭಮಸ್ತು ॥

ಸಾಧ್ವೀ ಪತ್ರಿಕೆಯ ದ್ವಿತೀಯ ವಾರ್ಷಿಕೋತ್ಸವ

ಮಂಗಳ ಪದ್ಯಮಾಲಾ

ಭಾಮಿನಿ ಷಟ್ಪದಿ

ಸಗರ ಮಾಂಧಾತಾದಿವಿಶ್ರುತ ।
ಸುಗುಣ ಚಕ್ರೇಶ್ವರರ ಬಿರುದಿಂ ।
ಸೊಗಯಿಸುತ್ತಿಹ ನಗರದ—
ರಂಗದ ಮಧ್ಯ ಗುರುವರರ
ಮಿಗೆ ಮೆರೆವ ಸಿದ್ಧಾಂತ ಮಂದಿರ ।
ಜಗಕೆಸೆವ ... ... ಸತಿ ।
ಬಗೆ ಬಗೆಯ ಕಳೆಗಳ್—
... ... ಭರತಖಂಡವದೇ ॥ ೧

ಕಾಲಕರ್ಮದ ಮಹಿಮೆಯಿಂ ।
... ... ।
ಕೊಳೆಯಿಸ್ತೋದಮ ... ...
... ...
... ... ।
... ... ।
ಬಾಲಗಂಗಾಧರ ಮಹೋದಯ
ಮುಖ್ಯ ನೇತೃಗಳಿಂ ॥ ೨

ಇವರ ನೋಳ್ಪಿಂದ್ರಿಯದ ಗಮನಿಸಿ ।
ಸವೆದರಾ ಗಾಂಧೀ ಮಹಾತ್ಮರು ।
ಜವದವರು ಮೋಹನ ಮುಖಾದರು
ಹಲರು ತಿಳಿದವರು
ಅವರದನುಸರಿಸುತ್ತಿ ಶಾತನು ।
ಮುಂದಿರಲು ಬಳಲಿದನು ನಾಡಿಗೆ ।
ತನೆಬೆಯೆಬೆಸುತೇಳ್ಗೆಯನು—
ವೆಂಕಟಕೃಷ್ಣಯ್ಯ ಸಮಯಂ ॥ ೩

ನಾಡಿನೇಳ್ಗೆಯ ಬಯಸಿ ಸಲವಿಂ ।
ಮೂಡಿಸಿತ್ತದ ಸತಿ ಸಮ್ಮ ಸಾಧ್ವಿಯ ।
ನಾಡೆ ವೆಂಕಟಕೃಷ್ಣಯ್ಯನ
ನೆನೆಯುತಡಿಗಡಿಗೂ
ಮೂಡುತಿರ್ಪುದು ದೇಶಸೇವೆಯೆ ।
ನೀಡುತಿರ್ಪುದು ಮುಂದಿಗರಿವನು ।
ರೂಢಿಸಿರ್ಪುದು ದೇಶಭಕ್ತಿಯ
ನೆರೆಯೊಳುತ್ತಮರೊಳಗೆ ॥ ೪

ಇಂದು ಸಾಧ್ವಿಯ ವಾರ್ಷಿಕೋತ್ಸವ ।
ದಿಂದ ನಮ್ಮೊಂದಿಗರ ಚೆರದಿರು ।
ಪೊಂದು ಸುಖಕರ ಯೋಗದಿಂದೀ—
ಸುದಿನ ಭಾವಿಸಲು ।
ಮುಂದೆ ಹರಸಲಿ ಸಾಧ್ವಿಯನಲ್ಲಲ ।
ದಿಂದ ... ... ।
ಸಂದಿಸಲಿ ಗೆಲವಾಗಲಿನ್ನು—
ನಾಡು ... ... ॥ ೫

ಆಸ್ಥಾನ ಪಂಡಿತ,
ನಂಜನಗೂಡು ಶ್ರೀಕಂಠ ಶಾಸ್ತ್ರೀ

... ... ಶ್ರೀ ... ರಂಗಯ್ಯನವರ ... ... ವಂದಿಸಿದರು. ಶ್ರೀ ... ... ಭಾಷಣ ಮಾಡಿದರು. ವಂದೇ ಮಾತರ ಗೀತೆಯೊಡನೆ ಸಭೆಯು ಮುಕ್ತಾಯ ವಾಯಿತು.

ಪೊಗದಿಯ ಹೊರೆ

ಸಂಪೂರ್ಣವಾಗಿ ಹೋಗಬೇಕು

ಬೆಂಗಳೂರಿನ ಪ್ರಮುಖ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಕೆ. ಟಿ. ಭಾಷ್ಯಂರವರು ಈ ಕೆಳಗೆ ಕಂಡ ಹೇಳಿಕೆಯನ್ನು ಕೊಟ್ಟಿದ್ದಾರೆ:—

"ಪೊಗದಿಯನ್ನು ಕಡಿಮೆಮಾಡಬೇಕೆಂದಿರುವುದಕ್ಕೆ ನಾವು ಸರ್ ಜೇಮ್ಸ್ ಗ್ರಿಗ್‌ರಿಗೂ ಭಾರತೀಯ ಸರಕಾರಕ್ಕೂ ಬಹಳ ಕೃತಜ್ಞರು. ಫೆಡರಲ್ ಆರ್ಥ ಉಪಸಮಿತಿಯ ಸಲಹೆಯನ್ನು ಶಿಫಾರಸು ಮಾಡುವ ೧೯೩೨ ನೇ ಇಸವಿಯ ಡೇವಿಡ್ಸನ್ ಸಮಿತಿಯ ವರದಿಯ ಪ್ರಕಾರ ನಮಗೆ ಪೊಗದಿಯಲ್ಲಿ ೭,೭೬,೦೦೦ ರೂ. ಕಡಿಮೆಯಾಗುವುದು. ಸಂಸ್ಥಾನದ ಆದಾಯದ ಶೇಕಡ ೫ ಕ್ಕಿಂತ ಪೊಗದಿಯು ಹೆಚ್ಚಾಗಿದ್ದರೆ ಅದನ್ನು ಆದಾಯದ ಶೇಕಡ ೫ ಕ್ಕೆ ತಕ್ಷಣವೇ ಇಳಿಸಬೇಕೆಂಬುದೇ ಸಲಹೆಯಾಗಿತ್ತು.

"ಇದನ್ನು ಆಚರಣೆಗೆ ತಂದಿದ್ದರೆ ಈ ವರ್ಷದವರೆಗೆ ಅರ್ಧಕೋಟಿ ರೂಪಾಯಿಗಳಷ್ಟು ನಮಗೆ ಉಳಿತಾಯವಾಗುತ್ತಿತ್ತು. ನಾವು ಅನೇಕ ವರ್ಷಗಳವರೆಗೆ ಆದಾಯದ ಶೇ|| ೧೦ ಕ್ಕಿಂತ ಹೆಚ್ಚಾಗಿ ಪೊಗದಿ ಕೊಟ್ಟಿದ್ದೇವೆ. ಲಾರ್ಡ್ ಇರ್ವಿನ್‌ರು ಪೊಗದಿಯನ್ನು ೩೫|| ಲಕ್ಷಕ್ಕೆ ಇಳಿಸಿದರು. ೩೫|| ಲಕ್ಷ ರೂ ಎಂದರೆ ಸಂಸ್ಥಾನದ ಆದಾಯದಲ್ಲಿ ನೂರಾರು ಶೇಕಡ ೭ ರಷ್ಟು. ಮುಖ್ಯವಾದ ಸಂಸ್ಥಾನಗಳಲ್ಲಿ ಪೊಗದಿಯ ಭಾರವು ಮೈಸೂರಿನ ಮೇಲೆ ಹೆಚ್ಚಾಗಿ ಬಿದ್ದಿದೆ ಎಂಬುದು ಡೇವಿಡ್ಸನ್ ಸಮಿತಿಯು ಕೊಟ್ಟಿರುವ ಈ ಪಟ್ಟಿಯಿಂದ ಗೊತ್ತಾಗುತ್ತದೆ.

"ಹೈದರಾಬಾದ್, ಪೊಗದಿ ಇಲ್ಲ; ಬರೋಡ, ಶೇ ೧.೨೩ ಕೊಚಿನ್ ಶೇ ೩.೬೨; ತಿರುವಾಂಕೂರು, ಶೇ ೩.೨ ಮತ್ತು ಮೈಸೂರು, ಶೇ ೭.೧.

"ಆದಾಯದಲ್ಲಿ ಇಷ್ಟೊಂದು ದೊಡ್ಡ ಭಾಗವನ್ನು ಕೊಟ್ಟುಬಿಡುವುದು ನಮಗೆ ಬಹಳ ತೊಂದರೆ. ಈಗ ಕೊಡಬೇಕೆಂದಿರುವ ಪರಿಹಾರವು ಬಹಳ ನಿಧಾನವಾಗಿ ಬಂದಿದ್ದರೂ, ಸ್ವಲ್ಪ ಸಾಧಾರಣವಾಗಿದ್ದರೂ ನಾವು ಕೃತಜ್ಞರು.

"ಆದರೆ ಧಾರ್ಮಿಕ ದೃಷ್ಟಿಯಿಂದ ಪೊಗದಿಯನ್ನು ತಕ್ಷಣವೇ ತೆಗೆದುಹಾಕಬೇಕೆಂದು ನಾವು ಹೇಳಬೇಕಾಗಿದೆ. ತಡಮಾಡದೆ ಪೊಗದಿಯನ್ನು ತೆಗೆದುಹಾಕಲಾಗುವುದೆಂದು ನಾವು ನಿರೀಕ್ಷಿಸುತ್ತೇವೆ.

"ವರ್ಷಂಪ್ರತಿ ೭ ಲಕ್ಷಕ್ಕೆ ಮೇಲ್ಪಟ್ಟು ಮೈಸೂರು ಸರ್ಕಾರಕ್ಕೆ ಉಳಿತಾಯವಾಗುವುದಕ್ಕೆ ನಾವು ಸರಕಾರವನ್ನು ಅಭಿನಂದಿಸಬೇಕಾಗಿದೆ. ಜನರನ್ನೂ ಅಭಿನಂದಿಸಬಹುದು ಸ್ವಲ್ಪವಿದ್ದರೆ ಚೆನ್ನಾಗಿರುತ್ತಿತ್ತೆಂದು ನನ್ನ ಅಭಿ... ಉಳಿತಾಯವಾಗುವ ಹಣವು ಹೇಗೆ ವಿನಿಯೋಗವಾಗುವುದೋ ಎಂಬುದನ್ನು ಇನ್ನೂ ಪ್ರಕಟಿಸಿಲ್ಲ. ಹಿಂದಿನ ಅನುಭವವು ಉತ್ಸಾಹದಾಯಕವಾಗಿಲ್ಲ. ಉಳಿತಾಯವನ್ನು ಸಂಸ್ಥಾನದಲ್ಲಿನ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಉಪಯೋಗಿಸುವರೆಂದು ನಾನು ಆಶಿಸುತ್ತೇನೆ. ಸಂಸ್ಥಾನದಲ್ಲಿ ಅಕ್ಷರಸ್ಥರ ಸಂಖ್ಯೆಯು ಬಹಳ ಕಡಿಮೆಯಾಗಿದೆ. ಸಂಸ್ಥಾನವು ಪ್ರಗತಿಮಾರ್ಗದಲ್ಲಿ ಮುಂದುವರಿಯಬೇಕಾದರೆ ಅಕ್ಷರತೆಯನ್ನು ಬಹುಮಟ್ಟಿಗೆ ಹೆಚ್ಚಿಸಬೇಕು."

ದಿವಾನರ ಟೀಕೆ

ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಈ ರೀತಿ ಹೇಳಿಕೆ ಕೊಟ್ಟಿದ್ದಾರೆ:—

"ಕರ್ಣಾಟಕ ಸಾಹಿತ್ಯ ಪರಿಷತ್ತಿನಲ್ಲಿ ದಿವಾನರು ಇತ್ತ ಭಾಷಣದ ಕೊನೆಯ ಭಾಗವು ಅಪ್ರಕೃತವೂ, ಶೋಚನೀಯವೂ ಆಗಿದೆ. ಸಂತೋಷದಾಯಕವಾದ ಆ ಕೂಟದಲ್ಲಿ ಇದು ಅಸಮಾಧಾನವನ್ನುಂಟುಮಾಡಿತು. ಈ ಭಾಗವು ಆ ಸಂದರ್ಭಕ್ಕೆ ಸ್ವಲ್ಪವೂ ಸಂಬಂಧ ಹೊಂದಿಲ್ಲ. ಬಿಹಾರ್ ಮುಖ್ಯ ಮಂತ್ರಿಗಳಾದ ಶ್ರೀ ಕೃಷ್ಣಸಿನ್ಹರವರ ವಿಷಯದಲ್ಲಿ ತೊಟ್ಟ ಛಲವು ಕೋಪದಿಂದ ಕೂಡಿದೆ. ಇದಕ್ಕೆ ಅಜ್ಞಾನದ ಹೊರತು ಬೇರೆ ಯಾವ ಕಾರಣವೂ ಇಲ್ಲ. ಪಂ|| ಜವಾಹರಲಾಲ್ ನೆಹ್ರೂರವರು ಮೈಸೂರಿನಲ್ಲಿ ದಬ್ಬಾಳಿಕೆಗೆ ಇದೆ ಎಂದು ಹೇಳುವುದನ್ನು ನಿರೀಕ್ಷಿಸಬೇಕೆಂದು ಹೇಳುವ ದಿವಾನರು, ತಾವೇ ಆ ಹೇಳಿಕೆಗೆ ವಿರೋಧವಾಗಿ ಹೋಗಿರುವರು. ಮೈಸೂರಿನಲ್ಲಿ ದಬ್ಬಾಳಿಕೆ ಇದೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇಲ್ಲಿ ಅದ್ಭುತವಾದ ದಬ್ಬಾಳಿಕೆಯೇ ಇದೆ. ಇದಕ್ಕೆ ನಾನೇ ಒಂದು ಉದಾಹರಣೆ. ಇಂತಹ ನೂರು ಉದಾಹರಣೆಗಳನ್ನು ನಾನು ಕೊಡಬಲ್ಲೆ. ಆದರೆ ಇವೆಲ್ಲವೂ ಕಾನೂನು ಸಮ್ಮತವಾಗಿ ನಡೆದ ಕಾರ್ಯವೆಂದು ದಿವಾನರು ಹೇಳಿಕೊಳ್ಳಬಹುದು. ದಿವಾನರು ನಿಷ್ಪಕ್ಷಪಾತವಾದ ನ್ಯಾಯಾಧೀಶರ ತೀರ್ಮಾನಕ್ಕೆ ಒಪ್ಪಿದರೆ, ಪಂಡಿತ ಜವಾಹರಲಾಲರ ನುಡಿಗಳು ಸತ್ಯವಾದುವೆಂದು ತೋರಿಸಬಹುದು. ಪಂಡಿತ ಜವಾಹರಲಾಲರ ಒಂದು ನುಡಿಯೇ ಸಾಕು, ದಿವಾನರ ವಿಷಯದಲ್ಲಿ ಜನರ ಮಮತೆಯನ್ನು ಕಳೆಯುವುದಕ್ಕೆ. ಆದರೆ ದಿವಾನರ ಆಕ್ರೋಶವು ಪಂಡಿತರ ವಿಷಯದಲ್ಲಿ ಮೈಸೂರಿನ ಯಾವೊಂದು ಪ್ರಜಾ ಭಾಗದಲ್ಲಿಯೂ ವಿರೋಧವನ್ನು ಹುಟ್ಟಿಸದು. ಪಂಡಿತ ಜವಾಹರಲಾಲರ ವಿಷಯದಲ್ಲಿ ದಿವಾನರು ವಿರೋಧವನ್ನು ಕಟ್ಟಿಕೊಂಡದ್ದು ಬಹಳ ಕೆಟ್ಟದ್ದು. ಅದಕ್ಕೆ ಬದಲು ದಿವಾನರು ಅವರ ಮತ್ತು ಮೈಸೂರಿನ ಪ್ರಜೆಗಳ ಸಹಾನುಭೂತಿ ಮತ್ತು ಸಹಾಯವನ್ನು ಪಡೆಯಬೇಕಾಗಿತ್ತು. ಈಗಲಾದರೂ ಅವರು ಹಾಗೆ ಮಾಡುವರೆಂದು ನಾನು ಆಶಿಸುತ್ತೇನೆ."

ಗ್ವಾಲಿಯರಿನಲ್ಲಿ ಜವಾಬ್ದಾರಿ ಸರಕಾರ

ಮಹಾರಾಜರ ಭರವಸೆ

ಗ್ವಾಲಿಯರ್‌ನಲ್ಲಿ ಜವಾಬ್ದಾರೀ ಸರ್ಕಾರವನ್ನು ಸ್ಥಾಪಿಸುವ ವಿಷಯದಲ್ಲಿ ಸರ್ಕಾರವು ಯಾವ ನೀತಿಯನ್ನನುಸರಿಸುವುದೆಂಬುದನ್ನು ಗ್ವಾಲಿಯರ್ ಮಹಾರಾಜರು ಹೀಗೆ ಅಲ್ಲಿನ ಲೆಜಿಸ್ಲೆಟಿವ್ ಕೌನ್ಸಿಲಿನಲ್ಲಿ ತಿಳಿಯಪಡಿಸಿದರು:—

"ಶಾಸನ ಸಭೆಯನ್ನು, ನಾನಾ ತರಗತಿಗಳ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಆಡಳಿತದ ವಿಚಾರಗಳಲ್ಲಿ ಸರ್ಕಾರಕ್ಕೆ ಜವಾಬ್ದಾರಿಯುತವಾದ ಸಲಹೆಗಳನ್ನು ಕೊಡುವ ಸಂಸ್ಥೆಯನ್ನಾಗಿ ಮಾಡಬೇಕೆಂಬುದು ನನ್ನ ಆಶೆ. ಸದ್ಯದಲ್ಲೇ ಜವಾಬ್ದಾರೀ ಸರ್ಕಾರದ ಪ್ರಶ್ನೆಯು ಆಲೋಚಿಸಲ್ಪಟ್ಟು ಆ ಭಾಗದಲ್ಲಿ ಸುಧಾರಣೆಗಳನ್ನು ಎಷ್ಟರ ಮಟ್ಟಿಗೆ ಕೊಡಬಹುದೆಂದು ವಿಷಯವನ್ನು ದೃಷ್ಟಿಯಿಂದ ಪರಿಗಣಿಸಲಾಗುವುದು. ಶಾಸನ ಸಭೆಯ ಅಧಿವೇಶನಗಳು ನನಗೂ ಸಭೆಗೂ ಹೆಚ್ಚಿನ ಸಂಬಂಧವನ್ನು ಬೆಳಸಿ ಆ ಅಧಿವೇಶನವು ಇಬ್ಬರಿಗೂ ಒಂದು ನವ ಚೇತನವನ್ನು ಕೊಡುವುದೆಂದು ನಾನು ಭಾವಿಸುತ್ತೇನೆ" ಎಂದರು.

ಶ್ರೀಮನ್ಮಹಾರಾಜರವರು ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ಒದಗಿಸುವುದಕ್ಕಾಗಿ ಒಂದು ವ್ಯವಸ್ಥೆಯನ್ನು ಆಲೋಚಿಸುತ್ತಿರುವುದಾಗಿ ಸೂಚಿಸಿದರು. ಶಾಸನ ಸಭೆಗೆ ಹೆಚ್ಚು ಅಧಿಕಾರವಿರಬೇಕೆಂದು ಬಯಸುವವರಲ್ಲಿ ನನ್ನ ಸಂಪೂರ್ಣ ಸಹಾನುಭೂತಿಯಿದೆ ಎಂಬುದಾಗಿ ತಿಳಿಸಿದರು.

"ಆಡಳಿತವು ಯಾವ ಸ್ವರೂಪವನ್ನೇ ತಾಳಲಿ, ಪ್ರಜೆಗಳ ಇಷ್ಟಾನುಸಾರ ನಡೆಯುವ ಸರ್ಕಾರವೇ ಸರ್ವೋತ್ತಮವಾದ ಸರ್ಕಾರವೆನಿಸುವುದು."

ಮಹಾರಾಜ ಸಿಂಧ್ಯರವರು ಸಿಂಹಾಸನಕ್ಕೆ ಬಂದಮೇಲೆ ಗ್ವಾಲಿಯರ್ ಕೌನ್ಸಿಲು ಸೇರಿದುದು ಇದೇ ಮೊದಲು.

ಮೈಸೂರು ಕಾಂಗ್ರೆಸ್ ಕನ್ವೇಷನ್

ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಕಾಂಗ್ರೆಸ್ ಕೆಲಸಗಾರರಿಗೆ ಈ ರೀತಿ ತಿಳಿಯಪಡಿಸಿದ್ದಾರೆ:—

ರಾಜಕೀಯ ಕಾರ್ಯವನ್ನು ಮೈಸೂರು ಸಂಸ್ಥಾನದಲ್ಲಿ ನಡೆಸಲು ಅಖಿಲ ಭಾರತ ಕಾಂಗ್ರೆಸ್ಸಿಗೆ ಸಂಬಂಧವಿಲ್ಲದಂತೆ ಒಂದು ಸ್ವತಂತ್ರ ಸಂಸ್ಥೆಯನ್ನು ಫೆಬ್ರವರಿ ೨೦ರಲ್ಲಿ ಸ್ಥಾಪನೆ ಮಾಡಿರುವುದಷ್ಟೆ. ಇದರ ಮೊದಲನೇ ಕನ್ವೇಷನ್ನು ಏಪ್ರಿಲ್ ೫ ರಲ್ಲಿ ಜಿಲ್ಲೆಯಲ್ಲಿ ನಡೆಯುವುದು. ಸ್ಥಳವನ್ನು ಕ್ರಮೇಣ ತಿಳಿಸಲಾಗುವುದು.

ಈ ಮಧ್ಯೆ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಕಮಿಟಿಗಳನ್ನು ಈ ಹೊಸ ಸಂಸ್ಥೆಯ ಆಶ್ರಯದಲ್ಲಿ ರಚಿಸಬೇಕೆಂದು ಕೋರುತ್ತೇನೆ. ಈಗ ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಮುಖ ಸದಸ್ಯರಾಗಿರುವವರೆಲ್ಲರೂ ಈ ಹೊಸ ಸಂಸ್ಥೆಯ ಪ್ರವೇಶ ಪತ್ರಕ್ಕೆ ರುಜು ಮಾಡಿ, ಸದಸ್ಯರಾಗಬಹುದು. ಪ್ರತಿಯೊಂದು ಕಮಿಟಿಯಲ್ಲಿಯೂ ಅಧ್ಯಕ್ಷರು ಕಾರ್ಯನಿರ್ವಾಹಕರು ಇವರುಗಳನ್ನೊಳಗೊಂಡ ಕಾರ್ಯಕಾರಿ ಸಮಿತಿಯು ನೇಮಕವಾಗಬೇಕು. ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯನಿರ್ವಾಹಕರು ಮೈಸೂರು ಕಾಂಗ್ರೆಸ್ ಕಮಿಟಿಗಳ ಕಾರ್ಯನಿರ್ವಾಹಕರಾಗಲು ಯಾವ ಅಭ್ಯಂತರವೂ ಇಲ್ಲ.

ಕೆಲಸಗಾರರೆಲ್ಲರೂ ಅಖಿಲ ಭಾರತ ಕಾಂಗ್ರೆಸ್ಸಿನ ಹಾಗೂ ಮೈಸೂರು ಕಾಂಗ್ರೆಸ್ಸಿನ ಸದಸ್ಯರಾಗಬೇಕೆಂದು ಕೋರಿದೆ. ಜಿಲ್ಲಾ ಕಾಂಗ್ರೆಸ್ ಕಮಿಟಿಗಳಿಗೆ ಪ್ರವೇಶ ಪತ್ರವನ್ನು ಅಪೇಕ್ಷಿಸಿದಲ್ಲಿ ಕಳುಹಿಸಲಾಗುವುದು. ಇತರ ವಿಷಯಗಳನ್ನು ಕ್ರಮೇಣ ತಿಳಿಸಲಾಗುವುದು. ಕಾಲವು ಸ್ವಲ್ಪವೇ ಇರುವುದರಿಂದ, ಕಾರ್ಯವನ್ನು ತ್ವರಿತವಾಗಿ ನಡೆಸಬೇಕು. ಕಾರ್ಯದ ವರದಿಯನ್ನು ಕೇಂದ್ರ ಕಚೇರಿಗೆ ಕೂಡಲೇ ಕಳುಹಿಸಬೇಕು.

೩ ನೇ ವ್ಯಾಲ್ಯುಯೇಷನ್ ವರ್ಷ
1938
ಏಪ್ರಿಲ್ ತಿಂಗಳಿನೊಳಗೆ
ಕಾಮನ್‌ವೆಲ್ತ್ ಅಶ್ಯೂರೆನ್ಸ್ ಕಂಪೆನಿಯೊಂದಿಗೆ ವಿಮೆ ಮಾಡಿ.
ಹೆಚ್ಚಿನ ವಿವರಗಳಿಗೆ: ಮೆಸರ್ಸ್ ಗವಾಂಕರ್ & ಸನ್ಸ್, ಚೀಫ್ ಏಜೆಂಟ್ಸ್
163, ಗಾಂಧಿ ನಗರ, ಬೆಂಗಳೂರು.

ಚಿತ್ರಶಾಲಾ ಸ್ಪರ್ಧೆ ನಂ. ೪೩

ಬಹುಮಾನ ಪಡೆದವರು

ಸರಿಯಾದ ಉತ್ತರಗಳನ್ನು ಕಳುಹಿಸಿದ್ದ ನಾಲ್ಕುಜನರಿಗೆ ಮೊದಲನೇ ಬಹುಮಾನವಲ್ಲಿ ತಲಾ 37—8—0 ಯಂತೆ ಕೊಟ್ಟಿರುತ್ತೇ. ಶ್ರೀ॥ ರುಕ್ಮಿಣಮ್ಮ ಕೇರ್ ಆಫ್ ರಾಮಚಂದ್ರ ಕೃಷ್ಣಮೂರ್ತಿಪುರಂ ಮೈಸೂರು. ಸುಬ್ಬುಕೃಷ್ಣ ಶ್ರೀ॥ ಶೀಲವತಿ ಕೇರ್ ಆಫ್ ವೆಂಕಟಕೃಷ್ಣಪ್ಪ ಚಿಕ್ಕಮಗಳೂರು. ಸುಬ್ರಹ್ಮಣ್ಯ ಕೇರ್ ಆಫ್ ನಂ. 30 ಮಾಡಲ್ ಹೌಸ್ ಬಸವನ ಗುಡಿ ಬೆಂಗಳೂರು.

ಒಂದು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 14 ಜನರಿಗೆ ಇತರ ಬಹುಮಾನದಲ್ಲಿ ತಲಾ 2—0—0 ರೂ. ನಂತೆ ಕೊಟ್ಟಿರುತ್ತೆ. ಎಸ್ ನಾ[illegible]ಲಕ್ಷ್ಮಮ್ಮ ಎಸ್. ಸುಬ್ಬಲಕ್ಷ್ಮಮ್ಮ ಎಸ್. [illegible] ಎಂ. ಕಮಲಮ್ಮ ಸಿ. [illegible] ಎಂ. ಅಹೋಬಲಶಾಸ್ತ್ರಿ ಶ್ರೀ ಜಯಲಕ್ಷ್ಮಮ್ಮ ಎಸ್ ಸಾವಿತ್ರಮ್ಮ ಸಿ. ಕೆ. ಶ್ರೀನಿವಾಸಮೂರ್ತಿ ಎಸ್. ವೆಂಕಟಲಕ್ಷ್ಮಮ್ಮ ಡಿ. ವಿ. ಸುಬ್ಬರಾವ್ ಬೆಂಗಳೂರು. ಶ್ರೀ[illegible] ಅನಂತಾಚಾರ್ಯರು ಶಿವಮೊಗ್ಗ. ಎ. ಆರ್. ರಂಗರಾಮಯ್ಯ [illegible] ಜಿ. ಗಂಗಮ್ಮ ತುಂಕೂರು.

ಎರಡು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 39 ಜನರಿಗೆ ತಲಾ 1—0—0 ರೂ. ನಂತೆ ಕೊಟ್ಟಿರುತ್ತೆ. ಎಂ. ಟಿ. ಎಸ್. ವಾಸ ಎಂ. ಟಿ. ಎಂ. ಕಾರ್ತಿ ಶ್ರೀ॥ ಎಂ. ಟಿ. ನಾರಾಯಣ ಕುಮಾರಿ ಜಿ. ಕೆ. ಮೈಥಿಲಿ ಶ್ರೀ॥ ಸಿ. ಎಲ್ ಸೀತಾಲಕ್ಷ್ಮಿಯು. ಡಿ. ಗೋಪಾಲರಾವ್ ಕೆ. ವಿ. ಲಕ್ಷ್ಮೀನಾರಾಯಣ್ ಎಂ. ಟಿ. ರಾಜಮ್ಮ ಮೈಸೂರು. ಎಂ. ಅನಂತರಾವ್ ಶ್ರೀ॥ ವಸಂತಪ್ರಭಾ ಎಂ. ಹರಿರಾವ್ ಸತೀ ವೆಂಕಟಸುಬ್ಬಯ್ಯ ಶ್ರೀ ಅಚ್ಚಮ್ಮ ಸಿ. ಪದ್ಮಾವತಿ, ಸಿ. ಶಕುಂತಲಾದೇವಿ ಸಿ. ಪಾರ್ವತಿ ಸಿ. ಪದ್ಮ ಸಿ. ಪ್ರಭಾಕರ ಎ. ಸದಾಶಿವ ಪಿ. ಶಾಂತಮ್ಮ ಬಿ ಎಸ್. ರಂಗಮಣಿ ಬಿ. ರಾಜಶೇಖರ್ ಶ್ರೀದೇವಿ. ಸಿ. ಎಸ್. ರಾಘವೇಂದ್ರರಾವ್ ಎಸ್. ಗುರುಸಿದ್ದಾರ್ಯ ಎಂ. ಎಸ್. ಶಂಕರಪ್ಪ ಎಂ. ಶಾರದಮ್ಮ ಜಿ. ವಾಸು ಬೆಂಗಳೂರು ಕೆ. ಎಂ. ಕೃಷ್ಣಶೆಟ್ಟಿ ಜಿ. ಎಂ. ರಂಗಪ್ಪ ತುಂಕೂರು. ಎಂ. ಸಿ. ಚೈತ್ರ ಧರ್ಮಸ್ಥಳ, ಶ್ರೀಮತಿ॥ ಸಿ. ಎಂ ಮಂಜನಾಥಯ್ಯ, ಹುಂಚಿಕೊಪ್ಪ ಕೆ. ಲಕ್ಷ್ಮಮ್ಮ ಗೋರಿಬಿದನೂರು. ಎಂ. ಕೇಶವಮ್ಮ ದೊಡ್ಡನಾಗೀಶಪುರ. ಸಾಲಿಗ್ರಾಂ ಕೃಷ್ಣಶಾಸ್ತ್ರಿ ಕೋಲಾರ. ಎಂ. ಆರ್. ಕೃಷ್ಣಅಯ್ಯಂಗಾರ್ ಅಮೃತೂರು, ಹೆಚ್. ಕೃಷ್ಣಾಚಾರ್ ಡಿ. ಎಸ್. ಹಳ್ಳಿ. ಜಿ. ಟಿ. ರಾಮಸ್ವಾಮಿ ದಾವಣಗೆರೆ.

ಮೂರು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 120 ಜನರಿಗೆ ತಲಾ 0-12-0 ಯಂತೆ ಕೊಟ್ಟಿದೆ. ಪಿ. ಎಂ. ರಾಮಸುಂದರಮ್ಮ ಮೂರ್ತಿ ಜಿ. ಪಿ. ಕೇಶವ ಎಂ. ವಿ. ಸ್ವಾಮಿ, ಕುಮಾರಿ ಜಿ. ವಿ. ಆರ್. ಮಣಿ, ಕುಮಾರಿ ಜಿ. ವಿ. ಪದ್ಮ ಶ್ರೀ॥ ಎಂ. ಟಿ. ತಿರುಮಲಮ್ಮ ಆರ್. ಕೆ. ರಂಗಣ್ಣ ಬಿ. ಎಂ. ಚೌಡಯ್ಯ ಸತ್ಯೇಂದ್ರಪ್ರಸನ್ನ ಎಂ. ಎಲ್. ಪಾರ್ವತಮ್ಮ ಎಸ್. ವೆಂಕಟರಾಮಶಾಸ್ತ್ರಿ ಸಿ. ಶ್ರೀನಿವಾಸಅಯ್ಯಂಗಾರ್ ಎಂ. ವಿ. ರಾಜಪ್ಪ ಎಂ. ಕೆ. ಪಾರ್ಥಸಾರಥಿ ಆರ್. ಹೆಚ್. ಅರುಣಾಚಲರಾವ್ ಹೆಚ್. ವೆಂಕಟೇಶಯ್ಯ ಆರ್. ಕೆ. ದಾಸ್ ಎಂ. ಲಕ್ಷ್ಮೀನರಸಮ್ಮ ವೆಂಕಟರಾಮಾಚಾರ್ ಎಸ್. ಭಾಗೀರಥೀಬಾಯಿ ಟಿ. ವಿ. ಶ್ರೀನಿವಾಸರಾವ್ ಎಂ. ವಿ ನಾಗಲಕ್ಷ್ಮಿ, ಕುಮಾರಿ ಪಾತು. ವೀಣೆ ವೆಂಕಟಸುಬ್ಬಯ್ಯನವರು ಹೆಚ್. ಎಂ. ರಂಗಸ್ವಾಮಿ ಕೆ. ಜಯಮ್ಮ ಆರ್ ಕೆ. ದೇವಿ ಕೆ. ನಾರಾಯಣರಾವ್ ಜಿ. ವಿ. ಆರ್ ಆಚಾರ್ ಪಿ. ಎಸ್. ವೆಂಕಟಲಕ್ಷ್ಮಮ್ಮ ಎಂ. ವಾಸುದೇವಪ್ಪ ವಿ. ರಘುಪತಯ್ಯ ಶ್ರೀಮ್ಮ[illegible] ಎಲ್. ವೆಂಕೂಬಾಯಿ [illegible] ನಂಜುಂಡಯ್ಯ ಎಂ. ರಾಜ[illegible] ಜಿ. ವಿ [illegible] ಯ್ಯಂಗಾರ್ ಎಂ. [illegible] ಹೆಚ್. ಸಿ. [illegible] ಶೆಟ್ಟಿ ಎಂ ಎಸ್ ರಾಮ[illegible] ಸಿ. [illegible] ಬ್ಬರಾವ್ ಎಂ. ಎಲ್. ನಾರಾಯಣರಾವ್ ಟಿ. ಕೆ. ರಾಮಸ್ವಾಮಿಅಯ್ಯಂಗಾರ್ ಎಸ್. ಎಸ್. ಕೃಷ್ಣಮೂರ್ತಿ ಶ್ರೀ॥ ಶಾರದಾಬಾಯಿ ಸಿಂಧ್ಯ, ಎಂ ವಿಜಯಕುಮಾರಿ ಎಸ್. ಎಸ್. ರಾವ್ ಎಸ್. ಸುಬ್ಬಮ್ಮ ಎಸ್. ವೆಂಕಟಸುಬ್ಬಮ್ಮ (ಜಯಲಕ್ಷ್ಮಮ್ಮ ಶ್ರೀ॥ ನಾಗರತ್ನ ಸೋಮನಹಳ್ಳಿ.) ಜಿ. ಆರ್. ವಿಶ್ವೇಶ್ವರಯ್ಯ ಬಿ. ಎಸ್. ವಿಜಯೀಂದ್ರಾಚಾರ್ ಭಾಸ್ಕರಾಚಾರ್ಯ ವೈ. ಎಸ್. ಕೃಷ್ಣಮೂರ್ತಿ ಎಸ್. ಕೆ. ಅಪ್ಪಣ್ಣಾಚಾರ್ ಎಂ. ರಂಗಣ್ಣ ಸಿ. ನಂಜುಂಡಯ್ಯ ಸಿ. ವಿ. ನಾಥ್ (ಬಿ. ಕೆ. ಸುಭದ್ರ ಎಂ. ಆರ್. ಎಸ್. ಮೂರ್ತಿ ಎಂ. ಆರ್. ಲಕ್ಷ್ಮೀಬಾಯಿ ಬಿ. ಎಸ್. ವಿಜಯೀಂದ್ರ ಬಿ. ಪಿ. ಜಗನ್ನಾಥ್ ತ್ಯಾಮಗೊಂಡಲು.) ಸಿದ್ಧಾನಂದಸ್ವಾಮಿಗಳು ಎ. ರಾಜಶೇಖರ ಗುಪ್ತ. ಜಿ. ಕಮಲಮ್ಮ ಅಪ್ಪುರಾವ್ (ಎಸ್. ಚಿಕ್ಕಣ್ಣ. ವಿ. ರಾಜಮ್ಮ ಸತಿ॥ ಚಿಕ್ಕಣ್ಣ ವಿಜಯಕುಮಾರಿ ಅಂಜನಾದೇವಿ, ಕಾಡ್‌ಕಾನ್‌ಹಳ್ಳಿ.) ಬೆಂಗಳೂರು. ಎನ್. ಕೆ. ಶ್ರೀನಿವಾಸಯ್ಯಂಗಾರ್ ಮಾರಗೌಡನಹಳ್ಳಿ. ಲಕ್ಷ್ಮೀನರಸಿಂಹಯ್ಯ ಕಣತೂರು. ಶ್ರೀ॥ ಜಾನಕಮ್ಮ ಶ್ರೀ॥ ಶಾರದಾಂಬ ತುಂಕೂರು. ಹೆಚ್ ಆರ್. ನಾಗಮಣಿ ಎಸ್. ವೆಂಕಟಸುಬ್ಬರಾವ್ ಎಂ ಎಸ್. ಲಕ್ಷ್ಮೀನಾರಾಯಣರಾವ್ ಭದ್ರಾವತಿ ಡಿ ಎಂ. ಚೌಡಯ್ಯ ಶ್ರೀ॥ ಸಾವಿತ್ರಮ್ಮ ಎಂ. ರಾಮಸ್ವಾಮಿ ಎ. ವಿ ಶೆಟ್ಟಿ ಸಿ. ವಿ. ಮೀನಾಕ್ಷಮ್ಮ ಮಾಗಡಿ[illegible]. ಕೆ ಮುಂಜಮ್ಮ ಚನ್ನಬಸವಯ್ಯ ಎಂ. ವೆಂಕೋಬರಾವ ನಾಗರ. ಎಸ್. ನಾರಾಯಣ ಜೋಯಿಸ್ ಚನ್ನಗಿರಿ. ಜಿ. ನರಸಿಂಹಮೂರ್ತಿ ಬಾಗೇಪಲ್ಲಿ. ಸಿ. ಭೀಮಪ್ಪ ಮಲ್ಲಾಜಟ್ಟಪ್ಪ ಚಿತ್ರದುರ್ಗ. ಎಂ. ಸಿ. ರುದ್ರಾರಾಧ್ಯ ಸೊರಬ ಎಂ. ಪ್ರಹ್ಲಾದರಾವ್ ಕೆ. ಆರ್. ನಗರ. ಎ. ಸೀತಾರಾಮಯ್ಯ ಹೊನ್ನವಳ್ಳಿ, ಎಂ. ಡಿ. ಸುಬ್ಬರಾವ್ ಎಚ್‌ವೆಂಕಟರಾಮರಾವ ತೀರ್ಥಹಳ್ಳಿ, ಶ್ರೀನಿವಾಸ ರಾಘವಾಚಾರ್ ಚನ್ನಪಟ್ಟ. ಕೆ. ಎಸ್. ನಾರಾಯಣಭಟ್ ಮದ್ರಾಸು. ಎಂ. ಶ್ರೀಕಂಠಯ್ಯ ಹೊಳೆನರಸೀಪುರ. ಸಿ. ಎಸ್ ಕೃಷ್ಣರಾವ್ ಚಳ್ಳಕೆರೆ. ಕೆ. ಸುಬ್ಬರಾಮಪ್ಪ ಮದನಪಲ್ಲಿ. ಹೆಚ್. ಆರ್ ಮಾರ್ಕಂಡೇಯ ರಾಮದುರ್ಗ. ಎಂ. ವೆಂಕಟೇಶಯ್ಯ ಎಳ್ಳೇನಹಳ್ಳಿ. ಬಿ. ಚನ್ನಯ್ಯ ಮಂಡ್ಯ ಡಿ. ಸುಬ್ಬಲಕ್ಷ್ಮಮ್ಮ ತಿರುಚನಾಪಳ್ಳಿ. ಎಂ. ಸಿ. ಸೀತಾರಾಮಯ್ಯಂಗಾರ್ ದೊಡ್ಡಬಳ್ಳಾಪುರ. ಹೆಚ್ ವೆಂಕಟರಾಮಯ್ಯ ಹನಸೋಗೆ. ಡಾಕ್ಟರ್ ಎಸ್ ಎಸ್ ರಾವ್ ಎಸ್ ಕೆ ಎಸ್ ಎಸ್ ರಾವ್ ಹೊಸನಗರ. ಬಿ ಮಂಜನಾಥನಾಯಕ್ ಪುತ್ತೂರು. ಶ್ರೀ॥ ಕೋಮಲಮ್ಮ ಶಿವಮೊಗ್ಗ. ಎಂ ಜಿ ಕೃಷ್ಣಯ್ಯಂಗಾರ್ ಕೆ. ಜಿ. ಎಫ್. ಎಂ ಎಸ್ ರಾಮಚಂದ್ರಯ್ಯ ಮಲ್ಲಪಟ್ಟಣ. ಬಿ ರಾಮಯ್ಯ ಕೆ ನಂಜುಂಡಶಾಸ್ತ್ರಿ ಆರ್ ಸುಂದರಮ್ಮ ತಿಪಟೂರು. ಹೆಚ್ ಕೆ ಕೃಷ್ಣಪ್ಪ ಹನಸೋಗೆ. ಹೆಚ್ ಎಸ್ ಜಯಮ್ಮ ಕೆ ಅಹೋಬಲಶಾಸ್ತ್ರಿ ಹಾಸನ.

ಎಲ್ಲರಿಗಿಂತಲೂ ಹೆಚ್ಚಿಗೆ ಉತ್ತರಗಳನ್ನು ಕಳುಹಿಸಿದ್ದ (153) ಮಿ॥ ರಾ॥ ಡಿ ವಿ. ಸುಬ್ಬರಾವ್ ಮಾವಳ್ಳಿ, ಹೌಸ್ ಬ್ಯಾಕಿನ್ ರೋಡು ಬೆಂಗಳೂರು. ಇವರಿಗೆ ಸ್ಪೆಷಲ್ ಬಹುಮಾನದ ಬಾಬ್ತು 30—0—0 ರೂ. ಕೊಟ್ಟಿರುತ್ತೆ.

ಮೇಲ್ಕಂಡ ಬಹುಮಾನಗಳನ್ನು 24—3—38 ರ ನಂತರ ಎಲ್ಲರಿಗೂ ಕಳುಹಿಸಲಾಗುತ್ತೆ.

ಮ್ಯಾ. ಟಿ.

ಕೆ.ಟಿ. ಭಾಷ್ಯಂರವರ ಸ್ಥಾನಕ್ಕೆ

ಉಪ ಚುನಾವಣೆ

ಶ್ರೀ॥ ಕೆ. ಟಿ. ಭಾಷ್ಯಂ ಅಯ್ಯಂಗಾರ್ ರವರು ಬೆಂಗಳೂರು ಪೌರಸಭೆಗೆ ಚುನಾಯಿಸಲ್ಪಟ್ಟಿದ್ದು (೬ ತಿಂಗಳಿಗಿಂತ ಹೆಚ್ಚಾಗಿ ಶಿಕ್ಷೆ ವಿಧಿಸಲ್ಪಟ್ಟಿದ್ದರಿಂದ) ಮುಂದೆ ಸದಸ್ಯರಾಗಲು ಅನರ್ಹರಾಗಿರುವುದರಿಂದ ಸದರಿ ಸ್ಥಾನಕ್ಕೆ ಏಪ್ರಿಲ್ ೪ನೇ ತಾರೀಖು ಸೋಮವಾರ ಒಂದು ಉಪಚುನಾವಣೆ ನಡೆಯುವುದೆಂದು ಪೌರಸಭೆಯು ಪ್ರಕಟಣೆಯೊಂದು ತಿಳಿಸುತ್ತದೆ.

ರಮಣ ವಿಲಾಸಿನೀ ವಟಿಕಾ

ಒಂದೇ ಘಂಟೆಯಲ್ಲಿ

ನವ ಯೌವನವನ್ನು ಕೊಡುವುದು. ವೀರ್ಯ ಸ್ತಂಭನ ಮಾಡಿ ಆನ್ಯಾನಂದವನ್ನು ಕೊಡುವುದರಲ್ಲಿ ಇದಕ್ಕೆ ಸಮಾನವಾದು ಇಲ್ಲ.

16 ಮಾತ್ರೆಗಳ ಡಬ್ಬಿ ಕ್ರಯ ರೂ. 1

1-04 ಚೈನಾಬಜಾರ್, ಮದರಾಸ್.

ಏಜೆಂಟರು :—

ದಿ ಆರ್ಯ ಮೆಡಿಕಲ್ ಸ್ಟೋರ್ಸ್,

201 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅ ಮೃ ತಾಂ ಜ ನ



ಶೀಘ್ರವಾಗಿ ಗುಣಪಡಿಸುತ್ತದೆ.

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ, ತುರಿಕಜ್ಜಿ, ಹಳಕಡ್ಡಿ, ಪಿತ್ಥ, ಉಪದ್ರವ. ತಲೆ ಹೊಟ್ಟು, ವ್ರಣ ಮೊದಲಾದ ಎಲ್ಲಾ ಚರ್ಮ ವ್ಯಾಧಿಗಳಿಗೂ ಉತ್ತಮ ಔಷಧ

ಅಮೃತಾಂಜನ್ ಲಿಮಿಟೆಡ್

ಬೊಂಬಾಯಿ— ಮದರಾಸು.

ಪಾನ ನಿರೋಧ

ಲೇಖಕರು:—ಶ್ರೀ ಎಲ್. ಎಸ್. ಲಿಂಗಶಾಸ್ತ್ರಿ.

ಒಬ್ಬ ಹೆಂಡ ಕುಡುಕನು ಚೆನ್ನಾಗಿ ಹೆಂಡ ಕುಡಿದು, ಮತ್ತೇರಿ ಬೀದಿಯಲ್ಲಿ ಸುತ್ತಾಡಲು ಹೊರಟಿದ್ದಾನೆ. ರಸ್ತೆಯನ್ನು ನೋಡಿ, ಅದು ಹೆಂಡ ಕುಡಿದು ಬಿದ್ದಿದೆ ಎಂದು ಯೋಚಿಸಿ ಅನ್ನುತ್ತಾನೆ "ಎಲೇ ಲೇಲೇ ರಸ್ತೆ! ಏನು ಅವ್ಯವಸ್ಥೆ!" ಅವನ ಕಣ್ಣಿಗೆ ಪ್ರಪಂಚವೆಲ್ಲವೂ ಹೆಂಡ ಕುಡಿದ ಹಾಗೆ ಇದೆ. ತಾನು ಮಾತ್ರ ಒಬ್ಬ ಜ್ಞಾನದಿಂದ ಇದ್ದೇನೆಂದು ಅನುಭವ. ಹಾಗೇ ಕತ್ತೆತ್ತಿ ಮೇಲೆ ನೋಡಿದರೆ, ಚಂದ್ರನು ಕಣ್ಣಿಗೆ ಬಿದ್ದನು. ಸರಿ "ಚಂದ್ರನ್ ಮುಕ ನೇರ್ ನೋಟ್ಟು" ಅಷ್ಟೆ! ಬಲಗಣ್ಣ ಭಟ್ಟಿ ಎಲ್ಲಿರೋ ಎಡವಾಗಣ್ಣ ಎಟ್ಟರ್ ಲಿಂಬ ಲಣ್ಣ! ಏನೋ ಚಂದ್ರ! ಹೆಂಗೆ! ನಾಟ್ಕೆ ಇಲ್ವೆ ನಿಂಗೆ! ಕೆಟ್ಟವರ್ ಕುಡಿತಾರ್ ಅಂದ್ರೆ ನಿಂಗ್ಯಾಕ್ ಎಂಡದ್ ತೊಂದ್ರೆ?" ಚಂದ್ರನು ಎಲ್ಲಿದ್ದಾನೆ, ಚಂದ್ರನು ಹೆಂಡ ಕುಡಿಯುವುದೆಂದರೇನು? ಈ ವಿಚಾರಗಳನ್ನು ಯೋಚನೆ ಮಾಡುವಷ್ಟು ಶಕ್ತಿಯಿಲ್ಲ. ಇದಕ್ಕೆ ಪ್ರಾಣವಿದೆ, ಇದಕ್ಕೆ ಪ್ರಾಣವಿಲ್ಲ, ಇದು ಕೆಲಸ ಮಾಡಬಲ್ಲದು, ಇದು ಕೆಲಸ ಮಾಡಲಾರದು ಎಂದು ವಿವೇಚನೆ ಮಾಡುವ ಶಕ್ತಿಯೇ ಹೋಗಿಬಿಟ್ಟಿದೆ. ಹಾಗೆ ಬೀದಿಯಲ್ಲಿ ಹೊರಟು ಉದ್ದಕ್ಕೂ ನಿಂತಿರುವ ದೀಪದ ಕಂಬಗಳನ್ನು ನೋಡುತ್ತಾನೆ. "ನೋಡ್ ಅಲ್ಲಿ ಬೀದಿ ದೀಪ ಗಿರ್ಕಿ ಹೊಡೀತ್ ಪಾಪ! ತಿರ್ ತಿರ್ ತಿರ್ ತಿಗ್ರಾ ಕೂರಾಕ್ತದೆ ಕೂಗ್ತ! ಇಲ್ಲ್ದೆ ಇರೋಂ ಒಂದಕ್ಕಾನ ನೋಡೀನ್ ಇಲ್ಲ ಗ್ನಾನ! ನಾಲಾಗ್ ನಿಂತವೆ ನಟ್ಟು, ಯೆಂತ ಕುಡ್ಕ್ಯಟ್ಟು!"

ಸಾಧಾರಣವಾಗಿ ಮದ್ಯಪಾನ ಮಾಡಿದವನ ಸ್ಥಿತಿಯನ್ನು ಜಿ. ಪಿ. ರಾಜರತ್ನಂರವರು ಸೊಗಸಾಗಿ ವರ್ಣಿಸಿದ್ದಾರೆ. ಮದ್ಯಪಾನ ಮಾಡಿದವನ ಯಾವ ಅಂಗವೂ ಸರಿಯಾಗಿ ಬೇಕಾದವರಂತೆ ಕೆಲಸ ಮಾಡುವುದಿಲ್ಲ. ಹೆಂಡಕುಡುಕನ ಕಣ್ಣಿಗೆ ಒಬ್ಬೊಬ್ಬ ಮನುಷ್ಯನಿಗೂ ಮೂರು ಮೂರು ತಲೆಗಳಿರುವಂತೆ ಕಾಣಿಸುತ್ತದೆ. ಅವನು ಹೋಗಬೇಕೆಂದೆಡೆಗೆ ಕಾಲು ಒಯ್ಯುವುದಿಲ್ಲ. ಎತ್ತಬೇಕೆಂದಿರುವ ಪದಾರ್ಥವನ್ನು ಹಿಡಿದು ಕೈಗಳು ಎತ್ತಲಾರವು. ಹೀಗಾಗಲು ಕಾರಣವೇನು? ಮದ್ಯವು ದೇಹದಲ್ಲಿ ಪ್ರಧಾನ ಭಾಗವನ್ನೂ ಲಕ್ಷಿಸದೆ ನೇರವಾಗಿ ಮೆದುಳನ್ನೂ ಬುದ್ಧಿಯನ್ನೂ ಹಾಳು ಮಾಡುತ್ತದೆ. ಬುದ್ಧಿ ಕೆಟ್ಟರೆ, ದೇಹದಲ್ಲಿ ಯಾವ ಕೆಲಸವು ಸರಿಯಾಗಿ ನಡೆಯಬಲ್ಲದು? ಅವರೆ ಒಂದು ಮಾತು— ಮನುಷ್ಯನಿಗೂ ಮೃಗ ಪ್ರಾಣಿಗಳಿಗೂ ಇರುವುದು ಒಂದು ವ್ಯತ್ಯಾಸ. ಮನುಷ್ಯನು ಮನುಷ್ಯನಾಗಿ ಇರಬೇಕಾದರೆ ಈ ವ್ಯತ್ಯಾಸವನ್ನು ಕಾಪಾಡಿಕೊಂಡು ಬರಬೇಕು. ಮನುಷ್ಯನಿಗೆ ವಿವೇಕವಿದೆ. ಇದು ಕೆಟ್ಟದ್ದು, ಇದು ಮಾಡಬಾರದು, ಇದು ಒಳ್ಳೆಯದು, ಇದು ಮಾಡಬೇಕು ಎಂದು ಯೋಚಿಸಿ, ಚರ್ಚಿಸಿ, ತೀರ್ಮಾನ ಮಾಡುವ ಶಕ್ತಿಯಿದೆ. ಮೃಗ ಪ್ರಾಣಿಗಳಿಗೆ ಇದು ಇಲ್ಲ. ಯಾವ ಮನುಷ್ಯನಿಗೆ ವಿವೇಕವಿಲ್ಲವೋ, ಅವನು ಮನುಷ್ಯನೇ ಅಲ್ಲ. ಎರಡು ಕಣ್ಣು, ಎರಡು ಕಾಲು, ಎರಡು ಕೈ ಇದ್ದ ಮಾತ್ರಕ್ಕೆ ಮನುಷ್ಯನೆಂದೆನಿಸಿಕೊಳ್ಳಲಾರನು. ಮದ್ಯಪಾನದಿಂದ ವಿವೇಕಜ್ಞಾನವು ಹಾರಿಹೋಗುವುದರಿಂದ, ಮನುಷ್ಯನು ತನ್ನ ಮನುಷ್ಯತ್ವವನ್ನು ಕಳೆದುಕೊಂಡಂತೆಯೇ ಸರಿ. ಆಗ ಅವನು ಪಶುಪಕ್ಷಿಗಳಂತೆಯೇ ಸರಿ.

ಮದ್ಯಪಾನ ಮಾಡಿದವನು ತಾನೊಬ್ಬನು ಹೋದರೆ ಹೋಗಲಿ ಎನ್ನುವಹಾಗಿಲ್ಲ. ಮದ್ಯಪಾನದಿಂದಾಗುವ ಅನರ್ಥವು ಅವನೊಬ್ಬನಲ್ಲಿಯೇ ಕೊನೆಯಾಗುವಹಾಗಿಲ್ಲ. ಇದು ಒಂದು ಭಯಂಕರವಾದ ಸೋಂಕು ಜಾಡ್ಯ. ಒಂದು ಮನೆಯಲ್ಲಿ ಯಾರಿಗಾದರೂ ಪ್ಲೇಗು ಜಾಡ್ಯ ತಗಲಿದರೆ ಯಾವ ರೀತಿಯಾಗಿ ಅದು ಎಲ್ಲೆಲ್ಲೂ ಹಬ್ಬುತ್ತವೆಯೋ, ಅದೇ ರೀತಿಯಾಗಿ ಹೆಂಡ ಕುಡಿಯುವನೊಬ್ಬನು ನಾಶವಾಗುವುದಲ್ಲದೆ, ಅವನ ಸಂಸಾರವೇ ನಾಶದ ಹಾದಿಯನ್ನು ಹಿಡಿಯುತ್ತದೆ "ಈ ಮೋಸ ದೋಷವಲ್ಲ" ಎಂಬ ಪದದಲ್ಲಿ ವಿವರಿಸಿರುವಂತೆ, ಹೆಂಡಕುಡುಕನು ತಾನು ದುಡಿದು ಸಂಪಾದಿಸಿದ ಮೂರು ಕಾಸನ್ನು ಹೆಂಡತಿ ಮಕ್ಕಳ ಹೊಟ್ಟೆಗೋಸ್ಕರ ಖರ್ಚು ಮಾಡದೆ, ಹಾಳುಮಾಡುತ್ತಾನೆ. ಹೆಂಡ ಕುಡುಕನಿರುವ ಮನೆಯಲ್ಲಿ ಹೆಂಡತಿಗೂ ಮಕ್ಕಳಿಗೂ ಹೊಟ್ಟೆತುಂಬ ಹಿಟ್ಟಿರುವುದಿಲ್ಲ; ಮೈತುಂಬ ಬಟ್ಟೆ ಇರುವುದಿಲ್ಲ. ಇಷ್ಟು ಸಾಲದೆ, ಯಾವಾಗಲೂ ನೀತಿ ಭ್ರಷ್ಟನಾದ ಯಜಮಾನನ ಆದರ್ಶ. ಆದುದರಿಂದ ಆ ಸಂಸಾರವೇ ಹಾಳು. ಇದಕ್ಕಾಗಿ ಪಾನನಿರೋಧಕ್ಕಾಗಿಯೇ ಎಲ್ಲರೂ ಪ್ರಯತ್ನಿಸುತ್ತಿರುವುದು. ಮಹಾತ್ಮಗಾಂಧಿಯವರು ಈ ವಿಚಾರದಲ್ಲಿ ಮಾಡಿರುವ ಕೆಲಸವನ್ನು ಯಾರೂ ಮರೆಯುವಂತಿಲ್ಲ. ಹರಿಜನರ ಉದ್ಧಾರಕ್ಕೆ ಅವರು ಏರ್ಪಡಿಸಿದ ಮೊದಲನೆಯ ಮೆಟ್ಟಿಲೇ ಇದು. ಇತ್ತೀಚೆಗೆ ಸರ್ಕಾರಗಳೂ ಈ ವಿಚಾರದಲ್ಲಿ ಆಸಕ್ತಿಯನ್ನು ತೋರಿಸುತ್ತಿವೆ. ನೀವು ಕೇಳಿರುವಂತೆ, ಸೇಲಂ ಜಿಲ್ಲೆಯಲ್ಲಿ ಸುಮಾರು ೧೦ ಲಕ್ಷ ರೂಪಾಯಿ ನಷ್ಟವಾದರೂ ಲೆಕ್ಕಿಸದೆ ಪಾನನಿರೋಧವು ಆರಂಭವಾಗಿದೆ. ಜಿಲ್ಲೆಲ್ಲಿ ಹೆಂಡದಂಗಡಿಗಳನ್ನು ಮುಚ್ಚಿ, ಆ ಸ್ಥಳಗಳನ್ನು ಸ್ವಚ್ಛವಾಗಿಟ್ಟು, ಆರೋಗ್ಯಕರವಾದ ಪಾನೀಯಗಳು ದೊರಕುವಂತೆ ಮಾಡಿದ್ದಾರೆ.

ಪಾನನಿರೋಧವು ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ, ಸರ್ಕಾರದವರ ಮತ್ತು ಮಹಾಜನರ ಬೆಂಬಲವು ಆವಶ್ಯಕ. ಆದರೆ ಈ ರೀತಿಯಾದ ಹೊರಗಿನ ಬಲಾತ್ಕಾರದಿಂದ ಇದು ಜಯಶಾಲಿ ಆಗದು. ನಮ್ಮ ದೇಶದ ಹೆಂಗಸರೆಲ್ಲರೂ ಈ ಕೆಲಸಕ್ಕೆ ಸಹಾಯಕರಾಗಿ ನಿಲ್ಲಬೇಕು. ಏಕೆಂದರೆ ಮದ್ಯಪಾನದಿಂದಾಗುವ ಕೆಡಕುಗಳನ್ನು ಅನುಭವಿಸುವವರು ಹೆಂಗಸರು ಮತ್ತು ಅವರ ಸಂತತಿ. ಆದುದರಿಂದ ಹೆಂಗಸರು ಸೇರಿ ಕಟ್ಟು ಮಾಡಿಕೊಳ್ಳಬೇಕು. ಹೆಂಡ ಕುಡಿದವರನ್ನು ಮನೆಯೊಳಕ್ಕೆ ಸೇರಿಸಕೂಡದು. ಹಿಟ್ಟು ಹಾಕಕೂಡದೆಂದು ಎಂದಿಗೆ ನಮ್ಮ ದೇಶದ ಹೆಣ್ಣು ಮಕ್ಕಳು ತೀರ್ಮಾನಿಸುವರೋ, ಅಂದಿಗೆ ನಮ್ಮ ದೇಶದ ಮುಕ್ತಿ. ಏನಾದರೂ ಹೆಂಡಕುಡಿಯುವ ಅಭ್ಯಾಸವುಳ್ಳವರ ಪ್ರಯತ್ನವು ಬಹು ಮುಖ್ಯ. ಕೊನೆಯ ತೀರ್ಮಾನವು ಅವರ ಕೈಯಲ್ಲಿದೆ. ಈ ವಿಚಾರದಲ್ಲಿ ತುಂಬ ಬಲಾತ್ಕಾರ ಮಾಡುವುದಕ್ಕಿಂತ ಮುಂಚೆ, ನಾವು ಅವರ ಸ್ಥಿತಿಯನ್ನು ಸ್ವಲ್ಪ ದಯೆಯಿಂದ ನೋಡಬೇಕಾಗಿದೆ. ಹೆಂಡಕುಡುಕನಿಗೆ ಬುದ್ಧಿ ಇಲ್ಲವೇ ಇಲ್ಲವೆಂದಲ್ಲ. ಮತ್ತಿಳಿದಾಗ ಬುದ್ಧಿ ತಿಳಿಯಾದಾಗ ತನ್ನ ಅವಸ್ಥೆಯ ಅರಿವು ಅವನಿಗುಂಟಾಗುತ್ತದೆ. ಆದರೇನು? ಸಾಯಂಕಾಲ ಕುಡಿಯುವ ಹೊತ್ತು ಬರುತ್ತಲೇ, ಅವನು ಹುಚ್ಚನಂತಾಗಿ ಕುಡಿತದ ಅಭ್ಯಾಸದ ಬಲಕ್ಕೆ ಸಿಕ್ಕಿ, ಆ ಕಡೆಗೆ ಓಡಿಹೋಗುತ್ತಾನೆ. ಆಗ ಅವನಿಗೆ ಸಹಾಯ ಮಾಡಬಲ್ಲವನು ಒಬ್ಬನೇ! ದೇವರಲ್ಲಿ ಮೊರೆಯಿಟ್ಟರೆ, ಆ ಮನುಷ್ಯನಿಗೆ ಧೈರ್ಯವನ್ನೂ ಸ್ಥೈರ್ಯವನ್ನೂ ಆತನು ಖಂಡಿತವಾಗಿ ದಯಪಾಲಿಸಿ, ಅವನನ್ನು ಉದ್ಧರಿಸುವುದರಲ್ಲಿ ಸ್ವಲ್ಪವೂ ಅನುಮಾನವಿಲ್ಲ.

(ಲಲಿತಾದ್ರಿ ಪುರದಲ್ಲಿ ಮೈಸೂರು ನಗರ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ|| 26-2-38 ಸಾಯಂಕಾಲ ಕೊಟ್ಟ ಭಾಷಣ.)

Drink

Blue Bird Brand TEA

The world-renowned Tea for its consistent quality and Flavour.

It is a pure High Grown Nilgiri unblended with inferior Teas.

SOLD EVERYWHERE.

Sole Agents for Mysore:—

Chari & Prakash

447, Viceroy Road,

MYSORE.

ಭಿಷಗ್ರತ್ನ ಸಾಳ್ವದ ವೆಂಕಟಾಚಲ ಪಂಡಿತ ಅಂಡ್ ಸನ್,

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತ ಎಂತಹ ಗಟ್ಟಿಯಾದ ಆಹಾರವನ್ನಾದರೂ ಜೀರ್ಣಿಸಿ ಕೊಳಕಾದ ನೀರು, ಕೆಟ್ಟಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಬಳಿಗೆ ಸೇರಿಸದೆ ಮಲಬದ್ಧವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ.

ಮಕ್ಕಳ ಪಕ್ಕಸೆಳೆತ (ಎಳವು, ಕಾಲುಕೈ ಮರಬಾಯಿಯಲ್ಲಿ ಜೊಲ್ಲು ಸುರಿಸುವ ಸೀತವಾತ) ಮಕ್ಕಳ ಮತ್ತು ದೊಡ್ಡವರ ಸೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣದ ಭೇದಿ, ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಇನ್ಫ್ಲುಯೆಂಜಾ, ಪ್ಲೇಗು, ಶೀತಭೇದಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ.

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿರುತ್ತಾರೆ. ಈ ಮಾತ್ರೆಗಳಲ್ಲಿ ಅಫೀಮಾಗಲಿ, ವಿಷವಸ್ತುವಾಗಲಿ, ಖಂಡಿತವಾಗಿ ಸೇರಿಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ ವೈದ್ಯರ ಸಹಾಯವನ್ನಪೇಕ್ಷಿಸದೆ, ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವರಾಗುತ್ತೀರಿ.

250 ರಿಂದ 300 ಮಾತ್ರೆಗಳವರೆಗಿರುವ ಸೀಸೆ 1 ಕ್ಕೆ 4 ಆಣೆ. ಟಪಾಲು ಮೂಲಕವಾದರೆ 1 ಸೀಸೆಗೆ 9 ಆಣೆ. 6 ಸೀಸೆ 1—3—0. 12 ಕ್ಕೆ 2—13—0. 25 ಕ್ಕೆ 5—3—0.

ಸಾಳ್ವದ ವೆಂಕಟಾಚಲ ಪಂಡಿತ ಅಂಡ್ ಸನ್,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.



ಸಾರ್ವಜನಿಕ ನಂಬಿಕೆಯೇ ಈ ಸಾಧನೆಯ ರಹಸ್ಯ

ಜೀವವಿಮೆಯು ಬಡವರಿಗೂ, ಧನಿಕರಿಗೂ ಭೇದಭಾವವಿಲ್ಲದೆ, ಅತ್ಯುತ್ತಮವಾದ ಧನಸಂಚಯದ ಸಾಧನವೆಂಬುದು ನಿರ್ವಿವಾದದ ವಿಷಯ. ಮರಣ ಕಾಲದಲ್ಲಿ ಗಳಿಸಬೇಕೆಂದುಕೊಂಡಿರುವವರು, ತಮ್ಮ ಮೇಲೆ ನಂಬಿಕೊಂಡಿರುವವರಿಗೆ ಸಂಪೂರ್ಣವಾದ ಹಣದ ಅನುಕೂಲ ಉಂಟೆಂದು ಪ್ರಾರಂಭದಲ್ಲಿಯೇ ತೋರಿಸಿಕೊಡುವುದು. ಈ ಅನುಕೂಲವು ಯಾವ ಬಗೆಯ ಧನ ಸಂಚಯದಿಂದಲೂ ಸಾಧ್ಯವಿಲ್ಲ.

ಪರ್ವ ಪರ್ವಕ್ಕೂ "ಓರಿಯಂಟಲ್" ಜೀವವಿಮೆಯು ಅಪ್ರತಿಮ ಸ್ಥಾನವನ್ನು ಯುಕ್ತಿಸುವುದು. ಈ ಕಂಪನಿಯ ಅಪಾರ ಆಗಾಧವಾದ ಕಾರ್ಯಕ್ಷೇತ್ರ, ಸಿದ್ಧತೆ, ಕಂಪನಿಯ ಧನ್ಯತೆ ಮತ್ತು ಭರವಸೆಗಳಿಂದ ಗೊತ್ತಾಗುವುದು.

ಈಗಲೇ "ಓರಿಯಂಟಲ್" ಪಾಲಿಸಿಯನ್ನು ತೆಗೆದುಕೊಳ್ಳಿರಿ

ಓರಿಯಂಟಲ್

ಗೌರ್ನಮೆಂಟ್ ಸೆಕ್ಯೂರಿಟಿ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಸ್ಥಾಪನೆ 1874. ಮುಖ್ಯ ಕಚೇರಿ–ಬೊಂಬಾಯಿ.

ಭಾರತವರ್ಷದಲ್ಲೂ ಈ ಸಂಸ್ಥೆಯ ಶಾಖೆಗಳಿವೆ, ಪ್ರತಿನಿಧಿಗಳಿದ್ದಾರೆ.

ಎಂ. ಹೆಚ್. ಕೃಷ್ಣಮೂರ್ತಿ,
ಇನ್ಸ್‌ಪೆಕ್ಟರ್,
ಸಯ್ಯಾಜಿರಾವ್ ರೋಡ್, ಮೈಸೂರು.

ಎನ್. ಸ್ವಾಮಿನಾಥನ್, ಬಿ. ಎ.,
ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಬಿಲ್ಡಿಂಗ್ಸ್,
ಸೌತ್ ಪೆರೇಡ್, ಬೆಂಗಳೂರು.

1936
ಹೊಸ
ಉದ್ಯಮ

10
ಕೋಟಿಗೆ
ಮೀರಿದೆ

ಮೈಸೂರಿನ ಮುದ್ದು ಕಂದಗಳು

ಕಳೆದ ಮೂರು ದಿನಗಳಿಂದಲೂ, ರಾಜಧಾನಿಯಲ್ಲಿ ಚಿಕ್ಕವಯಸ್ಸಿನ ಅಂದರೆ ೨೦ ರ ಒಳಪಟ್ಟು ೧೩ ಮೇಲ್ಪಟ್ಟ ವಯಸ್ಸಿನ ಬಾಲಕರೂ, ೧೦ ರ ಒಳಪಟ್ಟ ೫ ವರ್ಷದ ಮೇಲ್ಪಟ್ಟ ಹಸು ಕಂದಗಳೂ ಮಹಾ ಸ್ವದೇಶಾಭಿಮಾನದ ನಿಧ್ಯುಕ್ತಿಗಳಿಂದ ಕಾಂಗ್ರೆಸ್ ಬಾವುಟಗಳನ್ನೂ, ದಪ್ಪ ದಪ್ಪ ಅಕ್ಷರದ ಧ್ವಜಗಳನ್ನೂ ಹಿಡಿದು ಬಿಸಿಲಿನ ತಾಪದಿಂದ ದೇಹಕ್ಕೆ ಆಗಬಹುದಾದ ಆಯಾಸವನ್ನು ಮರೆತು, ಪೈಸೆಕಲ್ಲಿನ ಮೇಲೂ, ಕಾಲ್ನಡಿಗೆಯಲ್ಲೂ, ಸಂಚರಿಸುತ್ತಾ ಕೈಕೊಂಡಿದ್ದ ಉದ್ದೇಶದಲ್ಲಿ ವಿಜಯಿಗಳಾದುದಲ್ಲದೆ ಮೈಸೂರಿನ ಮಾತೆಯ ರನ್ನು ವೀರಮಾತೆಯರೆನ್ನಿಸಿದರು. ಭರತ ಖಂಡದಲ್ಲಿ ಇಂತಹ [illegible] ಕಂದಗಳನ್ನು ಪಡೆದ ದೇಶ ಮಾತೆಯ [illegible] ಈಗಲ್ಲಿ ನಮ್ಮ [illegible] ಮಾನ್ಯ ಸಾಹಸವನ್ನು [illegible] ಯುತ್ತಿರುವೂ, ಮುಂದೆ [illegible] ದೂ ಮುದ್ದಿನ ಕಂದ್ಯ [illegible]

ಕೆಚ್ಚೆದೆಯ ವೀರರನ್ನು [illegible] ದಿನ ಅಬ್ಬು ಮೆಚ್ಚಿನ [illegible] ಎಂದೂ ಅಚ್ಚ [illegible] ವ್ಯಾಪಾರ [illegible] [illegible] ಹೀಗೇ ಧನ್ಯ [illegible] ನಿನ್ನ ಮುದ್ದಿನ ಕಂದ [illegible] ಗಳಿಗೆ ಸ್ವದೇಶ,

ಕಾಂಗ್ರೆಸ್ ಚಳುವಳಿ

ಇಬ್ಬರು ಪಟೇಲರಿಗೆ "ಸಸ್ಪೆಂಡ್"

ಮೈಸೂರು ಕಾಂಗ್ರೆಸ್ ಕಾರ್ಯದರ್ಶಿಗಳು ಹೀಗೆ ತಿಳಿಸಿರುತ್ತಾರೆ:—

1 ಪಡೇಹಳ್ಳಿ ಪಟೇಲರಿಗೆ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಬಿ. ಶಾಂತರಾಜಪ್ಪನವರಿಂದ ಈ ಪತ್ರ ಹೋಗಿದೆ:—"ನಿಮ್ಮ ಗ್ರಾಮದಲ್ಲಿ ಕಾಂಗ್ರೆಸ್ ಚಳುವಳಿಗೆ ನೀವು ಸಹಾಯ ಮಾಡಿ ಅದರಲ್ಲಿ ಭಾಗವಹಿಸಿದ್ದ ಕಾರಣದಿಂದ ನಿಮ್ಮನ್ನು ಪಟೇಲ ಕೆಲಸದಿಂದ "ಸಸ್ಪೆಂಡ್" ಮಾಡಿರುವುದಾಗಿ ಸಬ್-ಡಿವಿಜನ್ ಆಫೀಸರವರ ಆಜ್ಞೆಯನ್ನು ಅನುಸರಿಸಿ ನಿಮ್ಮಲ್ಲಿರತಕ್ಕ ಎಲ್ಲ ಸರ್ಕಾರಿ ಲೆಖ್ಖ ಪತ್ರಗಳನ್ನೂ ಕೂಡಲೇ ನಮ್ಮಲ್ಲಿ ಹಾಜರು ಮಾಡತಕ್ಕದ್ದು. ತಪ್ಪಿದರೆ ಕಾನೂನು ಪ್ರಕಾರ ನಡುವಳಿಕೆ ನಡೆಯುವುದು.

2 [illegible] ಪಟೇಲರಿಗೆ [illegible] ಶ್ರೀ ಕೆ. ನರಸಿಂಹ [illegible] ಈ ರೀತಿ ತಿಳಿ [illegible] ವಹಿಸಿರುವು [illegible] ದಾರ ಮಾಡಿ [illegible] ಸ್ವಾತಂತ್ರ್ಯ [illegible]

ಸ್ವಧರ್ಮ, ಸ್ವತಂತ್ರ, ಇವುಗಳಿಗಾಗಿ ಹೋರಾಡುವ ಸಂಪೂರ್ಣ ಶಕ್ತಿಯನ್ನು ಕರುಣಿಸಿ ಹರಿಯಿಗಳನ್ನಾಗಿ ಮಾಡು.

ಗರುತಿ ರಾಮಕೃಷ್ಣ ಶಾಸ್ತ್ರಿ.

ದಾರ ಮಾಡಿದ್ದಾಗ ನಿಮಗೆ ಹೇಳಕಳುಹಿಸಿದಾಗ್ಯೂ ನೀವು ಬರದೆ ಕಾಂಗ್ರೆಸ್ ಸಭೆಯಲ್ಲಿ ಭಾಗವಹಿಸಿದ್ದುದಾಗಿಯೂ ತಿಳಿದುಬಂದಿರುವುದರಿಂದ ನಿಮ್ಮನ್ನು ಈ ಮೂಲಕ "ಸಸ್ಪೆಂಡ್" ಮಾಡಿರುತ್ತದೆ. ಈ ವಿಷಯದಲ್ಲಿ ತನಿಖೆ ನಡೆಯಬೇಕಾಗಿರುವುದು ಮತ್ತು ಕಾನೂನು ಪ್ರಕಾರ ಮುಂದಿನ ಕ್ರಮ ನಡೆಯುವುದು."

ಲಾಯರ್ ಸಮ್ಮೇಳನ

ಮೈಸೂರು ಸಂಸ್ಥಾನದ ಲಾಯರ್ ಸಮ್ಮೇಳನವು ಏಪ್ರಿಲ್ ೯ ಮತ್ತು ೧೦ನೇ ತಾರೀಖುಗಳಲ್ಲಿ ಮಂಡ್ಯದಲ್ಲಿ ನಡೆಯುವುದು. ಇದಕ್ಕೆ ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು.

ಕಾಂಗ್ರೆಸ್ ಸರ್ಕಾರವೇ ಇರಬೇಕು

"ಇನ್ನು ಮುಂದೆ ಕಾಂಗ್ರೆಸು ಮಾತ್ರ ಆಡಳಿತ ನಡೆಸಬೇಕು. ಬೇರೆಯವರು ಆಡಳಿತ ನಡೆಸುವ ವಿಚಾರವೇ ಇಲ್ಲ. ಕಾಂಗ್ರೆಸು ಸರ್ಕಾರವಿದ್ದರೆ ಇರಬೇಕು; ಇಲ್ಲದಿದ್ದರೆ ಸರ್ಕಾರವೇ ಬೇಡ" ಈ ಮನೋಭಾವನೆಯು ಜನರಲ್ಲುಂಟಾಗಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ಸುಭಾಷ್ ಚಂದ್ರ ಬೋಸರು ಮುಂಬಯಿ ವರ್ತಕ ವ್ಯಾಪಾರಿಗಳ ಸಂಘದವರು ಒಪ್ಪಿಸಿದ ಬಿನ್ನವತ್ತಳೆಗೆ ಉತ್ತರಕೊಡುತ್ತ ತಿಳಿಸಿದರು. ಶ್ರೀ ಬೋಸರಿಗೆ ೨,೧೦೦ ರೂಗಳ ನಿಧಿಯನ್ನೂ ಮತ್ತು ಒಂದು ಕರಂಡವನ್ನೂ ಒಪ್ಪಿಸಲಾಯಿತು.

ಚಂದ್ರಕಲಾ ಸ್ಪರ್ಧೆ ನಂ. ೧೩ ರ ಉತ್ತರ

1 ಶ್ರೀ	ರಾ	ಧ	2 ಸು	■	3 ಸಾ	ಗ	ವಾ	4 ನಿ
ಪ್ರಾ	■	■	5 ವಿ	ಹ	ಗ	■	■	ನ
ದ	■	6 ಪ್ರ	ಬಾ	■	7 ಮಾ	ಯ	■	ದ
■	8 ಕ	■	9 ರ	10 ಸ	ನ	■	11 ಧು	■
12 ಪ್ರೋ	ದ	ಲ	■	ರ	■	13 ಕ	ದಾ	ಣಿ
■	ಳು	■	14 ಆ	ಸ	15 ರ	■	ಗಿ	■
16 ಅ	■	17 ಯೋ	ಗ	■	18 ತ್ಸ	ರ	■	19 ಮ
ಗಾ	■	■	ಮೆ	ಣು	ಕ	■	■	ನ್ನ
20 ರ	ಕ್ತ	ನಿ	ದ	■	21 ವಿ	ತ	ರ	ಣೆ



|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪುಟ ೨] MYSORE : MONDAY 17—1—38 ಮೈಸೂರು : ಸೋಮವಾರ ೧೭—೧—೩೮ [ಸಂಚಿಕೆ ೪೮

ಕಾಲವು ಪರಿಪಕ್ವವಾಗಿದೆ

ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಕಾಲವು ಪರಿಪಕ್ವವಾಗಿದೆಯೆಂದು ಡಾ|| ಪಟ್ಟಾಭಿ ಸೀತಾರಾಮಯ್ಯನವರು ಒಂದು ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಇದುವರೆಗೆ ಬ್ರಿಟಿಷ್ ಇಂಡಿಯದಲ್ಲಿ ಆಗಿರುವ ಎಲ್ಲಾ ಸುಧಾರಣೆಗಳಿಗಿಂತಲೂ ಮುಂಚೆ ಮೈಸೂರಿನಲ್ಲಿ ಆ ಸುಧಾರಣೆಗಳು ಜಾರಿಯಲ್ಲಿ ಬಂದಿವೆಯೆಂದೂ ಈಗ ಮಾತ್ರ ಮೈಸೂರು ಹಿಂದೆ ಬೀಳುವುದು ನ್ಯಾಯವಲ್ಲವೆಂದೂ ತಿಳಿಸಿದ್ದಾರೆ. ಪಕ್ಕದ ಪ್ರಾಂತಗಳಲ್ಲಿ ಮಹಾಜನರು ಯಾವ ಯಾವ ಕಷ್ಟ ಪರಂಪರೆಗಳನ್ನು ಅನುಭವಿಸಿದರೋ ಅವೆಲ್ಲಕ್ಕೂ ತಮ್ಮ ಪ್ರಜೆಗಳನ್ನು ಗುರಿಪಡಿಸದೆ ಕೂಡಲೇ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಸರ್ಕಾರದವರು ಏರ್ಪಾಡು ಮಾಡಬೇಕೆಂದು ಕೋರಿದ್ದಾರೆ. ನಮ್ಮ ಸರ್ಕಾರದವರು ಇದನ್ನು ವಿಶಾಲ ದೃಷ್ಟಿಯಿಂದ ಪರಿಶೀಲಿಸಲೆಂದು ಹಾರೈಸೋಣ.

ಪಾಟಿಯಾಲಾ ಮಹಾರಾಜರ ಭ್ರಮೆ

ಕಾಂಗ್ರೆಸ್ಸನ್ನು ಪ್ರತಿಭಟಿಸಲು ಒಂದು ಕೋಟಿ ಜನ ರಜಪೂತರನ್ನು ಸೇರಿಸಬೇಕೆಂದು ಪಾಟಿಯಾಲದ ರಾಜರು ಆಲೋಚಿಸಿದ್ದಾರೆ. ಅವರ ಆಸೆಯು ಎಷ್ಟು ಮಟ್ಟಿಗೆ ನೆರವೇರುವುದೆಂಬುದನ್ನು ಹೇಳಬೇಕಾಗಿಲ್ಲ. ರಾಜಪುತ್ರರು ವೀರರು, ಧೀರರು, ದೇಶಾಭಿಮಾನಪೂರ್ಣರು. ದೇಶದ ಸ್ವಾತಂತ್ರ್ಯಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡುವವರು. ರಾಜರಂತೆ ಸಾಮ್ರಾಜ್ಯಶಾಹಿಯ ಸಂಕೋಲೆಯಲ್ಲಿ ಸಿಕ್ಕಿ ನರಳುವವರಲ್ಲ. ಆದ್ದರಿಂದ ಒಂದು ಕೋಟಿ ಜನರು ಅವರ ಮಾತನ್ನು ಕೇಳಲು ಅವರೇನೂ ಕುರಿಗಳಲ್ಲ. ಪಾಟಿಯಾಲದ ರಾಜರು ಇತರ ರಾಜರುಗಳಂತೆ ಬ್ರಿಟಿಷ್ ಸಾಮ್ರಾಜ್ಯದ ಆಶ್ರಿತರು. ಅವರ ಸಾಮ್ರಾಜ್ಯ ಭಕ್ತಿಯು ಕಾಂಗ್ರೆಸ್ಸಿನ ಸ್ನೇಹದಲ್ಲಿ ಏಕೆ ಪರಿಣಮಿಸಬಾರದೋ ತಿಳಿಯದು. ಆತ್ಮಗೌರವವಿಲ್ಲದವರ ಹೇಳಿಕೆ ಇದು.

ಮೋಟಾರು ಟ್ಯಾಕ್ಸಿ ಮುಷ್ಕರ

ಬೊಂಬಾಯಿನ ಟ್ಯಾಕ್ಸಿ ಮಾಲೀಕರುಗಳಿಗೆ ಒಂದು ಹೊಸ ನಿರ್ಬಂಧವು ಬಂದಿದೆ. ಮಾರ್ಚಿ ತಿಂಗಳೊಳಗೆ ಎಲ್ಲಾ ಬಾಡಿಗೆ ಮೋಟಾರುಗಳಿಗೂ ಹೊಸ ಮೀಟರುಗಳನ್ನು ಹಾಕಿಸಬೇಕೆಂದು ಕಾನೂನಾಗಿದೆ. ಒಂದೊಂದು ಹೊಸ ಮೀಟರಿಗೆ ಮುನ್ನೂರು ರೂ. ಬೆಲೆ ಆಗುತ್ತದೆ. ಆದ್ದರಿಂದ ಸದರಿ ಮೋಟಾರು ಮಾಲೀಕರೆಲ್ಲರೂ ಒಗ್ಗಟ್ಟಾಗಿ ಕಳೆದ ಸೋಮವಾರ ಮುಷ್ಕರ ಹೂಡಿದರು. ಎಲ್ಲರೂ ಒಂದು ಬಹಿರಂಗ ಪ್ರದೇಶದಲ್ಲಿ ಸಾಲಾಗಿ ತಮ್ಮ ಮೋಟಾರುಗಳನ್ನು ನಿಲ್ಲಿಸಿಕೊಂಡು ಬಾಡಿಗೆಗೆ ಹೋಗದೆ ತಮ್ಮ ಅಸಮಾಧಾನವನ್ನು ತೋರ್ಪಡಿಸಿದರು. ನೂರಾರು ಮೋಟಾರುಗಳು ಸೇರಿದ್ದವು. ಎಲ್ಲಿ ನೋಡಿದರೂ ಬಾಡಿಗೆಗೆ ಮೋಟಾರುಗಳೇ ಸಿಕ್ಕುತ್ತಿರಲಿಲ್ಲ. ಈಗ ಅವರ ಮೇಲೆ ಹೊರಿಸಿರುವ ನಿರ್ಬಂಧವು ಬಹಳ ಕಷ್ಟಕರವಾದುದು. ಮುನ್ನೂರು ರೂಪಾಯಿಗೆ ಹಳೆಯ ಮೋಟಾರುಗಳೇ ದೊರೆಯುವ ಈ ಕಾಲದಲ್ಲಿ ಕೇವಲ ಮೀಟರುಗಳಿಗಾಗಿ ಅಷ್ಟು ಹಣವನ್ನು ಖರ್ಚು ಮಾಡಬೇಕೆನ್ನುವುದು ಎಲ್ಲಿಯ ನ್ಯಾಯ? ಆದರೂ ಈಗಿನ ಕಾಲದ ಪದ್ಧತಿಗಳೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಇದೇ ಮಾದರಿಯಲ್ಲಿರುತ್ತವೆ.

ಪ್ರತಿಬಂಧಕಾಜ್ಞೆಯ ರದ್ದು

ಬೊಂಬಾಯಿ ಅಧಿಸತ್ತೆಯ ಶೋಲಾಪುರದಲ್ಲಿ ಏಳು ವರ್ಷದ ಹಿಂದೆ ನಡೆದ ಗಲಭೆಯ ಸಂಬಂಧವಾಗಿ ಮಲ್ಲಪ್ಪ ಧನಶೆಟ್ಟಿ ಮುಂತಾದ ಹಲವು ದೊಡ್ಡ ಮನುಷ್ಯರನ್ನು ಮರಣ ದಂಡನೆಗೆ ಗುರಿಪಡಿಸಿದ್ದರಷ್ಟೆ. ಅವರುಗಳು ದೇಶಾಭಿಮಾನಿಗಳೂ ಜನಾನುರಾಗಿಗಳೂ ಆಗಿದ್ದರು. ಅವರ ಸ್ಮಾರಕ ದಿನವನ್ನು ಆಚರಿಸಲು ಅಲ್ಲಿನ ಹಲವು ಕಾರ್ಯಕರ್ತರು ಪ್ರಯತ್ನಪಟ್ಟರು. ಆದರೆ ಸೋಲಾಪುರದಲ್ಲಿ ಈಗ ಸಭಾ ಬಂಧನದ ಆಜ್ಞೆಗಳು ಜಾರಿಯಲ್ಲಿವೆ. ಆದರೂ ಈ ಸಮಾರಂಭವನ್ನು ನಡೆಸಬೇಕೆಂದು ಜನರು ಒತ್ತಾಯ ಮಾಡುತ್ತಿರುವರು. ಆದ್ದರಿಂದ ಸರ್ಕಾರದವರು ಇದಕ್ಕೆ ಅನುಮತಿ ಕೊಟ್ಟಿರುವರು. ಹಿಂದಿನ ಸರ್ಕಾರದವರು ಇದಕ್ಕೆ ಅವಕಾಶ ಕೊಟ್ಟಿಲ್ಲದಿದ್ದರೂ ತಾವು ಕೊಡುವುದಾಗಿ ತಿಳಿಸಿರುವರು. ಆದರೆ ಪ್ರಜೆಗಳು ಹಿಂಸಾತ್ಮಕ ಭಾವನೆಗಳನ್ನು ಸಭೆಗಳಲ್ಲೂ, ಮೆರವಣಿಗೆಗಳಲ್ಲೂ, ಹರಡಕೂಡದೆಂದು ಸೂಚಿಸಿದ್ದಾರೆ. ಇದೆಂತಹ ಸೌಹಾರ್ದ! ಮಾತೆತ್ತಿದರೆ ಸಭಾ ಬಂಧನ-ನಿರ್ಬಂಧನಗಳನ್ನು ಹಾಕುವುದು ಬಿಟ್ಟು ಈ ರೀತಿ ಅನ್ಯೋನ್ಯತೆಯಿಂದ ವರ್ತಿಸಿದರೆ ಉಭಯತ್ರರಿಗೂ ಕ್ಷೇಮವಲ್ಲವೆ?

ಸಹಕಾರ ಮತ್ತು ಬಹಿಷ್ಕಾರ

ಸ್ವದೇಶಿ ಕೈಗಾರಿಕೆಗೆ ಪ್ರೋತ್ಸಾಹ ಕೊಡುವುದಕ್ಕೂ ಪರದೇಶೀ ವಸ್ತುಗಳನ್ನು ಬಹಿಷ್ಕರಿಸುವುದಕ್ಕೂ ಸಹಕಾರ ಸಂಸ್ಥೆಗಳು ಅತ್ಯುತ್ತಮ ಸಾಧನಗಳು. ಆದರೆ ನಮ್ಮ ದೇಶದಲ್ಲಿ ಈ ಭಾವನೆಯು ಇನ್ನೂ ಬೇರೂರಿಲ್ಲದಿರುವುದು ವಿಷಾದಕರ. ಜಪಾನ್ ದೇಶವು ಚೀಣಾದ ಮೇಲೆ ನಡೆಸುತ್ತಿರುವ ಘೋರ ಕೃತ್ಯಗಳನ್ನು ಪ್ರತಿಭಟಿಸಲು ಎಲ್ಲಾ ಜನಾಂಗಗಳೂ ಜಪಾನ್ ಸರಕುಗಳನ್ನೂ ಬಹಿಷ್ಕರಿಸಬೇಕೆಂದು ಎಲ್ಲೆಲ್ಲೂ ಪ್ರಚಾರವಾಗುತ್ತಿದೆ. ಇಂಗ್ಲೆಂಡಿನಲ್ಲಿ ಇದು ಬಹಳ ಜೋರಾಗಿ ನಡೆಯುತ್ತಿದೆ. ಸುಮಾರು ಏಳು ಲಕ್ಷ ಜನರಿರುವ ಅಲ್ಲಿನ ಒಂದು ಸಹಕಾರ ಸಂಘವು ಜಪಾನ್ ವಸ್ತುಗಳನ್ನು ಕೊಂಡುಕೊಳ್ಳಲೇ ಕೂಡದೆಂದು ನಿರ್ಧರಿಸಿದೆ. ಇದರಂತೆ ಇನ್ನೂ ಅನೇಕ ಸಂಸ್ಥೆಗಳು ತೀರ್ಮಾನಿಸಿವೆ. ನಮ್ಮಲ್ಲಿ ಯಾವುದೋ ಸಹಕಾರ ಸಂಘಗಳಲ್ಲಿ ಪರದೇಶೀ ಮಾಲುಗಳೇ ಮಯವಾಗಿ ತುಂಬಿವೆ. ನಮ್ಮ ಜನವೂ ಸಹ ಅವುಗಳನ್ನೇ ಅಪೇಕ್ಷಿಸುತ್ತಾರೆ. ಈ ಪದ್ಧತಿಯನ್ನು ತಪ್ಪಿಸಲು ಸಹಕಾರ ಸಂಘಗಳೇ ಮೇಲ್ಪಂಕ್ತಿಯನ್ನು ಹಾಕಬೇಕು.

ಚಿತ್ರದುರ್ಗದಲ್ಲಿ ರಾಷ್ಟ್ರಕೂಟ!

ಕಳೆದ ಶುಕ್ರವಾರ ಚಿತ್ರದುರ್ಗದಲ್ಲಿ ನಡೆದ ರಾಷ್ಟ್ರಕೂಟದ ಅಧ್ಯಕ್ಷರಾಗಿ ಶ್ರೀಮಾನ್ ಚಂಗಲರಾಯ ರೆಡ್ಡಿಯವರು ಒಂದು ಅಮೋಘ ಭಾಷಣವನ್ನು ಮಾಡಿದರು. ಪ್ರಥಮದಲ್ಲಿ ಅವರು ನಮ್ಮ ಸಂಸ್ಥಾನದ ಭವಿಷ್ಯಯೋಗವು ಬಹು ಕ್ರೂರವಾಗಿದೆಯೆಂದು ತಿಳಿಸಿದರು. ಆದರೆ ನಾವು ತೇಲಿದರೆ ಕಾಂಗ್ರೆಸ್ಸಿನೊಡನೆ ತೇಲಬೇಕು, ಮುಳುಗಿದರೆ ಕಾಂಗ್ರೆಸ್ಸಿನೊಡನೆ ಮುಳುಗಬೇಕೆಂದರು. ಪೌರಸ್ವಾತಂತ್ರ್ಯ ರಕ್ಷಣೆಯು ಇಂದಿನ ಮುಖ್ಯ ಗುರಿ. ಅದನ್ನು ನಾವು ಸರ್ವ ವಿಧದಲ್ಲೂ ರಕ್ಷಿಸಬೇಕೆಂದರು. ಅವಶ್ಯಕವಿದ್ದರೆ ರಕ್ಷಣೆಯ (ಡಿಫೆನ್ಸ್) ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದಿರುವುದಾಗಿಯೂ ಸೂಚಿಸಿದರು. ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುವುದಕ್ಕೆ ಮುಂಚೆ ಸರ್ಕಾರದೊಡನೆ ವ್ಯವಹಾರ ಮಾಡಿ ತೃಪ್ತಿಕರವಾದ ಒಪ್ಪಂದವನ್ನು ಮಾಡಿಕೊಳ್ಳಲು ಸಿದ್ಧರಿರಬೇಕೆಂದೂ ಹೇಳಿದರು.

ಪ್ರಜೆಗಳ ಕೋರಿಕೆ ಏನು?

ಮೈಸೂರಿನ ಪ್ರಜೆಗಳ ಕೋರಿಕೆಗಳೇನೆಂಬುದನ್ನು ಶ್ರೀ|| ರೆಡ್ಡಿಯವರು ಈ ಕೆಳಗೆ ಕಂಡಂತೆ ವಿವರಿಸಿದರು:—೧. ಬ್ರಿಟಿಷ್ ಭಾರತದಲ್ಲಿ ಈಗಿರುವಷ್ಟು ಮಟ್ಟಿನ ಓಟಿನ ವ್ಯಾಪ್ತಿಯನ್ನಾದರೂ ಕೊಡಬೇಕು. ೨. ನ್ಯಾಯವಿಧಾಯಕ ಸಭೆಯಲ್ಲಿ ಸಾರ್ವಜನಿಕ ಸದಸ್ಯರೇ ಹೆಚ್ಚಾಗಿರಬೇಕು. ೩. ಪ್ರಜಾಪ್ರತಿನಿಧಿ ಸಭೆಗೂ ಮತ್ತು ನ್ಯಾಯವಿಧಾಯಕ ಸಭೆಗೂ ಚುನಾಯಿತ ಖಾಸಗೀ ಅಧ್ಯಕ್ಷರಿರಬೇಕು. ೪. ಶಾಸನ ಸಭೆಗಳಿಗೆ ಜವಾಬ್ದಾರಿಯಾದಂತಹ ಸಚಿವರೇ ಆಡಳಿತ ಸೂತ್ರಗಳನ್ನು ವಹಿಸಬೇಕು. ೫. ಕಂದಾಯ ವ್ಯವಸ್ಥೆಯಲ್ಲಿ ಸುಧಾರಣೆಗಳಾಗಬೇಕು. ೬. ಪಾನ ನಿರೋಧ ಕಾರ್ಯಕ್ರಮವು ಆಚರಣೆಗೆ ತರಲ್ಪಡಬೇಕು. ೭. ಸಾಲಸೋಲಗಳ ವಿಚಾರವನ್ನು ಫಲಪ್ರದವಾಗಿ ಎದುರಿಸಬೇಕು. ೮. ದೊಡ್ಡ ದೊಡ್ಡ ಅಧಿಕಾರಿಗಳ ಸಂಬಳಗಳಲ್ಲಿ ಕತ್ತರಿ ಪ್ರಯೋಗವಾಗಬೇಕು. ೯. ಕೂಲಿಗಾರರ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕು.

"ಖೂನಿಯು ನ್ಯಾಯಸಮ್ಮತವಾದುದು"

ಆತ್ಮರಕ್ಷಣೆಗಾಗಿ ಮಾಡಿದ ಯಾವ ಕೃತ್ಯವೂ ಅಪರಾಧವಲ್ಲ

ರಂಗೂನು ನ್ಯಾಯಾಧೀಶರ ಅದ್ಭುತ ತೀರ್ಪು

ಆಫ್ರೋರಿಂಡಿನಲ್ಲಿ ಪ್ಯಕೋರ್ಟಿನ ನ್ಯಾಯಾಧೀಶರಾದ ಸರ್ ಡಗ್ಲಸ್ ಯಂಗ್ ರವರೂ, ಜಸ್ಟಿಸ್ ಟಬ್ಬುಲ್ ರವರೂ ಒಂದು ಆಶ್ಚರ್ಯಕರವಾದ ತೀರ್ಪನ್ನು ಹೇಳಿ ಆತ್ಮರಕ್ಷಣೆಯ ತತ್ವವನ್ನು ಬಹಳ ಸೊಗಸಾಗಿ ಪ್ರತಿಪಾದಿಸಿದ್ದಾರೆ. ಒಬ್ಬ ಪೋಲೀಸ್ ಕಾನ್ಸ್ಟೇಬಲನ್ನು ಖೂನಿ ಮಾಡಿದನೆಂಬ ಆಪಾದನೆಯ ಮೇಲೆ ಜನ್ಮಾವಧಿ ಶಿಕ್ಷೆಗೆ ಒಳಗಾಗಿದ್ದ ಅಪರಾಧಿಯೊಬ್ಬನನ್ನು ನಿರಪರಾಧಿಯೆಂದು ನಿರ್ಣಯಿಸಿ ಖುಲಾಸೆ ಮಾಡಿದ್ದಾರೆ.

ಮೊಕದ್ದಮೆ ವಿವರಗಳು ಹೀಗಿವೆ:— [illegible] ಒಂದು ಕ್ಲಬ್ಬು, ಅಲ್ಲಿ ಕೈರೂ ಎಂಬೊಬ್ಬ ಸೇವಕ. ಕ್ಲಬ್ಬಿನಲ್ಲಿ ಒಂದು ಕಳ್ಳತನ ನಡೆಯಿತು. ಕೈರುವಿನ ಮೇಲೆ ಗುಮಾನಿ ಬಂತು. ಪೋಲೀಸರು ಬಂದರು. [illegible] ಅವನಿಂದ "ಪಾಸ್ ವಾರಂಟ್" [illegible] ಕೈರುವು [illegible] ಒಂದು ಕತ್ತಿ [illegible] ಕೊಂಡು ಹೋದನು. [illegible] ಒಂದು ಚಾಕುವು ಅವನ ಕೈಗೆ [illegible] ಕೂಡಲೇ ಆ ಚಾಕುವನ್ನು [illegible] ಅದರಿಂದ ಪೋಲೀಸಿನವನನ್ನು [illegible] ದುಕೊಂಡನು. [illegible] ತಕ್ಷಣವೇ ಸತ್ತು ಹೋದನು. ಅವರ ಕೈರುವೂ ಅವನ [illegible] ಕೊಂಡರು. [illegible] ಪೋಲೀಸಿನವನನ್ನು ಖೂನಿ ಮಾಡಿದ್ದ [illegible] ಶಿಕ್ಷೆಯನ್ನು ವಿಧಿಸಿದರು.

ಈ ಮೊಕದ್ದಮೆಯಲ್ಲಿ [illegible] ಕೈರುವಿನ ಕಡೆ [illegible] ಮೋಹನ್ [illegible] ಪೋಲೀಸರು ಕೈರುವನ್ನು [illegible] ತ್ರಿವ್ಯಾಪನ್ನು [illegible] ಹೊಸದ [illegible] ಜಡ್ಜರು ಶಿಕ್ಷೆ ವಿಧಿಸಿದ್ದರು.

ಅವರ ಮೇಲೆ ಹೈಕೋರ್ಟಿಗೆ ಅಪ್ಪೀಲಾಯಿತು. [illegible] ಯ ಮಾರ್ಗಗಳು [illegible] ಯದಲ್ಲಿ ಅವರು [illegible] ಬಹಳ ಅಮೂಲ್ಯವಾಗಿವೆ. [illegible] ಭಾವವೇನೆಂದರೆ.

[illegible]

[illegible]

ಅಂಬೇಡ್ಕರರ ಗೋಳಾಟ

ಡಾಕ್ಟರ್ ಅಂಬೇಡ್ಕರರು ಹೊಂಬಾ[illegible] [illegible] ಬಹುದು. [illegible] ಎಲ್ಲರಿಗೂ ಗೊತ್ತು. [illegible] ಅವರು ಅನೇಕ ಕಾರ್ಯಸಾಧನೆಗಳನ್ನು ಮಾಡತೊಡಗಿದರು. ಎಲ್ಲವೂ ವಿಫಲವಾಯಿತು. ಈಗ ಮಹಾತ್ಮರುಗಳನ್ನೂ, ಯೋಗಿಗಳನ್ನೂ ತಿರಸ್ಕರಿಸಿ ಮಾತನಾಡುತ್ತಿದ್ದಾರೆ. ಇತರ ದೇಶಗಳಲ್ಲಿ [illegible] ರೆಂದು ಕರೆಸಿಕೊಳ್ಳಲು ಸಾಮಾನ್ಯವಾಗಿ [illegible] ಮಾಡಿದರೆ ಅಂತಹವರನ್ನು ನಮ್ಮ ದೇಶದಲ್ಲಿ ಮಹಾತ್ಮರೆಂದೂ ಯೋಗಿಗಳೆಂದೂ ಕರೆಯುವರೆಂದು ಇವರ ಅಭಿಪ್ರಾಯ. ಪ್ರಜಾಪ್ರಭುತ್ವವು ಬಂದರೆ ಅಧಿಕಾರವೆಲ್ಲಾ ಕಾಂಗ್ರೆಸ್ಸಿನವರ ಕೈಗೆ ಹೋಗಿಬಿಡುತ್ತದೆಂದು ಅವರ ಭೀತಿ. ಇಂತಹವರು ನಮ್ಮ ಸಂಸ್ಥಾನದಲ್ಲಿಯೂ ಈಗ ಅನೇಕರು ಇರುವರಲ್ಲವೆ?

ನನ್ನು ವಿಮರ್ಶಿಸಿದ್ದಾರೆ. ಅವರು ಹೇಳಿದ್ದೇನೆಂದರೆ:—

[illegible]

DON'T SAY

"CAN'T AFFORD"

Who carries risk on your life? If you are not insured, your wife and children carry it. And if you die without insurance your family has to bear the loss. Would you like to let them carry the risk any longer? And above all, who would like to leave them for someone else to support?

May we suggest you to call on any of our nearest representatives or write to us for necessary advice?

National Insurance Co., Ltd.,

(Head Office—Calcutta)

Sub-Office:—

DEVANGA BANK BUILDINGS,

KEMPEGOWDA ROAD, — BANGALORE CITY

ನಿರ್ಬಂಧ ವಿವಾಹ

ಲೇಖಕರು:—ಶ್ರೀ|| ಆರ್. ರಂಗಯ್ಯ, ಬಿ.ಎ.

ಮುದುಕರಿಗೆ ಮದುವೆಯಾಗುವುದು ಒಪ್ಪಿಯುದಲ್ಲವೆಂಬ ಭಾವನೆಯು ನಮ್ಮಲ್ಲಿ ಚೆನ್ನಾಗಿ ಬೇರೂರಿದೆ. ನಮ್ಮ ಸಮಾಜದಲ್ಲಂತೂ ಮುದುಕನಾದ ಗಂಡಿಗೆ ಪ್ರಾಯದ ಹುಡುಗಿಯರನ್ನು ಕೊಟ್ಟು ಲಗ್ನ ಮಾಡಿಸುವುದು ಆಗಿಂದಾಗ ಗೋಚರವಾಗುತ್ತಲೇ ಇದೆ. ಆದರೆ ಮುದುಕಿಯನ್ನು ಚಿಕ್ಕ ಹುಡುಗನು ಮದುವೆಯಾಗುವ ಸಂಭವವಿರುವುದೇ ಇಲ್ಲ.

ಹಾಗೂ ಹಿಂದುಗಳಲ್ಲದ ಇತರ ಜಾತಿಯವರಲ್ಲಿ ವಧೂವರರಿಬ್ಬರೂ ವೃದ್ಧರಾಗಿರುವುದುಂಟು. ಬಾಲ್ಯದಲ್ಲಿ ಅವರಿಗೆ ವಿವಾಹದ ಗೀಳೇ ಇಲ್ಲದೆ ಅಂತ್ಯಕಾಲದಲ್ಲಿ ಲಗ್ನವಾಗಬೇಕೆಂಬ ಚಪಲವು ಹುಟ್ಟಿ ಹೀಗಾಗಬಹುದು. ತಮಗಿಂತ ವಯಸ್ಸಿನಲ್ಲಿ ಅಧಿಕರಾದ ಸ್ತ್ರೀಯರನ್ನೂ ವಿಧವೆಯರನ್ನೂ ಲಗ್ನವಾಗುವ ಪ್ರಸಂಗವು ಅನ್ಯ ಜಾತಿಯವರಲ್ಲಿ ಪ್ರಬಲವಾಗಿದೆ.

ಆದರೆ ಹಿಂದೂಗಳಲ್ಲಿ ಸ್ತ್ರೀಗೆ ಲಗ್ನವೆಂಬುದು ಆವಶ್ಯಕವೆಂದು ಶಾಸ್ತ್ರಗಳ ಹೇಳಿಕೆಯಿದೆ. ನಾಗರೀಕತೆಯು ಉಪದ್ರವದಿಂದ ಕಟ್ಟುಗಳು ಸಡಿಲವಾಗಿ ಜನರು ಸ್ವೇಚ್ಛಾ ಪ್ರವರ್ತಕರಾಗುತ್ತಿದ್ದಾರೆ. ಎಷ್ಟು ಹುಡುಕಿದರೂ ಪ್ರಾಪ್ತ ವಯಸ್ಕರಾದ ಕನ್ಯೆಯರಿಗೆ ವರನು ಲಭ್ಯವಾಗುವುದಿಲ್ಲ. ಜೀವನದ ಖರ್ಚು ವಿಪರೀತವಾಗುತ್ತಿದೆ. ಸರಳ ಜೀವನವೂ ನೀತಿಮಾರ್ಗವೂ ನಾಶವಾಗುತ್ತಿವೆ.

ಹೆಣ್ಣಿನ ಕಡೆಯ ಹಣವೆಂದರೆ ಅದಕ್ಕೆ ಪ್ರಾಯದ ಹುಡುಗರು ಸುಲಭವಾಗಿ ತಮ್ಮನ್ನು ಮಾರಿಕೊಳ್ಳುವರು. ಇವರ ಮೇಲೆ ತಿದ್ದಿದ ರೂಪವಿರಬೇಕು. ಇವೆರಡೂ ಇಲ್ಲದ ಕನ್ಯೆಯರಿಗೆ ಈ ಆಧುನಿಕ ಸಂಸ್ಕೃತಿಯ ನವಯುಗದಲ್ಲಿ ವಿಧಾತನು ವರಗಳನ್ನು ಸೃಷ್ಟಿಸಿರುವನೇ ಇಲ್ಲವೇ ಎಂಬ ಅನುಮಾನ ಹುಟ್ಟುವುದು.

ಆದುದರಿಂದ ಇನ್ನು ಮೇಲೆ ವೃದ್ಧ ಕನ್ಯೆಯರಿಗೆ ಪ್ರಾಯದ ವರಗಳನ್ನು ಹೊಂದಿಸಬೇಕಾಗುವುದು. ಕನ್ಯೆಯರು ವಿದ್ಯಾರ್ಜನೆ ಮಾಡಿ ನಂತರ ನೌಕರಿಯಿಂದ ದ್ರವ್ಯವನ್ನು ಸಂಗ್ರಹಿಸಿ ಆ ದ್ರವ್ಯದ ಮೂಲಕ ವರಗಳನ್ನು ಆಕರ್ಷಿಸಬೇಕಾಗುವುದು. ಆ ದ್ರವ್ಯಕ್ಕಾಗಿ ಬಂದ ಪತಿಗಳು ಪತ್ನಿಯ ಸಾವನ್ನೇ ಎದುರುನೋಡುತ್ತಾ ಇದ್ದು ಅನಂತರ ಆಕೆಯ ಹಣದಿಂದ ಬೇರೆ ಲಗ್ನವಾಗಬಹುದು. ಅಥವಾ ಹೊಸ ಕಾನೂನು ಒಂದು ಶಾಸನಾನುಸಾರ ವೃದ್ಧ ಪತ್ನಿಯು ಸ ಕಾರಣವಾಗಿ ವಿವಾಹ ಸಂಬಂಧದಿಂದ ವಿಚ್ಛೇದನವನ್ನು ಬಯಸಿ ಆ ತರುಣ ಪತಿಯನ್ನು ಶ್ರೀರಂಗ ಸ್ವರ್ಗಕ್ಕೆ ಕಳುಹಿಸಬಹುದು.

ಈ ರೀತಿಯ ಊಹಾಪೋಹಗಳನ್ನು ವಿಮರ್ಶಿಸಿದರೆ ನಮ್ಮ ಜನರಿಗೆ ಜ್ಞಾನೋದಯವಾಗಬಹುದು. ಪ್ರತಿಯೊಬ್ಬ ಪ್ರಾಯದ ಹುಡುಗನೂ ಒಬ್ಬ ಕನ್ಯೆಯನ್ನು ಮದುವೆಯಾಗಿ ರಕ್ಷಿಸಲೇ ಬೇಕು. ಇಲ್ಲದಿದ್ದರೆ ಅವನಿಗೆ, ಗೃಹಸ್ಥನಲ್ಲದ ಕಾರಣ, ಯಾವ ಸರಕಾರದಲ್ಲಾಗಲಿ ನಾವಕಾರದಲ್ಲಾಗಲಿ ನೌಕರಿ ಕೊಡಬಾರದು. ಇದರಿಂದ ವ್ಯಭಿಚಾರಕ್ಕೂ ವೃದ್ಧ ವಿವಾಹಕ್ಕೂ ಅಡ್ಡಿ ಬರುವುದು.

ಹಾಗೆ ಮಾಡದೆ ಸುಮ್ಮನೆ ಸಭೆ ಮಾಡಿ ನಿರ್ಣಯಗಳನ್ನು ಮಾಡಿದರೆ ಹಾಸ್ಯಾಸ್ಪದರಾಗುವೆವು. ಅಂತಹ ನಿರ್ಣಯವು ಕಾರ್ಯಕಾರಿಯಾಗಬೇಕಾದರೆ ಮೇಲೆ ತಿಳಿಸಿರುವ ಉಪಾಯವನ್ನು ಅನುಸರಿಸಬೇಕು.

ಈಗಿನ ನಾಗರೀಕತೆಯಲ್ಲಿ ಅನೀತಿ, ವ್ಯಷ್ಟಿ ಜೀವನ, ವ್ಯಭಿಚಾರ ಮತ್ತು ವೃದ್ಧ ವಿವಾಹಗಳು ಇಮ್ಮಡಿಯಾಗಿವೆ. ಇದನ್ನು ತಪ್ಪಿಸಲು ಒಂದೇ ಮಾರ್ಗ. ಈಗ ನಿರುದ್ಯೋಗದ ಯುಗವಾದುದರಿಂದ ಲಗ್ನವಾಗದವರಿಗೆ ಕೆಲಸ ದೊರೆಯುವುದಿಲ್ಲವೆಂದು ರಿಕ್ರೂಟ್‌ಮೆಂಟು ಬೋರ್ಡಿನವರು ವಿಧಾಯಕ ಮಾಡಿದರೆ ಕನ್ಯಾ ಪಿತೃಗಳಿಗೆ ಮಹದುಪಕಾರವಾಗುವುದು. ಲಗ್ನಕ್ಕಾಗಿ ಸಾಲ ಮಾಡುವುದು ಕಡಿಮೆಯಾಗಿ ವ್ಯಭಿಚಾರ ವೃದ್ಧ ವಿವಾಹಗಳು ನಿಲ್ಲುವುವು.

ವಿತಂತುವಲ್ಲದ, ವಿವಾಹಿತರಾದ ವಿದ್ಯಾವತಿಯರಿಗೆ ನೌಕರಿಗಳನ್ನೇ ಕೊಡಕೂಡದು. ಗಂಡಂದಿರಿಬ್ಬರೂ ಸಂಪಾದನೆಗಾಗಿ ನೌಕರಿಯಲ್ಲಿರಕೂಡದು. ಈ ನಿಯಮದಿಂದ ವ್ಯಸ್ತರಿಯು ಕಡಿಮೆಯಾಗಿ ನೌಕರಿಗಳೂ ದೊರೆಯುವುವು.

ವೃದ್ಧ ನೌಕರರು ಮದುವೆಯಾದರೆ ಅವರನ್ನು ನೌಕರಿಯಿಂದ ವಜಾಮಾಡಬೇಕು. ಹಿಂದಿನಂತೆ ಈಗಲೂ ಧರ್ಮದ ವಿವಾಹಗಳಿಗೆ ಪ್ರೋತ್ಸಾಹವಿರಬೇಕು. ವಿವಾಹಕ್ಕೆ ಪ್ರೋತ್ಸಾಹವಿದ್ದರೆ ವ್ಯಭಿಚಾರಕ್ಕೆ ಪ್ರೋತ್ಸಾಹವಿಲ್ಲ. ಸಕಾಲದಲ್ಲಿ ಪ್ರಾಪ್ತ ವಯಸ್ಕರ ವಿವಾಹಕ್ಕೆ ಪ್ರೋತ್ಸಾಹ ಕೊಡದಿದ್ದರೆ ವ್ಯಭಿಚಾರಕ್ಕೂ, ವೃದ್ಧ ವಿವಾಹಕ್ಕೂ ಪ್ರೋತ್ಸಾಹ ಕೊಟ್ಟಂತಾಗುವುದು.



ಅತ್ಯುತ್ತಮವಾದ
ಶಾಯಿಪುಡಿ
ಮೈಸೂರು ಕೌಸಲ್ಯ ಸ್ಟೋರ್ಸ್ನಲ್ಲಿ ದೊರೆಯುತ್ತದೆ.
ಎಲ್ಲಾ ಕಡೆಯಲ್ಲಿಯೂ ಏಜಂಟರು ಬೇಕಾಗಿದ್ದಾರೆ.

ಕನ್ನಡ ಸೇವಾ ಸಮಾಜ,
ಗುಂಡ್ಲುಪೇಟೆ

ಗುಂಡ್ಲುಪೇಟೆಯಲ್ಲಿ ೬—೧—೩೮ ನೇ ಶುಕ್ರವಾರದ ದಿವಸ ಕನ್ನಡ ಸೇವಾ ಸಮಾಜವು ಸ್ಥಾಪಿಸಲ್ಪಟ್ಟಿತು. ಪ್ರಾತಃಕಾಲ ಕಂಠಪಾಠಸ್ಪರ್ಧೆಯು ನಡೆದು ಗೆದ್ದ ಎಳೆ ಬಾಲಕ ಬಾಲಕಿಯರಿಗೆ ಎಳ ಬಹುಮಾನಗಳು ಪುಸ್ತಕ ರೂಪವಾಗಿ ಹಂಚಲ್ಪಟ್ಟವು. ಸಾಯಂಕಾಲ ಪ್ರೈಮರಿ ಸ್ಕೂಲ್ ಮಂಟಪದಲ್ಲಿ ಸಭೆ ಸೇರಿ ೩೦೦—೪೦೦ ಜನ ಗಂಡಸರೂ, ಹೆಂಗಸರೂ ಸೇರಿದ್ದರು. ಬಾಲಕಿಯರಿಂದ ಪ್ರಾರ್ಥನೆಯಾಯಿತು. ಮ|| ಶ್ರೈ|| ಸ್ಕೂ|| ಮಾ|| ಎ. ತಿರುವೆಂಕಟಾಚಾರ್ಯರು ಸ್ವಾಗತ ಭಾಷಣವನ್ನು ಮಾಡಿದರು. ಮ|| ರಾ|| ಎಂ. ವಿ. ನಾರಾಯಣರಾಯರು ತಾವು ರಚಿಸಿದ್ದ ಮತ್ತು ಮ|| ಜಿ. ಎಸ್. ನಾರಾಯಣ್‌ರವರಿಂದ ರಚಿಸಲ್ಪಟ್ಟ ಗೀತೆಗಳನ್ನು ಹಾಡಿದರು. ಮ|| ರಾ|| ಹೆಚ್. ಎಸ್. ರಾಮಣ್ಣನವರು ಕನ್ನಡದ ವಿಚಾರವಾಗಿಯೂ, ಕರ್ನಾಟಕದ ವಿಚಾರವಾಗಿಯೂ ಬಹು ಸ್ವಾರಸ್ಯವಾದ ಭಾಷಣ ಮಾಡಿದರು. ಮ|| ರಾ|| ಹೆಚ್. ವಿ. ಶೇಷಗಿರಿರಾಯರೂ ಮತ್ತು ನಾಗಭೂಷಣರಾಯರೂ ಒಂದೆರಡು ವ್ಯಕ್ತಿಗಳನ್ನು ಪ್ರದರ್ಶಿಸಿದರು. ಮ|| ರಾ|| ಮಾ|| ಎಂ. ರಂಗಸ್ವಾಮಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿ ಭಾಷಣವಾದನಂತರ ಮ|| ಆರ್. ಸುಬ್ಬನರಸಿಂಹಯ್ಯನವರು, ವಂದನಾಸಮರ್ಪಣೆ ಮಾಡಿದರು. ಶ್ರೀಮನ್ನಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.

ಈ ಕನ್ನಡ ಸೇವಾಸಮಾಜಕ್ಕೆ ಕನ್ನಡಿಗರೆಲ್ಲಾ ಸಹಾಯವನಿತ್ತು ಸಂಘವನ್ನು ಅಭಿವೃದ್ಧಿ ಸ್ಥಿತಿಗೆ ತಂದು ಕನ್ನಡಕ್ಕೆ ಉತ್ತೇಜನಕೊಡಬೇಕಾಗಿ ಬೇಡುತ್ತೇವೆ.

ಇದೇ ತಿಂಗಳು 9 ನೇ ಭಾನುವಾರದ ದಿನ ಸಂಜೆ ೬ ಘಂಟೆಗೆ ಸರಿಯಾಗಿ ಪ್ರೈಮರಿ ಸ್ಕೂಲ್ ಕಟ್ಟಡದಲ್ಲಿ, ಮೇಲ್ಕಂಡ ಸಮಾಜದ ಆಶ್ರಯದಲ್ಲಿ ಶ್ರೀಮಾನ್ ನಾರಾಯಣರಾಯರಿಂದ ಸುಶ್ರಾವ್ಯವಾಗಿ ಭಾರತ ವಾಚನವು ನಡೆಯಿತು. ನಂತರ ಶ್ರೀಮಾನ್ ರಾಮಣ್ಣನವರು ರಾಜಶೇಖರ ವಿಲಾಸದ ಕೆಲವು ಭಾಗಗಳನ್ನು ಬಹಳ ಸುಶ್ರಾವ್ಯವಾಗಿ ಓದಿದರು. ಶ್ರೀಮಾನ್ ನಂಜುಂಡಸ್ವಾಮಿಯವರು ಬಹಳ ಸ್ವಾರಸ್ಯವಾಗಿ ಅರ್ಥ ಹೇಳಿದರು. ವಂದನಾರ್ಪಣವು ಕೊನೆಯಾದ ನಂತರ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಶ್ರೀ ಕರ್ನಾಟಕ ಮಾತೇ ಮಹಾ ಮಹಿಮಳೇ
ಕೌಶಲ್ಯ ಸುಕ್ಷೇತ್ರ ಪೀಠ ।
ಅಖಿಲ ಸಾಹಿತ್ಯ ಕೋಕಿಲಾರಾವ ಸಂತೋಷಿಣಿ
ಬಾಗಿ ಬಾಲಕರ್ಗೆ ।
ಕೇಲಾಸವಾದದ ಸುಖ ಕರ್ಮಾದಿ ಕೈಯಿಂ
ಬಾಲಕರ್ಗಳ ಕೂಡುತೀ
ಶೀಲವರ್ಗ ಭಾಷೆಯ ಬೆಳೆಸಲಾ
ನಾರಾಯಣಾ ಪ್ರೇರಕೇ

ಜಿ. ಎಸ್. ನಾರಾಯಣ್.

ಸ್ತ್ರೀ ಮಹಿಮೆ

ಪೂರ್ವಕಾಲದಲ್ಲಿ ಸ್ತ್ರೀಯರು ವೇದಜ್ಞರೂ ಮಹಾ ಜ್ಞಾನಿಗಳೂ ಆಗಿದ್ದರು. ಆದುದರಿಂದಲೇ ಅವರ ಅಧಿಕಾರವೂ ಸ್ವಾತಂತ್ರ್ಯವೂ ವಿಶೇಷವಾಗಿದ್ದಿತು. ಜ್ಞಾನದಿಂದಲೇ ಸ್ತ್ರೀ ಪುರುಷರು ಮುಕ್ತರಾಗುವರು. ಪೂರ್ಣ ಸ್ವಾತಂತ್ರ್ಯರಾಗುವರು. ಸುಖದುಃಖಾತೀತರಾಗುವರು ಎಂದು ಶ್ರುತಿಗಳು ಸಾರುವವು. ಹೀಗಿರುವಾಗ ಸ್ವಗೃಹದಲ್ಲಿ ಪ್ರತಿಯೊಬ್ಬ ಸ್ತ್ರೀಯನ್ನು ಪೂರ್ವಕಾಲದ ಆದರ್ಶ ಮಹಿಳೆಯಂತೆ ಜ್ಞಾನಸಂಪನ್ನರಾಗಿ ಮಾಡಬೇಕಿರುವುದು ಪ್ರತಿಯೊಬ್ಬ ಮಾನವನ ಮುಖ್ಯ ಕರ್ತವ್ಯವಾಗಿದೆ.

○ ○ ○

ಶುದ್ಧ ಪ್ರೇಮವಿಲ್ಲದೆ ನಿಜವಾದ ಆನಂದವು ಲಭಿಸದು. ನಿಜವಾದ ಆನಂದವಿಲ್ಲದೆ ಸುಪ್ರಜೋತ್ಪಾದನೆಯಾಗಲಾರದು. ಆ ನಂದೋತ್ಪತ್ತಿಗಾಗಿ ಸತಿಪತಿಯರಲ್ಲಿ ಪರಿಶುದ್ಧವಾದ ಪ್ರೇಮವಿರುವುದು ಆವಶ್ಯಕ. ಇಂತಹ ಪ್ರೇಮೋತ್ಪತ್ತಿಗಾಗಿ ಸ್ತ್ರೀಪುರುಷರಿಗೆ ಧರ್ಮನೀತಿ ಶಿಕ್ಷಣವು ಅವಶ್ಯಕವು.

○ ○ ○

ಸಂಸಾರದಲ್ಲಿ ಸ್ತ್ರೀಯು ಪುರುಷನಿಗೆ ಅರ್ಧಾಂಗಿಯೂ ಪರಮ ಮಿತ್ರಳೂ ಆಗಿರುವಳು. ಅವನ ಧರ್ಮಕಾರ್ಯಗಳೆಲ್ಲದರಲ್ಲಿಯೂ, ಅವನ ಸಂಪದಭಿವೃದ್ಧಿಕಾರ್ಯಗಳಲ್ಲಿಯೂ ಸಹಾಯ ಮಾಡುವಳು. ಆದುದರಿಂದ ಭಾರ್ಯಾವಂತರೇ ಕ್ರಿಯಾವಂತರೂ, ಪುಣ್ಯಶಾಲಿಗಳೂ ಆಗಿರುವರು.

○ ○ ○

ಸ್ತ್ರೀಯರೇ ಜಗತ್ತಿನ ಜನನಿಯು. ಈ ಸ್ತ್ರೀಯರ ಉಪಕಾರವೆಂಥಾದ್ದೆಂಬುದು ತಿಳಿಯಲ್ಪಟ್ಟಿದೆ. ದೇವದೂತರೆಂದು ಹೇಳಿಸಿಕೊಂಡವರಾಗಲಿ, ಮಹಾ ಯೋಧಾಗ್ರಣಿಗಳಾಗಲಿ, ಆಚಾರ್ಯರಾಗಲಿ, ಪ್ರಚಂಡ ಬಲಶಾಲಿಗಳಾಗಲಿ, ಧರ್ಮಸಂಸ್ಥಾಪಕರಾಗಲಿ, ಅದ್ಭುತ ಶೋಧನೆಗಳನ್ನು ಮಾಡಿ ಪ್ರಪಂಚವನ್ನೇ ಬೆರಗುಗೊಳಿಸಿದವರಾಗಲಿ, ಯೋಗಿ, ಭೋಗಿ, ತ್ಯಾಗಿ, ಯಾರೇ ಆದರೂ ಇವರೆಲ್ಲರೂ ಸ್ತ್ರೀಯಳ ಹೊಟ್ಟೆಯಲ್ಲಿಯೇ ಹುಟ್ಟಿ, ಆವಳ ಮಡಿಲಲ್ಲಿ ಮಲಗಿ, ತೊಡೆಯ ಮೇಲೆ ಆಡಿ ಅವಳಿಂದಲೇ ಪೋಷಿತರಾಗಿ ಹೊಂದಿ ಬೆಳೆದು ದೊಡ್ಡವರಾಗಿಲ್ಲವೇ?

ಜರಗನಹಳ್ಳಿ ನಂಜುಂಡಪ್ಪ

ಜಯ ಕರ್ನಾಟಕ ಮಾತೆಯ
ಜಯ ಕವಿವರ್ಯರ ದಾತೆಯ
ಜಯ ಕಲೆಗಳ ಭೂಮಿಯು
ಜಯ ಕೃಷಿಕರ ಹಾದಿಯು
ವಿಜಯಪುರದೊಳು ಸ್ಥಾಪಿಸಿದ
ವಿಜಯ ಕನ್ನಡ ಸೇವೆಗೆ
ವಿಜಯ ಸಾಧಿಸಲಾದ ನಮ್ಮನು
ವಿಜಯ ನಾರಾಯಣನ ಸಲಹು ।

ಎಂ. ವಿ. ನಾರಾಯಣರಾವ್,
ಗುಂಡ್ಲುಪೇಟೆ.

ಸಾಧ್ವಿ

೧೭—೧—೩೮ ನೇ ಸೋಮವಾರ

ಚೀನಾಕ್ಕೆ ಸಹಾನುಭೂತಿ.

[illegible]

ಹರಿಜನಸಭೆಗೂ ರಾಜೀನಾಮೆ.

[illegible]

ಪಠೇಲ್ [illegible]

ಕಾಂಗ್ರೆಸ್ [illegible]

ಅಬಿಸೀನಿಯದ ಚಕ್ರವರ್ತಿಯ ಆತ್ಮಾಭಿಮಾನ

[illegible]

ಸರಕಾರಗಳಿಗೆ ಎಚ್ಚರಿಕೆ!

[illegible]

ಬಂಗಾಳದಲ್ಲೂ ಪಾನ ನಿರೋಧ

[illegible]

ಸ್ವಾತಂತ್ರ್ಯ ಪ್ರತಿಜ್ಞೆ

ಜನವರಿ ೨೬ನೇ ತಾರೀಖನ್ನು ಪ್ರತಿ ವರ್ಷವೂ ಭರತಖಂಡದಲ್ಲೆಲ್ಲಾ ಸಂಪೂರ್ಣ ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಲಾಗುತ್ತಿದೆ. ಆ ದಿನ ಭಾರತೀಯರೆಲ್ಲರೂ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಳ್ಳುವರು. ಬೊಂಬಾಯಿನಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ಪ್ರತಿಜ್ಞೆಯನ್ನು ಈ ಕೆಳಗೆ ಕಂಡಂತೆ ತಿದ್ದರಿಸಿದ್ದಾರೆ. ಇದನ್ನು ಈ ಸಾರಿ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾರತೀಯರೆಲ್ಲಾ ತೆಗೆದುಕೊಳ್ಳುವರು.

ಪ್ರತಿಜ್ಞೆಯ ವಿವರ

ಸ್ವಾತಂತ್ರ್ಯವನ್ನು ಹೊಂದುವುದಕ್ಕೂ, ತಮ್ಮ ಶ್ರಮದ ಫಲವನ್ನು ಉಪಯೋಗಿಸುವುದಕ್ಕೂ ತಮ್ಮ ಜೀವನಕ್ಕೆ ಬೇಕಾದ ಅವಶ್ಯಕತೆಗಳನ್ನು ಪಡೆದು ತಮ್ಮ ಅಭಿವೃದ್ಧಿಗೆ ಸಮಾನವಾದ ಅವಕಾಶವನ್ನು ಪಡೆಯುವುದಕ್ಕೂ, ಇತರ ಎಲ್ಲಾ ಜನಾಂಗಗಳಂತೆಯೇ ಭಾರತೀಯರಿಗೂ ಸಹ ಸಂಪೂರ್ಣವಾಗಿ ಹಕ್ಕಿರಬೇಕೆಂದು ನಾವು ನಂಬುತ್ತೇವೆ. ಯಾವುದಾದರೂ ಸರ್ಕಾರವು ಅವರಿಗೆ ಹಕ್ಕುಗಳನ್ನು ನಿರಾಕರಿಸಿ ಅವರ ಮೇಲೆ ದಬ್ಬಾಳಿಕೆ ನಡೆಸಿದರೆ, ಅಂತಹ ಸರ್ಕಾರವನ್ನು ಬದಲಾಯಿಸುವುದಕ್ಕಾಗಲೀ ಅಥವಾ ಅದನ್ನು ನಾಶ ಮಾಡುವುದಕ್ಕಾಗಲೀ ಜನರಿಗೆ ಸಂಪೂರ್ಣವಾದ ಅಧಿಕಾರವಿದೆಯೆಂದೂ ನಾವು ನಂಬುತ್ತೇವೆ. ಹಿಂದೂಸ್ಥಾನದಲ್ಲಿ ಬ್ರಿಟಿಷ್ ಸರ್ಕಾರವು ಭಾರತೀಯರ ಸ್ವಾತಂತ್ರ್ಯಕ್ಕೆ ಹಾನಿ ಮಾಡಿರುವುದಲ್ಲದೆ ಪ್ರಜಾ ಸಾಮಾನ್ಯರನ್ನು ಸೂರೆಯ ನೀತಿಯನ್ನೇ ಅನುಸರಿಸುತ್ತಿದೆ. ಹಿಂದೂಸ್ಥಾನವನ್ನು ಆರ್ಥಿಕವಾಗಿಯೂ, ರಾಜಕೀಯವಾಗಿಯೂ, ಸಾಂಸ್ಕೃತಿಕವಾಗಿಯೂ, ಆಧ್ಯಾತ್ಮಿಕವಾಗಿಯೂ, ನಾಶ ಮಾಡಿರುತ್ತದೆ. ಆದ್ದರಿಂದ ಹಿಂದೂಸ್ಥಾನವು ಬ್ರಿಟಿಷ್ ಸಂಬಂಧವನ್ನು ತೊರೆದು ಪೂರ್ಣ ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಬೇಕೆಂದು ನಾವು ನಂಬುತ್ತೇವೆ.

ನಮ್ಮ ಸ್ವಾತಂತ್ರ್ಯವನ್ನು ಸಂಪಾದಿಸಲು ಹಿಂಸಾ ಮಾರ್ಗವು ಪ್ರಯೋಜನಕರವಾಗುವುದಿಲ್ಲವೆಂದು ನಾವು ನಂಬುತ್ತೇವೆ. ಶಾಂತಿಯುತ್ತ ಅಹಿಂಸಾ ಮಾರ್ಗವನ್ನು ಅವಲಂಬಿಸಿ ಭರತಖಂಡವು ಸ್ವರಾಜ್ಯ ಮಾರ್ಗದಲ್ಲಿ ಬಹಳ ಮುಂದೆ ಹೋಗುತ್ತಿದೆ. ಈ ಮಾರ್ಗಗಳನ್ನು ಅನುಸರಿಸುವುದರಿಂದಲೇ ನಮ್ಮ ದೇಶವು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವುದು.

ಭರತಖಂಡದ ಸಂಪೂರ್ಣ ಸ್ವಾತಂತ್ರ್ಯ ಸಾಧನೆಗಾಗಿ ... ... ಪೂರ್ಣ ಸ್ವರಾಜ್ಯ ... ... ಪ್ರತಿಜ್ಞೆ ಮಾಡುತ್ತೇವೆ.

ದೇವರಿಗೆ ಭಂಗೀಸೊಪ್ಪು ಕಾಣಿಕೆ

ಚಿತ್ರದುರ್ಗದ ಡಿಸ್ಟ್ರಿಕ್ಟ್ ಕಾರೆಹಳ್ಳಿ ತಿಮ್ಮಪ್ಪ ಎಂಬುವನು ಕಳೆದ ೪ ತಿಂಗಳ ಹಿಂದೆ ತಿರುಪತಿಗೆ ವೆಂಕಟರಮಣಸ್ವಾಮಿಯ ದರ್ಶನಕ್ಕೆ ಹೋಗಿದ್ದನು. ದೇವರಿಗೆ ಮುಡುಪನ್ನು ಒಪ್ಪಿಸಿದನು. ಗೋಸಾಯಿ ಮಠಕ್ಕೆ ಹೋದಾಗ ಗೋಸಾಯಿಗಳು ಗಾಂಜಾ ಸೊಪ್ಪನ್ನು ಅಪೇಕ್ಷಿಸಿದರು. ಅವರ ಅಭೀಷ್ಟವನ್ನು ಸಲ್ಲಿಸಲು ಜೇಬಿನಲ್ಲಿ ಹಣವಿರಲಿಲ್ಲ. ಆಗ ಅವನ ಮನಸ್ಸು ಬಹಳವಾಗಿ ನೊಂದಿತು. ನಂತರ ಅವನು ಊರಿಗೆ ಹೋಗಿ ಅಲ್ಲಿಂದ ಅವರಿಗೆ ಗಾಂಜಾ ಕಳುಹಿಸುವುದಾಗಿ ಮಾತುಕೊಟ್ಟು ಬಂದ. ಬಳಿಕ ೪ ತೊಲ ಗಾಂಜಾ ಸೊಪ್ಪನ್ನು ಒಂದು ಪೆಟ್ಟಿಯಲ್ಲಿ ಹಾಕಿ ಅದನ್ನು ಮಹಾಂತರೆ ಹೆಸರಿಗೆ ಅಂಚೆಯ ಮೂಲಕ ಕಳುಹಿಸಿ ಅದನ್ನು ಗೋಸಾಯಿ ಮಠಕ್ಕೆ ತಲುಪಿಸುವಂತೆ ತಿಳಿಸಿದನು. ಆದರೆ ಮಹಂತರು ಊರಲ್ಲಿರಲಿಲ್ಲ. ಮಹಂತರ ಕೆಲಸವನ್ನು ನೋಡುತ್ತಿದ್ದ ಡೆಪ್ಯುಟಿ ಕಲೆಕ್ಟರ ಕೈಗೆ ಇದು ಸೇರಿತು. ಅವರು ಅದನ್ನು ಮೈಸೂರು ಸರ್ಕಾರಕ್ಕೆ ತಲುಪಿಸಿದರು. ೩ ತೊಲಾಕ್ಕೆ ಹೆಚ್ಚು ಗಾಂಜಾವನ್ನು ಇಟ್ಟುಕೊಳ್ಳುವುದು ಕಾನೂನಿಗೆ ವಿರುದ್ಧವಾದುದರಿಂದ ತಿಮ್ಮಪ್ಪನ ಮೇಲೆ ಮೊಕದ್ದಮೆ ಹೂಡಲಾಯಿತು. ತಿಮ್ಮಪ್ಪನು ಚಿತ್ರದುರ್ಗದ ಪ್ರಥಮ ನ್ಯಾಯಾಧೀಶರ ಮುಂದೆ ತನ್ನ ತಪ್ಪನ್ನು ಒಪ್ಪಿದನು. ೫ ರೂ. ದಂಡ ವಿಧಿಸಲ್ಪಟ್ಟಿತು. ಗಾಂಜಾ ಸೊಪ್ಪು ಸರ್ಕಾರಕ್ಕೆ ಸೇರಿತು.

ಸಭಾ ಬಂಧನ

ಶ್ರೀ || ಕೆ. ಎಫ್ ನಾರಿಮನ್ನರು ವಸ್ತಿಗಿ ವಿಯಾದ ಬನಪ್ಪಾ ಪಾರ್ಕಿನಲ್ಲಿ ಕಳೆದ ಎರಡು ತಿಂಗಳಿಂದಲೂ ಸಾರ್ವಜನಿಕ ಸಭೆಗಳಾಗಲೀ, ಭಾಷಣಗಳಾಗಲೀ ನಡೆಯಕೂಡದೆಂದು ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಗಾಳಿನೇ ನಿಷ್ಟ ಜಾರಿಮಾಡಿದ್ದರಷ್ಟೆ. ಈ ಆಜ್ಞೆಯು ನವೆಂಬರ್ ೧೭ ರಲ್ಲಿ ಹೊರಟು ಎರಡು ತಿಂಗಳು ಕಾಲ ಜಾರಿಯಲ್ಲಿತ್ತು. ಅದು ಈ ದಿನ ಮುಕ್ತಾಯವಾಗುತ್ತದೆ. ಈಗ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಅದೇ ಆಜ್ಞೆಯನ್ನು ನಾಳೆಯಿಂದ ೬ ತಿಂಗಳ ಕಾಲ ಜಾರಿಯಲ್ಲಿರುವುದಾಗಿಯೂ ಆ ಕಾಲದಲ್ಲಿ ಸಾರ್ವಜನಿಕ ಸಭೆಗಳಾಗಲೀ, ಭಾಷಣಗಳಾಗಲೀ ಅಲ್ಲಿ ನಡೆಯಕೂಡದೆಂದೂ ಆಜ್ಞೆ ಮಾಡಿದ್ದಾರೆ.

ನಂಜಪ್ಪ ಕೊಟ್ರೆಯವರು

ರಾಜದ್ರೋಹದ ಆಪಾದನೆಯ ಮೇಲೆ ಶಿಕ್ಷಿಸಲ್ಪಟ್ಟಿದ್ದ ಚಿತ್ರದುರ್ಗದ ಶ್ರೀ|| ನಂಜಪ್ಪ ಕೊಟ್ರೆಯವರನ್ನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿಟ್ಟಿದ್ದರು. ಈಗ ಅವರನ್ನು ಬೆಂಗಳೂರಿನಿಂದ ಶಿವಮೊಗ್ಗ ಸಬ್ ಜೈಲಿಗೆ ವರ್ಗಾಯಿಸಿದ್ದಾರೆಂದು ತಿಳಿದು ಬಂದಿದೆ.

ಜವಾಹರರಿಗೆ ಮಾತೃ ವಿಯೋಗ

ಪಂಡಿತ ಜವಾಹರಲಾಲ ನೆಹರೂರವರ ತಾಯಿಯವರಾದ ಶ್ರೀಮತಿ ಸ್ವರೂಪರಾಣಿ ನೆಹರೂರವರು ಕಳೆದ ಸೋಮವಾರ ಬೆಳಗಿನಝಾವ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಶ್ರೀಮತಿಯವರಿಗೆ ಎಪ್ಪತ್ತು ವರ್ಷ ವಯಸ್ಸಾಗಿದ್ದಿತು. ಅವರು ಪಂಡಿತ ಮೋತಿಲಾಲ ನೆಹರೂರವರನ್ನು ಮದುವೆಯಾದಂದಿನಿಂದ ರಾಜಭೋಗದಲ್ಲಿಯೇ ಬೆಳೆಯುತ್ತಿದ್ದರೂ ದೇಶಸೇವೆಯ ಕೂಗು ಕರೆದಾಗ ಸಕಲವನ್ನೂ ದೇಶಕ್ಕಾಗಿ ಅವರು ಧಾರೆಯೆರೆದರು. ಅವರ ನಿಧನದಿಂದ ಪಂಡಿತರಿಗೆ ಮಾತ್ರವೇ ಅಲ್ಲದೆ ಇಡೀ ದೇಶಕ್ಕೇ ಅಪಾರವಾದ ನಷ್ಟವುಂಟಾಗಿದೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಈ ಸಮಯದಲ್ಲೇ ಪಂಡಿತರಿಗೆ ಮತ್ತೊಂದು ವಿಯೋಗ ದುಃಖವು ಪ್ರಾಪ್ತವಾಯಿತು. ಅವರ ತಾಯಿಯವರ ಅಕ್ಕಂದಿರಾದ ಶ್ರೀಮತಿ ರಾಜಪತಿ ಕೌಲ್ ಎಂಬುವರು ತಮ್ಮ ತಂಗಿಯ ಮರಣದ ವಾರ್ತೆಯನ್ನು ಕೇಳಿದೊಡನೆಯೇ ಅದೇ ಸ್ಥಳದಲ್ಲಿ ಜ್ಞಾನತಪ್ಪಿ ಬಿದ್ದರು. ಅವರಿಗೆ ಪುನಃ ಜ್ಞಾನವು ಬರಲೇ ಇಲ್ಲ. ಮಾರನೇ ದಿನ ಅದೇ ಹೊತ್ತಿಗೆ ಅವರೂ ಸಹ ಪರಂಧಾಮವನ್ನೈದಿದರು. ಪಂಡಿತರಿಗೆ ಪ್ರಾಪ್ತವಾದ ಈ ದುಃಖದಲ್ಲಿ ನಮ್ಮ ಮನಃಪೂರ್ವಕವಾದ ಅನುತಾಪವನ್ನು ಅವರಿಗೆ ಅರ್ಪಿಸುತ್ತೇವೆ.

ಹೈಕೋರ್ಟಿಗೆ ನಾಲ್ಕನೆ ಜಡ್ಜರು

ಮೈಸೂರಿನ ಹೈಕೋರ್ಟಿಗೆ ನಾಲ್ಕನೇ ಜಡ್ಜರ ಪದವಿಯು ಈ ಜನವರಿ ಒಂದನೇ ತಾರೀಖಿನಿಂದ ಇನ್ನೊಂದು ವರ್ಷಕಾಲವಿರಬೇಕೆಂದು ಸರ್ಕಾರದವರು ಹುಕುಂ ಮಾಡಿದ್ದಾರೆ.

Drink
Blue Bird Brand TEA
The world-renowned Tea for its consistent quality and Flavour.
It is a pure High Grown Nilgiri unblended with inferior Teas.
SOLD EVERYWHERE.
Sole Agents for Mysore:
Chari & Prakash
447, Viceroy Road,
MYSORE.

ಆರನೆಯ ವರ್ಷಾರಂಭ
ಜನವರಿ ೧೯೩೮

ಚಿತ್ರಶಾಲಾ ಸ್ಪರ್ಧೆ ನಂ ೪೦ ರ ಸರಿಯಾದ ಉತ್ತರ.



ಜಯಶಾಲಿಗಳ ಹೆಸರುಗಳನ್ನು ಮುಂದಿನವಾರ ಪ್ರಕಟಿಸಲಾಗುತ್ತದೆ.

ಗೋದಾವರೀ ತೀರದಲ್ಲಿ......?

ಲೇಖಕ:—ಜಿ. ಕೆ. ಸಾವಂಜೆ, ಮೈಸೂರು.

ಮುಂದುಗಡೆ ಪ್ರಾರ್ಥನೆಯುಮನಾಗಿ ಹರಿಯುವ ಗೋದಾವರಿಯ ನಿರ್ಮಲ ನೀರಿನ ಪ್ರವಾಹ. ಎರಡು ಬದಿಯಲ್ಲಿಯೂ ದೊಡ್ಡ ದೊಡ್ಡ ಮರಗಳಿಂದ ತುಂಬಿದ ದಂಡಕಾರಣ್ಯ. ಅವುಗಳಲ್ಲೊಂದು ಮರದ ಕೆಳಗೆ ಎಂಟೊಂಬತ್ತು ವರ್ಷ ವಯಸ್ಸಿನ ಒಬ್ಬ ಬ್ರಾಹ್ಮಣ ಬಾಲಕನು ಕುಳಿತು ಕಪೋಲಪ್ರದೇಶಕ್ಕೆ ಕೈಯನ್ನಿಟ್ಟುಕೊಂಡು, ಗಾಢಯೋಚನೆಯಲ್ಲಿ ಮುಳುಗಿದ್ದಾನೆ. ಅವನ ದೃಷ್ಟಿಯು ಮುಂದಿನ ಗೋದಾವರಿಯ ಪವಿತ್ರ ನೀರಿನಲ್ಲಿತ್ತಾದರೂ, ಮನವು ಯಾವುದೋ ಒಂದು ಗಹನ ವಿಚಾರವನ್ನು ಬಗೆಯಲು ಪ್ರಯತ್ನಿಸುತ್ತಿತ್ತು. ಆ ಕಾರ್ಯದಲ್ಲಿ ಸಫಲಗೊಳ್ಳುತ್ತಿತ್ತು. ಆ ಬ್ರಾಹ್ಮಣ ಬಾಲಕನು ಯೋಚನಾಪರನಾಗಿದ್ದರೂ ಅವನ ಮುಖದಲ್ಲೊಂದು ಅಪೂರ್ವ ಪ್ರಭೆಯ ನರ್ತನವು ನಡೆಯುತ್ತಿತ್ತು.

ದಿಲ್ಲಿಯ ಬಾದಶಹರ ಮತ್ತು ದಖ್ಖನಿನ ಶಾಹಿ ದೊರೆಗಳ ಅತ್ಯಾಚಾರಕ್ಕೆ ಸಿಲುಕ್ಕಿ ದಿನ ದಿನಕ್ಕೆ ಅಧಃಪತನ ಹೊಂದುತ್ತಿರುವ ಹಿಂದೂ ಧರ್ಮದ, ಹಿಂದುಗಳ ಸ್ವಜನಾದ ಸ್ವಾತಂತ್ರ್ಯದ ರಕ್ಷಣೆಯ ಬಗ್ಗೆ ದಾರಿಯನ್ನು ಹುಡುಕುತ್ತಿದ್ದನವನು. ಆಗಿನ ಮುಸಲ್ಮಾನ ದೊರೆಗಳು ಗೋಬ್ರಾಹ್ಮಣರ ಮೇಲೆ ನಡೆಸುತ್ತಿದ್ದ ಅತ್ಯಾಚಾರವು ಆ ಎಂಟೊಂಬತ್ತು ವರ್ಷ ವಯಸ್ಸಿನ ಬ್ರಾಹ್ಮಣ ಬಾಲಕನ ಮೇಲೆ ವಿಲಕ್ಷಣ ಪರಿಣಾಮವನ್ನುಂಟುಮಾಡಿತು. ಅಳಿಯುತ್ತಿರುವ ಹಿಂದೂ ಧರ್ಮದ ವ್ಯಕ್ತಿತ್ವವನ್ನು ಸ್ಥಾಪಿಸಬೇಕೆಂಬ ಹೆಬ್ಬಯಕೆ ಅವನ ಮನದೊಳಗೆ ಗೂಡು ಮಾಡುವಂತೆ ಸ್ಥಿರವಾಗಿ ನಿಂತಿತು.

